ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಸೋಮವಾರ, ೨೯ನೇ ಆಗಸ್ಟ್, ೧೯೮೩/ ಭಾದ್ರಪದ ೭, ೧೯೦೫

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹತ್ತು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.

ವಿತ್ತೀಯ ಕಾರ್ಯಕಲಾಪಗಳು

ಅಭಿಯಾಚನ ಕ್ರಮಾಂಕಗಳು ೩೩, ೩೪ ಇತ್ಯಾದಿ

MR. SPEAKER.—Now reply by the Minister for Minor Irrigation on the demands of grants.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ಮಂತ್ರಿಗಳು).—ಮಾನ್ಯ ಸಭಾಪತಿಯವರೇ, ಮೂರು ದಿವಸಗಳಿಂದ ನಮ್ಮ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಬಹಳ ಚೆನ್ನಾಗಿ ಚರ್ಚೆ ಜರುಗಿದೆ. ಈ ಚರ್ಚೆಯನ್ನು ನಾವು ಪರಿಶೀಲನೆ ಮಾಡಿದ ಪಕ್ಷದಲ್ಲಿ ಬಹಳ ಸದಸ್ಯರು ಅನೇಕ ಉಪಯುಕ್ತವಾದಂಥ ಸಲಹೆಗಳನ್ನು ಮತ್ತು ಕಾರ್ಯರೂಪಕ್ಕೆ ತರುವುದಕ್ಕೆ ಯೋಗ್ಯವಾದಂಥ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಸಂತೋಷಪಡುತ್ತೇನೆ. ಕೆಲವು ಸದಸ್ಯರು ವೈಯಕ್ತಿವಾಗಿ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂಥ ವಿಷಯಗಳನ್ನು ಹೇಳಿದ್ದಾರೆ. ಮತ್ತು ಕೆಲವು ಯೋಜನೆಗಳು ಏನಿವೆ ಮತ್ತು ಪ್ರಾಜೆಕ್ಟ್‌ಗಳು ಏನಿವೆ ಅವುಗಳ ಕೆಲಸ ಬಹಳ ವಿಳಂಬವಾಗುತ್ತಿದೆಯೆಂದು ಹೇಳಿದ್ದಾರೆ. ಅವರ ಬಗ್ಗೆ ತುರ್ತು ಕ್ರಮ ತೆಗೆದುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಜಾಗ್ರತೆ ಕಾರ್ಯರೂಪಕ್ಕೆ ತರುವುದಕ್ಕೆ ಆದೇಶ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಣ್ಣ ನೀರಾವರಿ ಎನ್ನುವುದು ಕರ್ನಾಟಕ ರಾಜ್ಯದಲ್ಲಿ ಬಹಳ ಪ್ರಧಾನ ಪಾತ್ರ ವಹಿಸುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಶೇಕಡಾವಾರು ತೆಗೆದುಕೊಂಡರೆ ೪೫ ಭಾಗದಷ್ಟು ಸಣ್ಣ ನೀರಾವರಿಯಿಂದ ವ್ಯವಸಾಯ ಆಗುತ್ತಿದೆ. ಆದರಲ್ಲೂ ಕೋಲಾರ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಜಲಾಶಯಗಳಿಂದ ನೀರಿನ ಅನುಕೂಲವಿದೆ ಅಲ್ಲಿ ಸಣ್ಣ ನೀರಾವರಿಗೆ ಪ್ರಾಧಾನ್ಯತೆ ಇದೆ. ಒಂದು ಹಳ್ಳಿಯನ್ನು ತೆಗೆದುಕೊಂಡರೆ ಪ್ರತಿಯೊಂದು ಕುಟುಂಬವೂ ಕೂಡ ನೀರಾವರಿಯಿಂದ ಜೀವನ ಮಾಡಬೇಕಾಗಿದೆ. ಏಕೆಂದರೆ, ಕೂಲಿಕಾರರು ಇರುತ್ತಾರೆ. ಎಲ್ಲಿ ನೀರಿನ ಅನುಕೂಲ ಇರುತ್ತದೋ ಅಲ್ಲಿ ಈ ಕೂಲಿಕಾರರು ಕೆಲಸ ಮಾಡುವುದಕ್ಕೆ, ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಸಣ್ಣ ನೀರಾವರಿಯ ಪ್ರಾಧಾನ್ಯತೆ ಮತ್ತು ಆದರ ಸ್ಥಾನಮಾನವನ್ನು ನಾವು ಅರಿತುಕೊಂಡಿದ್ದೇವೆ. ಇವತ್ತು ನಮ್ಮ ದೇಶದಲ್ಲಿ ಸುಮಾರು ೨ ಸಾವಿರದ ೬೦೦ಕ್ಕೂ ಮೇಲ್ಪಟ್ಟು ಸಣ್ಣ ನೀರಾವರಿ ಕೆರೆಗಳಿವೆ. ೪೫೦ ಲಿಫ್ಟ್ ಇರಿಗೇಷನ್ಸ್ ಇವೆ ಮತ್ತು ೩,೨೦೦ ಪಿಕಪ್ಸ್ ಇವೆ ಇವೆಲ್ಲಾ ಒಟ್ಟು ಸೇರಿದರೆ ೯ ಲಕ್ಷ ಹೆಕ್ಟೇರ್‌ಗೂ ಮೇಲ್ಪಟ್ಟು ನೀರಾವರಿ ಭೂಮಿಯಾಗುತ್ತದೆ. ಇದರ ಬಗ್ಗೆ ನಾವು ತುರ್ತಾಗಿ ದಕ್ಷತೆಯಿಂದ ಕೆಲಸ ಮಾಡಬೇಕು ಎಂದು ೬ ಇನ್‌ವೆಸ್ಟಿಗೇಷನ್ ಡಿವಿಜನ್ಸ್ ಮಾಡಿಕೊಂಡಿದ್ದೇವೆ. ಇದರಿಂದ ಎಲ್ಲೆಲ್ಲಿ ಸಣ್ಣ ನೀರಾವರಿ ಕಟ್ಟಬಹುದು, ಎಲ್ಲೆಲ್ಲಿ ಪಿಕಪ್ ಮಾಡಬಹುದು, ಎಲ್ಲೆಲ್ಲಿ ಏತ ನೀರಾವರಿಯಿಂದ ಸಾಗುವಳಿಗೆ ಜಮೀನು ಮಾಡಬಹುದು ಎಂದು ಸರ್ವೆ ಮಾಡುವುದಕ್ಕೋಸ್ಕರ ಈ ೬ ಡಿವಿಜನ್ಸ್ ಇವೆ. ಇದರಲ್ಲಿ ಕ್ವಾಲಿಟಿ ಕಂಟ್ರೋಲ್ ಚೆನ್ನಾಗಿರಬೇಕು, ಸಮರ್ಪಕವಾಗಿರಬೇಕು, ಶಾಶ್ವತವಾಗಿರಬೇಕು. ಇದಕ್ಕಾಗಿ ಚೀಫ್ ಇಂಜನಿಯರ್ ಕೈಕೆಳಗೆ ಎರಡು ಡಿವಿಜನ್ಸ್ ಇವೆ. ಅಲ್ಲದೆ, ವಿಶ್ವಬ್ಯಾಂಕ್ ನೆರವಿನಿಂದ, ೬೫

ಕೋಟಿ ರೂಪಾಯಿ ವೆಚ್ಚದಲ್ಲಿ ಸುಮಾರು ೬೮ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ, ಬಹಳ ಜನ ಮಾನ್ಯ ಸದಸ್ಯರು ಇದರಿಂದ ಬಹಳ ಕಾಸ್ಟ್ ಆಗುತ್ತದೆ, ತೆಗೆದುಕೊಳ್ಳಬಾರದಾಗಿತ್ತು ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ. ಕೋಟ್ಯಾಂತರ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಸಂಪನ್ಮೂಲಗಳನ್ನು ಕೂಡ ಕ್ರೋಢಿಸಿಕೊಳ್ಳಲಾಗಿದೆ. ಮಿಷನರಿಗಳನ್ನು ತಂದಿದ್ದೇವೆ. ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲೇಬೇಕು. ಇದರಿಂದ ನಮ್ಮ ರಾಜ್ಯದಲ್ಲಿ ಸುಮಾರು ೧೨-೧೩ ಸಾವಿರ ಹೆಕ್ಟೇರ್ ಭೂಮಿ ನೀರಾವರಿಯಾಗುತ್ತದೆ. ೧೦ ಎಕರೆಗೆ ಒಳಪಟ್ಟು ಇರತಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿಕೊಡಲಾಗಿದೆ, ಅದರಂತೆ ಒಟ್ಟು ೧೭,೭೦೦ ಕೆರೆಗಳು ಬರುತ್ತವೆ. ಇವುಗಳ ಮೇಲ್ವಿಚಾರಣೆಯನ್ನು ಜಿಲ್ಲಾಧಿಕಾರಿಗಳ ಮೂಲಕ ಮಾಡಿಸುತ್ತಿದ್ದೇವೆ. ಪ್ರತಿಯೊಂದು ಕೆರೆಯೂ ಸಮರ್ಪಕವಾಗಿ ಇರಬೇಕಾದರೆ, ಕೆರೆಗಳು ಇರತಕ್ಕ ಪ್ರದೇಶಗಳಲ್ಲಿ ಒಂದೊಂದು ಸಮಿತಿಯನ್ನು ಮಾಡಿ, ಎಕ್ಸಿಕ್ಯೂಟೀವ್ ಇಂಜಿನಿಯರ್ ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ. ಕೆರೆಗಳ ದುರಸ್ತಿ ಕೆಲಸ ಮಾಡದೇ ಹೋದರೆ ಉಸ್ತುವಾರಿಯನ್ನು ಸರಿಯಾಗಿಟ್ಟುಕೊಳ್ಳದೇ ಹೋದರೆ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ಜವಾಬ್ದಾರರಾಗಿ ಮಾಡಬೇಕೆಂದು ಸರ್ಕಾರ ಆದೇಶ ಕೊಟ್ಟಿದೆ. ಸುಮಾರು ೧೫೮ ಎಕರೆ ನೀರಾವರಿಗೆ ಒಳಪಡಿಸುವುದಕ್ಕೆ ಸುಮಾರು ೧೭೦ ಕೆರೆಗಳು ಇವೆ. ಇದರಲ್ಲಿ ೬೦ ಪ್ರಾಜೆಕ್ಟ್‌ಗಳನ್ನು ಪೂರ್ತಿ ಮಾಡಿ, ಒಟ್ಟು ಸುಮಾರು ೨೫ ಕೋಟಿ ಖರ್ಚು ಬರುತ್ತದೆ. ಇದರಿಂದ ಸುಮಾರು ೧೨,೨೮೫ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ, ಕಳೆದ ೪-೫ ವರ್ಷಗಳಿಂದ ಒಂದು ಸಣ್ಣ ನೀರಾವರಿ ಯೋಜನೆಯನ್ನೂ ತೆಗೆದುಕೊಂಡಿರಲಿಲ್ಲ. ೩೮೭ ಹೊಸ ಸಣ್ಣ ನೀರಾವರಿ ಯೋಜನೆಯನ್ನೂ ಆಯವ್ಯಯದಲ್ಲಿ ಸೇರಿಸಿ ಕೆಲಸ ತೆಗೆದುಕೊಳ್ಳುವಂಥ ವ್ಯವಸ್ಥೆ ಮಾಡಿದ್ದೇವೆ. ಈ ಸಾರಿ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಒಟ್ಟು ೧೫ ಕೋಟಿ ರೂಪಾಯಿಗಳು ಖರ್ಚಾಗುತ್ತದೆಂದು ಅಂದಾಜು ಮಾಡಲಾಗಿದೆ, ೧೯೮೪-೮೫ರಲ್ಲಿ ಆದರೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೯೬,೦೦೦ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಅಳವಡಿಸುವುದಕ್ಕೆ ಆಲೋಚನೆ ಮಾಡಿದ್ದೇವೆ. ಈಗಾಗಲೇ ೬೦ ಸಾವಿರ ಹೆಕ್ಟೇರ್ ಭೂಮಿ ನೀರಾವರಿಗೆ ಒಳಪಟ್ಟಿದೆ. ಇನ್ನುಳಿದ ಒಂದು ವರ್ಷದಲ್ಲಿ ರೂ. ೨೦೨೫ ಕೋಟಿಯಷ್ಟು ಹಣ ಖರ್ಚು ಮಾಡಿ, ೬ನೇ ಪಂಚವಾರ್ಷಿಕ ಯೋಜನೆಯೊಳಗಾಗಿ ತೆಗೆದುಕೊಂಡಿರತಕ್ಕ ಎಲ್ಲ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಯೋಜನೇತರ ಕೆಲಸಗಳಿಗಾಗಿ ಸುಮಾರು ೧೨ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇಡೀ ಭಾರತದಲ್ಲಿ ಕೆರೆಗಳ ದುರಸ್ತಿಗಾಗಿ ಒಂದು ಹೆಕ್ಟೇರೆಗೆ ೫೫ ರೂಪಾಯಿ ಖರ್ಚು ಮಾಡುವುದಿದ್ದರೆ, ಕರ್ನಾಟಕದಲ್ಲಿ ೯೦ ರೂಪಾಯಿ ಖರ್ಚು ಮಾಡುವಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ವಿಚಾರದಲ್ಲಿ ಸರ್ಕಾರ ಆದೇಶ ಕೊಟ್ಟಿದ್ದ. ಪ್ರತಿಯೊಂದು ಕೆರೆಯನ್ನೂ ಪರೀಕ್ಷೆ ಮಾಡಿ. ತೂಬು ಸರಿಯಾಗಿದೆಯೆ ? ಕೋಡಿ ಸರಿಯಾಗಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡಿ, ಕೆರೆಯನ್ನು ತಕ್ಕ ಬಂದೋಬಸ್ತು ಮಾಡಬೇಕೆಂದು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಗೆ ಆದೇಶ ಕೊಟ್ಟಿದ್ದೇವೆ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ರವರು ೧೦೦ಕ್ಕೆ ೭೫ ಭಾಗದ ಕೆರೆಗಳನ್ನು ತನಿಖೆ ಮಾಡಬೇಕೆಂದು ತಿಳಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಮಾಸ್ಟರ್ ಪ್ಲಾನ್ ಹಾಕಿಕೊಂಡು ಕೆಲಸ ನಡೆಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಹಣದ ಅವಶ್ಯಕತೆಗೆ ಮೇರೆಗೆ ಕಾಲುವೆಗಳು ಕೆಲಸಗಳನ್ನು ನೋಡಿಕೊಳ್ಳಬೇಕೆಂದು ಸೂಚಿಸಲಾಗಿದೆ. ವಾಚ್‌ಮನ್‌ಗಳಿಗೆ ಮನೆ ಕಟ್ಟಿಸಿಕೊಡಬೇಕೆಂದು ಮತ್ತು ಸ್ಟಾಂಡ್ ಬೈ ಪಂಪ್ ಇಡಬೇಕೆಂದು ತಿಳಿಸಲಾಗಿದೆ. ಹೂಳು ತೆಗೆಸುವುದು ಕಷ್ಟವಾದ ಕೆಲಸವಾಗಿರುವುದರಿಂದ, ವಿಶೇಷವಾಗಿ ಎನ್. ಆರ್. ಇ. ಪಿ. ಯೋಜನೆಯಲ್ಲಿ ಈ ಕೆಲಸ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ಕಮ್ಯಾಂಡ್ ಏರಿಯಾದಲ್ಲಿ ಗಿಡಮರಗಳನ್ನು ಬೆಳೆಸುವುದಕ್ಕೆ ಒಂದು ಯೋಜನೆ ಹಾಕಿಕೊಂಡು ಅದರಂತೆ ಕೆಲಸಗಳನ್ನು ನಡೆಸಲಾಗುತ್ತದೆ. ಸಮುದ್ರದ ಅಲೆಯಿಂದ ರಸ್ತೆಗಳು ಹಾಗೂ ಆ ಪ್ರದೇಶಗಳಲ್ಲಿರುವ ಮನೆಗಳು ಹಾನಿಯಾಗುವಂಥ ಪ್ರದೇಶಗಳಲ್ಲಿ ಆಗುವಂತ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಒಂದು ಯೋಜನೆಯನ್ನು ತಯಾರು ಮಾಡಲಾಗಿದ್ದೆ. ಇದಕ್ಕಾಗಿ ಸುಮಾರು ೬೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಗೋಡೆಯನ್ನು ನಿರ್ಮಾಣ ಮಾಡುವುದಕ್ಕಾಗಿ ಈ ವರ್ಷ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚ ಮಾಡುತ್ತೀವೆ. ಹಿಂದಿನ ಸಲ ಕೇವಲ ೩೫ ಲಕ್ಷ

ರೂಪಾಯಿಗಳನ್ನು ಮಾತ್ರ ಕೊಡಲಾಗಿತ್ತು. ಈ ವರ್ಷ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಹೊಸ ಕೆರೆಗಳನ್ನು ಮಾಡಬೇಕಾದರೆ, ಬಹುತೇಕ ಕಡೆ ಲ್ಯಾಂಡ್ ಅಕ್ವಿಜಿಷನ್ ಸಮಸ್ಯೆ ಬರುತ್ತಿದೆ. ವಿಶ್ವ ಬ್ಯಾಂಕ್‌ನಿಂದ ತೆಗೆದುಕೊಂಡಂಥ ಯೋಜನೆಗಳಲ್ಲಿ ೧೭ ಸಣ್ಣ ನೀರಾವರಿ ಯೋಜನೆಗಳನ್ನು ಅಳವಡಿಸಿಕೊಂಡು, ಎಸ್ಟಿಮೇಟ್ ಮತ್ತು ಅಂದಾಜು ಎಲ್ಲಾ ರೆಡಿಯಾಗಿವೆ, ಭೂಸ್ವಾಧೀನ ಸಮಸ್ಯೆ ಬರುತ್ತಿರುವುದರಿಂದ ಕೆಲಸ ನಿಧಾನವಾಗುತ್ತಿವೆ, ಇದನ್ನು ತಪ್ಪಿಸಲು, ಜಿಲ್ಲಾಧಿಕಾರಿಯವರು, ಎಕ್ಸಿಕ್ಯೂಟೀವ್ ಇಂಜಿನಿಯರು, ಹಾಗೂ ಅಸಿಸ್ಟೆಂಟ್ ಕಮೀಷನರವರು ಇರುವಂಥ ಒಂದು ಸಮಿತಿಯನ್ನು ಮಾಡಿ. ತಡವಾಗುವುದನ್ನು ತಪ್ಪಿಸಲು ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಎಲ್ಲಕ್ಕಿಂತ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಸಣ್ಣ ನೀರಾವರಿ ಹಾಗೂ ರಸ್ತೆಗಳು, ಸೇತುವೆಗಳು ಒಟ್ಟಿಗೆ ಇರುವುದರಿಂದ ಕೆಲಸಗಳಿಗೆ ತೊಂದರೆಯಾಗುತ್ತದೆ. ಇವನ್ನು ಪ್ರತ್ಯೇಕ ಮಾಡಬೇಕೆನ್ನುವುದು ಬಹಳ ಜನ ಸದಸ್ಯರ ಅಭಿಪ್ರಾಯವಾಗಿದೆ. ಈ ವಿಚಾರವೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಪೂರೈಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ಮನೆ ನಾನು ಮಂಡಿಸಿರುವ ಬೇಡಿಕೆಗಳಿಗೆ ಮಂಜುರಾತಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಪಿ. ರಾಮಚಂದ್ರರಾವ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಡುಗಳು ಇವೆ. ಹೂಳು ತೆಗೆಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಾವ್ ಪ್ಲಾನ್‌ನಲ್ಲಿ ತೆಗೆಸುವುದಕ್ಕೆ ಅವಕಾಶ ಇದ್ದರೆ, ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ ರಾಮಚಂದ್ರರಾವ್.—ನಮ್ಮ ಜಿಲ್ಲೆಗೂ ಬೇರೆ ಜಿಲ್ಲೆಗಳಿಗೂ ಬಹಳ ಅಂತರ ಇದೆ. ನಮ್ಮಲ್ಲಿ ಕೆರೆಗಳು ಇರುವುದಕ್ಕಿಂಥ ತೋಡಗಳು ಜಾಸ್ತಿ ಬಳಕೆಯಲ್ಲಿವೆ. ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್‌ರವರನ್ನು ಕೇಳಿದರೆ, ಇವುಗಳು ಅದರ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳುತ್ತಾರೆ. ಕಳೆದ ಮೂವತ್ತು ವರ್ಷಗಳಿಂದಲೂ ಹೂಳು ತೆಗೆಯದೇ ಹಾಗೆ ಇವೆ. ಇದರಿಂದ ರೈತರಿಗೆ ನೀರಿನ ಅನುಕೂಲ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.— ಇದು ಸಣ್ಣ ನೀರಾವರಿಯೋಜನೆಯೊಳಗೆ ಬರುತ್ತೋ ಇಲ್ಲವೋ ಎನ್ನುವುದನ್ನು ನೋಡಬೇಕಾಗುತ್ತದೆ.

ಶ್ರೀ ಎಂ, ವೀರಪ್ಪಮೊಯ್ಲಿ.—ವಿಶ್ವಬ್ಯಾಂಕ್‌ನಿಂದ ಹಣ ಪಡೆದು ಕೈಗೊಂಡಿರುವಂಥ ಟ್ಯಾಂಕ್ ಇರಿಗೇಷನ್ ಯೋಜನೆಗಳನ್ನು ಕ್ಲಿಯರ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದಕ್ಕಾಗಿ ರಚನೆ ಮಾಡಿದಂಥ ಹೈಲೆವೆಲ್ ಕಮಿಟಿ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಸಲ ಸೇರಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ —ಸಮಿತಿ ಎಷ್ಟು ಸಲ ಸೇರಿದೆ ಎನ್ನುವ ವಿವರ ನನ್ನ ಹತ್ತಿರ ಇಲ್ಲ. ೬೮ ಪ್ರಾಜೆಕ್ಟ್‌ಗಳಲ್ಲಿ ೬೬ ಮುಗಿದಿವೆ. ತೆಗೆದುಕೊಂಡಂಥ ಯೋಜನೆಗಳನ್ನು ಮುಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆರೆ ಅಂಗಳಗಳನ್ನು ಒತ್ತುವರಿ ಮಾಡತಕ್ಕದ್ದು ತೀವ್ರವಾಗಿ ನಡೆಯುತ್ತಿರುವುದರಿಂದ ಅವುಗಳನ್ನು ಸರ್ವೆ ಮಾಡಿಸಿ ಒಂದು ಕಟ್ಟುನಿಟ್ಟಾದ ಶಾಸನವನ್ನಾದರೂ ತಂದು ಅದನ್ನು ತಪ್ಪಿಸುವುದಕ್ಕೆ ಸಲಹೆ ಮಾಡಿದ್ದೆ. ಇದರ ಬಗ್ಗೆ ಸರ್ಕಾರ ಏನು ಮಾಡಿದೆ ?

ಶ್ರೀ ಆರ್, ಎನ್. ಲಕ್ಷ್ಮೀಪತಿ —ಕಮ್ಯಾಂಡ್ ಏರಿಯ ಏನಿದೆ ಅಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕೆರೆಯಂಗಳಗಳಲ್ಲಿ ಮೈನರ್ ಇರಿಗೇಷನ್ ಇಲಾಖೆಯ ವತಿಯಿಂದ ಮರಗಿಡಗಳನ್ನು ನೆಡುತ್ತಿದ್ದೇವೆ. ಒತ್ತುವರಿಯನ್ನು ತಪ್ಪಿಸದಿದ್ದರೆ ಕೆರೆ ಎಲ್ಲ ಹೂತು ಹೋಗುತ್ತದೆ. ಆದ್ದರಿಂದ, ಅದನ್ನು ತಪ್ಪಿಸುವ ಸಲುವಾಗಿ ಒಂದು ಕಮಿಟಿ ಮಾಡಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ.

ಡಾ.॥ ವಿ, ಎಸ್. ಆಚಾರ್ಯ—ಮಾನ್ಯ ಸಚಿವರು ಅನೇಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ವೆಂಟೆಡ್ ಡ್ಯಾಮ್ಸ್ ಅಥವಾ ಅತಿ ಸಣ್ಣ ನೀರಾವರಿ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಬಹಳ ಪ್ರಾಮುಖ್ಯವಾಗಿ ನಡೆಯುತ್ತದೆ. ಬೇರೆ ದೊಡ್ಡ ಅಣೆಕಟ್ಟುಗಳೇನು ಆಗಿಲ್ಲ. ಸಣ್ಣ ವೆಂಟೆಡ್ ಡ್ಯಾಮ್ಸ್‌ಗೆ ೨೦–೩೦ ಸಾವಿರ ಖರ್ಚು ಮಾಡಿದರೆ ೧೦–೧೫ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಒಂದು ಎಕರೆ

ನೀರಾವರಿಯಾಗಲು ೨೭೫೦ ರೂಪಾಯಿಗಳಿಗೆ ಹೆಚ್ಚು ಖರ್ಚಾಗಬಾರದೆಂದು ಇತ್ತು. ಆ ನಿರ್ಬಂಧ ಹಾಗೇ ಇರುವುದರಿಂದ ನಮ್ಮಲ್ಲಿ ಯಾವ ಸಣ್ಣ ನೀರಾವರಿ ಕೆಲಸವನ್ನು ಕೈಗೊಳ್ಳುವ ಪರಿಸ್ಥಿತಿ ಇಲ್ಲ. ಆದ್ದರಿಂದ ಸಣ್ಣ ನೀರಾವರಿಯ ಕೊರತೆ ನಮ್ಮಲ್ಲಿ ಎದ್ದು ಕಾಣುತ್ತಿದೆ. ಅದರ ಬಗ್ಗೆ ಸಚಿವರು ಹೇಳಲಿಲ್ಲ ಹಿಂದೆ ೨೭೫೦ ರೂಪಾಯಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಎಂದು ಏನು ನಿಶ್ಚಯವಾಗಿತ್ತು ಆಗ ಸಿಮೆಂಟಿನ ಬೆಲೆ, ಕಬ್ಬಿಣದ ಬೆಲೆ, ಮತ್ತು ಕೂಲಿ ಎಷ್ಟಿತ್ತು ಎಂಬುದನ್ನು ಮನಗಂಡು ಅದರ ಮೊತ್ತವನ್ನು ಏರಿಸುವ ಬಗ್ಗೆ ವಿಚಾರ ಮಾಡಬೇಕು. ಕರಾವಳಿ ಪ್ರದೇಶಗಳಲ್ಲಿ ಮತ್ತು ಸೀ ಎರೋಷನ್ ಪ್ರದೇಶಗಳಲ್ಲಿ ಆ ಬಾಬಿಗೆ ೬೦ ಕೋಟಿ ರೂಪಾಯಿಗಳು ಬೇಕು. ಅದಕ್ಕೆ ಇಲ್ಲಿಂದ ಒಂದು ಕೋಟಿ ರೂಪಾಯಿ ಖರ್ಚಾಗಿದೆ. ಈ ವರ್ಷ ೧೪ ಕಡೆಗಳಲ್ಲಿ ೨೦೦ ಮೀಟರ್‌ನಿಂದ ಪ್ರಾರಂಭಿಸಿ ೭೫೦ ಮೀಟರ್ ವರೆಗೆ ಕೊರೆದು ಹೋಗಿ ಅನೇಕ ಮನೆಗಳು ಮತ್ತು ತೆಂಗಿನ ಗಿಡಗಳು ನಾಶವಾಗಿವೆ. ಕೇರಳದ ರೀತಿಯಲ್ಲಿ, ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆಯುವ ಬಗ್ಗೆ ಈ ಸರ್ಕಾರ ಏನು ಮಾಡುತ್ತದೆಂಬುದನ್ನು ಹೇಳಬೇಕು. ಈಗಾಗಲೇ ನಿಗದಿಪಡಿಸಿರುವ ಒಂದು ಕೋಟಿ ರೂಪಾಯಿ ಖರ್ಚಾಗಿದ್ದರೆ ಇನ್ನೂ ತುಂಬಾ ಖರ್ಚು ಮಾಡಬೇಕಾಗುತ್ತದೆ. ಇದರ ಬಗ್ಗೆ ಏನೂ ಮಾಡುತ್ತೀರೆಂಬುದನ್ನು ಹೇಳಬೇಕು. ರಾಮಚಂದ್ರರಾಯರು ತೋಡಿನಿಂದ ಹೂಳೆತ್ತುವ ಬಗ್ಗೆ ಹೇಳಿದ್ದಾರೆ. ಅದನ್ನು ವಿಶದಪಡಿಸಬೇಕೆಂದು ಹೇಳುತ್ತೇನೆ. ನಮ್ಮಲ್ಲಿ Storm Water Stream ಇದೆ. ಇದರಲ್ಲಿ ಜನವರಿ, ಫೆಬ್ರುವರಿಯಲ್ಲಿ ಮತ್ತು ಬಹಳ ನೀರಾವರಿ ಇರುವ ಕಡೆ ಮಾರ್ಚ್ ೧೫ರ ವರೆಗೆ ನೀರು ಹರಿಯುತ್ತಿರುತ್ತದೆ, ಆದರೆ ದುರ್ದೈವದಿಂದ ಸ್ಟ್ರೀಂ ಬೆಡ್‌ನಲ್ಲಿ ಮಣ್ಣು ಸೇರಿಕೊಂಡು ಸಣ್ಣದಾಗಿ ಹರಿಯುವ ನೀರಿಗೆ ಅಡೆತಡೆ ಆಗುತ್ತದೆ. ಕೆಲವು ಕಡೆ ಸಣ್ಣ ಸ್ಟ್ರೀಂ ಬೆಡ್‌ಗಳಲ್ಲಿ ಹೂಳೆತ್ತುವ ಕೆಲಸ ಆಗಬೇಕಾಗಿದೆ. ಎರಡನೆಯದಾಗಿ, ಕೃಷಿ ರೈತರಿಗೆ ಈ ನೀರು ಪೂರ್ತಿಯಾಗಿ ಸಿಗುವುದಿಲ್ಲ. ಬೆಳೆ ಬರುತ್ತದೆ ಎನ್ನುವವರೆಗೆ ಈ ನೀರು ಬರುವುದಿಲ್ಲ. ಆದರೆ ರೆವಿನ್ಯೂ ಅಧಿಕಾರಗಳು ತೆರಿಗೆ ಕೊಟ್ಟಿಲ್ಲವೆಂದು ನೋಟೀಸ್ ಕೊಡುತ್ತಾರೆ ಹಾಗೂ ಅವರಿಂದ ನೀರಿನ ತೆರಿಗೆಯನ್ನು ಸಕತ್ತಾಗಿ ವಸೂಲ್ಮಾಡುತ್ತಾರೆ. ಕೃಷಿಗೆ ಸಾಕಷ್ಟು ನೀರು ಸಿಗದೆ ಇರುವ ಕಡೆಗಳಲ್ಲೂ ತೆರಿಗೆ ಬೀಳುತ್ತಿದೆ. ದೇವರು ಕೊಟ್ಟ ನೀರು ಹರಿಯುವುದಕ್ಕೆ ಅವಕಾಶ ಇಲ್ಲವಾಗಿದೆ. ಆದ್ದರಿಂದ, ನೀರು ಸರಿಯಾಗಿ ಹರಿಯುವಂತೆ ಹೂಳೆತ್ತುವ ಕೆಲಸ ಮಾಡಬೇಕು. ಒಟ್ಟಿವಲ್ಲಿ, ವೆಂಟೆಂಡ್ ಡ್ಯಾಮ್ಸ್, ಸೀ ಎರೋಷನ್ ಮತ್ತು ತೋಡಿನಿಂದ ಹೂಳೆತ್ತುವ ಬಗ್ಗೆ ಸರ್ಕಾರ ಏನು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂಬುದನ್ನು ಹೇಳಬೇಕು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹಿಂದೆ ಒಂದು ಎಕರೆಗೆ ನೀರೊದಗಿಸಲು ಎಷ್ಟು ಹಣ ಖರ್ಚಾಗುತ್ತದೆಂದು ಅಂದಾಜು ಮಾಡಿದ್ದರು ಅಷ್ಟರಲ್ಲಿ ಈಗ ಕೆಲಸ ಮಾಡುವುದಕ್ಕಾಗುವುದಿಲ್ಲ. ಈಗ ಬೆಲೆಗಳೆಲ್ಲ ದುಬಾರಿಯಾಗಿವೆ. ಆದ ಕಾರಣ ಹೊಸದಾಗಿ ಯಾವ ಕೆರೆಯ ಕೆಲಸವನ್ನು ತೆಗೆದು ಕೊಳ್ಳುವುದು ಸಾಧ್ಯವಿಲ್ಲವೆಂದು ಸರ್ಕಾರ ಮನಗಂಡಿದೆ. ಇದರ ಬಗ್ಗೆ ಸರ್ಕಾರ ತೀವ್ರ ರೀತಿಯಾದ ಆಲೋಚನೆಯಲ್ಲಿದೆ. ಈಗಿನ ದರಕ್ಕನುಗುಣವಾಗಿ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿಲ್ಲ. ಬೆನಿಫಿಟ್ ಕಾಸ್ಟನ್ನು ರೆಷಿಯೋ ಆಗಿ ಇಟ್ಟುಕೊಂಡು ಎಲ್ಲ ಕೆರೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮೈನರ್ ಇರಿಗೇಷನ್ ಕೆಲಸ ಬಹಳ ಮುಖ್ಯವಾದುದು. ಅನೇಕ ಜಿಲ್ಲೆಗಳಲ್ಲಿ, ಉದಾಹರಣೆಗೆ ಹಳೇ ಮೈಸೂರಿನಲ್ಲಿ ದೊಡ್ಡ ಜಲಾಶಯ ಇಲ್ಲದಿರುವುದರಿಂದ ಅಲ್ಲಿ ಸಣ್ಣ ನೀರಾವರಿಯಿಂದ ಬದುಕು ಸಾಗುತ್ತಿದೆ. ಅದನ್ನು ಸರ್ಕಾರ ಪರಿಶೀಲಿಸಿ ಆ ಒಂದು ಬಾಬಿಗೆ ಹಣ ಜಾಸ್ತಿ ಮಾಡುವ ಬಗ್ಗೆ ಸರ್ಕಾರ ಆಲೋಚಿಸುತ್ತಿದೆ. ಸೀ ಎರೋಷನ್ನಿಗೆ ಸುಮಾರು ೬೦ ಕೋಟಿ ರೂಪಾಯಿ ಬೇಕಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಅರ್ಧ ಭಾಗವನ್ನು ಸಾಲವಾಗಿ ಕೊಡಿ ಎಂದು ಕೇಳುತ್ತಿದ್ದೇವೆ. ಅದು ಬಂದರೆ ೬೦ ಕಿಲೋಮೀಟರ್ ಹೊಡೆತಕ್ಕೆ ಸಿಕ್ಕಿರುವ ಪ್ರದೇಶವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಿಂದೆ ೩೫ ಲಕ್ಷ ರೂಪಾಯಿ ಇಟ್ಟಿದ್ದೆವು. ಈ ಸಾರಿ ಒಂದು ಕೋಟಿ ರೂಪಾಯಿಗಳವರೆಗೆ ಇಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಹಣಕಾಸು ಒದಗಿಸಿದರೆ ಅಂದರೆ ಸಾಲ ಬಂದರೆ ಎಲ್ಲ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ತೋಡಿನ ಬಗ್ಗೆ ಹೇಳುವುದಾದರೆ, ಅದು ನಮಗೆ ಬರುತ್ತದೋ ಅಥವಾ ಕಂದಾಯ ಇಲಾಖೆಗೆ ಸಂಬಂಧಪಡುತ್ತದೋ ಗೊತ್ತಿಲ್ಲ, ಅದನ್ನು ನಾನು ತಿಳಿದುಕೊಂಡು ಹೇಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಅನೇಕ ಕಡೆ ಕೆರೆಗಳಲ್ಲಿ ಜೊಂಡು ತುಂಬಿಕೊಂಡು ಬೆಳೆಗೆ ಸಾಕಷ್ಟು ನೀರು ಸಿಗುತ್ತಿಲ್ಲವಾದ್ದರಿಂದ ಅದನ್ನು ತೆಗೆಯುವುದಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.— ಅದನ್ನು ಸಾಧ್ಯವಾದಷ್ಟು ತೆಗೆಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಜಿ. ಪಿ. ಒಡೆಯರಾಜ್.—ಈ ವರ್ಷ ೩೯೮ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದು ಕೊಂಡಿರುವುದಾಗಿ ಹೇಳಿದಿರಿ. ಸಾಮಾನ್ಯವಾಗಿ, ಗುಲ್ಬರ್ಗ ಮತ್ತು ಬೆಳಗಾಂ ಡಿವಿಜನ್‌ಗಳು ಯಾವಾಗಲೂ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳು. ಅಂಥ ಕಡೆ ನಿಜವಾಗಿ ಸಣ್ಣ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳತಕ್ಕದ್ದು ಅವಶ್ಯಕವಾಗಿದೆ. ಆದರೆ ತಾವು ಏನು ಮಾಡಿದ್ದೀರಿ ಎಂದರೆ ಈ ವರ್ಷ ೯೮ ಕೆರೆ ಕಾಮಗಾರಿಗಳನ್ನು ಎರಡು ಜಿಲ್ಲೆಗಳಲ್ಲಿ ಮಾತ್ರ ತೆಗೆದುಕೊಂಡಿದ್ದೀರಿ ಮತ್ತು ೩೦೦ ಬಾವಿಗಳನ್ನು ತೆಗೆದುಕೊಂಡಿದ್ದೀರಿ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ತೆಗೆದುಕೊಳ್ಳದೆ ಕಡಿಮೆ ಮಾಡಿದ್ದೀರಿ. ಈ ತಾರತಮ್ಯವನ್ನು ಯಾವಾಗ ಸರಿಪಡಿಸುತ್ತೀರಿ ? ಮತ್ತು ಈ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—೩೯೮ರಲ್ಲಿ ೯೮ ಕೆರೆಗಳು ಮಳೆಗೆ ಅಂಟಿಕೊಂಡಿಲ್ಲ. ಅನೇಕ ಜಿಲ್ಲೆಗಳಲ್ಲಿ ಸಣ್ಣ ನೀರಾವರಿಯಿಂದ ವ್ಯವಸಾಯ ನಡೆಯುತ್ತಿದೆ. ಹಳೇ ಮೈಸೂರಿನಲ್ಲಿ ಮಂಡ್ಯ ಜಿಲ್ಲೆಯನ್ನು ಬಿಟ್ಟರೆ ಬೇರೆ ಎಲ್ಲ ಜಿಲ್ಲೆಗಳು ಸಣ್ಣ ನೀರಾವರಿಯನ್ನು ಆಶ್ರಯಿಸಿವೆ. ನಿಮ್ಮಲ್ಲಿ ಕಡಿಮೆ ಆಗಿದೆ ಎಂದರೆ ಹೆಚ್ಚು ತೆಗೆದುಕೊಳ್ಳುವುದಕ್ಕೆ ಅವಕಾಶ ಇದ್ದರೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಸಣ್ಣ ನೀರಾವರಿ ಯೋಜನೆ ಅತ್ಯಂತ ಪ್ರಾಮುಖ್ಯವಾದುದು. ಕಾರಣ, ಇದು ರೈತರಿಗೆ ಬೇಗ ಫಲವನ್ನು ಕೊಡತಕ್ಕ ಯೋಜನೆ. ಒಂದು ಕೆರೆ ಪ್ರಾರಂಭವಾದರೆ ೨-೩ ವರ್ಷದಲ್ಲಿ ಮುಗಿಸಬಹುದು. ಸಾಧ್ಯವಾದರೆ ಒಂದೇ ವರ್ಷದಲ್ಲಿ ಮುಗಿಸಬಹುದು. ಕಾಸ್ಟ್ ಬೆನಿಫಿಟ್ ರೇಷ್ಯಿಯೋ ಪದ್ಧತಿಯನ್ನು ಓದಿದ್ದೀರಿ. ಹಿಂದಿನ ಸೀಲಿಂಗ್ ಲಿಮಿಟ್ ಬಿಟ್ಟು ಅಂದರೆ ಕೆರೆಗಳನ್ನು ಕಟ್ಟಿದ ಮೇಲೆ ಬರತಕ್ಕ ಉತ್ಪತ್ತಿ ಆಧಾರದ ಮೇಲೆ ಕೆರೆ ಕಟ್ಟಿಸುವುದಕ್ಕೆ ಒಪ್ಪಿದ್ದೀರಿ. ಆದರೆ ಅದನ್ನು ಇನ್ನೂ ಕಾರ್ಯರೂಪಕ್ಕೆ ತಂದಿಲ್ಲ. ಕಾಸ್ಟ್ ಬೆನಿಫಿಟ್ ರೇಷಿಯೋ ಪ್ರಕಾರ ಕೆರೆಗಳನ್ನು ಕಟ್ಟಿಸುವುದಕ್ಕೆ ಸರ್ಕಾರ ಏತಕ್ಕೆ ವ್ಯವಸ್ಥೆ ಮಾಡಿಲ್ಲ ? ಹಳೇ ಕೆರೆಗಳ ದುರಸ್ತಿ ಬಗ್ಗೆ ತಾವು ಗಮನ ಹರಿಸುತ್ತೀರಾ ? ಕೆರೆಯ ಅಂಗಳವನ್ನು ಅಂದರೆ ಕೆರೆಯ ಮೇಲ್ಭಾಗದ ಜಮೀನನ್ನು ಅನ್ ಅಥರೈಸ್ಡ್ ಆಕ್ಯುಪೇಷನ್ ಮಾಡಿ ಅದನ್ನು ಉಳುವುದರಿಂದ ಪ್ರತಿ ಸಾರಿ ಉತ್ತಾಗ ಕೆರೆಗೆ ಮಣ್ಣು ಬಂದು ಕೂರುತ್ತದೆ. ಈ ರೀತಿ ಹೂಳು ತುಂಬಿಕೊಂಡು ಕೆರೆಗಳು ಹಾಳಾಗುತ್ತವೆ. ಕೆರೆಯ ಅಂಗಳವನ್ನು ಅನಧಿಕೃತವಾಗಿ ಉಳುಮೆ ಮಾಡಿ ಸರ್ಕಾರಕ್ಕೆ ವಂಚನೆ ಮಾಡುತ್ತಾರಲ್ಲದೆ ರೈತರಿಗೂ ಅದರಿಂದ ತೊಂದರೆಯನ್ನುಂಟು ಮಾಡುತ್ತಾರೆ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಏಕೆಂದರೆ ಪ್ರತಿ ವರ್ಷ ಕೆರೆಯ ನೀರಿನ ಪ್ರಮಾಣ ಕಡಿಮೆಯಾಗುತ್ತ ಹೋಗುತ್ತದೆ. ಈ ಹೂಳನ್ನು ತೆಗೆಸಲು ಜಾಸ್ತಿ ಹಣ ಖರ್ಚು ಮಾಡಿದರೆ ಅದರಿಂದ ಆರ್ಥಿಕವಾಗಿ ಲಾಭವಾಗುವುದಿಲ್ಲವಾದ ಕಾರಣ ಹೂಳನ್ನು ತೆಗೆಸುವುದು ಸಮಂಜಸವಲ್ಲವೆಂದು ಹಿಂದಿನ ಸರ್ಕಾರ ತೀರ್ಮಾನ ಮಾಡಿತ್ತು. ಅದರ ಬಗ್ಗೆ ಈ ಸರ್ಕಾರದ ನಿಲುವು ಏನು ? ಈ ಮೂರು ವಿಚಾರಗಳ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ?

೧೦-೩೦ ಎ.ಎಂ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಾನ್ಯ ಹುಚ್ಚಮಾಸ್ತಿಗೌಡರು ಈ ಬಗ್ಗೆ ಈಗಾಗಲೇ ಕೇಳಿದ್ದಾರೆ, ಕಮ್ಯಾಂಡ್ ಏರಿಯಾದಲ್ಲಿರುವ ಕೆರೆ ಅಂಗಳದಲ್ಲಿ ಬಹುತೇಕ ಕಡೆ ಜನ ವ್ಯವಸಾಯ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸದಿದ್ದರೆ ಕೆರೆಗಳೆಲ್ಲಾ ಹೂತುಹೋಗುತ್ತವೆ. ಇದರ ಬಗ್ಗೆ ಕಮಿಟಿಗಳನ್ನು ಮಾಡಬೇಕು ಎಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ತೂಬು ದುರಸ್ತಿ ಮಾಡುವುದು, ಅಕ್ರಮ ಸಾಗುವಳಿ ಮಾಡುವವರನ್ನು ಬಿಡಿಸುವುದು ಈ ಬಗ್ಗೆ ಊರಿನ ಪ್ರಮುಖರು ಗಮನ ಕೊಡಬೇಕಾಗುತ್ತದೆ. ಅವರೆಲ್ಲಾ ಸಹಕಾರ ಕೊಡದಿದ್ದರೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ಈ ಬಗ್ಗೆ ಸಮಿತಿ ಮಾಡುವುದು ಸರ್ಕಾರದ ಆಲೋಚನೆಯಲ್ಲಿದೆ. ಕೆರೆ ಅಂಗಳಲ್ಲಿ ವ್ಯವಸಾಯ ಮಾಡುವುದನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇದ್ದರೆ ಹೊಸದಾಗಿ ಕೆರೆಗಳನ್ನು ಕಟ್ಟುವುದಕ್ಕೂ ಸಾಧ್ಯವಾಗುವುದಿಲ್ಲ, ಈ ಬಗ್ಗೆ ಇಷ್ಟರಲ್ಲೇ ಸರ್ಕಾರ ತೀರ್ಮಾನಕ್ಕೆ ಬರುತ್ತದೆ.

ಶ್ರೀ ಹೆಚ್.ಜಿ. ಗೋವಿಂದಗೌಡ.—ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲ್ಲದಲ್ಲಿ ೧೫ ೭೦೦ ಕೆರೆಗಳಿವೆ ಎಂದು ಹೇಳಿದ್ದಾರೆ. ನಮ್ಮ ಮಲೆನಾಡಿನಲ್ಲಿ ಸಣ್ಣ ಕೆರೆಗಳು ಜಾಸ್ತಿ ಇವೆ. ದೊಡ್ಡ ದೊಡ್ಡ ಕೆರೆಗಳಾಗಲೀ, ಅಣೆಕಟ್ಟುಗಳಾಗಲೀ ಇಮ್ಮಲ್ಲಿಲ್ಲ. ಸಣ್ಣಸಣ್ಣ ಕೆರೆಗಳನ್ನು ರಿಪೇರಿ ಮಾಡಿಸುವುದು ತಾಲ್ಲೂಕು ಬೋರ್ಡಿಗೆ ಸೇರಿದ ಜವಾಬ್ದಾರಿ ಎಂದು ಹೇಳುತ್ತಾರೆ. ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿ ಮತ್ತು ಸದಸ್ಯನಾಗಿ ಸೇವೆ ಸಲ್ಲಿಸಿದ್ದೇನೆ, ಆಲ್ಲಿನ ಪರಿಸ್ಥಿತಿ ಏನು ಎಂಬುದು ನನಗೆ ಗೊತ್ತು. ಸರ್ಕಾರದಿಂದ ಸಣ್ಣ ನೀರಾವರಿ ತಾಲ್ಲೂಕುಬೋರ್ಡುಗಳಿಗೆ ಹಣ ಕೊಡುತ್ತಿಲ್ಲ. ಇದ ರಿಂದಾಗಿ ತಾಲ್ಲೂಕು ಬೋರ್ಡ್ ವ್ಯಾಪ್ತಿಯಲ್ಲಿ ಸಣ್ಣ ಸಣ್ಣ ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಸಾಧ್ಯ ವಾಗುತ್ತಿಲ್ಲ. ಸಣ್ಣ ಕೆರೆಗಳನ್ನು ರಿಪೇರಿ ಮಾಡಿಸದೇ ಹೋದರೆ ಮಲೆನಾಡು ಭಾಗದಲ್ಲಿ ನೀರಾವರಿಗೆ ಅನಾನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರದ ನಿಲುವು ಏನು ಎಂದು ಕೇಳಬಯಸುತ್ತೇನೆ. ಕೆರೆಗಳಲ್ಲಿ ಹೂಳು ತುಂಬಿಕೊಂಡಿದ್ದು ಅದನ್ನು ತೆಗೆಯದಿದ್ದರೆ ವರ್ಷೇವರ್ಷೇ ನಾಲ್ಕೈದು ಅಡಿ ಮೇಲೆ ಬಂದು ಕೆರೆ ಮುಚ್ಚುವ ಪರಿಸ್ಥಿತಿ ಉಂಟಾಗುತ್ತದೆ. ಈ ಎರಡು ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಕೆಲಸ ಮಾಡಿಸಿಕೊಟ್ಟರೆ ಸಣ್ಣ ನೀರಾವರಿ ಬಗ್ಗೆ ಒಳ್ಳೆಯ ಕೆಲಸ ಮಾಡಿದಂತಾಗು ತ್ತದೆ.

ಶ್ರೀ ಆರ್.ಎನ್ ಲಕ್ಷ್ಮೀಪತಿ.—೧೦ ಎಕರೆಗಿಂತ ಕಡಿಮೆ ನೀರಾವರಿಯಾಗುವ ಎಲ್ಲ ಕೆರೆಗಳೂ ತಾಲ್ಲೂಕು ಬೋರ್ಡಿನ ವ್ಯಾಪ್ತಿಗೆ ಬರುತ್ತವೆ. ಚೀಫ್ ಇಂಜಿನಿಯರ್ ಅವರು ಎಲ್ಲಾ ತಾಲ್ಲೂಕು ಬೋರ್ಡುಗಳಿಗೂ ಎಕರೆವಾರು ಹಂಚುತ್ತಾರೆ, ಅದರಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ.

ಶ್ರೀ ವಿ. ಧನಂಜಯಕುಮಾರ್.—ಸಮುದ್ರ ಕೊರೆತ ತಡೆಗಟ್ಟುವುದಕ್ಕೆ ಶಾಶ್ವತವಾದ ಗೋಡೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ಮಂಗಳೂರು ಸಮೀಪದಲ್ಲಿ ಬೇಂಗ್ರೆಯಲ್ಲಿ ಗೋಡೆ ರಚನೆ ಮಾಡುತ್ತಿದ್ದು ಅದನ್ನು ಸ್ಲ್ಯಾಂಟ್ ಆಗಿ ಮಾಡುತ್ತಿದ್ದಾರೆ. ಅದನ್ನು ನೇರವಾಗಿ ಕಟ್ಟಿದರೆ ಮೀನುಗಾರಿಕೆ ಬಂದರಿಗೂ ಅನುಕೂಲವಾಗುತ್ತದೆ, ಹಂತಹಂತವಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸ ಮಾಡುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಸ್ಲ್ಯಾಂಟಾಗಿ ಕಟ್ಟುವ ಬದಲು ನೇರವಾಗಿ ಕಟ್ಟಿದರೆ ಸಮುದ್ರ ಕೊರೆತವನ್ನು ತಪ್ಪಿಸುವುದಕ್ಕೂ ಅನುಕೂಲವಾಗುತ್ತದೆ ಮತ್ತು ಮೀನುಗಾರಿಕೆಗೂ ಅನುಕೂಲವಾಗುತ್ತದೆ. ಒಂದೇ ಖರ್ಚಿನಲ್ಲಿ ಎರಡು ಕೆಲಸ ಮಾಡಿದಂತಾಗುತ್ತದೆ. ಬಹುಶಃ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದು ಸ್ಥಳ ಪರಿಶೀಲನೆ ಮಾಡಿದರೆ ಅದರ ಅರಿವಾಗು ತ್ತದೆ. ಹೇಗಿದ್ದರೂ ಹಣ ಖರ್ಚು ಮಾಡುತ್ತಿದ್ದಾರೆ. ಈ ರೀತಿ ನೇರವಾಗಿ ಗೋಡೆ ನಿರ್ಮಾಣ ಮಾಡಿದರೆ ಶಾಶ್ವತವಾಗಿ ಸಮುದ್ರ ಕೊರೆತವನ್ನೂ ತಡೆಯಬಹುದು ಜೊತೆಗೆ ಮೀನುಗಾರಿಕೆ ಉದ್ಯಮಕ್ಕೂ ಸಹಾಯ ಮಾಡಿದಂತಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಲೋಚನೆ ಮಾಡುತ್ತಾರೆಯೆ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಅದನ್ನು ಸ್ಲ್ಯಾಂಟಾಗಿ ಕಟ್ಟಬೇಕೋ ನೇರವಾಗಿ ಕಟ್ಟಬೇಕೋ ಅನ್ನುವುದನ್ನು ಟೆಕ್ನೀಷಿಯನ್ಸ್‌ಗೆ ಬಿಡಬೇಕಾಗುತ್ತದೆ. ಸ್ಲ್ಯಾಂಟಾಗಿ ಕಟ್ಟುವುದರಿಂದ ಅನುಕೂಲ ವಾದರೆ ಆ ತರಹ ಕಟ್ಟುತ್ತಾರೆ. ಅಥವಾ ನೇರವಾಗಿ ಕಟ್ಟುವುದರಿಂದ ಅನುಕೂಲವಾದರೆ ಆ ತರಹ ಅವರು ಕಟ್ಟುತ್ತಾರೆ. ಈ ವಿಷಯವನ್ನು ನಾವು ಅವರಿಗೇ ಬಿಡೋಣ. ಈ ಯೋಜನೆಗೆ ಸಾಲಕ್ಕಾಗಿ ಕೇಂದ್ರ ಸರ್ಕಾರದನ್ನು ಕೇಳಿದ್ದೇನೆ. ಅವರು ಹಣವನ್ನು ಕೊಟ್ಟರೆ ಅಷ್ಟೇ ಹಣ ನಾವೂ ಹಾಕಿ ಕೆಲಸ ಪೂರ್ತಿ ಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಬಸಪ್ಪ. —ಹೊಸದುರ್ಗ ತಾಲ್ಲೂಕು ಕೂಡ ಬರಗಾಲಕ್ಕೆ ತುತ್ತಾಗುತ್ತಿದೆ. ಡಿ.ಪಿ.ಎ.ಪಿ. ಯಲ್ಲಿ ಒಂದು ಕೆರೆ ಕಟ್ಟುವ ಕೆಲಸವನ್ನು ಅಲ್ಲಿ ಪ್ರಾರಂಭ ಮಾಡಿ ಅರ್ಧಕ್ಕೇ ನಿಲ್ಲಿಸಿದ್ದಾರೆ. ಮೈನಿಂಗ್ ಲೀಸ್ ಕೊಟ್ಟು ಕೆರೆ ಪಕ್ಕದಲ್ಲಿ ಬ್ಲಾಕ್ ಮಾಡುತ್ತಿದ್ದಾರೆ ಮೈನಿಂಗ್‌ಲೀಸ್ ವಿತ್ ಡ್ರಾ ಮಾಡದಿದ್ದರೆ ಆ ಕೆಲಸಕ್ಕೆ ತೊಂದರೆಯಾಗುತ್ತದೆ ಆದ್ದರಿಂದ ಅದನ್ನು ವಿತ್ ಡ್ರಾ ಮಾಡುತ್ತೀರಾ ? ಎರಡನೆಯದಾಗಿ ವೇದಾವತಿ ಬೇಸಿನ್‌ನಲ್ಲಿ ಹೊಸದಾಗಿ ಕೆರೆ ನಿರ್ಮಾಣ ಮಾಡುವುದಕ್ಕೆ ರಿಸ್ಟ್ರಿಕ್ಷನ್ಸ್ ಹಾಕಿದ್ದಾರಂತೆ. ಈ ರಿಸ್ಟ್ರಿಕ್ಷನ್ಸ್ ತೆಗೆದರೆ ಅನೇಕ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಅದನ್ನು ತೆಗೆಯುವುದಕ್ಕೆ ಮಾನ್ಯ ಮಂತ್ರಿಗಳು ಕೃಪು ತೆಗೆದುಕೊಳ್ಳುತ್ತಾರೆಯೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮೈನಿಂಗ್ ಇಲಾಖೆಯವರ ಹತ್ತಿರ ವಿಷಯ ತಿಳಿದುಕೊಂಡು ನಾವು ಮಾತನಾಡಬೇಕಾಗುತ್ತದೆ. ಯಾವ ಉದ್ದೇಶದಿಂದ ಅವರಿಗೆ ಕೊಟ್ಟಿದ್ದಾರೆ, ಎಷ್ಟು ಕಾಲದ ವರೆಗೆ ಕೊಟ್ಟಿದ್ದಾರೆ ಎಂಬುದನ್ನು ಪರೀಕ್ಷೆ ಮಾಡಬೇಕಾಗುತ್ತದೆ. ವೇದಾವತಿ ಬಗ್ಗೆ ನಾನು ಈಗಾಗಲೇ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಕಮ್ಯಾಂಡ್ ಏರಿಯಾದಲ್ಲಿ ಬಂದರೆ ಯಾವ ಕೆರೆಯನ್ನೂ ಕಟ್ಟುವುದಕ್ಕಾಗುವುದಿಲ್ಲ.

ಶ್ರೀ ಎಸ್. ಜಿ. ನಾಯಕ್.—ಮೊಳಕಾಲ್ಮೂರು ತಾಲ್ಲೂಕು ಬರಗಾಲ ಪೀಡಿತ ಪ್ರದೇಶವಾಗಿದೆ. ಹತ್ತಾರು ವರ್ಷಗಳಿಂದ ಅಲ್ಲಿ ಬರಗಾಲ ಬಂದಿದೆ. ಅಲ್ಲಿ ಯಾವ ತರಹದ ದೊಡ್ಡ ನೀರಾವರಿಯೂ ಇಲ್ಲ. ಆದ್ದರಿಂದ ಸರ್ಕಾರದವರು ಸಣ್ಣ ನೀರಾವರಿ ಯೋಜನೆಯನ್ನಾದರೂ ಹಾಕಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಅಲ್ಲಿ ಲಿಫ್ಟ್ ಇರಿಗೇಷನ್‌ಗೆ ಅನುಕೂಲವಿರುವುದರಿಂದ ಅದನ್ನು ಮಾಡುವ ಯೋಚನೆ ಸರ್ಕಾರದಲ್ಲಿಯೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎಲ್ಲೆಲ್ಲ ಕೆರೆ ಆಗಬೇಕೋ ಆ ಬಗ್ಗೆ ಮಾನ್ಯ ಸದಸ್ಯರು ಸೂಚನೆ ಕೊಟ್ಟರೆ ಇನ್‌ವೆಸ್ಟಿಗೇಷನ್ ಮಾಡಿಸಿ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಪಿ. ತಿಪ್ಪಯ್ಯ.—ನಮ್ಮಲ್ಲಿ ಒಬೇರಹಳ್ಳದಿಂದ ನೀರನ್ನು ತಿರುಗಿಸಿ ಒದಗಿಸಿದರೆ ತರೀಕೆರೆಗೂ ನೀರಾವರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ಒಂದು ಯೋಜನೆ ಸರ್ಕಾರದಲ್ಲಿದ್ದು ಇದನ್ನು ಜಾಗ್ರತೆ ಮಾಡಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಭದ್ರ ಜಲಾಶಯದಿಂದ ನಮಗೆ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರ ಗಮನ ಹರಿಸಿ ನಮಗೆ ಅನುಕೂಲ ಮಾಡಿಸಿಕೊಡಬೇಕು. ನಾನು ಈಗಾಗಲೇ ಹೇಳಿದಂತೆ ಹಳ್ಳದ ನೀರನ್ನು ನಮ್ಮ ಕಡೆ ತಿರುಗಿಸಿ ಕೊಡುವ ಯೋಜನೆಗೆ ಇಲಾಖಾ ಮಟ್ಟದಲ್ಲಿ ತಾಂತ್ರಿಕ ಒಪ್ಪಿಗೆ ದೊರೆತಿರುವುದರಿಂದ ಈ ಕೆಲಸ ಜಾಗ್ರತೆ ಮಾಡಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದ. ಹಳ್ಳದ ನೀರು ಸುಮ್ಮನೆ ಹರಿದುಹೋಗುತ್ತಿದೆ ಅದನ್ನು ತಿರುಗಿಸಿಕೊಟ್ಟರೆ ನೀರಾವರಿಗೆ ಅನುಕೂಲವಾಗುವುದರಿಂದ ಈ ಬಗ್ಗೆ ಸರ್ಕಾರ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೇ ೧೦ ಎಕರೆಗಿಂತ ಕಡಿಮೆ ನೀರಾವರಿಯಾಗುವ ಯೋಜನೆ ತಾಲ್ಲೂಕು ಬೋರ್ಡ್ ವ್ಯಾಪ್ತಿಗೆ ಬರುತ್ತದೆ, ಅದಕ್ಕಿಂತ ಹೆಚ್ಚು ನೀರಾವರಿಯಾಗುವ ಕೆಲಸ ನೀರಾವರಿ ಇಲಾಖೆಗೆ ಬರುತ್ತದೆ ಎಂದು ಹೇಳಿದ್ದಾರೆ. ಪ್ರತಿವರ್ಷ ಹೂಳು ತುಂಬಿಕೊಂಡು ಸಣ್ಣ ಸಣ್ಣ ಕೆರೆಗಳು ಹೂತುಹೋಗುತ್ತಿವೆ. ಆದ್ದರಿಂದ ಸರ್ಕಾರ ಹೂಳು ತೆಗೆಸುವ ಬಗ್ಗೆ ಗಮನ ಕೊಡಬೇಕಾಗುತ್ತದೆ. ಸಣ್ಣ ನೀರಾವರಿ ಕೆಲಸವನ್ನು ಸಮರ್ಪಕವಾಗಿ ಮಾಡಿದರೆ ದೊಡ್ಡ ಜಲಾಶಯಗಳಿಗಿಂತ ಇದು ಉಪಯುಕ್ತವಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ —ತರೀಕೆರೆಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮಿನ ಇನ್ಯಾಗರೇಷನ್‌ಗೆ ನಾವು ಹೋಗಿದ್ದೆವು. ಆಗ ಇನ್ನೊಂದು ಯೋಜನೆ ಮಾಡಬೇಕು. ಎಂದು ಹೇಳಿದರು.

ಶ್ರೀ ಪಿ. ತಿಪ್ಪಯ್ಯ.—ಒಬೇರಹಳ್ಳದಿಂದ ನೀರು ತಿರುಗಿಸುವ ಬಗ್ಗೆ......

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ಸ್ಥಳದ ವಿಚಾರ ನನಗೆ ಗೊತ್ತಿಲ್ಲ. ಅರ್ಜಿ ಕೊಟ್ಟರೆ ಪರಿಶೀಲನೆ ಮಾಡಿಸೋಣ. ಹಣಕಾಸಿನ ತೊಂದರೆ ಇದ್ದರೆ ಯೋಚನೆ ಮಾಡಿ ಕೊಡಿಸುವುದಕ್ಕೆ ವ್ಯವಸ್ಥೆ ಮಾಡೋಣ.

ಶ್ರೀ ಎಂ. ಮಹದೇವ್.—ಮಳೆ ಆಶ್ರಯದಲ್ಲಿ ಬೆಳೆಯತಕ್ಕ ಖುಷ್ಕಿ ಪ್ರದೇಶಗಳ ಬಗ್ಗೆ ಈ ಆಯವ್ಯಯದಲ್ಲಿ ಈ ಆಯವ್ಯಯದಲ್ಲಿ ವಿಶೇಷ ಯೋಜನೆಗಳನ್ನು ಹಾಕಿಕೊಂಡಿದ್ದೀರಾ ? ಹೂಳು ಎತ್ತುವ ಕಾರ್ಯಕ್ರಮದಲ್ಲಿ ಎರಡು ವರ್ಷಕ್ಕೊಮ್ಮೆ ಅಥವಾ ಐದು ವರ್ಷಕ್ಕೊಮ್ಮೆ ಹೂಳು ಎತ್ತುತ್ತಾರೆ. ಎತ್ತಿದ ಮೇಲೆ ಅದನ್ನು ದಡದ ಮೇಲೆ ಹಾಕುತ್ತಾರೆ. ಮಳೆ ಬಂದಾಗ ಮತ್ತೆ ಅದು ಕೆರೆಗೆ ಬೀಳುತ್ತದೆ. ಕೆಲವು ಬಾರಿ ಅರ್ಧ ಕೆಲಸ ಮಾಡಿ ಹಾಗೇ ನಿಲ್ಲಿಸಿರುತ್ತಾರೆ. ಕೇಳಿದರೆ ನಮ್ಮಲ್ಲಿ ಹಣ ಇಲ್ಲ, ಆದ್ದರಿಂದ ಕೆಲಸ ನಿಲ್ಲಿಸುವ ಪರಿಸ್ಥಿತಿ ಬಂತು ಎಂದು ಹೇಳುತ್ತಾರೆ. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಇದಕ್ಕೋಸ್ಕರ ಹೆಚ್ಚು ಹಣವನ್ನು ಇಡುತ್ತೀರಾ ?

ಬಹುಶಃ ಇವತ್ತು ಕೆರೆಗಳಿಗೆ ರಿವಿಟ್‌ಮೆಂಟ್ ಕಟ್ಟಿದರೆ ಹೊಸ ಕೆರೆಗಳನ್ನು ಕಟ್ಟುವುದರ ಬದಲು ಇರುವ ಕೆರೆಗಳನ್ನು ಬಂದೋಬಸ್ತು ಮಾಡಿದ ಹಾಗೆ ಆಗುತ್ತದೆ. ಇವತ್ತು ಮಣ್ಣನ್ನು ಎತ್ತಿ

ದಡಕ್ಕೆ ಹಾಕುವ ಬದಲು ಅದರಿಂದ ರಿವಿಟ್‌ಮೆಂಟ್ ಮಾಡಿದರೆ ಇದರಿಂದ ಉಳಿಯುವ ಹಣದಲ್ಲಿ ರಾಜ್ಯದಲ್ಲಿ ಸುಮಾರು ೫೦ ಕೆರೆಗಳನ್ನು ಹೊಸದಾಗಿ ಕಟ್ಟಲು ಅನುಕೂಲವಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಮಗೆ ತಿಳಿದಿರುವ ಹಾಗೆ ಕಳೆದ ನಾಲ್ಕು ವರ್ಷಗಳಲ್ಲಿ ಒಂದು ಹೊಸಕೆರೆಯನ್ನೂ ತೆಗೆದುಕೊಂಡಿರಲಿಲ್ಲ. ಈ ಸಾರಿ ೩೮೭ ಹೊಸ ಕೆರೆಗಳನ್ನು ತೆಗೆದುಕೊಂಡು ಅವನ್ನು ಆಯವ್ಯಯದಲ್ಲಿ ಸೇರಿಸಿದ್ದೇವೆ. ಈ ದಿನ ಒಂದು ಕೆರೆ ಕಟ್ಟಿಸಲು ಎಷ್ಟು ಹಣ ಬೇಕಾಗುತ್ತದೆಯೋ ಅದಕ್ಕಿಂತಾ ಎರಡು ಅಥವಾ ಮೂರು ಪಟ್ಟು ಹಣ ಹೂಲಂ ತೆಗೆಸಲು ಬೇಕಾಗುತ್ತದೆ. ಇವತ್ತು ಹೊಸ ಕೆರೆಗಳನ್ನು ಕಟ್ಟಿಸಿದ ಮೇಲೆ ಕೆಲಸ ಇಲ್ಲದಾಗ ಹೂಳು ತೆಗೆಯುವ ಕೆಲಸ ಇದ್ದೇ ಇರುತ್ತದೆ. ಇನ್ನು ರಿವಿಟ್‌ಮೆಂಟ್ ಬಟ್ಟೆ ಏನು ಹೇಳಿದ್ದಾರೆ ಆ ಬಗ್ಗೆ ಹೇಳಬೇಕೆಂದರೆ ಎಲ್ಲಿ ಕೆರೆಗಳು ಶಿಥಿಲವಾಗಿದ್ದು ಬಂದೋಬಸ್ತು ಮಾಡಬೇಕಾಗಿರುತ್ತದೆ ಅಲ್ಲೆಲ್ಲಾ ಮಾಡಿಸೋಣ.

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೇ ನಮ್ಮ ಪನ್ನಸಂದ್ರ ಎನ್ನುವ ಕೆರೆಗೆ ೫ ಸಾರಿ ಶಂಕುಸ್ಥಾಪನೆಯಾಗಿದ್ದು ಅದು ಇನ್ನೂ ಪ್ರಾರಂಭವಾಗಿಲ್ಲ. ಇನ್ನು ಬೈರಸಂದ್ರದ ಕೆರೆ ಮೂರು ವರ್ಷದಿಂದ ಬಡ್ಜೆಟ್‌ಗೆ ಸೇರುತ್ತಿದೆ. ತಾವು ಕೂಡಾ ಸೇರಿಸಿದ್ದೀರಿ. ತಾವೂ ಕೂಡಾ ಗುದ್ದಲಿ ಪೂಜೆ ಮಾಡಿದ್ದೀರಿ. ಆದರೆ ಇದು ಆಗದಿರಲ್ಲಿ ಅಲ್ಲಿನ ಸಿಬ್ಬಂದಿಗೆ ಕೇಳಿದರೆ ಒಬ್ಬರು ರೆವೈಸ್ಡ್ ಎಸ್ಟಿಮೇಟ್ ಆಗಬೇಕೆಂದು ಹೇಳುತ್ತಾರೆ, ಒಬ್ಬರು ರೀಕ್ಯಾಸ್ಟ್ ಆಗಬೇಕೆಂದು, ಒಬ್ಬರು ರಿಪೋರ್ಟ್ ಬರಬೇಕೆಂದು, ಒಬ್ಬರು ಕ್ಲಾರಿಫಿಕೇಷನ್ ಬರಬೇಕೆಂದು ಹೇಳುತ್ತಾರೆ. ಆದ್ದರಿಂದ ಆಯವ್ಯಯದಲ್ಲಿ ಸೇರಿದ ಕೆರೆಗಳನ್ನು ಬೇಗ ಮಾಡಿಸುವ ಕೆಲಸ ಮಾಡಿಸುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ಯಾವ ಕೆರೆಗೆ ೫ ಸಾರಿ ಶಂಕುಸ್ಥಾಪನೆ ಹಾಕಲಾಗಿದೆ ಎನ್ನುತ್ತೀರಿ ಅದಕ್ಕೆ ಮೊದಲು ಯಾರು ಶಂಕುಸ್ಥಾಪನೆ ಮಾಡಿದರೋ ಅದರ ಪರಿಣಾಮದಿಂದ ಅದು ವಿಳಂಬವಾಗುತ್ತಿದೆಯೋ ಏನೋ ಗೊತ್ತಿಲ್ಲ. ನಾನಂತೂ ಶಂಕುಸ್ಥಾಪನೆ ಮಾಡಿಲ್ಲ, ಆದರೆ ಒಂದು ವಿವಾದದ ಬಗ್ಗೆ ಹೆಚ್ಚ ಮಾಸ್ತಿಗೌಡರು ಹಾಗೂ ನಾವೂ ಹೋಗಿ ಮಾತನಾಡಿ ಬಂದಿದ್ದೇವೆ. ಈಗ ಏನು ಕೆರೆಗಳನ್ನು ಕಟ್ಟಿಸಬೇಕೆಂದು ಹಾಕಿಕೊಂಡಿದ್ದೇವೆ ಅದನ್ನು ಶೀಘ್ರ ಮಾಡಿ ಮುಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ವೈ. ಕೆ. ರಾಮಯ್ಯ.—ಬಡ್ಜೆಟ್‌ನಲ್ಲಿ ಸೇರಿರುವ ಕೆರೆಗಳು ಬೇಗ ಆಗಬೇಕು.

ಶ್ರೀ ಆರ್. ಎನ್, ಲಕ್ಷ್ಮೀಪತಿ.—ಈ ಕೆರೆಗಳ ಬಗ್ಗೆ ಸ್ಥಳೀಯ ಶಾಸಕರು ಮುತು ವರ್ಜಿ ವಹಿಸಿ ಅವುಗಳ ವಿವರಗಳನ್ನು ಬೇಗ ಕಳುಹಿಸಲು ಎಂಜಿನಿಯರ್‌ಗಳಿಗೆ ತಾವು ಹೇಳಬೇಕು. ತಮ್ಮ ಮಾತಿಗೆ ಅವರು ಇಲ್ಲ ಎಂದು ಹೇಳುವುದಿಲ್ಲ. ಸರ್ಕಾರದಿಂದಲೂ ಅವರಿಗೆ ತಿಳುವಳಿಕೆ ಕೊಡುತ್ತೇವೆ. ಮಂಜೂರಾತಿ ಕೊಟ್ಟಿದ್ದರೂ ಕೆಲಸ ಹೆಚ್ಚು ಇರುವುದರಿಂದ ಒಂದೆರಡು ವರ್ಷ ನಿಧಾನ ಆಗಬಹುದು. ಇವತ್ತು ಕೆರೆಗಳ ನಿರ್ಮಾಣಕ್ಕೆ ೧೫ ಕೋಟಿ ರೂಪಾಯಿ ಬೇಕಾಗಿದ್ದು ೩ ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಇಟ್ಟಿದ್ದೇವೆ. ಇದರ ಖರ್ಚು ವಿಳಂಬ ಆಗುತ್ತಿದೆ,

ಶ್ರೀ ಎಚ್. ಸಿ. ಶಿವಶಂಕರಪ್ಪ.—ಚಳ್ಳಕೆರೆ ಕ್ಷೇತ್ರದ ವೇದಾವತಿ ನದಿಗೆ ಇನ್‌ಂಡೇಷನ್ ಕೆನಾಲ್‌ಗಳು ೨ ಕಡೆ ಇದ್ದು ಇವುಗಳಿಂದ ಆರೇಳು ಸಾವಿರ ಎಕರೆ ನೀರಾವರಿ ಆಗಬೇಕಾಗಿದ್ದು ಕಳೆದ ೮ ವರ್ಷದಿಂದ ಅವುಗಳಲ್ಲಿ ನೀರು ಬರದೇ ಆ ಜಮೀನಿಗೆ ನೀರು ಇಲ್ಲದಂತಾಗಿದ್ದೆ. ಆದ್ದರಿಂದ ಅಂತಹ ಕಡೆ ವಿಶೇಷ ಯೋಜನೆ ಮುಖಾಂತರ ಭೂಗರ್ಭದ ನೀರನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಎನ್, ಲಕ್ಷ್ಮೀಪತಿ.—ಭೂಗರ್ಭದ ನೀರನ್ನು ಒದಗಿಸುವ ಬಗ್ಗೆ ಅದು ನಮಗೆ ಬರುವುದಿಲ್ಲ. ಆರ್. ಡಿ. ಸಿ. ಮುಖಾಂತರ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮುಖಾಂತರ ನೀರನ್ನು ಒದಗಿಸಿಕೊಳ್ಳಬಹುದು. ಇನ್ನು ಕಮ್ಯುನಿಟಿ ಬಾವಿಗಳ ಮೂಲಕ ನೀರನ್ನು ಒದಗಿಸಿಕೊಳ್ಳುವ ಪ್ರಯತ್ನ ಮಾಡಬಹುದು.

ಶ್ರೀ ಯಾವಗಲ್.—ರಾಜ್ಯದಲ್ಲಿನ ಏತ ನೀರಾವರಿ ಇಲ್ಲದ ಕಡೆ ನಡೆಸತಕ್ಕ ಸಿಬ್ಬಂಧಿ ನೌಕರರ ವರ್ಗ ಇಲ್ಲದಿರುವುದರಿಂದ ಕೆಲವು ಕಡೆ ಪಂಪುಗಳು ಕೆಟ್ಟುಹೋಗಿ ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದ್ದರಿಂದಲೇ ಈ ಬಗ್ಗೆ ಪ್ರತ್ಯೇಕ ಸಿಬ್ಬಂಧಿ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಿಮ್ಮ ಸಲಹೆ ಸಾಧುವಾದದ್ದು. ಎಲ್ಲಿ ಹೆಚ್ಚು ಮೋಟಾರು ಗಳನ್ನು ಅಳವಡಿಸಲಾಗಿದೆ ಅಲ್ಲಿ ಸ್ಟ್ಯಾಂಡ್ ಬೈಗಳು ಇರುವುದು ಅವಶ್ಯ ಇದೆ. ಮತ್ತು ಅವುಗಳು ಇರುವ ಕಡೆ ವಾಚ್‌ಮನ್ ಕ್ವಾರ್ಟರ್ಸ್ ವ್ಯವಸ್ಥೆ ಆಗಬೇಕು. ಕೆಲವು ಏತ ನೀರಾವರಿಗಳ ಹತ್ತಿರ ಜೂನಿಯರ್ ಎಂಜಿನಿಯರ್‌ಗಳು ಇರಬೇಕಾಗುತ್ತದೆ. ಇವೆಲ್ಲಾ ಸಲಹೆ ಸರ್ಕಾರದ ಆಲೋಚನೆಯಲ್ಲಿ ಇದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತಾವು ಹೊಸದಾಗಿ ಕೆಲವು ಹೊಸದಾಗಿ ಕೆಲವು ಲಿಫ್ಟ್ ಇರಿಗೇಷನ್ ಗಳನ್ನು ಆಯವ್ಯಯದಲ್ಲಿ ಸೇರಿಸಿದ್ದೀರಿ. ಇವನ್ನು ಪಬ್ಲಿಕ್ ಕಾಂಟ್ರಿಬ್ಯೂಷನ್, ಪಿ. ಎಲ್. ಡಿ ಬ್ಯಾಂಕ್ ಕಾಂಟ್ರಿಬ್ಯೂಷನ್, ಗೌರ್ನಮೆಂಟ್ ಕಾಂಟ್ರಿಬ್ಯೂಷನ್ ವ್ಯವಸ್ಥೆ ಮೂಲಕ ಏತ ನೀರಾವರಿ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ. ಈ ರೀತಿಯಾದರೆ ಸಾರ್ವಜನಿಕರು ಯಾರೂ ಕೂಡಾ ಮುಂದೆ ಬಂದು ಕೆಲಸ ಮಾಡಲು ಅಸಾಧ್ಯವಾಗುತ್ತದೆ. ಸರ್ಕಾರವೇ ಏಕೆ ಇವುಗಳನ್ನು ತೆಗೆದುಕೊಂಡು ಮಾಡಬಾರದು ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಇಂತಹ ಕೆಲಸಗಳಲ್ಲಿ ನಮ್ಮದೂ ಏನಾದರೂ ಕಾಂಟ್ರಿಬ್ಯೂಷನ್ ಇರಬೇಕೆಂಬ ಮನೋಭಾವ ರೈತರಲ್ಲೂ ಬರಬೇಕಾಗುತ್ತದೆ. ಇಂತಹ ಮನೋಬಾವ ಉಂಟಾಗಲು ಇಂತಹ ಯೋಜನೆಗಳನ್ನು ಮಾಡಂತ್ತಿದ್ದೇವಷ್ಟೇ.

† ಶ್ರೀ ಎಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ೩ ದಿವಸಗಳ ಕಾಲ ಲೋಕೋಪಯೋಗಿ, ನೀರಾವರಿ ಇಲಾಖೆಯ ಮೇಲೆ ಈ ಸದನ ದಲ್ಲಿ ಚರ್ಚೆ ನಡೆದು ಸುಮಾರು ೩೦ ಜನ ಸನ್ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಹಾಗೂ ಸುಮಾರು ೭೨೦ ನಿಮಿಷಗಳ ಕಾಲ ವೇಳೆಯನ್ನು ಚರ್ಚೆಗೆ ಉಪಯೋಗ ಮಾಡಿಕೊಂಡಿದ್ದಾರೆ. ಹಾಗೂ ಕೆಲವು ಅತ್ಯಂತ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದು ಟೀಕೆಗಳನ್ನೂ ಸಹಾ ಮಾಡಿ ದ್ದಾರೆ. ಅದಕ್ಕಾಗಿ ನಾನು ಅವರಿಗೆ ಆಬಾರಿಯಾಗಿದ್ದೇನೆ. ಸ್ವಾಮಿ, ಈ ಚರ್ಚೆಯಲ್ಲಿ ಹೊರಬಂದಿರತಕ್ಕ ಅಂಶಗಳು ಎಂದರೆ, ಈ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನ, ನೂರರಲ್ಲಿ ೮೦ ಜನ ಯಾರು ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ ಅವರಿಗೆ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿಕೊಡ ತಕ್ಕದ್ದು, ಅವರ ಆರ್ಥಿಕ ಪ್ರಗತಿಗೆ ಇವತ್ತು ಜಲ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದು ಇವೇ ಮುಂತಾದ ವಿಷಯಗಳ ಬಗ್ಗೆ ಚರ್ಚೆಯಾಗಿದೆ. ಈ ಸಂದರ್ಭದಲ್ಲಿ ನಾನು ಈ ಸದನದ ಎಲ್ಲಾ ಕಡೆಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಸರ್ಕಾರದಲ್ಲಿ ಇರತಕ್ಕ ದೋಷವನ್ನು ತಿದ್ದತಕ್ಕ ಕಾಲದಲ್ಲಿ ಅವರು ಯಾವ ಕಟು ಟೀಕೆಯನ್ನು ಮಾಡುಲು ನಾನು ಸ್ವಾಗತ ಮಾಡುತ್ತೇನೆ. ಸರ್ಕಾರ ತೆಗೆದುಕೊಳ್ಳತಕ್ಕ ನಿರ್ಣಯಗಳಲ್ಲಿ ಭ್ರಷ್ಟಾಚಾರ ಇದ್ದರೆ ಮತ್ತು ಸಾರ್ವಜನಿಕ ಹಣವನು ಪೋಲು ಮಾಡತಕ್ಕ ತಪ್ಪು ನಿರ್ಣಯಗಳನ್ನು ನಾವು ಮಾಡಿದ್ದರೆ ಅದರ ಬಗ್ಗೆ ಅವರು ಈ ಸದನದಲ್ಲಿ ಇರತಕ್ಕ ಎಲ್ಲಾ ರಾಜ್ಯಾಂಗದ ಸೌಲ್ಲತ್ತುಗಳನ್ನು ಉಪಯೋಗ ಮಾಡಿ ಯಾವುದೇ ಕಟು ಟೀಕೆಯನ್ನು ಮಾಡುವುದಾದರೆ ಅದಕ್ಕೆ ನನ್ನ ಸ್ವಾಗತ ಇದೆ. ಆದರೆ ೨ನೇ ಅಂಶ ಎಂದರೆ, ಈ ರಾಜ್ಯದ ಶೆ ಕಡಾ ೮೦ರಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿ ಇದ್ದಾರೆ ಅವರ ಕಲ್ಯಾಣವನ್ನು ಸಾಧನೆ ಮಾಡಬೇಕಾದರೆ ಈ ವಿಷಯದಲ್ಲಿ ನಾನು ಎಲ್ಲರ ನೆರವು ಹಾಗೂ ಸಹಕಾರವನ್ನು ಕೋರುತ್ತೇನೆ. ಇದರಲ್ಲಿ ಯಾವುದೇ ಪಕ್ಷ ರಾಜಕಾರಣ ಬೇಕಾಗಿಲ್ಲವೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಅತ್ಯಂತ ಜ್ವಲಂತ ಸಮಸ್ಯೆ ಎಂದರೆ ಅದರು ರಾಜ್ಯದ ಜಲ ಸಂಪತ್ತನ್ನು ಉಪಯೋಗ ಮಾಡುವ ಒಂದು ಪ್ರಶ್ನೆ ಇದೆ. ಈ ಸದನದಲ್ಲಿ ನಾನು ಅತ್ತಕಡೆ ಕುಳಿತು ಮಾತನಾಡುವ ಕಾಲದಲ್ಲಿ ಈ ವಿಷಯದ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಈ ಜಲ ಸಂಪತ್ತನ್ನು ಉಪಯೋಗ ಮಾಡಿಕೊಳ್ಳುವ ಕಾಲದಲ್ಲಿ ಈ ಒಂದು ಅಧಿಕಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ನನ್ನ ಪಾಲಿಗೆ ವಹಿಸಿಕೊಟ್ಟಿದ್ದಾರೆ.

ಈ ಏಳು ತಿಂಗಳ ಅವಧಿಯಲ್ಲಿ ಸಮಸ್ಯೆಯ ತೀವ್ರತೆ ಹಾಗೂ ಗಾತ್ರ ಎಲ್ಲವನ್ನು ಅರ್ಥ ಮಾಡಿ ಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿ ಮಳೆಯಿಂದ ಬರತಕ್ಕ ಎಲ್ಲ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಉಪಯೋಗಕ್ಕೆ ಬರುತ್ತಿರುವ ನೀರಿನ ಪ್ರಮಾಣ

† ಈ ಚಿಹ್ನೆ ಸಂಬಂಧಪಟ್ಟ ಮಂತ್ರಿಗಳು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸುಮಾರು ೧೬೦೦ ಟಿ.ಎಂ.ಸಿ.ಎಫ್ ಟಿ. ಆದರೆ, ನಾವು ಉಪಯೋಗ ಮಾಡಿಕೊಂಡಿರತಕ್ಕದ್ದು ೬೧೭ ಟಿ.ಎಂ.ಸಿ.ಎಫ್.ಟಿ. ಕಳೆದ ಎಲ್ಲಾ ಪಂಚವಾರ್ಷಿಕ ಯೋಜನೆಗಳಿಂದ ಇಲ್ಲಿಯವರೆಗೆ ಖರ್ಚು ಮಾಡಿರತಕ್ಕ ಒಟ್ಟು ವೆಚ್ಚ ಯೋಜನೆ ಒಳಗೆ ೭೧೫ ಕೋಟಿ ರೂಪಾಯಿಗಳು. ಯೋಜನೆಯ ಹೊರಗಡೆ ಖರ್ಚು ಮಾಡಿರುವಂಥ ಮೊತ್ತ ೨೪೫.೪೯ ಲಕ್ಷ ರೂಪಾಯಿಗಳು. ಮೈನರ್ ಇರಿಗೇಷನ್‌ಗೆ ಖರ್ಚು ಮಾಡಿರುವುದು ೧೭೩ ಕೋಟಿ ರೂಪಾಯಿಗಳು. ರಾಜ್ಯದಲ್ಲಿ ಜಲಸಂಪತ್ತನ್ನು ಉಪಯೋಗ ಮಾಡಿರುವುದಕ್ಕಾಗಿ ಖರ್ಚು ಮಾಡಿರತಕ್ಕ ಒಟ್ಟು ವೆಚ್ಚ ೧೧೩೩ಕೋಟಿ ರೂಪಾಯಿಗಳು. ಇಷ್ಟೆಲ್ಲಾ ವೆಚ್ಚ ಮಾಡಿದರೂ ನಾವು ಉಪಯೋಗ ಮಾಡಿರತಕ್ಕ ಬಳಕೆ ಮಾಡಿರತಕ್ಕ ನೀರಿನ ಪ್ರಮಾಣ ೬೧೭ಟಿ.ಎಂ.ಸಿ.ಎಫ್.ಟಿ. ಮಾತ್ರ. ಈಗ ನಾವು ಕೈಗೆ ಎತ್ತಿಕೊಂಡು ಕೆಲಸ ಮಾಡತಕ್ಕಂಥ ಯೋಜನೆಗಳಿಂದ ಸುಮಾರು ೪೯ ಟಿ.ಎಂ.ಸಿ.ಎಫ್.ಟಿ ನೀರನ್ನು ಮಾತ್ರ ಉಪಯೋಗಿಸಲಿಕ್ಕೆ ಸಾಧ್ಯ. ಈಗ ವಿವಿಧ ಹಂತಗಳಲ್ಲಿರುವ ಯೋಜನೆಗಳನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಿ ಮುಗಿಸಿದರೆ, ೪೯ ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳಬಹುದು. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೩೬ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂಬ ಇಚ್ಛೆ ಇದೆ. ಇವುಗಳಿಂದ ೨೦೮ ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಎತ್ತಿಕೊಂಡಂಥ ಕೆಲಸಗಳನ್ನೆಲ್ಲಾ ಪೂರ್ತಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ೩೬ ಯೋಜನೆಗಳನ್ನು ಕೈಗೊಂಡು ೨೦೮ ಟಿ.ಎಂ.ಸಿ.ಎಫ್.ಟಿ, ನೀರನ್ನು ಉಪಯೋಗ ಮಾಡಿಕೊಳ್ಳಬಹುದೆಂಬ ಮುಂದಾಲೋಚನೆ ಇಟ್ಟುಕೊಂಡಿದ್ದೇವೆ. ಇದಲ್ಲದೆ, ಇನ್ನೂ ೩೨೬ ಟಿ.ಎಂ.ಸಿ.ಎಫ್.ಟಿ. ನೀರನ್ನು ನಾವು ಉನಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದ್ದರೂ ಕೂಡ ಅದರ ಬಗ್ಗೆ ನಾವು ಯೋಜನೆಗಳನ್ನು ತಯಾರು ಮಾಡಿಲ್ಲ. ಇದು ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಪರಿಸ್ಥಿತಿ.

ಸ್ವಾಮಿ, ನಾನು ಮೊದಲೇ ಹೇಳಿದಂತೆ, ಇದುವರೆಗೂ ಖರ್ಚು ಮಾಡಿರತಕ್ಕ ಹಣ ೧೧೩೩ ಕೋಟಿ ರೂಪಾಯಿಗಳು. ನಾವು ಉಪಯೋಗ ಮಾಡಿರುವಂಥ ನೀರಿನ ಪ್ರಮಾಣ ೪೯ ಟಿ.ಎಂ.ಸಿ.ಎಫ್ ಟಿ. ಈಗ ನಡೆದಿರತಕ್ಕ ನೀರಾವರಿ ಕಾಮಗಾರಿಗಳನ್ನು ಪೂರೈಸಬೇಕಾದರೆ, ಸುಮಾರು ೧೨೦೦ ಕೋಟಿ ರೂಪಾಯಿ ಖರ್ಚು ಬರುತ್ತದೆಂದು ತಜ್ಞರು ಹೇಳುತ್ತಾರೆ. ಅದರ ಜೊತೆಗೆ ೨೦೮ ಟಿ.ಎಂ.ಸಿ.ಎಫ್.ಟಿ. ನೀರನ್ನು ಬಳಸತಕ್ಕ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡಿರತಕ್ಕ ಯೋಜನೆಗಳನ್ನು ಮುಗಿಸಬೇಕಾದರೆ ೧೦೦೦ ಕೋಟಿ ರೂಪಾಯಿ ಬೇಕಾಗುತ್ತದೆಂದು ಇಲಾಖಾ ತಜ್ಞರ ಅಭಿಪ್ರಾಯ. ಇದರಲ್ಲಿ ೩೨೬ ಟಿ.ಎಂ.ಸಿ.ಎಫ್.ಟಿ ನೀರನ್ನು ಉಪಯೋಗ ಮಾಡಿಕೊಳ್ಳುವಂಥ ಯೋಜನೆಗಳ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿಲ್ಲ. ಈ ನೀರನ್ನು ಬಳಕೆಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಸುಮಾರು ೨,೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದೂ ಅಲ್ಲದೆ, ಇವತ್ತು ಮೈನರ್ ಇರಿಗೇಷನ್ ಮುಖಾಂತರ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿ ಸಣ್ಣ ಸಣ್ಣ ಕ್ಯಾಚ್‌ಮೆಂಟ್‌ಗಳನ್ನು ಕಟ್ಟಿ ನೀರನ್ನು ಬಳಸಿಕೊಂಡು ರೈತ ಸಮುದಾಯಕ್ಕೆ ಒದಗಿಸಬೇಕಾದರೂ ೫೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ತಜ್ಞರ ಅಭಿಪ್ರಾಯ. ಸ್ವಾಮಿ, ಇದರ ಜೊತೆಗೆ ಭೂಗರ್ಭದಲ್ಲಿರತಕ್ಕ ನೀರನ್ನು ಉಪಯೋಗ ಮಾಡಿದರೆ ತಜ್ಞರ ಅಭಿಪ್ರಾಯ ಪ್ರಕಾರ ೧೨ ಲಕ್ಷ ಹೆಕ್ಟೇರಿಗೆ ನೀರನ್ನು ಕೊಡಬಹುದು. ಈಗ ಅದರ ಪೈಕಿ ೪ ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಉಪಯೋಗ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದೇವೆ ಇದಕ್ಕೆ ಆಗತಕ್ಕಂಥ ವೆಚ್ಚವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನನ್ನ ನಿರೀಕ್ಷೆಗೆ ಅದರ ವೆಚ್ಚ ಸಿಗುವುದು ಕಷ್ಟ ಇದೆ. ಇದರ ಜೊತೆಗೆ ಈಗಾಗಲೇ ನಿರ್ಮಾಣ ಮಾಡಿರತಕ್ಕ ಹಳೇ ಜಲಾಶಯಗಳ ಜೀರ್ಣೋದ್ಧಾರ ಮಾಡುವುಕ್ಕೆ, ವ್ಯವಸ್ಥಿತವಾದ ರೀತಿಯಲ್ಲಿ ನೀರನ್ನು ಕ್ರಮಬದ್ಧವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಭದ್ರಾ ಜಲಾಶಯಂ ಒಂದಕ್ಕೆ ಸುಮಾರು ೬೦ ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದಾರೆ. ತುಂಗಾಭದ್ರ ಯೋಜನೆಯ ಎಡ ಭಾಗದ ನಾಲೆಯ ಕೆಟ್ಟ ಪರಿಸ್ಥಿತಿ ಏನಿದೆ ಅದನ್ನು ಸರಿಪಡಿಸುವುದಕ್ಕೆ ಸುಮಾರು ೧೫ ಕೋಟಿ ಆಗುತ್ತದೆಂದು ತಜ್ಞರು ಹೇಳಿದ್ದಾರೆ. ಮತ್ತು ಅಲ್ಲಿರತಕ್ಕ ಕಾಲುವೆ ಸಿಸ್ಟಂ ಸರಿಯಾದ ರೀತಿಯಲ್ಲಿ......

(ಪ್ರೇಕ್ಷಕರ ಗ್ಯಾಲರಿಯಿಂದ ಕೆಲವು ಪ್ರೇಕ್ಷಕರು ಕರಪತ್ರಗಳನ್ನು ಎಸೆದರು.)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಅದು ಏನೆಂದು ತಾವು ಕಂಡು ಹಿಡಿಯಬೇಕು. ಅಷ್ಟೊಂದು ಜನ ಇವತ್ತಿನ ದಿವಸ ಪ್ರತಿಭಟನೆ ತೋರಿಸಬೇಕಾದರೆ. ಬಹಳ ಕಳಕಳಿಯ ವಿಷಯ ಇರಬಹುದೇನೋ?

ಶ್ರೀ ಎಂ. ಸೂರ್ಯನಾರಾಯಣರಾವ್.—ಒಂದು ಕಡೆ ಜಿಂದಾಬಾದ್ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಧಿಕ್ಕಾರ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ವಿಚಾರಣೆ ಮಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಎಂ ಎಸ್. ಕೃಷ್ಣನ್‌ರವರು ಇದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ. ರಾಜಕಾರಣದಲ್ಲಿ ಇದೆಲ್ಲಾ ನಡೆದುಕೊಂಡು ಬಂದಿದೆ. ಪಾಪ ಮುಗ್ಧರನ್ನು ಉಪಯೋಗ ಮಾಡಿಕೊಂಡು. ಅಲ್ಲಿ ಕೂಗುತ್ತಿದ್ದಂಥ ಜನ ಯಾರಿದ್ದಾರೆ ಅಂಥವರನ್ನು ಉಪಯೋಗ ಮಾಡಿಕೊಂಡು ರಾಜಕೀಯ ಮಾಡತಕ್ಕಂಥ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳತಕ್ಕಂಥ ಪೈಶಾಚಿಕ ಕೃತ್ಯ ಮಾಡತಕ್ಕಂಥ ಜನ ಇದ್ದಾರೆ. ಕಳೆದ ೩೫ ವರ್ಷಗಳಿಂದಲೂ ಇದು ನಡೆದುಕೊಂಡು ಬಂದಿದೆ. ಮುಗ್ಧ ಜನತೆಯನ್ನು ಉಪಯೋಗ ಮಾಡುವಂಥ ಪೈಶಾಚಿಕ ಕೃತ್ಯ ಇನ್ನೂ ಕೂಡ ರಾಜಕಾರಣದಲ್ಲಿ ತಲೆ ಎತ್ತಿ ನಿಂತಿದೆ ಎನ್ನುವ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಅದು ಅಧ್ಯಕ್ಷರಿಗೆ ಬಿಟ್ಟ ವಿಷಯ.

೧೧.೦೦ ಎ. ಎಂ.

ಇವೊತ್ತು ವ್ಯವಸ್ಥೆ ಏನಿದೆ ಟಿಬಿಪಿ ಏನಿದೆ ಇದನ್ನು ಸರಿ ಮಾಡಬೇಕಾದರೆ ೩೦-೪೦ ಕೋಟಿ ರೂಪಾಯಿ ಬೇಕೆಂದು ಹೇಳುತ್ತಿದ್ದಾರೆ. ಎಡಭಾಗದ ನಾಲೆಯನ್ನು ವ್ಯವಸ್ಥಿತ ರೀತಿಯಲ್ಲಿ ಭದ್ರಗೊಳಿಸ ಬೇಕಾಗಿದೆ. ೯೩ ಸಲ ಅದು ಬ್ರೀಜ್ ಆಗಿದೆ, ಅದನ್ನು ಸರಿಪಡಿಸಬೇಕಾದರೆ ಸುಮಾರು ೧೫ ಕೋಟಿ ರೂಪಾಯಿ ಬೇಕೆಂದು ನಮ್ಮ ತಜ್ಞರು ತಿಳಿಸಿದ್ದಾರೆ. ಅದೇ ರೀತಿ ಕೆಆರ್‌ಎಸ್ ಮಾಡರನ್ಯೈಸೇಷನ್ ಆಫ್ ವಿಶ್ವೇಶ್ವರಯ್ಯ ಕೆನಾಲ್ ಏನಿದೆ ಅದಕ್ಕೆ ೫೦ ಕೋಟಿ ರೂಪಾಯಿ ಬೇಕಾಗುತ್ತದೆ. ಹೀಗೆ ನಮ್ಮ ಮುಂದೆ ಇರತಕ್ಕ ಜ್ವಲಂತ ಸಮಸ್ಯೆ ಏನಿದೆ, ರಾಜ್ಯದ ಒಟ್ಟು ಎಲ್ಲಾ ಜಲಸಂಪತ್ತು ಉಪಯೋಗ ಮಾಡಿಕೊಳ್ಳತಕ್ಕದ್ದಕ್ಕೆ, ಅದರ ಜೊತೆಗೆ ಈಗಾಗಲೇ ಕಟ್ಟಿರತಕ್ಕ ಜಲಾಶಯಗಳಿಗೆ ಅವಶ್ಯಕವಾದಂಥ ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೊಳ್ಳಬೇಕಾದರೆ ಎಲ್ಲಾ ಒಟ್ಟು ನಾಲ್ಕೂವರೆ ಸಾವಿರ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಇದು ತಜ್ಞರು ಕೊಟ್ಟಿರತಕ್ಕ ವರದಿ. ಇವೊತ್ತಿನ ಅಂದಾಜಿನ ಪ್ರಕಾರ ನಾವು ೧೩೭ರಿಂದ ೧೩೫ ಕೋಟಿ ರೂಪಾಯಿವರೆಗೆ ಒದಗಿಸುತ್ತಿದ್ದೇವೆ. ಈ ಒಂದು ವೇಗದಲ್ಲಿ ಹೋಗುವುದಾದರೆ ಇವೊತ್ತು ದೇಶದಲ್ಲಿರತಕ್ಕಂಥ ಎಲ್ಲ ಜಲಸಂಪತ್ತನ್ನು ಸಂಪೂರ್ಣವಾಗಿ ನಾವು ಬಳಕೆಗೆ ತೆಗೆದುಕೊಳ್ಳುವುದಾದರೆ ಬಹುಶಃ ತಾವೇ ಅರ್ಥಮಾಡಿಕೊಳ್ಳಬಹುದು. ಸುಮಾರು ಇದಕ್ಕೆ ೪೦ ವರ್ಷ ಬೇಕಾಗಬಹುದು. ನಾವು ಯಾರೂ ರಾಜಕಾರಣಿಗಳು ಇರುವುದಿಲ್ಲ. ಬಹುಶಃ ನಾವು ಈ ಜಗತ್ತನ್ನು ಬಿಟ್ಟು ಹೋಗಬಹುದು. ಆದ್ದರಿಂದ, ಇವೊತ್ತು ಈ ಸಮಸ್ಯೆಯನ್ನು ಎದುರಿಸತಕ್ಕ ಕಾಲದಲ್ಲಿ ನಾನು ಮೊದಲೇ ಹೇಳಿದ್ದೇನೆ, ಈ ಇಲಾಖೆಯು ಮುಖೇನ ವೆಚ್ಚ ಮಾಡತಕ್ಕ ಹಣದ ಬಗ್ಗೆ ನಾವು ತೆಗೆದುಕೊಳ್ಳತಕ್ಕ ನಿರ್ಣಯದಲ್ಲಿ ದೋಷ ಇದ್ದರೆ, ಅದನ್ನು ಎತ್ತಿ ತೋರಿಸತಕ್ಕ ಹೊಣೆಗಾರಿಕೆ ತಮ್ಮ ಮೇಲೆ ಬಿದ್ದಿದೆ. ಅದನ್ನು ಮಾಡುವಾಗ ಸ್ವಾಗತ ಮಾರುತ್ತೇನೆ. ಮತ್ತೆ ಈ ಸಮಸ್ಯೆ ಕೇವಲ ಒಂದು ರಾಜಕೀಯ ಪಕ್ಷದ ಸಮಸ್ಯೆ ಅಲ್ಲ. ಇಡೀ ಸದನದ ಸಮಸ್ಯೆ ಇದೆ. ಇದಕ್ಕೆ ೨೨೪ ಜನ ಸದಸ್ಯರ ಕಾಳಜಿ ಇದೆ, ಪ್ರಾಮಾಣಿಕತೆ ಇದೆ. ಈ ಜನತೆಯ ಕಲ್ಯಾಣ ಮಾಡಬೇಕಾದರೆ ಅವರ ಆರ್ಥಿಕ ಪ್ರಗತಿಗೆ ನಾಂದಿ ಯಾಗತಕ್ಕ ಜಲಸಂಪರ್ಕ ಉಪಯೋಗ ಮಾಡಿಕೊಳ್ಳತಕ್ಕದ್ದರಲ್ಲಿ ಪಕ್ಷಾತೀತ ನಿರ್ಣಯ ತೆಗೆದುಕೊಳ್ಳ ಬೇಕಾಗುತ್ತದೆ. ಇದನ್ನು ನಾವೆಲ್ಲನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತವೆ. ನಾನು ಯೋಜನೆ ಕುರಿತು ಟೀಕೆ ಮಾಡುವುದಿಲ್ಲ, ೨೦ ಅಂಶದ ಕಾರ್ಯಕ್ರಮದಲ್ಲಿ ಮೊದಲಿನ ಆದ್ಯತೆ ಕೊಟ್ಟಿದ್ದಾರೆ. ರಾಜ್ಯದ ಜಲಸಂಪತ್ತು ಉಪಯೋಗ ಮಾಡಿಕೊಳ್ಳತಕ್ಕದ್ದಕ್ಕೆ ಆದ್ಯತೆ ಕೊಟ್ಟಿದ್ದಾರೆ. ಅದು ಪ್ರಾಮಾಣಿಕ ಪ್ರಯತ್ನ ಇರಬಹುದು. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ, ಪ್ರಾಮಾಣಿಕತೆಯ ಬಗ್ಗೆ ಸಂಕೋಚ ಇಲ್ಲ ನನಗೆ. ನಾವು ಯಾವರೀತಿ ಹೋಗುತ್ತೇವೆಂದು ನೋಡಿದಾಗ ಇವೊತ್ತು ನಮಗೆ ಈ ರಾಜ್ಯದ ಒಟ್ಟು ಜಲಸಂಪತ್ತು ಉಪಯೋಗ ಮಾಡಿಕೊಳ್ಳತಕ್ಕದ್ದು ರಾಜ್ಯ ಸರ್ಕಾರದಿಂದ ಸಾಧ್ಯ ವಿದೆಯೇ, ಇದಕ್ಕೆ ಕೇಂದ್ರ ಸರ್ಕಾರದ ನೆರವು ಕೊಡಬೇಕಾಗುತ್ತದೆಂದು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಪ್ರಧಾನಿಯವರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟ ಕಾಲದಲ್ಲಿ ಅವರು ಒಂದು ಮಾತು ಹೇಳಿದರು. ಇವೊತ್ತು ಎಲ್ಲಾ on going ಪ್ರಾಜೆಕ್ಟ್ ಸಂಪೂರ್ಣವಾಗಿ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಹೋದರು. ಹಾಗೆ ಹೇಳುವ ಕಾಲದಲ್ಲಿ ಅವರು ರಾಜ್ಯದ ಆಡಳಿತದ ಬಗ್ಗೆ ಸಮಾಧಾನ ವ್ಯಕ್ತಪಡಿಸಿದರು. ೨೦ ಅಂಶದ ಕಾರ್ಯಕ್ರಮದ ಸನಿವೇಶದಲಿ

increased irrigation potential ಮಾಡಬೇಕಾದರೆ ಏನಾಗಬೇಕೆಂದು ಹೇಳಿದ್ದಾರೆ. ಇದನ್ನು ಮಾನ್ಯ ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಬೇರೆ ಬೇರೆ ರಾಜ್ಯದಲ್ಲಿ ೧೯೮೨-೮೩ರಲ್ಲಿ ಅವರು ಏನು ಹಣ ತೊಡಗಿಸಿದ್ದಾರೆ ಮತ್ತು ಅಡಿಷನಲ್ ಔಟ್‌ಲೇ ಏನು ಖರ್ಚು ಮಾಡಬೇಕಾಗುತ್ತದ ಅವರು ಹೇಳಿರತಕ್ಕಂಥಾದ್ದು ನಾನು ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಕರ್ಣಾಟಕದಲ್ಲಿ ಒರಿಜಿನಲ್ ಔಟ್‌ಲೇ ೧೯೮೨-೮೩ ೮೦ ಕೋಟಿ ರೂಪಾಯಿ, ಆಂಧ್ರಪ್ರದೇಶ್ ೧೪೪ ಕೋಟಿ ರೂಪಾಯಿ, ಗುಜರಾತ್ ೧೮೩ ಕೋಟಿ ರೂಪಾಯಿ, ಬಿಹಾರ್ ೧೯೯ ಕೋಟಿ ರೂಪಾಯಿ, ಮಹಾರಾಷ ೨೬೦ ಕೋಟಿ ರೂಪಾಯಿ, ಮಧ್ಯಪ್ರದೇಶ್ ೧೩೭ ಕೋಟಿ ರೂಪಾಯಿ, ಕರ್ನಾಟಕದಲ್ಲಿ ೮೦ ಕೋಟಿ ರೂಪಾಯ ಇಟ್ಟಿರತಕ್ಕದ್ದು. ಇದು ಹೋದ ವರ್ಷದ್ದು. ಈ ವರ್ಷ ನಮ್ಮ ಪರಿಸ್ಥಿತಿ ತುಂಬಾ ಇಂಪ್ರೂವ್‌ಮೆಂಟ್ ಆಗಿದೆ ಎಂದು ಹೇಳಲಿಕ್ಕೆ ಹೋಗುವುದಿಲ್ಲ. ೨೦ ಅಂಶದ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಯೋಜನೆ, ಜನಸಂಪತ್ತು ಉಪಯೋಗ ಮಾಡಿಕೊಳ್ಳಬೇಕೆಂದು ಪ್ರಧಾನಿಯವರು ಕರೆಕೊಟ್ಟರು. ರಾಜ್ಯಸರ್ಕಾರದ ಮೇಲೆ ಜವಾಬ್ದಾರಿ ನಿಗದಿ ಮಾಡಲಿಕ್ಕೆ ಪ್ರಯತ್ನ ಮಾಡಿದರು. Addititional outlay required ೩೦ ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಬೇಕೆಂದು ಅವರ ಬಯಕೆಯನ್ನು ವ್ಯಕ್ತಪಡಿಸಿದರು. ಅವರು ಹೇಳಿರತಕ್ಕ ಮಾತನ್ನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ರಾಜ್ಯ ಸರ್ಕಾರದ ಜವಾಬ್ದಾರಿ ಇದೆ, ಮತ್ತು ಅವಶ್ಯಕವಾದರೆ, ಕೇಂದ್ರ ಸರ್ಕಾರ ಕೂಡ ನೆರವನ್ನು ಕೊಡಬೇಕಾಗುತ್ತದೆ. ಅದನ್ನು ಹೇಳಿದ್ದಾರೆ. ಅದನ್ನು ನಾನು ಓದಲಿಕ್ಕೆ ಇಚ್ಛೆಪಡುತ್ತೇನೆ.

> "The Union Minister for Irrigation has addressed the Chief Ministers of all States requesting to allocate funds for the irrigation sector and to give priority for completing on-going projects. He has also requested them for adequate monitoring of the projects, Since the States also have genuine dificulties in mobilisation of financial resources, the Government of India is considering providing some financial assistance."

ಅವರು ಅರ್ಥಮಾಡಿಕೊಂಡಿದ್ದಾರೆ. ರಾಜ್ಯಸರ್ಕಾರಗಳಿಗೂ ಈ ಒಂದು ಸಮಸ್ಯೆಯನ್ನು ಬಿಡಿಸತಕ್ಕದ್ದಕ್ಕೆ ಅವರ ಸಂಪನ್ಮೂಲದಿಂದ ಶಕ್ಯವಾಗಲಾರದೆಂದು ಅರ್ಥ ಮಾಡಿಕೊಂಡು ಇವೊತ್ತು ಈ ಮಾತನ್ನು ಹೇಳಿದ್ದಾರೆ. ಈ ಒಂದು ಜಲಸಂಪತ್ತು ಸಂಪೂರ್ಣ ಉಪಯೋಗ ಮಾಡಿಕೊಳ್ಳುತಕ್ಕದ್ದಕ್ಕೆ ಕೇಂದ್ರ ಸರ್ಕಾರ ನೆರವು ಕೊಡಬೇಕಾಗುತ್ತದೆಂದು ಹೇಳಿದ್ದಾರೆ. ಇದರ ಹಿನ್ನೆಲೆಯಲ್ಲಿ ಈ ಒಂದು ಇಲಾಖೆಯ ಅಧಿಕಾರವನ್ನು ವಹಿಸಿಕೊಂಡಮೇಲೆ, ಕರ್ನಾಟಕ ಸರ್ಕಾರವು, ಕೇಂದ್ರ ಸರ್ಕಾರಕ್ಕೆ ೭೫ ಕೋಟಿ ರೂಪಾಯಿಗಳನ್ನು ಪ್ರತಿವರ್ಷ ನಮಗೆ ಬಿಡುಗಡೆ ಮಾಡಿದರೆ, ಈ ಯೋಜನೆಗಳನ್ನು, ಇವೊತ್ತು ವೇಗದಲ್ಲಿ ವ್ಯವಸ್ಥಿತವಾಗಿ ಮುಗಿಸತಕ್ಕದ್ದಕ್ಕೆ ಪ್ರಯತ್ನ ಮಾಡುತ್ತೇವೆಂದು ನಾವು ಪ್ರಧಾನಿಯವರಿಗೆ, ಮತ್ತು ಹಣಕಾಸು ಸಚಿವರಿಗೆ, ನೀರಾವರಿ ಸಚಿವರಿಗೆ, ಯೋಜನಾ ಸಚಿವರಿಗೆ ಮನವಿ ಮಾಡಿದ್ದೇವೆ. ಅವರಿಗೆ ಇಕ್ಕಟ್ಟು, ತೊಂದರೆ ಇರಬಹುದು ನಮಗೆ ಗೊತ್ತಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ನಮಗೆ ಆಶಾದಾಯಕ ವಾದಂಥ ಉತ್ತೇಜನಕಾರಿಯಾದಂಥ ಒಂದು ನಿರ್ಣಯವಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಇವೊತ್ತು ನಾನು ಈ ಸದನದ ಮುಖಾಂತರ ಪ್ರಧಾನಿಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತು ಕರ್ನಾಟಕದ ಒಂದು ವಿಶೇಷ ಪರಿಸ್ಥಿತಿ ಹೇಳಬೇಕೆಂದರೆ, ನಮ್ಮಲ್ಲಿ ಎರಡು ದೊಡ್ಡ ನದಿಗಳಿವೆ. ಒಂದು ಕಾವೇರಿ, ಮತ್ತೊಂದು ಕೃಷ್ಣಾ, ಈ ಎರಡು ನದಿಗಳು ಇಂಟರ್‌ಸ್ಟೇಟ್ ರಿವರ್ಸ್ ಆಗಿರುವುದರಿಂದ, ಇಲ್ಲಿರತಕ್ಕ ವಿಶೇಷ ಪರಿಸ್ಥಿತಿಯಲ್ಲಿ ನಮ್ಮ ಜಲಸಂಪತ್ತು ಉಪಯೋಗ ಮಾಡಿಕೊಳ್ಳಲಿಕ್ಕೆ ರಾಜ್ಯಸರ್ಕಾರದ ಸಂಪನ್ಮೂಲದಲ್ಲಿ ಸಾಧ್ಯವಿಲ್ಲವೆಂದು ಮನಗಂಡು ಈ ರಾಜ್ಯಸರ್ಕಾರದ ವ್ಯಾಪ್ತಿಯಲ್ಲಿ ಖರ್ಚು ಮಾಡತಕ್ಕ ಹಣದಿಂದಲೇ ಮಾಡಿದರೆ, ಇನ್ನೂ ೬೦ ವರ್ಷ ಬೇಕಾಗುತ್ತದೆ ಎನ್ನುವುದನ್ನು ಮನಗಂಡು, ಈ ವಿಷಯದಲ್ಲಿ ಅವರು ಸ್ವಲ್ಪ ಔದಾರ್ಯ ತೋರಿಸ ಬೇಕೆಂದು, ಕೇಂದ್ರ ಸರ್ಕಾರ ಹೆಚ್ಚು ಉದಾರ ತೋರಿಸಬೇಕೆಂದು ಈ ಸದನದ ಮುಖಾಂತರ ಮಾಡಿಕೊಳ್ಳುತ್ತೇನೆ. ಅದೇ ರೀತಿ ಇವೊತ್ತು ನಾವು ಮೊದಲೇ

ಹೇಳಿದಂತೆ, ಇದು ಪಕ್ಷಾತೀತ ಸಮಸ್ಯೆ ಇದೆ. ಆದ್ದರಿಂದ, ಸಾಧ್ಯವಾದರೆ, ನಾವು ಈ ಸದನದಲ್ಲಿರತಕ್ಕ ಎಲ್ಲರೂ ಒಂದುಗೂಡಿ ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಬೇಕಾಗುತ್ತದೆ. ನಮ್ಮ ಸಂಸತ್ ಸದಸ್ಯರು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು, ನಾವು ಕೇಂದ್ರ ಸರ್ಕಾರಕ್ಕೆ ಮನವೊಲಿಸತಕ್ಕ ಪ್ರಯತ್ನ ಮಾಡಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇನ್ನು ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ಕೇವಲ ಕೇಂದ್ರ ಸರ್ಕಾರದ ಮೇಲೆಯೇ ಹೊಣೆಗಾರಿಕೆಯನ್ನು ಹೊರಿಸುವುದಕ್ಕಾಗುವುದಿಲ್ಲ. ಇದರಲ್ಲಿ ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಅವರ ಕಡೆ ಕೈ ತೋರಿಸಲಿಕ್ಕೆ ನಾನು ಹೋಗುವುದಿಲ್ಲ. ನಮ್ಮ ಆರ್ಥಿಕ ಶಕ್ತಿಯನ್ನು ನಾವು ಹೆಚ್ಚು ಮಾಡಿಕೊಳ್ಳಬೇಕಾಗಿದೆ. ಇವತ್ತು ಕರ್ನಾಟಕದ ಎರಡು ಯೋಜನೆಗಳಿಗೆ ಅಂದರೆ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಮತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ವಿಶ್ವ ಸಂಸ್ಥೆಯಿಂದ ಹಣ ಬರುತ್ತಿದೆ. ಅಪ್ಪರ್ ಕೃಷ್ಣಾದ ಫಸ್ಟ್ ಫೇಸ್‌ಗೆ ನಾವು ಖರ್ಚುಮಾಡತಕ್ಕ ಹಣದ ಪೈಕಿ ಕೇವಲ ೧೦೭ ಕೋಟಿ ರೂ. ಮತ್ತು ಅದೇರೀತಿ ಮೈನರ್ ಇರಿಗೇಷನ್‌ಗೆ ಕೇವಲ ೬೫ ಕೋಟಿ ರೂ.ಗಳು ವಿಶ್ವಸಂಸ್ಥೆಯಿಂದ ನಮಗೆ ಬರುತ್ತಿರುವುದು. ಆದರೆ ಇಲ್ಲಿ ಒಂದು ದುರ್ದೈವದ ಮಾತನ್ನು ನಾನು ಹೇಳಬೇಕಾಗಿದೆ. ಅನೇಕ ವಿದೇಶಿ ಸಂಸ್ಥೆಗಳು ನಮಗೆ ಹಣವನ್ನು ಕೊಡುವುದಕ್ಕೆ ಮುಂದೆ ಬಂದರೂ ಕೂಡ ಅದಕ್ಕೆ ನಾನಾರೀತಿಯ ಅಡ್ಡಿ ಅಡಚಣೆಗಳು ಬರುತ್ತಿವೆ. ಬಹುಶಃ ಇಂದಿನ ಮಾನ್ಯ ವಿರೋಧಪಕ್ಷದ ನಾಯಕರಾದ ವೀರಪ್ಪ ಮೊಯ್ಲಿಯವರಿಗೂ ಇದು ಗೊತ್ತಿದೆ. ಅವರು ಆರ್ಥಿಕ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಅದು ಅರಬ್ ದೇಶವೆ ಇರಬಹುದು, ಅಥವಾ ಬೇರೆ ರಾಷ್ಟ್ರಗಳೇ ಇರಬಹುದು ನಮಗೆ ಹಣವನ್ನು ಕೊಡಲು ಮುಂದೆ ಬಂದರೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಎಷ್ಟು ತೊಂದರೆ ಇದೆ ಎಂಬುದನ್ನು ಕುರಿತು ಒಂದು ಮಾತನ್ನು ಹೇಳಬಯಸುತ್ತೇನೆ. ನಾನು ಯಾರನ್ನೂ ಕುರಿತು ಟೀಕೆ ಮಾಡುವುದಿಲ್ಲ. ಅಲ್ಲಿಂದ ಬರತಕ್ಕ ಸಹಾಯವನ್ನು ಕತ್ತರಿಸತಕ್ಕ ಶಕ್ತಿಗಳು ನಮ್ಮ ಈ ವಿಧಾನ ಸೌಧದಲೇ ಇವೆ ಎಂಬುದನ್ನು ನಾನು ನನ್ನ ವೈಯುಕ್ತಿಕ ಅನುಭವದಿಂದ ಹೇಳುತ್ತಿದ್ದೇನೆ. ಬರತಕ್ಕ ಸಹಾಯವನ್ನು ಪಡೆದುಕೊಳ್ಳಲು ಆಸಕ್ತಿಯನ್ನು ತೋರಿಸಲು ಯಾರೂ ಸಿದ್ಧವಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿರತಕ್ಕ ೮೦ ಪರ್ಸೆಂಟ್ ಬಡ ಜನತೆ ಯಾರಿದ್ದಾರೆ ಅವರಿಗೆ ಒಳ್ಳೆಯದನ್ನು ಮಾಡಬೇಕು, ಅವರ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚುಮಾಡಬೇಕೆಂಬ ಬಗ್ಗೆ ಇವರಿಗೆ ಯಾವುದೇ ಚಿಂತೆ ಇಲ್ಲ. ಇಂಥ ಶಕ್ತಿಗಳು ನಮ್ಮ ಈ ವಿಧಾನ ಸೌಧದ ಆವರಣದಲೇ ಇವೆ, ಇದೊಂದು ದುರ್ದೈವ ಸಂಗತಿ. ನಾವು ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಕಷ್ಟು ಹಣವನ್ನು ಕೂಡಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದರೆ ಈ ಶಕ್ತಿಗಳು ಅದರ ಬಗ್ಗೆ ತಮ್ಮ ನಿರಾಸಕ್ತಿಯನ್ನು ತೋರಿಸಿ ಒಂದಲ್ಲೊಂದು ರೀತಿಯಲ್ಲಿ ಅಡ್ಡಿ ಅಡಚಣೆಗಳನ್ನು ಉಂಟುಮಾಡುತ್ತಿವೆ...

ಶ್ರೀ ಎಂ. ಎಸ್. ಕೃಷ್ಣನ್.—ಅಂಥ ವ್ಯಕ್ತಿಗಳನ್ನು ಸದೆ ಬಡಿಯುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಹೆಚ್ ಡಿ. ದೇವೇಗೌಡ.—ಇದಕ್ಕೆ ತಮ್ಮ ಸಹಕಾರ ಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಹೇಳುವುದನ್ನು ನಾವು ಅನೇಕ ವರ್ಷಗಳಿಂದ ಕೇಳುತ್ತಿದ್ದೇವೆ ಈಗ ಈ ಕಡೆ ಕುಳಿತಿರತಕ್ಕವರು ಹಿಂದೆ ಮಂತ್ರಿಗಳಾಗಿದ್ದಾಗಲೂ ಇದೇ ಮಾತನ್ನೇ ಹೇಳುತ್ತಿದ್ದರು. ಆದರೆ ಆಮಂತ್ರಿಗಳ ರೀತಿಯಲ್ಲಿ ನೀವು ಆಗಬಾರದು. ಆ ದುಷ್ಟ ಶಕ್ತಿಗಳನ್ನು ನೀವು ಸದೆಬಡಿಯಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಸತ್ಯವನ್ನು ಮುಚ್ಚಿಡುವುದಕ್ಕೆ ಇಷ್ಟಪಡುವುದಿಲ್ಲ. ಅದರ ಅವಶ್ಯಕತೆ ಕೂಡ ನನಗಿಲ್ಲ. ಇವತ್ತು ಅವರು ಅಲ್ಲಿ ಕೂತು ಕೆಲಸ ಮಾಡುತ್ತಿದ್ದಾರೆ. ಅವರಿಗೂ ಇದರ ಅನುಭವ ಇರಬಹುದು. ಒಂದುಕಡೆ ಕೇಂದ್ರ ಸರ್ಕಾರದ ನೆರವನ್ನು ತೆಗೆದುಕೊಳ್ಳುವುದು, ಇನ್ನೊಂದು ಕಡೆ ಬೇರೆ ಬೇರೆ ರಾಷ್ಟ್ರಗಳಿಂದ ಒಗತಕ್ಕ ಆರ್ಥಿಕ ಸಹಾಯವನ್ನು ತೆಗೆದುಕೊಳ್ಳುವುದರ ಮೂಲಕ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು, ಮತ್ತೊಂದು ಕಡೆ ನಮ್ಮದೇ ಆದಂಥ ಆರ್ಥಿಕ ಸಂಪನ್ಮೂಲಗಳನ್ನು ಬೆಳೆಸಿಕೊಳ್ಳುವುದು ಬಹಳ ಮುಖ್ಯವಾದುದು. ಆಗಿರುವುದರಿಂದ ನಾವು

ಇದರ ಬಗ್ಗೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವುದು ಅವಶ್ಯಕವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅಂತೆಯೇ ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಇವತ್ತು ಜನಸಂಪತ್ತನ್ನು ಉಪಯೋಗ ಮಾಡಿಕೊಳ್ಳುವುದರಿಂದ ನಮ್ಮ ಆರ್ಥಿಕ ಪ್ರಗತಿ ಹೆಚ್ಚಾಗುತ್ತದೆಂಬುದು ನಿರ್ವಿವಾದ. ಇದನ್ನು ಯಾರೂ ವಿರೋಧ ಮಾಡಲು ಸಾಧ್ಯವಿಲ್ಲ. ಆದರೆ ಇದರಲ್ಲಿ ಒಂದು ಭಾವನೆ ಬೆಳೆದಿದೆ, ಸರ್ಕಾರದ ಕಾಮಧೇನು, ಕೇಳಿದ್ದನ್ನೆಲ್ಲಾ ಕೊಡತಕ್ಕ ಶಕ್ತಿ ಇದಕ್ಕಿದೆ ಎನ್ನುವಂತೆ ಮಾಡುವುದರಲ್ಲಿ ನಾವೆಲ್ಲರೂ ಕಾರಣೀಭೂತರಾಗಿದ್ದೇವೆ. ಈ ಮಾತನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಈ ಸನ್ನಿವೇಶದಿಂದ ನಾವು ಹೊರಗೆ ಬರಬೇಕಾದರೆ ಪಕ್ಷಾತೀತವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲ್ಲಿಕ್ಕೆ ಇಚ್ಛೆಪಡುತ್ತೇನೆ, ಜನಸಂಪತ್ತನ್ನು ಉಪಯೋಗ ಮಾಡಿಕೊಳ್ಳುವಾಗ ಒಂದು ಭಾಗ ಸಂಗ್ರಹಣೆ ಮಾಡಿಗೊಳ್ಳುವುದು, ಇನ್ನೊಂದು ಭಾಗ ವಿತರಣೆ ಮಾಡತಕ್ಕದ್ದು: ವಿತರಣೆಯನ್ನು ಮಾಡುವಾಗ ಇರತಕ್ಕ ದೋಷಗಳು ಏನು, ಮತ್ತು ಸಂಗ್ರಹಣೆ ಮಾಡುವಾಗ ನಮ್ಮ ಜವಾಬ್ದಾರಿ ಏನು ಎಂಬುದನ್ನು ಆಮೂಲಾಗ್ರವಾಗಿ ನಾವು ವಿಮರ್ಶೆಮಾಡಬೇಕು ಬಲವುಳ್ಳವರು ಇದರ ಉಪಯೋಗವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆಂಬುದನ್ನು ನಾವು ಕಾಣುತ್ತಿದ್ದೇವೆ. ಅಷ್ಟೇ ಅಲ್ಲ ಇದನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ಅವರು ಫಲಪ್ರದವಾಗಿದ್ದಾರೆಂಬುದನ್ನೂ ಕೂಡ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಮೊನ್ನೆ ನಾವು ತುಂಗಭದ್ರಕ್ಕೆ ಹೋಗಿದ್ದೆವು. ತುಂಗಭದ್ರ ಎಡದಂಡೆ ನಾಲೆ ೯೨ ಸಾರಿ ಬ್ರೀಚ್ ಆಗಿತ್ತು. ೯೩ನೇ ಸಾರಿ ಬ್ರೀಚ್ ಆದಾಗ ನಾನು ಅಲ್ಲಿಗೆ ಹೋದೆ. ನನ್ನ ಆ ಭಾಗದ ಸ್ನೇಹಿತರೂ ಇಲ್ಲೇ ಇದ್ದಾರೆ. ನಾಲೆ ಬ್ರೀಚ್ ಆದಾಗ ಯಾವ ರಾಜಕಾರಣಿಗಳೂ ಬರತಕ್ಕ ಶಕ್ತಿ ಇರುವುದಿಲ್ಲ. ಅಂಥಾದ್ದರಲ್ಲಿ ನೀವು ಹೇಗೆ ಬಂದಿರಿ, ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು ಹೇಳಿದೆ. ಅಂಥ ಭಯ ನನಗೇನೂ ಇಲ್ಲ. ನಾಲೆ ಒಡೆದುಹೋಗುವಂಥ ಕೆಲಸವನ್ನು ನನ್ನ ಕಾಲದಲ್ಲಿ ಮಾಡಿಸಿಲ್ಲ. ಸ್ಥಳವನ್ನು ಪರಿಶೀಲಿಸಿ ನೋಡಿ ವಿಷಯವನ್ನು ಸಂಗ್ರಹಣೆ ಮಾಡಿಕೊಂಡು ಹೋಗಲು ಬಂದಿದ್ದೇನೆ, ಇದಕ್ಕೆ ನಿಮ್ಮ ಸಹಕಾರ ಬೇಕೆಂದು ನಾನು ಅವರನ್ನು ಕೇಳಿದೆ. ಅಲ್ಲಿನ ರೈತ ಸಮುದಾಯಕ್ಕೆ ನಾನು ಹೋಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಒಂದು ಕಡೆ ನಾವು ಸಂಗ್ರಹಣ ಮಾಡಿದ ಮೇಲೆ ಇನ್ನೊಂದು ಕಡೆ ಅದನ್ನು ಯಾವ ರೀತ ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಪ್ರತಿಯೊಬ್ಬರಿಗೂ ಬೇಕಾಗಿರತಕ್ಕ ನೀರನ್ನು ಹಂಚುವಾಗ ತಾರತಮ್ಯವಿಲ್ಲದೆ ಹಂಚುವ ವ್ಯವಸ್ಥೆ ಮಾಡಬೇಕೂ, ಇಂಥ ಒಂದು ವ್ಯವಸ್ಥೆಯನ್ನು ಮಾಡುವಾಗ ನಾವು ಕೆಲವು ಕಾಠಿಣ್ಯವಾದ ಕ್ರಮಗಳನ್ನೂ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ತುಂಗಭದ್ರಾ ಎಡಭಾಗದ ನಾಲೆಯಲ್ಲಿ ೬ ಲಕ್ಷ ಎಕರೆ ನೀರಾವರಿ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಆದರೆ ಅಲ್ಲಿರತಕ್ಕ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿ ನೀರಾವರಿಯನ್ನು ಮಾಡಿರತಕ್ಕದು ಕೇವಲ ೪ ಲಕ್ಷ ಎಕರೆ ಮಾತ್ರ. ತುಂಗಭದ್ರದಿಂದ ಉಪಯೋಗ ಮಾಡಿಕೊಳ್ಳಲು ಅವಕಾಶವಿರತಕ್ಕುದು ೧೭೦ ಟಿ. ಎಂ. ಸಿ. ಎಫ್‌ಟಿ. ನೀರು ಮಾತ್ರ. ಇದು ನಮ್ಮ ಒಪ್ಪಂದದ ಪ್ರಕಾರ. ಎಡದಂಡೆ ನಾಲೆಯಲ್ಲಿ ೨೧ ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯುತ್ತಿದ್ದಾರೆ, ೫೭ ಸಾವಿರ ಎಕರೆಯಲ್ಲಿ ಭತ್ತವನ್ನು ಬೆಳೆಯುತ್ತಿದ್ದಾರೆ, ೯೧ ಸಾವಿರ ಎಕರೆಯಲ್ಲಿ ಖಾರೀಫ್ ಬೆಳೆಯುತ್ತಿದ್ದಾರೆ ೨೯ ಸಾವಿರ ಎಕರೆಯಲ್ಲಿ ರಬಿಯನ್ನು ಬೆಳೆಯುತ್ತಿದ್ದಾರೆ. ಅಲ್ಲಿ ಒಟ್ಟು ೧.೯೯ ಲಕ್ಷ ಎಕರೆ ಮಾತ್ರ ನೀರಾವರಿಯಾಗುತ್ತಿದೆ.

ಬಲದಂಡೆಯಲ್ಲಿ ಶುಗರ್ ಕೇನ್ ಬೆಳೆಯಲು ೧೫ ಸಾವಿರ ಎಕರೆಗೆ ಮಾತ್ರ ಇದ್ದರೂ, ಇವತ್ತು ನೀರಾವರಿ ಮಾಡುತ್ತಿರುವುದು ಒಂದು ಲಕ್ಷ ೫೦ ಸಾವಿರ ಎಕರೆ. ಪ್ಯಾಡಿಗೆ ೨೯ ಸಾವಿರ ಎಕರೆ ಇದ್ದರೆ ಈವತ್ತು ನೀರಾವರಿ ಮಾಡುತ್ತಾ ಇರತಕ್ಕಂಥದ್ದಕ್ಕೆ ೪೪ ಸಾವಿರ ಎಕರೆ. ಸುಮಾರು ೬ ಲಕ್ಷ ಎಕರೆ ನೀರಾವರಿ ಮಾಡತಕ್ಕಂಥದ್ದು ಒಪ್ಪಿಗೆ ಕೊಟ್ಟಿದ್ದೇವೆ. ಈವತ್ತು ಚಾನಲ್ ಸಿಸ್ಟಮ್ ಕಂಪ್ಲೀಟ್ ಮಾಡಿದ್ದರೆ ಯಾರು ಪ್ರಥಮ ಹಂತದಲ್ಲಿ ಇದ್ದಾರೋ ಅವರು ಸಂಪೂರ್ಣವಾಗಿ ನೀರಿನ ಬಳಕೆಯನ್ನು ತಮ್ಮ ಸಂಘಟನ ಶಕ್ತಿಯಿಂದ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿ ಕೊನೆಯಲ್ಲಿರತಕ್ಕಂಥವರಿಗೆ ನೀರು ನೀರು ಸಿಕ್ಕುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಕೆನಾಲ್ ಸಿಸ್ಟಮ್‌ನ್ನು ಕಂಪ್ಲೀಟ್ ಮಾಡಿದರೂ ಟೇಲ್ ಎಂಡ್‌ನಲ್ಲಿರತಕ್ಕಂಥವರು ಸಂಪೂರ್ಣವಾಗಿ ಕಷ್ಟ ಪಡುವಂತ ಅವಕಾಶವಾಗಿದೆ. ಮೊನ್ನೆ ಡಾ. ಸರದಾರ್

ಸಂಗಮೇಶ್ವರರವರು ಬಹಳ ಕಠಿಣವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಅದರಂತೆ ಶ್ರೀಮಾನ್ ರೆಡ್ಡಿಯವರೂ ಕೂಡ ಅದನ್ನು ನಿಧಾ-ಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಈವತ್ತು ಎಂಡದಂಡೆ ನಾಲೆಯಲ್ಲಿ ಏನು ಬ್ರೀಚ್ ಆಗುತ್ತಿದೆ, ಅದು ೪೯ ಕಿಲೋಮೀಟರ್ ಅದು ಇತ್ತೀಚೀಗೆ ಆಗಿರತಕ್ಕಂಥದ್ದು. ೯೩ ಸಾರಿ ಪಕ್ಕದ ನಾಲೆಯನ್ನು ಒಡೆದಿದ್ದಾರೆ, ಈ ಕೆಲಸ ಆಗಿರತಕ್ಕಂಥದ್ದು ಸ್ಟೇಟ್ ರಿ ಆರ್ಗನೈಸೇಷನ್ ಪೂರ್ವದಲ್ಲಿ. ಇದಕ್ಕೆ ನಮ್ಮ ಅಧಿಕಾರಿಗಳು ಯಾರೂ ಕಾರಣಕರ್ತರಲ್ಲ, ತಾಂತ್ರಿಕ ದೋಷದಿಂದ ; ಅಲ್ಲಿ ಏನು ಪರಿಸ್ಥಿತಿ ಇದೆ ಅದನ್ನು ಸರಿಪಡಿಸಿಕೊಂಡು ನೀರನ್ನು ನಿಜವಾಗಿಯೂ ಉಪಯೋಗ ಮಾಡಿಕೊಳ್ಳುವುದಕ್ಕೆ ಡಿಸೈನ್ ಕೂಡ ಮಾಡಿದ್ದಾರೆ. ನಾನು ಮೊದಲೇ ಹೇಳಿದ್ದೇನೆ, ಅನಧಿಕೃತವಾಗಿ ಸೋರದೆ ಇರತಕ್ಕಂಥ ಏರಿಯಾಕ್ಕೆ, ಅನುಗುಣವಾಗಿ ಒಂದು ಭಾಗ ಬೆಳೆಯನ್ನು ಮಾಡಲು, ನಾಲೆಯ ಕ್ಯಪಾಸಿಟಿ ಏನು ಇದು, ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಹೇಳಿದರೂ ಕೂಡ ಆರು ಲಕ್ಷ ಎಕರೆ ನೀರಾವರಿ ಮಾಡಲು ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದರ ಪರಿಣಾಮವಾಗಿ ಏನಾಗಿದೆ ಎಂದರೆ ಒಂದುವರೆ, ಅಥವಾ ಎರಡು ಎಕರೆ ಬೆಟರ್ ಮೆಂಟ್ ಮಾಡುವುದಕ್ಕೂ, ಕೂಡ ಅಧಿಕಾರಿಗಳು ನಿಸ್ಸಹಾಯಕರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ನೀರಿನ ಬಳಕೆ ಮತ್ತು ಸಂಗ್ರಹಣೆಯ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಅದನ್ನು ಬಳಕೆ ಮಾಡತಕ್ಕಂಥ ವ್ಯವಸ್ಥೆ ಸರ್ಕಾರದಮೇಲೆಯೇ ಇದೆ ಎಂದು ಈವತ್ತು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ.

ಸ್ವಾಮಿ ಇಷ್ಟೇ ಅಲ್ಲ ಭದ್ರಾ ನದಿಯು ಕೂಡ ಇದೇ ಪರಿಸ್ಥಿತಿಯಲ್ಲಿ ಇದೆ. ಭದ್ರಾ ನದಿ ಈವತ್ತು ಬೆಳೆಯನ್ನು ಇಡತಕ್ಕಂಥದಲ್ಲಿ ಏನು ಯೋಜನೆಗಳನ್ನು ಮಾಡಿದೆ ಆ ಯೋಜನೆಗಳಿಗೆ ಅನುಗುಣವಾಗಿ ಬೆಳೆಯುತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಕ್ರಾಪ್ ಪ್ಯಾಟ್ರನ್ ಹೆಚ್ಚು ಮಾಡಿದ್ದೇವೆ ಅದರ ಪರಿಣಾಮವಾಗಿ ಸುಮಾರು ೨೦ ಸಿ.ಎಂ ಟಿ. ನೀರನ್ನು ಈವತ್ತು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸ್ವಾಮಿ ಅಪ್ಪರ್ ಭದ್ರಾ ಮತ್ತು ಅಪ್ಪರ್ ತುಂಗಾಭದ್ರಾ ನಾವು ಮೊದಲನೆ ಹಂತಕ್ಕೆ ಹದಿನಾರು ಸಿ ಎಂ ಟಿ. ನೀರನ್ನು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿಗೆ ತೆಗೆದುಕೊಳ್ಳಬೇಕೆಂದು ಯೋಜನೆಯನ್ನು ಇಟ್ಟಿಕೊಂಡರೂ ೧೬ ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ೨೦ ಟಿ.ಎಂ.ಸಿ. ಯಷ್ಟು ಅಡಿಷನಲ್ಆಗಿ ಬರತಕ್ಕಂಥದ್ದು ಇದೆ, ಎಂದು ಲೆಕ್ಕಾಚಾರ ಮಾಡಿದ್ದೇವೆ. ಒಂದುಕಡೆ ತುಂಬ ಕಷ್ಟಕಾಲದಲ್ಲಿ ಇರತಕ್ಕಂಥ ಜನತೆಗೆ ನೀರನ್ನು ಕೊಡಬೇಕು. ಮತ್ತೊಂದು ಕಡೆ ಚಿತ್ರದುರ್ಗ. ಕೋಲಾರ ಜಿಲ್ಲೆ ಈ ಕಡೆಯಿಂದ ಬಂದಿರತಕ್ಕಂಥ ಸ್ನೇಹಿತರು ಸಹ ಒತ್ತಾಯ ಮಾಡುತ್ತಿದ್ದಾರೆ, ಅವರಿಗೂ ಸಹ ಕೊಡಬೇಕು. ಆದ್ದರಿಂದ ಇದರ ಬಗ್ಗೆ ನಿಖರವಾದ ನೀರಾವರಿಯೋಜನೆಯನ್ನು ಕೈಗೊಳ್ಳಬೇಕು. ನೀರಾವರಿಯನ್ನು ತೆಗೆದುಕೊಳ್ಳತಕ್ಕಂಥ ಕಾಲದಲ್ಲಿ ನಾವು ಪಕ್ಷಾತೀತವಾಗಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಅಲ್ಲದೆ ಜಲಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿ ಲಾಭ ಪಡೆಯಲಿಕ್ಕೆ ಸಾಧ್ಯವಾಗುತ್ತದೆಂದು ಖಚಿತವಾಗಬೇಕು. ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಇಲ್ಲೇ ಕುಳಿತಿದ್ದಾರೆ. ಈವತ್ತು ಹೇಮಾವತಿಯಿಂದ ಎರಡು ಲಕ್ಷ ಎಕ್ಕರೆ ನೀರನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಇದರ ಪ್ರಕಾರ ಕ್ರಾಪ್ ಪ್ಯಾಟ್ರನ್ ಬದಲಾವಣೆಮಾಡಿ ೭ ಲಕ್ಷ ಎಕರೆಗೆ ಗುರಿ ಮುಟ್ಟುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ನಿರ್ಧಾಕ್ಷಿಣ್ಯವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದು ಒಂದು ಭಾಗ ಮತ್ತೊಂದು ಕಡೆ ಹೇಗೆ ಸಂಪನ್ ಮೂಲಗಳನ್ನು ರೂಢಿಸಿಕೊಳ್ಳಬೇಕು ಎನ್ನುವುದು ಇನ್ನೊಂದು ಭಾಗ. ಸ್ವಾಮಿ ನಾವು ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ಅದನ್ನು ಮತ್ತೆ ಸ್ಪಷ್ಟೀಕರಿಸುತ್ತೇವೆ. ಈವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ನಾವು ನೀರಾವರಿಗಳನ್ನು ಮಾಡಿದ್ದೇವೆ. ಸುಮಾರು ೪೫೦ ಏತದ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ. ಆದರ ಕರೆಂಟ್ ಚಾರ್ಜಸ್‌ನ್ನು ತುಂಬಿಕೊಳ್ಳತಕ್ಕಂಥದ್ದಕ್ಕೂ ಸರ್ಕಾರ ಮೆನ್‌ಟನೆನ್ಸ್ ಗ್ರಾಂಟ್ ಎಂದು ಇಟ್ಟಿದ್ದೇವೆ. ಅದಕ್ಕೆ ವೆಚ್ಚವಾಗತಕ್ಕಂಥ ಕರೆಂಟ್ ಖರ್ಚನ್ನು ತುಂಬಿಕೊಳ್ಳತಕ್ಕಂಥ ಪರಿಪಾಠ ನಮ್ಮ ಪಾಲಿಗೆ ಬಂದಿದೆ. ಆದ್ದರಿಂದ ಹೊಸ ಹೊಸ ಕೆಲಸಗಳನ್ನು ತೆಗೆದುಕೊಳ್ಳತಕ್ಕಂಥದ್ದಕ್ಕೆ ಸಾಧ್ಯತೆ ಇಲ್ಲ. ಈವತ್ತು ಬೇಡಿಕೆ ನಮ್ಮ ಮುಂದೆ ಇರತಕ್ಕಂಥದ್ದು ತೀವ್ರ ಸಮಸ್ಯೆಯಾಗಿದೆ. ಅದರ ಕಡೆ ಬಹುಶಃ ಎಲ್ಲರಗಮನ ಇರತಕ್ಕಂಥದ್ದು ಅತ್ಯಾವಶ್ಯಕವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಬೇರೆ ಬೇರೆ ರಾಜ್ಯಗಳಲ್ಲಿ ಇರತಕ್ಕಂಥ ಪರಿಸ್ಥಿತಿಯ ಬಗ್ಗೆ ಮಾನ್ಯ ಚಿಮ್ಮನಕಟ್ಟಿಯವರು ಹೇಳಿದರು. ಲಿಫ್ಟ್ ಇರಿಗೇಷನ್ ಮಾಡಲಿಕ್ಕೆ ಸರ್ಕಾರ ಬಹಳ ಹಿಂದೆ ಬೀಳುತ್ತಿದ್ದೆ ಎನ್ನುವ ಮಾತನ್ನು ಹೇಳಿದರು. ಹಿಂದೆ ಬೀಳಬೇಕಾದ ಪ್ರಸಂಗ ಬರಬಹುದು. ಬೀಳ ಬೇಕಾಗಿ ಬರುತ್ತದೆ. ಈ ಯೋಜನೆಯಿಂದ ಚಿಂತೆ ಇಲ್ಲ. ಕಾರಣ ಇಷ್ಟೆ ಈವತ್ತು ಏನು ಹಾಲಿ ಏತದ ನೀರಾವರಿ ಮಾಡಿದ್ದೇವೆ, ಅದರ 'ಮೇನ್‌ಟನೆನ್ಸ್ ಕೂಡ ಮಾಡಿಕೊಳ್ಳದೆ ಹೋದರೆ ನಾವು ಬಹುಶಃ ಸ್ವಲ್ಪ ಹಿಂದೆ ಸರಿಯಲೇಬೇಕಾಗುತ್ತದೆ. ಈವತ್ತು ಕೋಲಾರದಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಜಲಸಂಪತ್ತನ್ನು ಹೆಚ್ಚು ಮಾಡತಕ್ಕಂಥ ಕಾಲದಲ್ಲಿ ಭೂಗರ್ಭದಲ್ಲಿರತಕ್ಕಂಥ ಜಲವನ್ನು ಎತ್ತಿ ಒಂದೂ ಒಂದೂವರೆ ಎಕರೆಯಷ್ಟು ಬೆಳೆಯನ್ನು ತೆಗೆಯಲು ಅದಕ್ಕೆ ಆಗತಕ್ಕಂಥ ಪೂರ್ಣ ವೆಚ್ಚವನ್ನು ಮತ್ತು ಅದಕ್ಕೆ ತಗಲತಕ್ಕಂಥ ಕರೆಂಟ್ ಚಾರ್ಜನ್ನು, ವೆಚ್ಚ ಮಾಡತಕ್ಕಂಥ ನೀರಿನ ಹೊಣೆಗಾರಿಕೆಯನ್ನು ಹೊರುವುದಕ್ಕೆ ರೈತ ಹಿಂದೆ ಬೀಳುವುದಾದರೆ ಅದರ ಉಪಯೋಗದ ಬಗ್ಗೆ ಸ್ವಲ್ಪಮಟ್ಟಿಗೆ ಚಿಂತನೆ ಮಾಡ ಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಕಾರಣದಿಂದ ನಮ್ಮ ಮುಂದಿರ ತಕ್ಕಂಥ ಗುರಿ ರಾಜ್ಯದ ಎಲ್ಲಾ ಜಲ ಸಂಪತವನ್ನು ಉಪಯೋಗ ಮಾಡಿಕೊಳ್ಳಬೇಕು. ಈವತ್ತು ಬರಡು ಭೂಮಿಯನ್ನು ನಂಬಿಕೊಂಡು ಜೀವನ ಮಾಡತಕ್ಕಂಥ ರೈತನಿಗೂ ನೀರಾವರಿ ಸೌಲಭ್ಯವನ್ನು ಪಡೆದಂಥ ರೈತರಿಗೂ ವ್ಯತ್ಯಾಸ ಏನು ಇದೆ ಎಂದರೆ, ದೊಡ್ಡ ಕಾರಿನಲ್ಲಿ ಓಡಾಡುವುದಕ್ಕೆ ಸಾಧ್ಯತೆ ಇಲ್ಲದಿದ್ದರೂ ಸುಖ ಸಂಪತ್ತಿನಿಂದ ಮೆರೆಯಲಿಕ್ಕೆ ಸಾಧ್ಯವಿಲ್ಲದಿದ್ದರೂ ನೀರಾವರಿ ಪ್ರದೇಶದಲ್ಲಿರತಕ್ಕಂಥ ರೈತರು ಎರಡು ಹೊತ್ತು ಹೊಟ್ಟೆತುಂಬ ಊಟವನ್ನು ಮಾಡಲಿಕ್ಕೆ ಅವಕಾಶವಿದೆ. ಕೇವಲ ಮಳೆಯ ಆಧಾರ ಮೇಲೆ, ಬರಡು ಭೂಮಿಯಲ್ಲಿರತಕ್ಕಂಥ ರೈತರು ಏನು ಇದ್ದಾರೆ ಆ ರೈತರನ್ನು ಸಂಧಾರಿಸುವುದರ ಬಗ್ಗೆ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಇಂಥ ಯೋಜನೆಗಳನ್ನು ಮಾಡಿ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಇದ್ದರೆ ಆ ಯೋಜನೆಗಳನ್ನಾದರೂ ಏತಕ್ಕೆ ಮಾಡಬೇಕು ?

ಸ್ವಾಮಿ ಈವತ್ತು ಹೊಸದಾಗಿ ಏನು ಈ ಮಾತನ್ನು ಹೇಳುತ್ತಾ ಇಲ್ಲ. ೧೯೭೪-೭೫ ನೇ ಇಸವಿಯಲ್ಲಿ ದಿವಂಗತ ಶ್ರೀಮಾನ್ ದೇವರಾಜ ಅರಸ್‌ರವರು ಬೆಟರ್‌ಮೆಂಟ್ ಲೆವಿಯನ್ನು ಹೆಚ್ಚು ಮಾಡಬೇಕೆಂದು ಈ ಸದದದಲ್ಲಿ ತಿದ್ದುಪಡಿ ಮಸೂದೆಯನ್ನು ತಂದರು. ಅವತ್ತು ೫ ನೂರು ರೂಪಾಯಿಗಳಿದ್ದುದನ್ನು ೧೫೦೦ ರೂಪಾಯಿಗಳು ಮಾಡಬೇಕೆಂದು ಹೇಳಿದರು. ಇದನ್ನು ನಾನು ವಿರೋಧ ಮಾಡಿದೆ. ನಾನು ವಿರೋಧಮಾಡಿದ್ದು ಬೇರೆ ರಾಜ್ಯಗಳಲ್ಲಿರತಕ್ಕಂಥ ಎಲ್ಲ ಪರಿಸ್ಥಿತಿಯನ್ನು ಗಮನದಟ್ಟುಕೊಂಡು ವಿರೋಧ ಮಾಡಿದೆನೆಹೊರತು ೫ ನೂರು ರೂಪಾಯಿ ಇದ್ದುದನ್ನು ೧೫೦೦ ರೂಪಾಯಿಗಳನ್ನು ಮಾಡಬೇಡಿ ಎಂದು ಹೇಳಲಿಲ್ಲ. ವೆಸ್ಟ್ ಬೆಂಗಾಲ್ ನಲ್ಲಿ ಬೆಟರ್‌ಮೆಂಟ್ ಲೆವಿ ಯಾವರೀತಿ ಇತ್ತು, ಆಗ ಮಾರ್ಕಿಸ್ಟ್ ಸರ್ಕಾರ ಇತ್ತು, ಕೇರಳದಲ್ಲಿ ಸಿ.ಪಿ.ಐ. ಸರ್ಕಾರ ಇತ್ತು. ಅವರು ಬೆಟರ್‌ಮೆಂಟ್ ಲೆವಿಯನ್ನು ಹೇಗೆ ಹಾಕಿದ್ದರು ಎಂಬುದನ್ನು ಸದನದ ಗಮನಕ್ಕೆ ತಂದು, ಏಕ್‌ದಮ್ ೧೫೦೦ ರೂಪಾಯಿಗಳನ್ನು ಮಾಡತಕ್ಕಂಥ ಸಾಧುವಾದುದಲ್ಲ ಎಂದು ಹೇಳಿದ್ದೆ. ಭದ್ರಾ ನೀರಾವರಿ ಜಲಾನಯನದಿಂದ ನೀರನ್ನು ಕೊಡತಕ್ಕಂಥ ಕಾಲದಲ್ಲಿ ಅವರು ಸಂಪನ್ಮೂಲಗಳನ್ನು ಹೆಚ್ಚಿಸಿಕೊಡತಕ್ಕಂಥ ಕಾಲದಲ್ಲಿ ೧೫೦೦ ರೂಪಾಯಿಗಳನ್ನು ಮಾಡಬೇಕೆಂದು ಹೇಳಿದೆನೆ ಪರಂತು ವಜಾ ಮಾಡಬೇಕೆಂದು ಹೇಳಲಿಲ್ಲ.

೧೧—೩೦ ಎ. ಎಂ.

†ಬಹುಶಃ ಈ ಸದನದ ೨೨ ವರ್ಷಗಳ ಕಾರ್ಯಗಳ ಚರ್ಚೆಯಲ್ಲಿ ನಾನು ಯಾವ ಮಾತನ್ನು ಹೇಳಿದ್ದೇನೆ ಎಂಬ ಬಗ್ಗೆ ತಾವು ಪರಿಶೀಲನೆ ಮಾಡಿ ನೋಡಬಹುದು. ಈ ಹಿನ್ನೆಲೆಯಲ್ಲಿ ನಾವು ಪಕ್ಷಾತೀತವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ಕಾಲ ಸನ್ನಿಹಿತವಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಈ ರಾಜ್ಯದಲ್ಲಿರುವ ಎಲ್ಲ ಜಲಸಂಪತ್ತನ್ನು ಪೂರ್ಣವಾಗಿ ಬಳಸಿಕೊಳ್ಳಬೇಕಾದರೆ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು ಬೇಕಾಗುವುದರಿಂದ. ಜನತಾ ಸರ್ಕಾರವೇ ಇರಲಿ ಅಥವಾ ಬೇರೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ, ನಾವು ಸಂಪನ್ಮೂಲಗಳನ್ನು ರೂಢಿಸಿಕೊಳ್ಳದಿದ್ದರೆ ನಮ್ಮ ಜಲಸಂಪತ್ತನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಬೆಟರ್‌ಮೆಂಟ್ ಲೆವಿಯನ್ನು ಬಿಹಾರ್‌ನಲ್ಲಿ ಒಂದು ಹೆಕ್ಟಾರ್ ಕಬ್ಬನ್ನು ಬೆಳೆಯಲು ೧೩೭ ರೂಪಾಯಿಗಳನ್ನು ಹಾಕಿದರೆ, ಗುಜರಾತ್ ನಲ್ಲಿ ೫೭೫ ರೂಪಾಯಿಗಳನ್ನು ಮತ್ತು ಮಹಾರಾಷ್ಟ್ರದಲ್ಲಿ ೭೫೦ ರೂಪಾಯಿಗಳನ್ನು ಹಾಕಲಾಗುತ್ತಿದೆ.

ಅದೇ ಭತ್ತಕ್ಕಾದರೆ ಗುಜರಾತ್‌ನಲ್ಲಿ ೧೦೩ ರೂಪಾಯಿಗಳನ್ನು. ಕೇರಳಾದಲ್ಲಿ ೯೪ ರೂಪಾಯಿಗಳನ್ನು ಉತ್ತರ ಪ್ರದೇಶದಲ್ಲಿ ೯೮ ರೂಪಾಯಿಗಳನ್ನು ಮತ್ತು ಕರ್ನಾಟಕದಲ್ಲಿ ೭೪ ರೂಪಾಯಿಗಳನ್ನು ವಿಧಿಸಲಾಗುತ್ತಿದೆ. ನಾನು ಎಲ್ಲ ರಾಜ್ಯಗಳ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ಅದೇ ಪ್ಲಾನ್‌ಟೇಷನ್ ಬೆಳೆಗಳಿಗೆ ಸಂಬಂಧಪಟ್ಟಂತೆ ಗುಜರಾತ್‌ನಲ್ಲಿ ೬೯ ರೂಪಾಯಿಗಳಿದ್ದರೆ ನಮ್ಮಲ್ಲಿ ೮೫ ರೂಪಾಯಿಗಳಿದೆ. ಈ ಅಂಕಿಅಂಶಗಳನ್ನು ಸಹ ನಾವು ಗಮನದಲ್ಲಿಟ್ಟುಕೊಳ್ಳ ಬೇಕಾಗುತ್ತದೆಂದು ತಮ್ಮಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇದೇ ಸಂದರ್ಭದಲ್ಲಿ ಮತ್ತೊಂದು ಮುಖ್ಯವಾದ ವಿಷಯ ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ೧೯೭೬-೭೭ನೇ ಸಾಲಿನಿಂದ ಹಿಡಿದು ೧೯೮೨-೮೩ನೇ ಸಾಲಿನವರೆಗೆ ಮೇಜರ್ ಇರಿಗೇಷನ್‌ಗೆ ಸಂಬಂಧಪಟ್ಟಂತೆ ಬೆಟರ್‌ಮೆಂಟ್ ಲೆವಿ ವಸೂಲಿಯ ಡಿಮ್ಯಾಂಡ್ ಎಷ್ಟಿತ್ತು ಎಂಬುದನ್ನು ಹೇಳುವುದಾದರೆ, ೧೯೭೬-೭೭ರಲ್ಲಿ ಹತ್ತು ಕೋಟಿ, ೧೯೭೭-೭೮ರಲ್ಲಿ ೧೩ ಕೋಟಿ, ೧೯೭೮-೭೯ರಲ್ಲಿ ೧೫ ಕೋಟಿ, ೧೯೭೯-೮೦ರಲ್ಲಿ ೧೬ ಕೋಟಿ, ೧೯೮೦-೮೧ರಲ್ಲಿ ೧೫.೭೯ ಕೋಟಿ, ೧೯೮೧-೮೨ರಲ್ಲಿ ೧೬ ಕೋಟಿ, ೧೯೮೨-೮೩ರಲ್ಲಿ ೧೩ ಕೋಟಿ ರೂಪಾಯಿಗಳು. ಅದೇ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಂತೆ ನಮ್ಮ ಡಿಮ್ಯಾಂಡ್ ೧೯೭೬-೭೭ರಲ್ಲಿ ೩.೮೦ ಕೋಟಿ, ೧೯೭೭-೭೮ ರಲ್ಲಿ ೪.೧೫ ಕೋಟಿ ೧೯೭೮-೭೯ರಲ್ಲಿ ೪.೫೦ ಕೋಟಿ, ೧೯೭೯-೮೦ ರಲ್ಲಿ ೪.೯೫ ಕೋಟಿ, ೧೯೮೦-೮೧ರಲ್ಲಿ ೨.೫೦ ಕೋಟಿ, ೧೯೮೧-೮೨ರಲ್ಲಿ ೫.೫೦ಕೋಟಿ ಹಾಗೂ ೧೯೮೨-೮೩ ರಲ್ಲಿ ೫.೫೦ ಕೋಟಿ ರೂಪಾಯಿಗಳು. ಇದು ನಮ್ಮ ಮುಂದಿರುವಂತಹ ವಾಸ್ತವವಾದಂಥ ಚಿತ್ರ. ಈ ಬಗ್ಗೆ ವಸೂಲಿಯಾಗಿರುವುದು ಸಹ ಬಹಳ ಕಡಿಮೆ ಎಂದೇ ಹೇಳಬಹುದು ನಾವು ಹೇಳಿಕೊಳ್ಳುವಂತಹ ರೀತಿಯಲ್ಲಿ ವಸೂಲಿಯಾಗಿಲ್ಲ. ಆದಕಾರಣ ಈ ವಿಚಾರದಲ್ಲಿ ನಾವು ಒಂದು ನಿರ್ಣಯಕ್ಕೆ ಬರದೇ ಹೋದರೆ ಬಹುಶಃ ನಮ್ಮ ಮನಸ್ಸಿನಲ್ಲಿ ಎಷ್ಟೇ ಆಸಕ್ತಿಯಿದ್ದರೂ ಸಹ ಕಾರ್ಯರೂಪದಲ್ಲಿ ತರುವುದು ಕಷ್ಟವಾಗುತ್ತದೆ. ರೈತರ ಹೆಸರಿನಲ್ಲಿ ಇಲ್ಲಿ ನಾವು ಅಧಿಕಾರಕ್ಕೆ ಬಂದಿರಬಹುದು. ನಾವೇ ಆಗಲಿ ಬೇರೆ ಯಾರೇ ಆಗಲಿ, ಇವೊತ್ತು ರೈತರ ಪುರೋಭಿವೃದ್ಧಿ ಬಗ್ಗೆಯಾಗಲೀ ರೈತರ ಏಳಿಗೆಯ ಬಗ್ಗೆಯಾಗಲಿ ಈ ಸದನದಲ್ಲಿ ಹಿಂದಿದ್ದಾರೆಂದು ನಾನು ಭಾವನೆ ಮಾಡುವುದಿಲ್ಲ. ಕೇಂದ್ರದಿಂದ ೭೫ ಕೋಟಿ ರೂಪಾಯಿಗಳನ್ನು ಕೇಳಿದ್ದೆವು, ಆದರೆ ಅವರು ಕೊಡಲಿಲ್ಲವೆಂದು ನಾವು ಕೇಂದ್ರ ಸರ್ಕಾರದ ಕಡೆ ಕೈತೋರಿಸಿ ಇದರಲ್ಲಿ ರಾಜಕೀಯ ದೃಷ್ಟಿಕೋನವನ್ನು ಬೆರೆಸುವುದಕ್ಕೆ ಹೋಗುವುದಿಲ್ಲ. ಅವರು ಕೊಡದಿರುವುದಕ್ಕೆ ನಾನಾ ಕಾರಣಗಳಿರಬಹುದು. ಆದ್ದರಿಂದ ಇದರಲ್ಲಿ ನಮ್ಮ ಜವಾಬ್ದಾರಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಮೈನರ್ ಇರಿಗೇಷನ್ ವಿಚಾರದಲ್ಲಿ ಮಾನ್ಯ ಒಡೆಯರಾಜ್ ಅವರು ಮಾತನಾಡುವಾಗ ತಮ್ಮ ಭಾಗದಲ್ಲಿ ಸರಿಯಾಗಿ ಹಣ ಖರ್ಚಾಗಿಲ್ಲವೆಂದು ಹೇಳಿದರು. ವಿಶ್ವಬ್ಯಾಂಕ್‌ನಿಂದ ನಮಗೆ ೬೫.೫೦ ಲಕ್ಷ ರೂಪಾಯಿಗಳು ಏನು ಬಂದಿದೆ) ಇದರಲಿ, ಗುಲ್ಬರ್ಗ, ಬೀದರ್ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಖರ್ಚು ಮಾಡಿರುವಷ್ಟು ಹಣವನ್ನು ಬೇರೆ ಯಾವ ಜಿಲ್ಲೆಗಳಲ್ಲಿಯೂ ಖರ್ಚು ಮಾಡಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಸರಿಯಾದ ಮಾಹಿತಿ ಆಧಾರದ ಮೇಲೆ ತಮ್ಮ ಭಾವನೆಯನ್ನು ವ್ಯಕ್ತಪಡಿಸಿಲ್ಲವೆಂದು ಹೇಳುತ್ತೇನೆ. ಈ ರಾಜ್ಯದ ಯಾವುದೇ ಒಂದು ಭಾಗವನ್ನು ಅಲಕ್ಷ್ಯ ಮಾಡಬಾರದೆಂಬುದೇ ನಮ್ಮ ಗುರಿಯಾಗಿದೆ. ಈ ಕಾರಣದಿಂದ ನಾವು ಅಧಿಕಾರಕ್ಕೆ ಬಂದಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದೇವೆಂಬುದನ್ನು ಈ ಸಭೆಯ ಮುಂದಿಡುತ್ತೇನೆ. ಇದರಲ್ಲಿ ಯಾವುದನ್ನೂ ಮುಚ್ಚುಮರೆ ಮಾಡಬೇಕಾಗಿಲ್ಲ. ತಮ್ಮ ಭಾಗದ ನಾಲ್ಕು ಜಿಲ್ಲೆಗಳಲ್ಲಿ ೨೭ ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ಅದೇ ಮುಂಬೈ ಕರ್ನಾಟಕದ ಧಾರವಾಡ, ಉತ್ತರ ಕನ್ನಡ ಬೆಳಗಾಂ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ೧೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿವೆ. ಹಳೆಯ ಮೈಸೂರು ಭಾಗದ ೯ ಜಿಲ್ಲೆಗಳಲ್ಲಿ ಖರ್ಚು ಮಾಡಿರುವುದು ೨೨ ಕೋಟಿ ರೂಪಾಯಿಗಳನ್ನು ಮಾತ್ರ. ಈ ಕಾರಣದಿಂದ ಆ ಭಾಗವನ್ನು ನಮ್ಮ ಸರ್ಕಾರ ಅಲಕ್ಷ್ಯ ಮಾಡಿದೆ ಎಂದು ಹೇಳಿ ರಾಜಕೀಯ ಬೆರಸಬಾರದೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ವಿಶ್ವ ಬ್ಯಾಂಕ್‌ನ ಸಹಾಯ ಬಿಟ್ಟು ಸ್ಟೇಟ್ ಪ್ಲಾನ್‌ನಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಿ ?

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲ ವಿವರಗಳನ್ನು ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೇಂದ್ರ ಸರ್ಕಾರದ ಸಹಾಯವೇ ಇರಬಹುದು. ವಿಶ್ವ ಬ್ಯಾಂಕ್‌ನ ಸಹಾಯವೇ ಇರಬಹುದು ಇಲ್ಲವೇ ರಾಜ್ಯ ಸರ್ಕಾರದ ಹಣವೇ ಇರಬಹುದು, ಮೇಜರ್ ಮತ್ತು ಮೈನರ್ ಇರಿಗೇಷನ್‌ಗಳಿಗೆ ಸಂಬಂಧಪಟ್ಟಂತೆ ಯಾವಯಾವ ಭಾಗಗಳಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ಸ್ಪಷ್ಟವಾಗಿ ತಾವು ತಿಳಿಸಿದರೆ ತಾರತಮ್ಯ ಆಗಿದೆಯೋ ಅಥವಾ ಇಲ್ಲವೇ ಎಂಬುದು ಗೊತ್ತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಯಾರ ಬಗ್ಗೆಯಾಗಲೀ ಆಸಡ್ಡೆ ಮಾಡುವುದು ಸರಿಯಲ್ಲ ಈ ಹಿಂದಿನ ಸರ್ಕಾರ ಆಸಡ್ಡೆ ಮಾಡಿದೆ ಎಂದು ನಾನು ಹೇಳುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—೧೯ ಜಿಲ್ಲೆಗಳಲ್ಲಿರುವ ಹಿಂದುಳಿದ ಭಾಗಗಳು ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ ಸರ್ಕಾರ ನೋಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಹಿಂದಿನವರು ಕಡಿಮೆ ಕೊಟ್ಟಿದ್ದಾರೆ, ನಾವು ಜಾಸ್ತಿ ಕೊಟ್ಟಿದ್ದೇವೆಂದು ನಾನು ಹೇಳುವುದಿಲ್ಲ. ವ್ಯವಸ್ಥಿತ ರೀತಿಯಿಂದ ಈ ರಾಜ್ಯದ ಅಭಿವೃದ್ಧಿಯಾಬೇಕೆಂಬುದೇ ಎಲ್ಲರ ಅಭಿಲಾಷೆಯಾಗಿದೆ.

ಶ್ರೀ ಎನ್. ಜಿ. ನಾಯಕ್.—ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಂತೆ ಯಾವಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಯಾವಯಾವ ಜಿಲ್ಲೆಗಳಲ್ಲಿ ಖರ್ಚು ಮಾಡಲಾಗಿದೆ ಎಂಬ ವಿವರಗಳು ಈಗ ನನ್ನ ಹತ್ತಿರವಿಲ್ಲ. ತಾವು ಪ್ರತ್ಯೇಕವಾಗಿ ಈ ಬಗ್ಗೆ ಪ್ರಶ್ನೆ ರೂಪದಲ್ಲಿ ಕೇಳಿದರೆ ವಿವರಗಳನ್ನು ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಜಿ. ಪಿ. ಒಡೆಯರಾಜ್.—ನಮ್ಮ ಭಾಗದ ೩೮ ಕೆರೆಗಳ ವಿವರಗಳನ್ನು ಸ್ವಲ್ಪ ಕೊಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಕೆಲವು ಕಡೆಗಳಲ್ಲಿ ಸಣ್ಣಸಣ್ಣ ಕೆರೆಗಳನ್ನು ಮಾಡುವುದಕ್ಕಾಗುವುದಿಲ್ಲ. ಬಿಜಾಪುರದಲ್ಲಿ ಸಣ್ಣಸಣ್ಣ ಕೆರೆಗಳನ್ನು ಮಾಡಿಸಬೇಕಾದರೆ ೧ ಕೋಟಿ ೪೦ ಲಕ್ಷ, ೧ ಕೋಟಿ ೫೦ ಲಕ್ಷ ಹೀಗೆ ಬೇಕಾಗುತ್ತದೆ. ಆದೇ ಹಳೆಯ ಮೈಸೂರು ಭಾಗದಲ್ಲಿ ಹಾಗೂ ಮಲೆನಾಡು ಪ್ರದೇಶದಲ್ಲಿ ಯಾದರೆ ೨೦ ರಿಂದ ೪೦ ಸಾವಿರ ರೂಪಾಯಿಗಳ ಖರ್ಚಿನಲ್ಲಿ ಒಂದು ಕೆರೆಯನ್ನು ಮಾಡಿಸಬಹುದು. ಇದು ಆಯಾ ಪ್ರದೇಶದಲ್ಲಿರುವ ಭೂಮಿಯ ಪರಿಸ್ಥಿತಿಯ ಮೇಲೆ ಹೋಗುತ್ತದೆ.

ಶ್ರೀ ಧರ್ಮಸಿಂಗ್.—ಯಾದ್‌ಗೀರ್, ಗುರುಮಿಟ್‌ಕಲ್ ಮುಂತಾದ ಕಡೆಗಳಲ್ಲಿ ಸಣ್ಣಸಣ್ಣ ಕೆರೆಗಳನ್ನು ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನಾವು ಮಾಡಿರತಕ್ಕಂಥ ಖರ್ಚು ಹಾಗೂ ನಮ್ಮ ಗುರಿ ಏನಿದೆ ಎಂಬುದನ್ನು ಹೇಳಿದರೆ ಯಾವ ಭಾಗವನ್ನೂ ನಾವು ಅಲಕ್ಷ್ಯ ಮಾಡಿಲ್ಲವೆಂಬುದು ತಮಗೇ ತಿಳಿಯುತ್ತದೆ.

ಬಹಳ ಕಟುವಾದ ಟೀಕೆಗೆ ಒಳಗಾದದ್ದು ಒಂದು ಏನೇಂದರೆ ಅಪ್ಪರ್‌ಕೃಷ್ಣ ಈ ಯೋಜನೆಯನ್ನು ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದರ ಕಡೆಗೆ ಹೆಚ್ಚು ಗಮನ ಕೊಟ್ಟಿಲ್ಲ, ಆಸಕ್ತಿ ಇಲ್ಲ, ಈ ಸರ್ಕಾರ ತಾರತಮ್ಯ ಮನೋಭಾವನೆಯಿಂದ ನೋಡಿಕೊಳ್ಳುತ್ತಿದೆ ಈ ವಾದವನ್ನು ಸಭೆಯಲ್ಲೂ ವ್ಯಕ್ತಪಡಿಸಿದ್ದಾರೆ. ಸಭೆಯ ಹೊರಗಡೆ ಕೂಡ ನಮ್ಮ ಸ್ನೇಹಿತರು ವ್ಯಕ್ತಪಡಿಸಿದ್ದಾರೆ. ನಮ್ಮ ಆತ್ಮೀಯ ಸ್ನೇಹಿತರಾದ ಧರ್ಮಸಿಂಗ್‌ರವರು ಕೂಡ ಹೇಳಿದ್ದಾರೆ, ದೇವೇಗೌಡರು ಎಲ್ಲಾ ಹಣವನ್ನು ಉಳಿಸಿಕೊಂಡು ಹೇಮಾವತಿ ಪ್ರಾಜೆಕ್ಟ್‌ಗೆ ತೆಗೆದುಕೊಂಡು ಹೋಗಿದ್ದಾರೆ ಆ ಒಂದು ಪ್ರಯತ್ನ ಮಾಡಿದ್ದಾರೆಂದು ಹೇಳಿದ್ದಾರೆ. ಮಾನ್ಯ ಚಿಮ್ಮನಕಟ್ಟಿಯವರು ಮಾತನಾಡುವಾಗ ಮಾನ್ಯ ಖರ್ಗೆಯವರು ಮಧ್ಯೆ ಪ್ರವೇಶ ಮಾಡಿ ಈ ಮಾತನ್ನು ಹೇಳಿದ್ದಾರೆಂದು ಕೇಳಿದ್ದೇನೆ.

ಶ್ರೀ ಧರ್ಮಸಿಂಗ್ .— ತಾವು ನಮ್ಮ ಕಡೆ ಪ್ರವಾಸ ಬಂದಾಗ ಸಂಬಂಧಪಟ್ಟ ಯಾವುದೇ ಶಾಸಕರು ಕರೆಸಿಲ್ಲ. ೨೦೦ ಜನ ಇಂಜಿನಿಯರ್‌ಗಳನ್ನು ವರ್ಗಾವಣೆ ಮಾಡತಕ್ಕ ಕಾಲದಲ್ಲಿ ಹಣ ಲ್ಯಾಪ್ಸ್ ಆಗುತ್ತದೆ ಎನ್ನುವುದನ್ನು ವಿಚಾರ ಮಾಡಿಲ್ಲ, ಈ ಒಂದು ವಿಚಾರ ಜನರ ಮನಸ್ಸಿನಲ್ಲಿದೆ ಅದನ್ನು ನಾವು ಹೇಳಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ .— ತಮಗೆ ಯಾವುದನ್ನು ಮರೆಮಾಚಬೇಕಾದ ಅವಶ್ಯಕತೆ ಇಲ್ಲ ಎಲ್ಲವನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ .— ನಿಮಗೆ ಅಷ್ಟು ಧೈರ್ಯ ಇದೆ.

ಶ್ರೀ ಎಚ್. ಡಿ. ದೇವೇಗೌಡ .— ಸತ್ಯಾಂಶ ಇರುವಾಗ, ಹೇಳುವುದಕ್ಕೆ ಅಂಜಿಕೆ ಏತಕ್ಕೆ ? ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಬರತಕ್ಕ ಇಂಜಿನಿಯರ್‌ಗಳನ್ನು ವರ್ಗ ಮಾಡಿರುವ ಬಗ್ಗೆ ಹೇಳಿದ್ದಾರೆ. ನಾವು ಯಾವುದೇ ಅಧಿಕಾರಿಗಳನ್ನು ವರ್ಗಮಾಡಿದರೂ ರಿಲೀವ್ ಮಾಡಿಲ್ಲ. ಸಬ್‌ಸ್ಟಿಟ್ಯೂಟ್ ಹಾಕುವ ವರೆಗೂ ಯಾರನ್ನೇ ಆಗಲಿ ಅಲ್ಲಿಂದ ವರ್ಗಮಾಡಬಾರದೆಂದು ಹೇಳಿದ್ದೇವೆ. ೧೯೮೨ ರ ಅಕ್ಟೋಬರ್ ೨ನೇ ತಾರೀಖು ಹಿಂದಿನ ಸರ್ಕಾರ ಯಾವ ಒಂದು ಗುರಿಯನ್ನು ಮುಟ್ಟಬೇಕೆಂದು ಹಿಂದೆ ನಿರ್ಣಯ ಮಾಡಿತ್ತೊ ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಮೊದಲನೆಯ ಭಾರಿಗೆ ರಿವ್ಯೂ ಮಾಡಿದ್ದಾರೆ. ೭೦ಸಾವಿರ ಹೆಕ್ಟೇರ್‌ಗೆ ನೀರು ಕೊಡಬೇಕೆಂದು ವಿಶ್ವಬ್ಯಾಂಕಿನ ಜೊತೆ ಅಗ್ರಿಮೆಂಟ್ ಮಾಡಿ ಕೊಟ್ಟಂತಹ ಕಾಲದಲ್ಲಿ ೨ನೇ ಅಕ್ಟೋಬರ್ ೧೯೮೨ ರಂದು ರಿವ್ಯೂ ಮಾಡಿದ್ದಾರೆ. ಇವತ್ತಿನವರೆಗೆ ನೀರನ್ನು ವ್ಯವಸಾಯಕ್ಕೆ ಒದಗಿಸಿರುವುದು ಕೇವಲ ೫ ಸಾವಿರ ಹೆಕ್ಟೇರ್‌ಗೆ ಮಾತ್ರ. ೨ ತಿಂಗಳು ಮಾತ್ರ ಇತ್ತು. ಈ ಕೆಲಸ ಕುಂಠಿತವಾಗಿದೆ. ಈ ಸರ್ಕಾರ ಬಂದಮೇಲೆ ದೇವೇಗೌಡರು ಆ ಭಾಗದ ಜಲಾಶಯ ಗಳನ್ನು ನಡೆಸುವುದಕ್ಕೆ ಅಲಕ್ಷ ಮನೋಭಾವನೆಯಿಂದ ಇದ್ದಾರೆಂದು ಹೇಳುವುದು ಸರಿಯಲ್ಲ, ಇದು ವಾಸ್ತವಾಂಶಕ್ಕೆ ದೂರವಾದುದ್ದು. ಕಳೆದ ನಾಲ್ಕು ವರ್ಷಗಳ ಅಂಕಿಅಂಶಗಳನ್ನು ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಹಣ ಖರ್ಚುಮಾಡುವುದಕ್ಕೆ ಆಸಕ್ತಿ ಇರಲಿಲ್ಲವೆಂದು ಹೇಳುವುದಿಲ್ಲ, ಅಲ್ಲಿರತಕ್ಕ ಪರಿಸ್ಥಿತಿಯ ಹಿನ್ನೆಲೆಯಿಂದ ಹಣ ಖರ್ಚುಮಾಡಲಿಕ್ಕೆ ಆಗದೇ ಇರಬಹುದು. ಆ ಅಂಕಿ ಅಂಶಗಳನ್ನು ಸ್ವಲ್ಪ ಸಮಯದ ನಂತರ ಸಭೆಗೆ ತಿಳಿಸುತ್ತೇನೆ. ೭೦ ಸಾವಿರ ಹೆಕ್ಟೇರ್ ಭೂಮಿಗೆ ನೀರು ಕೊಡಬೇಕಾದರೆ ೭೯ ಕಿಲೋಮೀಟರ್ ದೂರವನ್ನು ಬಿಟ್ಟು ನಾವು ಮುಂದೆ ಹೋಗಬೇಕು. ರಾಜನಕಲ್‌ನ ಟನಲ್ ೪೫ನೇ ಕಿಲೋಮೀಟರ್‌ನಲ್ಲಿ ಪ್ರಾರಂಭವಾಗುತ್ತದೆ. ಚಾನಲ್ ಕಂಪ್ಲೀಟ್ ಮಾಡಿರತಕ್ಕದ್ದು ೧ನೇ ಕಿಲೋಮೀಟರ್ ನಿಂದ ೧೫ ಕಿಲೋಮೀಟರ್ ತನಕ ಮಾತ್ರ. ೧೫ ನೇ ಕಿಲೋಮೀಟರ್‌ನಿಂದ ೪೫ನೇ ಕಿಲೋಮೀಟರ್ ದೂರದವರೆಗೆ ಸಂಪೂರ್ಣ ಚಾನಲ್ ಕಂಪ್ಲೀಟ್ ಆಗಿಲ್ಲ. ರಾಜನಕಲ್ ಹತ್ತಿರ ಹಿಂದುಗಡೆ ೨೦೦ ಮೀಟರ್ ಮುಂದುಗಡೆ ೨೦೦ ಮೀಟರ್‌ವರೆಗೆ ಕೆಲಸ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಅಲ್ಲಿಂದ ಮುಂದಕ್ಕೆ ಚಾನಲ್ ತೋಡಿಕೊಂಡು ಹೋಗಿದ್ದಾರೆ. ರಾಜನಕಲ್ ಹತ್ತಿರ ಕೆಲಸ ಮಾಡದಿದ್ದರೆ ೪೦ನೇ ಕಿಲೋಮೀಟರ್‌ನಿಂದ ೪೫ನೇ ಕಿಲೋಮೀಟರ್‌ನವರೆಗೆ ಕೆಲಸ ಮಾಡದಿದ್ದರೆ ನೀರು ಮುಂದಕ್ಕೆ ಹೋಗುವುದಿಲ್ಲ. ರಾಜನಕಲನ ಹತ್ತಿರ ಕೆಲಸ ಮಾಡದಿದ್ದರೆ ೨೮ ಸಾವರ ಹೆಕ್ಟೇರ್‌ಗೆ ಮಾತ್ರ ನೀರು ಕೊಡಲಿಕ್ಕೆ ಸಾಧ್ಯ. ವಿಶ್ವಬ್ಯಾಂಕಿನವರ ಒಪ್ಪಂದದ ಪ್ರಕಾರ ಅಲ್ಲಿನ ಕಂಟ್ರಾಕ್ಟರ್‌ಗಳು ಶಹಪುರದ ಹತ್ತಿರ ಡೈವರ್ಟ್ ಆಗುತ್ತಾರೆ. ಅಲ್ಲಿನ ತನಕ ಅವರದು ಯಾವುದೇ ಗಲಾಟೆ ಇಲ್ಲ. ಯಾವುದೇ ತಕರಾರು ಇಲ್ಲದೆ ಇರುವುದರಿಂದ ನಮ್ಮ ಕೆಲಸ ನಿಂತುಹೋಗಿಲ್ಲ.

ಶ್ರೀ ಕೆ. ಎಚ್ ರಂಗನಾಥ .— ನಮಗೆ ಸುದ್ದಿ ಬಂದಿರುವ ಪ್ರಕಾರ ಅಲ್ಲಿದ್ದಂತಹ ಮುಖ್ಯ ಇಂಜನಿಯರ್‌ರವರು ಯಾವುದೇ ನೀರಾವರಿ ಕೆಲಸಗಳಲ್ಲಿ ಅನುಭವವಿಲ್ಲದೆ ಸ್ವಂತ ತೀರ್ಮಾನ ತೆಗೆದು ಕೊಳ್ಳುವಂತಹ ಜವಾಬ್ದಾರಿ ವಹಿಸಿಲ್ಲ ಆದ್ದರಿಂದ ಮಾಡತಕ್ಕಂತಹ ಕೆಲಸಗಳು ಸ್ಥಗಿತವಾಯಿತು ಎನ್ನುವ ಕಾರಣ ಕೇಳಿರತಕ್ಕದ್ದು. ನಾನು ನಾಲ್ಕು ವರ್ಷಗಳಿಂದ ಆ ಕಡೆ ಹೋಗಿಲ್ಲ. ಇದು ವಾಸ್ತವಾಂಶ ಯಾರೇ ಮಂತ್ರಿಗಳಾಗಿರಲಿ ಯಾವುದೇ ಪಕ್ಷದವರಿರಲಿ ಮಂತ್ರಿಗಳಾದವರು ಎಲ್ಲವನ್ನು ಹೋಗಿ ನೋಡ ಬೇಕಾಗಿಲ್ಲ, ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಆ ಪ್ರಕಾರ ನಡೆದುಕೊಳ್ಳಬೇಕು, ೧೯೮೨ರ ಅಕ್ಟೋಬರ್ ೨ ನೇ ತಾರೀಖು ೭೫ ಸಾವಿರ ಹೆಕ್ಟೇರ್‌ಗೆ ನೀರು ಕೊಡಬೇಕೆಂದು ಏನು ತೀರ್ಮಾನವಾಗಿದೆ, ಆ ಪ್ರಕಾರ ಕೆಲಸವಾಗಿಲ್ಲ. ಇದು ಎಲ್ಲರಿಗೂ ಸೇರಿರತಕ್ಕ ವಿಷಯ. ನಮ್ಮಲ್ಲಿ ಇಷ್ಟು ನದಿಗಳಿವೆ, ಅವುಗಳಿಂದ ನಮ್ಮ ಪಾಲು ನಾವು ತೆಗೆದುಕೊಳ್ಳದಿದ್ದರೆ ೫೮ ಪರ್ಸೆಂಟ್ ನೀರಾವರಿ ಆಗುವ ಗುರಿಯನ್ನು ನಾವು ಮುಟ್ಟಲಿಕ್ಕೆ ಸಾಧ್ಯವಿಲ್ಲವೆನ್ನುವಾಗ ನಾವು ರಾಜ ಕೀಯವಾಗಿ ಮಾತನಾಡತಕ್ಕದ್ದಲ್ಲ ಅಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡದಿದ್ದರೆ, ಯಾರ ತಲೆಗೋ ಹಾಕುವುದು ಅಲ್ಲ, ಈ ರೀತಿ ಆಗುವುದರಿಂದ ಎಲ್ಲರಿಗೂ ತೊಂದರೆಯಾಗುತ್ತದೆ. ಇದರ ಬಗ್ಗೆ ತಿಳಿಸಬೇಕು ನಾವು ವಿಚಾರ ಮಾಡುವುದಕ್ಕೆ ಬರುತ್ತದೆ, ದುರಾದೃಷ್ಟವಶಾತ್ ಕರ್ನಾಟಕದಲ್ಲಿ ಅವರ

ಮೇಲೆ ಕ್ರಮ ತೆಗೆದು ಕೊಳ್ಳತಕ್ಕ ಜನ ಬರಬೇಕು. ಹೀಗೆ ಮಾಡುವುದರಿಂದ, ನಮ್ಮ ಜನಗಳಿಗೆ ಏನು ಅನುಕೂಲ ಆಗಬೇಕೋ ಅದು ಸ್ಥಗಿತಗೊಂಡಿದೆ.

ಶ್ರೀ ಎಚ್. ಡಿ. ದೇವೇಗೌಡ .— ಮಾನ್ಯ ರಂಗನಾಥನವರು ಹೇಳಿದ ವಿಷಯಕ್ಕೆ ಉತ್ತರ ಹೇಳುವುದಾದರೆ, ಯಾರೋ ಒಬ್ಬರು ಮುಖ್ಯ ಇಂಜಿನಿಯರ್ ಇದ್ದರು ಅವರು ಸ್ವಲ್ಪ ಕಾರ್ಠಿಣ್ಯವಾಗಿ ನಡೆದುಕೊಂಡರು ಅವರ ಪರಿಣಾಮ ಆರ್ಬಿಟ್ರೇಶನ್‌ಗೆ ಹೋಗಬೇಕಾದ ಸನ್ನಿವೇಶ ಬಂತು ಐ ಡಿ.ಪಿ. ಕಂಟ್ರಾಕ್ಟರ್‌ಗಳು ಇದ್ದರು ಇದು ಒಂದು ಹಿನ್ನೆಲೆಯನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛೆ ಪಡುತ್ತೇನೆ. ನಾವು ೭೦ ಸಾವಿರ ಹೆಕ್ಟೇರ್‌ಗೆ ನೀರು ಕೊಡತಕ್ಕ ಸ್ಟೇಜಿಗೆ ರೀಚ್ ಆಗಿಲ್ಲ.

ಎಡದಂಡೆ ಕ್ಯಾನಲ್ ಕೆಲಸ ಪೂರ್ತಿಯಾದರೆ ಸುಮಾರು ೨೮ ಸಾವಿರ ಎಕರೆಗಳಿಗೆ ನೀರನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ನಾವುನಮ್ಮ ಮುಂದೆ ಇರತಕ್ಕಂಥ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಅದು ಏನೆಂದರೆ ನಾವು ಸಮಾಲೋಚನೆ ಮಾಡಿದ ರೀತಿಯಲ್ಲಿ ಅಲ್ಲಿ ಕೆಲಸ ನಡೆದಿಲ್ಲ. ಆ ನಂತರ ನಾವು ಸಂಪೂರ್ಣವಾಗಿ ವಿಮರ್ಶೆ ಮಾಡಿದ್ದೇವೆ. ವಿಶ್ವ ಬ್ಯಾಂಕಿನಿಂದ ನಮ್ಮ ರಾಜ್ಯಕ್ಕೆ ಬರುವಂಥ ಹಣವನ್ನು ನಾವು ಪೂರ್ತಿ ವಿನಿಯೋಗಿಸಿ ಕೊಳ್ಳುವುದರಲ್ಲಿ ಯಾವ ಕಾರಣಕ್ಕೂ ಕೂಡ ಹಿಂದೆ ಡೆ ಬೀಳುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಅದರ ಬಗ್ಗೆ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕೋ ಆ ಎಲ್ಲಾ ಕಾರ್ಯಕ್ರಮಗಳನ್ನು ಕೂಡ ತೆಗೆದುಕೊಳ್ಳುತ್ತದೆ. ಇವತ್ತು ನಾನು ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುವುದಾದರೆ ಜೂನ್ ೧೯೮೮ರ ವೇಳೆಗೆ ಸುಮಾರು ೬೯ ಕಿಲೋ ಮೀಟರ್ ದೂರದವರೆಗೆ ನೀರು ಕೊಡಬೇಕೆಂದು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದೇವೆ. ಎರಡು ಕ್ಯಾನಲ್‌ವರ್ಕ್ ಏನು ಇದೆ ಆ ಕೆಲಸವನ್ನು ಕೂಡ ನಾವು ಮುಗಿಸಬೇಕಾಗಿದೆ. ಈ ವಿಷಯ ನಮ್ಮ ಮಾನ್ಯ ಮಾಜಿ ನೀರಾವರಿ ಮಂತ್ರಿಗಳಿಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜನಕಲ್ಲು ಟ್ಯಾನಲ್ ಅನ್ನು ಸುಮಾರು ೨೦೦ ಕಿಲೋಮೀಟರ್‌ವರೆಗೆ ಡೀಪ್ ಕಟ್ಟಿಂಗ್ ಮಾಡುವುದಕ್ಕೆ ಏಜೆನ್ಸಿ ಕೂಡ ಫಿಕ್ಸ್ ಮಾಡಿಲ್ಲ. ಆ ಏಜೆನ್ಸಿ ಫಿಕ್ಸ್ ಮಾಡುವುದಕ್ಕೆ ಹೋದರೆ ಅಲ್ಲಿ ಗುಂಡೇಗೆರೆ ಟ್ಯಾನಲ್ ಕೆಲಸ ಮಾಡಬೇಕಾಗುತ್ತದೆ. ಎರಡೂ ಕಡೆ ಇಂತಹ ಪರಿಸ್ಥಿತಿ ಇದೆ. ಈ ಎರಡೂ ಕೆಲಸಗಳನ್ನು ನಾವು ತೆಗೆದುಕೊಳ್ಳಬೇಕಾದರೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳು ವೆಚ್ಚ ಮಾಡಬೇಕಾಗುತ್ತದೆ. ನೀರನ್ನು ತೆಗೆದುಕೊಂಡು ಹೋಗಬೇಕಾದರೆ ಈ ಕೆಲಸವನ್ನು ಮುಗಿಸದಿದ್ದರೆ ಆಗುವುದಿಲ್ಲ. ಆದರೆ ಈ ಕೆಲಸವನ್ನು ಮುಗಿಸಬೇಕಾದರೆ ಏಜೆನ್ಸಿ ಫಿಕ್ಸ್ ಮಾಡಬೇಕಾಗುತ್ತದೆ. ಮತ್ತು ವಿಶ್ವ ಟೆಂಡರ್ ಕರೆಯಬೇಕಾಗುತ್ತದೆ. ಈ ಟೆಂಡರ್ ಕರೆದು ನಾವು ಕೆಲಸ ಪ್ರಾರಂಭ ಮಾಡಬೇಕಾದರೆ ಸುಮಾರು ೩–೪ ತಿಂಗಳು ಬೇಕಾಗುತ್ತದೆ. ಆದರೆ ನಮ್ಮ ಒಂದು ಅಂದಾಜಿನ ಪ್ರಕಾರ ನಾವು ಜೂನ್ ೧೯೮೮ರ ವೇಳೆಗೆ ನೀರು ಕೊಡುವುದಕ್ಕೆ ಆಗುತ್ತದೆಯೆ ಆದ್ದರಿಂದ ಸರ್ಕಾರ ಇಂಥ ಒಂದು ಜಿಜ್ಞಾಸೆಯ ಪರಿಸ್ಥಿಗೆ ಸಿಕ್ಕಿಹಾಕಿ ಕೊಂಡಿತ್ತು. ಒಂದು ವೇಳೆ ಏಜೆನ್ಸಿ ಫಿಕ್ಸ್‌ಮಾಡದೆ ಟಂಡರ್ ಕರೆದರೆ ಇದರಲ್ಲಿ ರಾಜಕೀಯ ಇದೆ ಎಂದು ಹೇಳುತ್ತಾರೆ. ಇದನ್ನೆಲ್ಲಾ ಯೋಚನೆ ಮಾಡಿ ನಾವು ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ನಾವು ಐ.ಡಿ.ಪಿ. ಕಂಟ್ರಾಕ್ಟ್‌ದಾರರನ್ನು ಫಿಕ್ಸ್ ಮಾಡಬೇಕಾದರೂ ಕೂಡ ೪–೫ ತಿಂಗಳಾಗುತ್ತದೆ. ಆಗ ಕೆಲಸ ಪೂರ್ತಿಯಾಗುವುದಿಲ್ಲ. ಇಂತಹ ಒಂದು ಸಮಸ್ಯೆ ಇದೆ. ನಾವು ಒಂದು ದೃಷ್ಟಿಯಿಂದ ನೋಡುವುದಾದರೆ ಪ್ರತಿಯೊಂದು ಹಂತದಲ್ಲಿಯೂ ಕೂಡ ರಾಜಕೀಯ ಭ್ರಷ್ಟರು ಇದ್ದಾರೆಂದು ಸಾರ್ವಜನಿಕ ಕ್ಷೇತ್ರದಲ್ಲಿ ಇದು ಮೂಡಿ ಬಂದಿದೆ. ಆದ್ದರಿಂದ ನಾವು ಇದಕ್ಕೆ ಪ್ರತಿಯೊಬ್ಬರನ್ನು ಜವಾಬ್ದಾರರನ್ನಾಗಿ ಮಾಡುವುದಕ್ಕೆ ಆಗುತ್ತದೆಯೋ ಇವತ್ತು ನಮ್ಮ ಒಂದು ಅಂದಾಜಿನ ಪ್ರಕಾರ ಸುಮಾರು ೬೯ ಕಿಲೋಮೀಟರ್‌ವರೆಗೂ ಚ್ಯಾನಲ್ ಕೆಲಸವನ್ನು ಮಾಡಿ ಮುಗಿಸಿದರೆ ಸುಮಾರು ೫೦ ಸಾವಿರ ಎಕರೆ ಜಮೀನಿಗೆ ನೀರು ಕೊಡುವುದಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಎರಡೂ ಅಪ್ರೋಚ್ ಕೆಲಸಗಳನ್ನು ಕೂಡ ನಾವು ಮಾಡಬೇಕಾಗುತ್ತದೆ. ಅಲ್ಲಿರತಕ್ಕಂಥ ಕಂಟ್ರಾಕ್ಟ್‌ದಾರರಿಗೆ ಆಯಾ ಕೆಲಸಗಳನ್ನು ಕೊಡಬೇಕೆಂದು ಹೇಳಿದರೂ ಕೂಡ ನಾವು ನಮ್ಮ ಒಂದು ಅಂದಾಜಿನ ಪ್ರಕಾರ ಜೂನ್ ೮೮ರ ವೇಳೆಗೆ ಆಭಾಗದ ಜನರಿಗೆ ನೀರು ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಯಾವುದಾದರೊಂದು ನಿಲುವನ್ನು ತೆಗೆದುಕೊಂಡರೆ ಮಾತ್ರ ಆ ೬೯ ಕಿಲೋಮೀಟರ್ ಕೆಲಸ ಮಾಡಿ ನೀರನ್ನು ಆದಷ್ಟುಬೇಗ ಕೊಡುವುದಕ್ಕೆ ಪ್ರಯತ್ನ ಮಾಡಬಹುದು,

ಶ್ರೀ ಮಲ್ಲಿಕಾರ್ಜುನ ಎಸ್. ಖರ್ಗೆ.—ಮಾನ್ಯಮಂತ್ರಿಗಳು ಯಾವುದೇ ನಿಲುವನ್ನು ತೆಗೆದು ಕೊಳ್ಳದೆ ಸುಮ್ಮನೆ ಕುಳಿತುಕೊಂಡರೆ ನೀರು ಕೊಡುವುದಕ್ಕೆ ಆಗುತ್ತದೆಯೋ ? ಅಥವಾ ಟೀಕೆಗಳು ಬರುತ್ತವೆಂದು ಕುಳಿತರೆ ನಿಮ್ಮ ಕೆಲಸವನ್ನು ನೀವು ನಿರ್ವಹಿಸುವುದಕ್ಕೆ ಆಗುತ್ತದೆಯೋ ಆದರೆ ಟೀಕೆಗಳು ಹಿಂದಿನ ಸರ್ಕಾರದ ಬಗ್ಗೆ ಕೂಡ ಇದ್ದವು. ಟೀಕೆ ಮಾಡುವವರು ಯಾವ ರೀತಿ ಇದ್ದರೂ ಕೂಡ ಟೀಕೆ ಮಾಡುತ್ತಾರೆ. ಆದ್ದರಿಂದ ಮಾಡುವ ಕೆಲಸವನ್ನು ಬಿಡುವುದಕ್ಕೆ ಆಗುತ್ತದೆಯೋ ? ಆ ಎಲ್ಲಾ ಟೀಕೆ ಯನ್ನು ಧೈರ್ಯದಿಂದ ಹೆದುರಿಸುವುದು ನಿಮ್ಮ ಕರ್ತವ್ಯ. ಸರ್ಕಾರದವರು ಯಾವುದಾದರೊಂದು ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ ಅಪ್ಪರ್ ಕೃಷ್ಣ ಯೋಜನೆಯು ಚ್ಯಾನಲ್‌ವರ್ಕ್ ಮತ್ತು ಕ್ಯಾನಲ್ ವರ್ಕ್ ಆಗಲಿ ಡಿಸ್ಟ್ರಿಬ್ಯೂಟರಿ ವರ್ಕ್ ಯಾವ ಕೆಲಸ ಕೂಡ ಆಗುವುದಿಲ್ಲ. ಮತ್ತೆ ಕಾಡಾ ಕೆಲಸ ಕೂಡ ಆಗುವುದಿಲ್ಲ. ಆದ್ದರಿಂದ ತಾವು ಸೈಮಲ್‌ಟೇನಿಯಸ್ ಆಗಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ತಮಗೆ ಕೊಟ್ಟಿರತಕ್ಕಂಥ ಹಣದಲ್ಲಿ ಇದುವರೆಗೂ ಎಷ್ಟು ಹಣವನ್ನು ತಾವು ಖರ್ಚು ಮಾಡಿದ್ದೀರಿ, ಇವತ್ತು ಅಲ್ಲಿ ಸುಮಾರು ಏಳೆಂಟು ಜನ ಕಂಟ್ರಾಕ್ಟ್‌ದಾರರು ಕ್ಲೈಮ್ ಮಾಡಿದ್ದಾರೆ. ಅವರು ಕಾನೂನು ರೀತ್ಯ ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಆದ್ದರಿಂದ ನೀವು ಈ ಎಲ್ಲಾ ತೊಂದರೆ ಗಳನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತೀರಿ ಎಂಬುದು ಬಹಳ ಮುಖ್ಯ. ಟೀಕೆ ಮಾಡುವವರನ್ನು ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ,

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ನಾನು ಯಾರ ಒಂದು ಟೀಕೆಗೂ ಕೂಡ ಹೆದರುವುದಿಲ್ಲ. ಅವರ ಟೀಕೆಗೆ ಹೆದರಿ ನಾನು ನನ್ನ ಕರ್ತವ್ಯ ಮಾಡದೆ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರ ಅಗತ್ಯ ಕೂಡ ನನಗೆ ಇಲ್ಲ. ಆದರೆ ೩೫ ಕಿಲೋಮೀಟರ್ ವರೆಗೂ ಕೆಲಸ ಮಾಡಿ ಮುಗಿಸಿದರೆ ಸುಮಾರು ೨೮ ಸಾವಿರ ಏಕರೆಗೆ ನೀರು ಕೊಡಬಹುದು. ಮತ್ತೆ ಗುಂಡೇಗೆರೆ ಚ್ಯಾನಲ್ ಕೆಲಸವನ್ನು ಸುಮಾರು ೪೯ ಮೀಟರ್ ವರೆಗೆ ಮಾಡಿದರೆ ಶಹಬಾದ್‌ವರೆಗೂ ನೀರು ಕೊಡಬಹುದು. ಆದರೆ ಅಲ್ಲಿ ಕಂಟ್ರಾಕ್ಟ್‌ದಾರರ ಸಮಸ್ಯ ಪ್ರಾರಂಭವಾಗಿದೆ. ಎಲ್ಲಿಯವರೆಗೆ ನಾವು ಈ ಕೆಲಸವನ್ನು ಮುಗಿಸುವುದಕ್ಕೆ ಆಗುವುದಿಲ್ಲವೊ ಅಲ್ಲಿಯ ವರೆಗೆ ನಾವು ಸುಮಾರು ೫೦ ಸಾವಿರ ಏಕರೆಗಳಿಗೆ ನೀರು ಕೊಡುವುದಕ್ಕೆ ಆಗುವುದಿಲ್ಲ. ಇಷ್ಟು ಕೆಲಸ ಗಳನ್ನು ನಾವು ಪೂರ್ತಿ ಮಾಡಬೇಕಾದರೆ ಸುಮಾರು ೫೦ ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ, ಎರಡೂ ಕ್ಯಾನಾಲ್‌ಗಳು ಅಪ್ರೋಚ್ ಇರುವುದರಿಂದ ನಾವು ಮಧ್ಯೆ ಮಧ್ಯೆ ಕ್ಯಾನಾಲ್ ಕೆಲಸ ಮಾಡಿದರೆ ಸುಮಾರು ೨೯ ಕಿಲೋಮೀಟರ್ ದೂರದಿಂದ ೪೯ ಕಿಲೋಮೀಟರ್‌ವರೆಗೆ ಕೆಲಸ ಮುಗಿಸಿದಂತೆ ಆಗುತ್ತದೆ ಮತ್ತೆ ಬಡ್ಜೆಟ್‌ನಲ್ಲಿ ನಾರಾಯಣಪುರ ಡ್ಯಾಮ್‌ಗೆ ಹಣವನ್ನು ಪೂರ್ತಿಯಾಗಿ ವ್ಯವಸ್ಥೆ ಮಾಡಲಾಗಿದೆ. ಆ ಎಲ್ಲಾ ಹಣವನ್ನು ಉಪಯೋಗಿಸಿಕೊಂಡು ಡ್ಯಾಮ್ ಪೂರ್ತಿ ಮಾಡಲಾಗುತ್ತದೆಂದು ನಾನು ಸಭೆಯ ಮುಂದೆ ಹೇಳಬಯಸುತ್ತೇನೆ. ನಾವು ಇವತ್ತು ಯಾವುದಾದರೊಂದು ಜವಾಬ್ದಾರಿಯನ್ನು ತೆಗೆದು ಕೊಂಡು ಅದರ ಮೇಲೆ ನಾವೂ ಕೂಡ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಬಾಪೂಗೌಡ ದರ್ಶನಾಪುರ್‌ರವರು ಮತ್ತು ಶ್ರೀಮಾನ್ ಧರ್ಮಸಿಂಗ್‌ರವರು ನಿಮ್ಮ ಆತ್ಮೀಯಸ್ನೇಹಿತರಿದ್ದಾರೆ. ಆದ್ದರಿಂದ ಆ ಭಾಗದ ಕೆಲಸವನ್ನು ತಾವು ಬೇಗ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಒಂದು ಮಾತನ್ನು ಮಾತ್ರ ಮಾನ್ಯ ಸದಸ್ಯರಿಗೆ ಹೇಳುವುದಾದರೆ ೧೯೭೮–೭೯ನೇ ಸಾಲಿನಲ್ಲಿ ೨೫.೮೧ ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಟ್ಟಿದ್ದರೂ ಕೂಡ ಅದರಲ್ಲಿ ಖರ್ಚು ಮಾಡಿರುವುದು ೨೪.೨೭ ಲಕ್ಷ ರೂಪಾಯಿಗಳು. ಆದರೆ ಎಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಷ್ಟು ಪ್ರಮಾಣದ ಹಣ ಖರ್ಚು ಮಾಡಲಿಲ್ಲ. ೧೯೭೯–೮೦ನೇ ಸಾಲಿನ ೪೯.೭೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಸಹ ಆದರಲ್ಲಿ ೩೭.೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಮತ್ತೆ ೧೯೮೦–೮೧ನೇ ಸಾಲಿನಲ್ಲಿ ೫೨.೫೪ ಲಕ್ಷ ರೂಪಾಯಿಗಳನ್ನು ಒದಗಿಸಿದ್ದ ಇದರಲ್ಲಿ ಖರ್ಚು ಮಾಡಿರತಕ್ಕಂಥದ್ದು ಮಾತ್ರ ೪೯.೮೨ ಲಕ್ಷ ರೂಪಾಯಿಗಳು.

ಶ್ರೀ ಬಾಪೂಗೌಡ ದರ್ಶನಾಪುರ್,—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಅಪ್ಪರ್ ಕೃಷ್ಣ ಯೋಜನೆಯ ಬಗ್ಗೆ ಉತ್ತರ ಕೊಡುತ್ತಾ ಕೆಲವಾರು ಪ್ರಶ್ನೆಗಳು ಕೇಳಿವರು. ಅದಕ್ಕೆ ಮಾನ್ಯಮಂತ್ರಿಗಳು ಉತ್ತರ ಸಹ ಕೊಟ್ಟಿದ್ದಾರೆ, ಆದರೆ ನನ್ನ ಅಭಿಪ್ರಾಯಲ್ಲಿ ನಾನು ಅವರನ್ನು ಕೆಲವಾರು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಅದು ಏನೆಂದರೆ ೧೯೮೩ರವರೆಗೆ ೧೦೭ ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕಿ

ನಿಂದ ಒದಗಿಸಿಕೊಟ್ಟಿದ್ದಾರೆ. ಅದರ ಜೊತೆಗೆ ರಾಜ್ಯ ಸರ್ಕಾರದವರು ಕೊಡುವ ಪಾಲುಬೇರೆ ಇರುತ್ತದೆ ಆದರೆ ರಾಜ್ಯ ಸರ್ಕಾರದ ಮತ್ತು ವಿಶ್ವಬ್ಯಾಂಕಿನವರು ಒಂದು ಒಪ್ಪಂದದ ಪ್ರಕಾರ ೧೯೮೩ನೇ ಜೂನ್‌ಗೆ ಆ ಕೆಲಸ ಮುಕ್ತಾಯವಾಗಬೇಕಾಗಿತ್ತು. ಮತ್ತು ೧೯೮೧ನೇ ಇಸವಿಯಿಂದಲೇ ಮುಗಿಸಿದ್ದರೆ ಸುಮಾರು ೭೫ ಸಾವಿರ ಎಕರೆಗೆ ನೀರು ಕೊಡಬಹುದಾಗಿತ್ತು. ಆದರೆ ಆ ಕೆಲಸವನ್ನು ಹಿಂದಿನ ಸರ್ಕಾರದವರು ಮಾಡಲಿಲ್ಲ. ಇದರಲ್ಲಿ ಸರ್ಕಾರದ ಆಲಸ್ಯ ಮನೋಭಾವ ಇದೆಯೇ ಅಥವಾ ಅಧಿಕಾರಿಗಳ ಆಲಸ್ಯಮನೋಭಾವನೆ ಇದೆಯೇ ಎಂಬುದು ಗೊತ್ತಾಗಬೇಕು,

೧೨-೦೦ ಮಧ್ಯಾಹ್ನ

ಶ್ರೀಮಾನ್ ದೇವೇಗೌಡರು ಬಂದಾಗ ಆ ಭಾಗಕ್ಕೆ ಭೇಟಿಕೊಟ್ಟರು. ಇವತ್ತು ೧೯೮೮ ಜೂನ್‌ಗೆ ೬೦ ಸಾವಿರ ಹೆಕ್ಟೇರ್‌ಗೆ ನೀರು ಕೊಡುತ್ತೇವೆ ಎನ್ನುತಕ್ಕಂಥ ಮಾತನ್ನು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಕೊಡುತ್ತೇನೆ ಎಂದು ಅವರು ಹೇಳಿದ್ದಾರೋ ಅದು ಅವರಿಗೇ ಗೊತ್ತು. ೫೦ ಕೋಟಿ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ. ಇದು ರಾಜನಕಲ್ಲು ಚ್ಯಾನಲ್ ಶಹಪುರ ಜೇವರ್ಗಿಗೆ ಎರಡನೇ ಹಂತದಲ್ಲಿ ಬರುತ್ತದೆ. ಇದಕ್ಕೆ ನೀರು ಏನು ಕೊಡಬೇಕಾಗಿದೆಯೋ ಅದನ್ನು ಕೊಡಲಿಕ್ಕೆ ಅವರಲ್ಲಿ ಎಷ್ಟು ಶಕ್ತಿ ಇದೆ ? ರಾಜನಕಲ್ಲು ಚ್ಯಾನಲ್‌ನಲ್ಲಿ ೭೫ ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳುತ್ತಿದ್ದಾರೆ. ಬಾಕಿ ನೀರು ಏನು ಕೊಡಬೇಕಾಗಿತ್ತು, ಅದಕ್ಕೆ ಹಣ ಎಲ್ಲಿಂದ ಕೊಡುತ್ತೀರಿ ? ಹಿಂದಿನ ಸರ್ಕಾರದವರು ಇಟ್ಟ ತಪ್ಪು ಹೆಜ್ಜೆಯಿಂದಾಗಿ ಇವತ್ತು ಏನಾಗಿದೆ ಎಂದರೆ ಇದು ೨೧ ಲಕ್ಷ ಎಕರೆಗೆ ನೀರು ಕೊಡಬೇಕೆನ್ನುವ ಯೋಜನೆ ಇದೆ. ಆದರೆ ಈ ಯೋಜನೆಯು ಕೆಲಸ ಯಾವ ರೀತಿಯಿಂದ ಸಾಗಿದೆ ಎಂದರೆ ಇದಕ್ಕೆ ಮಾಡಬೇಕಾದ ಖರ್ಚಿನ ಪ್ರಮಾಣ ಜಾಸ್ತಿಯಾಗುತ್ತದೆ. ವಿಶ್ವಬ್ಯಾಂಕ್‌ನವರು ಮುಂದೆ ಕೊಡಬೇಕಾದ ೧೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ನಿಧಾನಗತಿಯಾದುದರಿಂದ ಇವತ್ತು ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಸರಿಯಾದ ಹೆಜ್ಜೆಯನ್ನು ಇನ್ನೂ ಕೂಡ ಶ್ರೀಮಾನ್ ದೇವೇಗೌಡರು ಇಡುತ್ತಾರೆ ಎನ್ನುವ ಭರವಸೆ ನನಗೆ ಇಲ್ಲ. ಏಕೆಂದರೆ ಈ ಪ್ರಾಜೆಕ್ಟ್ ಸಂಬಂಧವಾಗಿ ಕೂಲಂಕಷ ಚರ್ಚೆಯಾಗಬೇಕಾದರೆ ಇನ್ನೂ ಎರಡೂವರೆ ಮೂರು ತಾಸಾದರೂ ಬೇಕಾಗುತ್ತದೆ. ಇದೊಂದು ಕರ್ಮಕಾಂಡದ ಕತೆಯಾಗಿದೆ. ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಇದರ ಬಗ್ಗೆ ಪ್ರಶ್ನೆ ಮಾಡತಕ್ಕಂಥ ಅವಕಾಶವನ್ನು ಕೊಡಬೇಕು. ಮಾನ್ಯ ದೇವೇಗೌಡರು ತಮ್ಮ ಕಾಲಕ್ಕೆ ೧೯೮೫ಕ್ಕೆ ಎರಡೂವರೆ ಲಕ್ಷ ಹೆಕ್ಟೇರ್‌ಗೆ ಕೊಟ್ಟರೂ ಸಾಕು. ಅವರು ೧೯೮೮ಕ್ಕೆ ಕೊಡುವುದು ಬೇಡ. ಈ ಕೆಲಸ ಮಾಡತಕ್ಕಂಥ ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದೀರಿ, ಇದರಲ್ಲಿ ಏನಾದರೂ ಕೊರತೆಯಾದರೆ ಅದನ್ನು ತುಂಬಿಸತಕ್ಕ ಏನಾದರೂ ಪ್ರಯತ್ನ ಮಾಡಿ ಇದನ್ನು ಮಾಡುತ್ತೇವೆ ಎನ್ನತಕ್ಕಂಥ ಸ್ಪಷ್ಟವಾದ ಭರವಸೆಯನ್ನು ಅವರು ಈ ಸಂದರ್ಭದಲ್ಲಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ಎರಡೂವರೆ ತಾಸು ಚರ್ಚೆಗಾದರೂ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ಯಾವಾಗ ಬೇಕಾದರೂ ಚರ್ಚೆ ಮಾಡೋಣ.

ಶ್ರೀ ಧರ್ಮಸಿಂಗ್.—ಸಾಕಷ್ಟು ಚರ್ಚೆಯಾಗದೇ ಇದರಲ್ಲಿ ಸರಿಯಾದ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಎರಡು ತಾಸು ಕಾಲಾವಕಾಶವನ್ನು ತಾವು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಎರಡು ಗಂಟೆ ಅಲ್ಲ ಮೂರು ಗಂಟೆ ಕಾಲ ಚರ್ಚೆ ಮಾಡಿದರೂ ಕೂಡ ಇದಕ್ಕೆ ಪರಿಹಾರ ಸಿಕ್ಕುವುದಿಲ್ಲ. ತಾವು ತಪ್ಪು ಮಾಡಿದ್ದೀರಿ, ಅಥವಾ ನಾವು ತಪ್ಪು ಮಾಡಿದ್ದೇವೆ ಎಂದು ಹೇಳುತ್ತಾ ಹೋದರೆ, ಈ ವಾದವಿವಾದದಲ್ಲಿ.........

ಶ್ರೀ ಧರ್ಮಸಿಂಗ್.—ಯಾವುದಾದರೊಂದು ನಿರ್ಣಯಕ್ಕೆ ಬರಲೇಬೇಕಾಗುತ್ತದೆ. ಶ್ರೀಮಾನ್ ಬಾಪೂಗೌಡರು ಹೇಳಿದ ಹಾಗೆ ಚರ್ಚೆಯಿಂದ ಮಾತ್ರವೇ ಇದರ ಬಗ್ಗೆ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕೃಷ್ಣಾ ಮೇಲ್ದಂಡೆ ಯೋಜನೆಯ ವಿಚಾರದಲ್ಲಿ ಅನೇಕ ಊಹಾಪೋಹಗಳು ಎದ್ದಿವೆ. ಕಳೆದ ಏಳು ತಿಂಗಳಿಂದ ಸಮಗ್ರವಾಗಿ ಅಭ್ಯಾಸ ಮಾಡಿದ್ದೀರಿ, ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೀರಿ, ಸ್ಥಳ ವೀಕ್ಷಣೆ ಮಾಡಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ ಯಾವ ಕಾರಣಗಳಿಂದ ಈ ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸಗಳಿಗೆ ಅಡೆತಡೆಗಳಾಗಿವೆ ಎಂದು ತಾವು ಸ್ಪಷ್ಟವಾಗಿ ಹೇಳಿಬಿಟ್ಟರೆ ಎಲ್ಲಾ ಸದಸ್ಯರಿಗೂ ಸರಿಯಾಗಿ ಗೊತ್ತಾಗಿಬಿಡುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕಾರಣ ಏನು ಗೊತ್ತಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಹೇಳಿಬಿಡಿ. ಅಧಿಕಾರಿಗಳಿಂದ ಆಯಿತೋ, ಅಥವಾ ಕಂಟ್ರಾಕ್ಟರ್‌ದಾರರಿಂದ ಆಯಿತೋ ?

ಶ್ರೀ ಎಚ್. ಡಿ. ದೇವೇಗೌಡ.—ಒಬ್ಬ ಮಂತ್ರಿಯಾಗಿ ನಾನು ಹೇಳಬಹುದು. ಆದರೆ ಅಧಿಕಾರಿಗಳ ಬಗ್ಗೆ ಜವಾಬ್ದಾರಿ ಕೊಡಲಿಕ್ಕೆ ನಾನು ಹೋಗುವುದಿಲ್ಲ.

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ಬರೇ ಒಂದು ವಿಷಯವಾಗಿ ಚರ್ಚೆ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಇದಕ್ಕೆ ಕಾರಣ ಅಧಿಕಾರಿಗಳೆಂದು ಏಕೆ ಹೇಳಬೇಕು ? ನಾನು ತಪ್ಪು ಮಾಡಿದ್ದರೆ, ನನ್ನ ಕಾಲದಲ್ಲಿ ತಪ್ಪು ಆಗಿದ್ದರೆ ನಾನು ಆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ರಾಜನಕಲ್ಲು ಚಾನಲ್‌ನಲ್ಲಿ ಎರಡು ನೂರು ಕಿಲೋಮೀಟರ್ ಮೇಲುಗಡೆ, ಎರಡು ನೂರು ಕಿಲೋಮೀಟರ್ ಕೆಳಗಡೆ ಫಿಕ್ಸ್ ಮಾಡಿರುವುದಾದರೆ ಅದಕ್ಕೆ ಸರ್ಕಾರ ಜವಾಬ್ದಾರರು. ಯಾವುದೇ ಅಧಿಕಾರಿ ತಪ್ಪು ಮಾಡಿದ್ದರೂ, Ultimately, the Government is responsible...... He is only a subordinate. He should work according to the desire of the Government.

(INTERRUPTIONS)

MR. DEPUTY SPEAKER.—I will not allow any interference in the reply of the Hon. Minister.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅಧಿಕಾರಿಗಳ ಮೇಲೆ ಕಂಟ್ರೋಲ್ ಇಟ್ಟುಕೊಳ್ಳದಿದ್ದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹಿಂದೆ ಬೀಳುವುದಿಲ್ಲ. ಈ ಚರ್ಚೆಯಿಂದ ನಮಗೆ ಸಮಸ್ಯೆಗೆ ಪರಿಹಾರವಂತೂ ಸಿಕ್ಕುವುದಿಲ್ಲ. ಇದರ ಬಗ್ಗೆ ಪಕ್ಷಾತೀತವಾಗಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇದರಲ್ಲಿ ರಾಜಕೀಯ ಬೆರೆಸಲಿಕ್ಕೆ ಹೋಗಬೇಡಿ. ಇದರಿಂದ ಯಾರಿಗೂ ಲಾಭವಾಗುವುದಿಲ್ಲ. ಆದ್ದರಿಂದ ಹಿಂದಿನ ಸರ್ಕಾರದವರು ತಪ್ಪು ಮಾಡಿದ್ದಾರೆ, ನಾವು ಎಲ್ಲಾ ಸರಿ ಮಾಡುತ್ತೇವೆ ಎಂದು ಹೇಳುವಾಗ ನಡೆದಿರತಕ್ಕಂಥ ವಿಷಯಗಳ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಸರಿ ಮಾಡುವ ಬಗ್ಗೆ ಯೋಚನೆ ಮಾಡೋಣ. ಇವತ್ತು ೬೯ನೇ ಕಿಲೋಮೀಟರ್‌ವರೆಗೆ ನೀರು ತಲುಪಬೇಕಾದರೆ ೫೦ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ವರ್ಲ್ಡ್ ಬ್ಯಾಂಕಿನವರು ಕೊಟ್ಟ ಹಣವನ್ನು ಖರ್ಚು ಮಾಡಿ ಆದ ಮೇಲೆ ಆ ಹಣವನ್ನು ವಾಪಾಸ್ಸು ಮಾಡುತ್ತಾರೆ. ಒಟ್ಟು ಮರುಪಾವತಿಯಾಗಿರುವುದು ೫೦ ಕೋಟಿ ಮಾತ್ರ. ೧೨೭ ಕೋಟಿಯಲ್ಲಿ ೫೦ ಕೋಟಿ ಮಾತ್ರ ಮರುಪಾವತಿಯಾಗಿದೆ. ೧೯೮೨-೮೩ರಲ್ಲಿ ೫೯ ಕೋಟಿ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಇವತ್ತು ಈ ಒಂದು ಪರಿಸ್ಥಿತಿ ಏನಿದೆ, ವಾಸ್ತವಾಂಶ ಏನಿದೆ ಅದನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ದೇವೇಗೌಡರೇ, ನಿಮ್ಮ ಕಾಲದಲ್ಲಿ ಕೆಲಸ ನಿಂತುಹೋಗಿದೆ.—ಎನ್ನುವ ವಾದವಿದೆ. ಜನವರಿಯಿಂದ ಮಾರ್ಚಿ ೧೯೮೩ರವರೆಗೆ ೧೩ ಕೋಟಿ ೩೭ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ನಾವು ಅಧಿಕಾರ ವಹಿಸಿಕೊಂಡಿದ್ದು ಜನವರಿ ತಿಂಗಳಲ್ಲಿ. ಮಾರ್ಚಿ ೧೯೮೩ರಿಂದ ಜೂನ್ ೧೯೮೩ರವರೆಗೆ ಖರ್ಚು ಮಾಡಿದ್ದರ ಅಂಕಿಅಂಶಗಳು ಇನ್ನೂ ಬಂದಿಲ್ಲ. ಒಟ್ಟು ೧೦ ಕೋಟಿ ೭೪ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ.

ಶ್ರೀ ಧರ್ಮಸಿಂಗ್.—ಯಾವ್ಯಾವ ಐಟಮ್ ಮೇಲೆ ಖರ್ಚು ಮಾಡಲಾಗಿದೆಯೆಂಬುದನ್ನು ತಿಳಿಸಿ ;

ಶ್ರೀ ಎಚ್. ಡಿ. ದೇವೇಗೌಡ.—ಅನಾವಶ್ಯಕವಾಗಿ ಖರ್ಚು ಮಾಡಿದರೆ ಅದು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಬರುತ್ತದೆ. ಯಾವ ಕಿಲೋಮೀಟರ್‌ವರೆಗೆ ಖರ್ಚು ಆಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬೇಕಾದರೆ ತರಿಸಿಕೊಳ್ಳುತ್ತೇನೆ. ಅನಾವಶ್ಯಕವಾಗಿ ವೆಚ್ಚ ಮಾಡಿದ್ದೇವೆ ಎಂದರೆ ತಾವು ನೋಡಬಹುದು.

ಶ್ರೀ ಎಂ. ವೀರಪ್ಪಮೊಯ್ಲಿ.—ಒಂದನೇ ತಾರೀಕು ಏಪ್ರಿಲ್‌ನಿಂದ ಜುಲೈವರೆಗೆ ಹತ್ತು ಕೋಟಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಹತ್ತು ಕೋಟಿಯಲ್ಲಿ ಕೆಲಸಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಮತ್ತು ಸಂಬಳಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಸಂಬಳದ್ದು ಬೇರೆ ವಿಷಯ. ಒಟ್ಟು ಅಂದಾಜುವೆಚ್ಚದಲ್ಲಿ ೧೨ ಪರ್ಸೆಂಟ್ ಬಿಲ್ ಪಾವತಿಗೆ ಹೋಗುತ್ತದೆ. ಕೆಲವು ಕಡೆ ೧೩ ರಿಂದ ೧೪ ಪರ್ಸೆಂಟ್‌ವರೆಗೆ ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಖರ್ಚು ಆಗಬೇಕಾದದ್ದು ೧೯೮೧–೮೨ವರೆಗೆ ಮಾತ್ರ ಹೇಳಿದ್ದೀರಿ. ೧೯೮೩ ರಿಂದ ಈ ದಿನದ್ದು ಹೇಳಲಿಲ್ಲವಲ್ಲ ?

ಉಪಾಧ್ಯಕ್ಷರು.—ಅವರು ಉತ್ತರ ಕೊಟ್ಟ ಮೇಲೆ ನಿಮಗೆ ಅವಕಾಶ ದೊರೆಯುತ್ತದಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವತ್ತು ಖರ್ಚು ಆಗಿರುವುದು ಎಷ್ಟು ಎಂದು ನಾನು ಕೇಳಿರುವುದು.

ಉಪಾಧ್ಯಕ್ಷರು.—ಅದನ್ನು ಗುರ್ತು ಹಾಕಿಟ್ಟುಕೊಂಡು, ಮಂತ್ರಿಗಳು ಹೇಳಿದ ಮೇಲೆ ಕೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಕೇಳುವುದಕ್ಕೂ ಅವಕಾಶ ಇಲ್ಲವೆ ? ಇದಾವ ಲೆಕ್ಕಾಚಾರ ?

ಶ್ರೀ ಎಚ್. ಡಿ. ದೇವೇಗೌಡ.—೧೯೮೨–೮೩ರಲ್ಲಿ ೫೯ ಕೋಟಿ ಹಣ ಖರ್ಚು ಮಾಡಬೇಕಾಗಿತ್ತು. ಖರ್ಚು ಮಾಡಿರತಕ್ಕಂಥಾದ್ದು ೪೦ ಕೋಟಿ ೪೪ ಲಕ್ಷ ಎಂದು ಹೇಳಿದ್ದೇನೆ. ಈ ವರ್ಷ ನಾವು ಬಡ್ಜೆಟ್ಟಿನಲ್ಲಿ ಪೂರ್ತಿಯಾಗಿ ಹಣವನ್ನು ಖರ್ಚು ಮಾಡಬೇಕೆಂದು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಮಾರ್ಚ್ ೩೧ರೊಳಗಡೆ ಸಂಪೂರ್ಣವಾಗಿ ಹಣವನ್ನು ಖರ್ಚು ಮಾಡುತ್ತೇವೆ.

೧೯೮೧–೮೨ರಲ್ಲಿ ೫೪.೧೮ ಕೋಟಿ ಹಣವನ್ನು ಖರ್ಚು ಮಾಡಬೇಕಾಗಿತ್ತು. ಆದರೆ ಖರ್ಚು ಮಾಡಿದ್ದು ೪೫.೩೫ ಕೋಟಿ ರೂಪಾಯಿಗಳು ಮಾತ್ರ. ಆದ್ದರಿಂದ ಈ ವಿಷಯದಲ್ಲಿ ಯಾರ ಮನಸ್ಸಿನಲ್ಲೂ ಯಾವುದೇ ಸಂಶಯ ಬೇಕಾಗಿಲ್ಲ ? ಇದರ ಬಗ್ಗೆ ಒಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಈ ಸಮಸ್ಯೆಯ ತೀವ್ರತೆ ಅಥವಾ ಈ ಸಮಸ್ಯೆಯ ಗಾತ್ರ ಏನಿದೆ, ಅದಕ್ಕೆ ತಕ್ಕಂತ ರೀತಿಯಲ್ಲಿ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಸಾರಿ ಇದಕ್ಕಾಗಿ ಒದಗಿಸಿರುವ ೫೨ ಕೋಟಿ ಹಣ, ಅದಕ್ಕೂ ಸ್ವಲ್ಪ ಹೆಚ್ಚು ಹಣವನ್ನು, ಖರ್ಚು ಮಾಡುತ್ತೇವೆ. ಈ ಪ್ರಾಜೆಕ್ಟಿನ ಕೆಲಸವನ್ನು ಮುಗಿಸುವುದಕ್ಕೆ ಹಣವನ್ನು ಹೇಗೆ ಒದಗಿಸಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ಈ ಯೋಜನೆಯ ಒಂದನೇ ಹಂತಕ್ಕೆ ಇವತ್ತಿನ ರೇಟಿನ ಪ್ರಕಾರ ರೂ. ೧,೦೫೯ ಕೋಟಿ ಬೇಕಾಗುತ್ತದೆ. ಆದರೆ ನಮಗೆ ವಿಶ್ವ ಬ್ಯಾಂಕಿನಿಂದ ಮರುಪಾವತಿಯಾಗುವುದು ೧೧೭ ಕೋಟಿ ರೂಪಾಯಿಗಳು ಮಾತ್ರ ಒಂದಕ್ಕೊಂದೂ ಸಂಬಂಧವಿಲ್ಲ. ನಾವು ಖರ್ಚು ಮಾಡಬೇಕಾಗುವ ಹಣದಲ್ಲಿ ೧೦ ಪರ್ಸೆಂಟ್‌ನಷ್ಟು ಕೂಡ ವಿಶ್ವ ಬ್ಯಾಂಕಿನಿಂದ ಮರುಪಾವತಿಯಾಗುವುದಿಲ್ಲ. ಇನ್ನುಳಿದ ೯೦ ಪರ್ಸೆಂಟ್ ಹಣವನ್ನು ರೂಢಿಸಿಕೊಳ್ಳಬೇಕೆಂದು ಹೇಳಿದರೆ, ಇಂತಹ ಒಂದು ಜ್ವಲಂತ ಸಮಸ್ಯೆಗೆ ರಾಜ್ಯದ ಸಂಪನ್ಮೂಲವನ್ನು ರೂಢಿಸಿಕೊಳ್ಳದಿದ್ದರೆ, ನಮ್ಮಲ್ಲಿರುವ ಜಲ ಸಂಪತ್ತನ್ನು ಉಪಯೋಗ ಮಾಡುವುದಕ್ಕೆ ಇನ್ನೂ ೪೦ ವರ್ಷಗಳಾದರೂ ಸಾಧ್ಯ ಇಲ್ಲ. ಇದು ನನ್ನ ಖಚಿತವಾದ ಅಭಿಪ್ರಾಯ. ಇದು ಒಂದು ನಿರ್ವಿವಾದ. ಇದರಲ್ಲಿ ನಾನು ರಾಜಕೀಯ ಬೆರಸುವುದಕ್ಕೆ ಹೋಗುವುದಿಲ್ಲ. ಈ ವಿಷಯದಲ್ಲಿ ನಾವೆಲ್ಲರೂ ಕುಳಿತು ಮಾತನಾಡಬೇಕಾಗಿದೆ. ಈ ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕಾಗಿದೆ. ೪೦ ವರ್ಷಗಳಾದರೂ ಮಾಡುವುದಕ್ಕಾಗುವುದಿಲ್ಲ. ಈ ಸಾರಿ ಇನ್ನೂ ಒಂದೂ ಎರಡು ಕೋಟಿ ಹಣವನ್ನು ಇದಕ್ಕಾಗಿ ಒದಗಿಸಬಹುದು. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವು ಪ್ರತಿ ವರ್ಷ ಕನಿಷ್ಟಪಕ್ಷ ೨೫೦ ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಖರ್ಚು ಮಾಡತಕ್ಕಂತಹ ರೀತಿಯಲ್ಲಿ ಏನಾದರೂ ನಮ್ಮ ಕಾರ್ಯಕ್ರಮವನ್ನು ರೂಢಿಸಿಕೊಳ್ಳದಿದ್ದರೆ, ಇದಕ್ಕೆ ಪರಿಹಾರ ಸಿಕ್ಕುವುದಿಲ್ಲ. ನಾವು ಎಷ್ಟೇ ಚರ್ಚೆ ಮಾಡಬಹುದು. ಅದರ ಬಗ್ಗೆ ನಾವು ಎಷ್ಟೇ ತಲೆಕೆಡಿಸಿಕೊಂಡು ಯೋಜನೆ ಮಾಡಿದರೂ ಕೂಡ,

ಈ ಸಮಸ್ಯೆಗೆ ಉತ್ತರ ಸಿಕ್ಕುವುದಿಲ್ಲ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಈ ದಿಸೆಯಲ್ಲಿ ಯಾವುದೇ ರೀತಿಯ ಅಸಡ್ಡೆಯನ್ನು ತೋರಿಸುವುದಕ್ಕಾಗುವುದಿಲ್ಲ. ರಾಜನ ಕಲ್ ಚಾನಲ್ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಿ ಜೂನ್ ತಿಂಗಳಲ್ಲಿ ನೀರನ್ನು ಕೊಡಬೇಕು. ಇದಕ್ಕೆ ಯಾರೇ ಟೀಕೆ ಮಾಡಿದರೂ ಚಿಂತೆಯಿಲ್ಲ, ಯಾರೇ ಏನೇ ಇದರ ಬಗ್ಗೆ ಮಾತನಾಡಿದರೂ ಚಿಂತೆಯಿಲ್ಲ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ೬೩ನೇ ಕಿಲೋಮೀಟರ್‌ವರೆಗೆ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಕರ್ತವ್ಯದಿಂದ ನುಣಿಚಿಕೊಳ್ಳುವಂತಹ ಪ್ರಯತ್ನ ಮಾಡುವುದಿಲ್ಲವೆಂಬ ಆಶ್ವಾಸನೆಯನ್ನು ಈ ಸದನದಲ್ಲಿ ಕೊಡುತ್ತೇನೆ. ಟೀಕೆ ಇದ್ದೇ ಇರುತ್ತದೆ. ಟೀಕೆ ಎಲ್ಲಿ ಇಲ್ಲ? ಆ ಟೀಕೆಯ ಬಗ್ಗೆ ಅಂಜಿಕೊಂಡರೆ ನಾವು ರಾಜಕಾರಣ ಮಾಡುವುದಕ್ಕಾಗುವುದಿಲ್ಲ.

ಐ. ಡಿ. ಬಿ. ಕಂಟ್ರಾಕ್ಟ್‌ದಾರರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ೬೯ನೇ ಕಿಲೋಮೀಟರ್‌ನ ಮುಂದೆ ಇದ್ದಾರೆ. ಅವರು ಸುಮಾರು ೨೮–೨೯ ಜನ ಇದ್ದಾರೆ ಅಂತ ಕಾಣುತ್ತದೆ. ಭೀಮರಾಯನ ಗುಡಿ ಹಿಂದೆ ಕೃಷ್ಣಮೂರ್ತಿ ಅಂತ ಒಬ್ಬರು ಇದ್ದಾರೆ. ಅದರ ಬಗ್ಗೆಯೂ ಪರಿಶೀಲನೆ ಮಾಡಿದ್ದೇನೆ. ನಾವು ಏನು ಕೆಲಸವನ್ನು ಕೊಟ್ಟಿದ್ದೆವು, ಅದರ ಮೇಲೆ ೧೮ ಕೋಟಿ ರೂಪಾಯಿಗಳನ್ನು ಅವರು ಇವತ್ತು ಕೇಳುತ್ತಿದ್ದಾರೆ. ಇವರ ಬಗ್ಗೆ ಒಂದು ನಿದರ್ಶನವನ್ನು ಕೊಟ್ಟರೆ ಒಳ್ಳೆಯದು ಎಂದು ಕಾಣುತ್ತದೆ. ನಾನು ಅಷ್ಟನ್ನು ಕೊಡಲಿಲ್ಲ. ಅದಕ್ಕೆ ನಾನು ಒಪ್ಪಲಿಲ್ಲ. ತಾವು ಕೂಡ ಆ ಒಂದು ಸಭೆಯಲ್ಲಿ ಭಾಗವಹಿಸಿದ್ದೀರಿ. ಚರ್ಚೆ ಮಾಡಿದ್ದೀರಿ ೪೦ ಲಕ್ಷ ರೂಪಾಯಿಂನ ಒಂದು ಕೆಲಸಕ್ಕೆ ಇವತ್ತು ಎರಡೂವರೆ ಕೋಟಿ ಹಣವನ್ನು ಆರ್‌ಬಿಟ್ರೇಷನ್‌ನಲ್ಲಿ ಕ್ಲೈಮ್ ಮಾಡಿದ್ದಾರೆ. ಹೇಗೆ ಇದನ್ನು ಒಪ್ಪಿಕೊಳ್ಳಬೇಕು? ನಿಜವಾಗಿ ಕೆಲಸ ನಿಂತು ಹೋಗಿದೆ; ಅಂದ ಮಾತ್ರಕ್ಕೆ ಕೇಳಿದ್ದಷ್ಟು ಹಣವನ್ನು ಕೊಡುವುದಕ್ಕಾಗುತ್ತದೆಯೇ? ಆರ್‌ಬಿಟ್ರೇಷನ್‌ನ್ನು ಸಾಕಷ್ಟು ತ್ರೀವವಾಗಿ ತೆಗೆದುಕೊಂಡಿದ್ದೇವೆ. ೪೦ ಲಕ್ಷ ರೂಪಾಯಿಯ ಕೆಲಸಕ್ಕೆ ಎರಡೂವರೆ ಕೋಟಿ ರೂಪಾಯಿಗಳನ್ನು ಆರ್‌ಬಿಟ್ರೇಷನ್‌ನಲ್ಲಿ ಕೇಳುವುದಾದರೆ, ಹೇಗೆ ಇದಕ್ಕೆ ಒಪ್ಪಿಕೊಳ್ಳಬೇಕು? ಇದನ್ನು ತಾವು ದಯಮಾಡಿ ಹೇಳಬೇಕು. ಮತ್ತೆ ಸಿಕ್ಕಾ ಸಿಕ್ಕಾ ಎಂಬ ಕಂಟ್ರಾಕ್ಟ್‌ದಾರನನ್ನು ನಾರಾಯಣಪುರಂ ಡ್ಯಾಂನಲ್ಲಿ ೫ ಗೇಟುಗಳನ್ನು ಫಿಕ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಲ್ಲಿ ಏನಾಗಿದೆ ಎಂದರೆ ಅಧಿಕಾರಿ ಕೊಟ್ಟಂತಹ ಒಪಿನಿಯನ್‌ಗೆ ಅಡ್ವರ್ಸ್ ಆಗಿ ನಿರ್ಣಯವಾಗಿದೆ. ಅವನನ್ನು ಆ ಕೆಲಸದಿಂದ ತೆಗೆಯಬೇಕೆಂಬ ನಿರ್ಣಯ ಮಾಡಿ, ಆ ಕೆಲಸವನ್ನು ತುಂಗಭದ್ರ ಯೋಜನೆಯಲ್ಲಿ ಗೇಟನ್ನು ಅಳವಡಿಸಿದ್ದರಲ್ಲ ಅವರಿಂದಲಾದರೂ ಆ ಕೆಲಸವನ್ನು ಮುಗಿಸಬೇಕೆಂದು ಪ್ರಯತ್ನ ಮಾಡಿದರೆ. ನಮ್ಮ ೧೮ ಲಕ್ಷ ಹಣ ಅವನ ಮೇಲೆ ಇದೆ. ಅವನು ಅಷ್ಟೊಂದು ಹಣವನ್ನು ಇಟ್ಟುಕೊಂಡು ಪುನಃ ಎರಡೂವರೆ ಕೋಟಿ ರೂಪಾಯಿಗಳಿಗೆ ಆರ್‌ಬಿಟ್ರೇಷನ್ ಮುಂದೆ ಕ್ಲೈಮ್ ಹಾಕಿದ್ದಾನೆ. ಆ ಕಂಟ್ರಾಕ್ಟ್‌ದಾರರಿಗೆ ಈ ಸರ್ಕಾರ ಮಣಿಯುವುದಕ್ಕೆ ಸಾಧ್ಯವಿಲ್ಲ. ಅವರು ಯಾವುದಾದರೊಂದು ಕಾರಣದಿಂದ ಸರ್ಕಾರವನ್ನು ಪೇಚಿಗೆ ಸಿಕ್ಕಿಸಿ ತಮ್ಮ ಅಭಿಲಾಷೆಯನ್ನು ಪೂರೈಸಿಕೊಳ್ಳಬೇಕು ಎಂದು ಪ್ರಯತ್ನ ಮಾಡಿದರೆ, ಅವರ ಪ್ರಯತ್ನಕ್ಕೆ ಸರ್ಕಾರ ಜಗ್ಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಅಗ್ರಿಮೆಂಟ್ ಮಾಡುವಾಗ who is responsible, what action you are going to take against them ?

ಶ್ರೀ ಎಚ್. ಡಿ. ದೇವೇಗೌಡ.—ಅಗ್ರಿಮೆಂಟ್ ಮಾಡಿದ್ದು ಸರ್ಕಾರ. ಸರ್ಕಾರ ತೀರ್ಮಾನ ಮಾಡಿದ್ದಾರೆಂದು ವಾದ ಮಾಡಿದ್ದಾರೆ. ಅದರಲ್ಲಿ ವಿಶ್ವಬ್ಯಾಂಕಿನ ಕೆಲವು ನಿಯಮಗಳಿವೆ. ಕರ್ನಾಟಕ ರಾಜ್ಯದಲ್ಲಿ ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಲ್ಲಿ ಈ ರೀತಿ ಮಾಡಿದ್ದಾರೆ ಎಂದು ಅಲ್ಲ; ನಾನು ವಿಚಾರ ಮಾಡಿದ್ದೇನೆ, ಬೇರೆ ಕಡೆಯೂ ಕೂಡ ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಲ್ಲಿ ಇದೇ ರೀತಿ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ವಾಷಿಂಗ್‌ಟನ್ನಿಗೆ ಹೋಗುತ್ತಾರಲ್ಲಾ ಅಗ್ರಿಮೆಂಟ್‌ಗೆ ಸಹಿ ಮಾಡುವುದಕ್ಕೆ, ಅಲ್ಲಿ ಆ ರೀತಿ ಮಾಡಿಸುತ್ತಾರೆ. ಪ್ರತಿಯೊಂದು ಇಲಾಖೆಯಲ್ಲೂ ಈ ಯೋಜನೆಯಿಂದ ತೆಗೆದುಕೊಳ್ಳುವ ಕೆಲಸಕಾರ್ಯಗಳಲ್ಲಿ ಈ ರೀತಿ ಮಾಡಿದ್ದಾರೆ. ಇದರಿಂದ ಒಂದಲ್ಲ ಒಂದು ದಿವಸ ರಾಷ್ಟ್ರವನ್ನು ಹರಾಜು ಹಾಕುವಂತಹ ಪರಿಸ್ಥಿತಿ ಬರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯುನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಮಾತನ್ನು ಹೇಳುತ್ತೇನೆ. ಅವರು ಎಷ್ಟು ದೂರ ಹೋಗಿದ್ದಾರೆಂದರೆ, ವಿಶ್ವ ಬ್ಯಾಂಕಿನ ಅಗ್ರಿಮೆಂಟ್ ಪ್ರಕಾರ ಏನು ಈ ಐ.ಡಿ.ಬಿ. ಕಂಟ್ರಾಕ್ಟ್‌ದಾರರಿಗೆ ಕೆಲಸವನ್ನು ಕೊಟ್ಟಿದ್ದಾರೆ, ಅದನ್ನು ತಪ್ಪಿಸಿಯಾದರೂ ಆ ಕೆಲಸವನ್ನು ಇಲಾಖೆಯು ವತಿಯಿಂದಲಾದರೂ ತೆಗೆದುಕೊಂಡು ಮಾಡಿ ಮುಗಿಸೋಣ, ಕಂಟ್ರಾಕ್ಟ್‌ದಾರರ ಕ್ಲೈಂ ಒಂದು ಕಡೆ ಇರಲಿ ಎಂದು ಪ್ರಯತ್ನ ಮಾಡಿದರೆ ನಾವು ಮಾಡುತ್ತಿರತಕ್ಕಂತಹ ಕೆಲಸದ ಮೇಲೆ ಇಂಟರ್‌ವಿನ್ ಆಗಬಾರದು ಎಂದು ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. ಕೋರ್ಟಿನಲ್ಲಿರತಕ್ಕಂತಹ ಸ್ಟೇಯನ್ನು ವೆಕೇಟ್ ಮಾಡುವುದಕ್ಕೆ ಅಡ್ವೋಕೇಟ್ ಜನರಲ್ ಹಾಗೂ ನಮ್ಮ ಸರ್ಕಾರದ ವಕೀಲರ ಮೂಲಕ ಪ್ರಯತ್ನ ಮಾಡುತ್ತಿದ್ದೇವೆ. ಕೊನೆಗೆ ಈ ಕೆಲಸವನ್ನಾದರೂ ಕೂಡ ತೆಗೆದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ೬ನೇ ಕಿಲೋಮೀಟರ್‌ನ ಮುಂದೆ ನಾವು ಇಟ್ಟಿರತಕ್ಕಂಥಹ ಹಣ ಲ್ಯಾಪ್ಸ್ ಆಗುವ ಪ್ರಶ್ನೆ ಬರುವುದಿಲ್ಲ. ಆದರೆ ಮುಂದೆ ಇದಕ್ಕಾಗಿ ಹೆಚ್ಚು ಹೆಚ್ಚು ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಾದರೆ, ಈಗಲೇ ಆ ಪ್ರಾಜೆಕ್ಟ್‌ನಲ್ಲಿ ಎಲ್ಲ ಕೆಲಸವನ್ನು ಮುಂದುವರಿಸಬೇಕಾಗುತ್ತದೆ. ಅದಕ್ಕೋಸ್ಕರ ಅಡ್ವೋಕೇಟ್ ಜನರಲ್ ಮತ್ತು ನಮ್ಮ ಸರ್ಕಾರದ ವಕೀಲರು ಏನಿದ್ದಾರೆ ಅವರ ಮುಖಾಂತರ ಈ ಸ್ಟೇಯನ್ನು ವೆಕೇಟ್ ಮಾಡುವುದಕ್ಕೆ ತೀವ್ರ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತಿದೆ ಎನ್ನುವ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸಬೇಕಾಗಿದೆ. ಅವರು ಈ ಒಂದು ಯೋಜನೆಯ ಕೆಲಸಕಾರ್ಯಗಳ ಬಗ್ಗೆ ರಿವ್ಯೂ ಮಾಡುತ್ತಾ ಒಂದು ಮಾತನ್ನು ಹೇಳಿದರು, ಪ್ರಯತ್ನ ಮಾಡಿ ನೋಡೋಣ. ಒಂದು ಪಕ್ಷ ಅದು ಸಾಧ್ಯವಾಗದಿದ್ದರೆ ಸರ್ಕಾರ ಇದರ ಬಗ್ಗೆ ತೀವ್ರ ರೀತಿಯ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವಂತಹ ಸೂಚನೆಯನ್ನೂ ಮಾಡಿದ್ದಾರೆ. ಆ ಒಂದು ದಿಸೆಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಇವತ್ತೂ ಕೂಡ ಐ.ಡಿ.ಬಿ. ಕಂಟ್ರಾಕ್ಟ್‌ದಾರರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಸರ್ಕಾರ ವಿಫಲವಾಗಿದೆ ಎಂದು ಭಾವಿಸಿಕೊಳ್ಳಬಾರದು. ಎರಡನೆಯದಾಗಿ, ಈ ಕಂಟ್ರಾಕ್ಟ್‌ದಾರರು ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ಕಂಟ್ರಾಕ್ಟ್‌ದಾರರೂ ಕೂಡ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಬಹುಶಃ ಅವರು ಈ ರೀತಿ ತಪ್ಪು ತಿಳಿದುಕೊಂಡಿದ್ದರೆ ಅದರಿಂದ ಅವರು ದೂರ ಸರಿಯಬೇಕು. ಅವರಿಗೆ ೧೪ ಪರ್ಸೆಂಟ್ over and above ಕೊಡುತ್ತೇವೆಂದು ಹೇಳಿದ್ದೇವೆ. ಅದಕ್ಕೂ ಕೂಡ ಅವರು ಒಪ್ಪಲಿಲ್ಲ. ಕಾಸ್ಟ್‌ನ ಎಸ್ಕಲೇಷನ್ ಕೂಡ ರಿಸರ್ವ್ ಬ್ಯಾಂಕಿನ ನಿಯಮದ ಪ್ರಕಾರ ಕೊಡುತ್ತೇವೆ ಎಂದು ಹೇಳಿದರೂ ಕೂಡ ಒಪ್ಪಲಿಲ್ಲ. ಪ್ರತಿಯೊಂದು ಹಂತದಲ್ಲೂ ಕಪಿಮುಷ್ಟಿಯಿಂದ ತೊಂದರೆಯನ್ನು ಕೊಡುತ್ತಿದ್ದಾರೆ. ಒಂದು ವೇಳೆ ಅವರಿಗೆ ಲಾಸ್ ಆಗುವುದಾದರೆ, ಇಲಾಖೆಯ ಅಧಿಕಾರಿಗಳು ಕೊಡತಕ್ಕಂತಹ ವರದಿಯ ಆಧಾರದ ಮೇಲೆ ನಿರ್ಣಯ ಮಾಡಬೇಕಾಗಿದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಈ ಕಾಯಿದೆಯನ್ನು ರದ್ದು ಮಾಡುವುದಕ್ಕೆ ಆರ್ಡಿನೆನ್ಸ್‌ನ್ನಾದರೂ ತರುವುದಕ್ಕೆ ವಿಚಾರ ಮಾಡುತ್ತೀರಾ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೇಳಿದ ಪ್ರಕಾರ ಎಷ್ಟು ಜನ ಎಂಬುದು ತಮಗೆ ನಿಖರವಾಗಿ ಗೊತ್ತಿದೆ. ಹಿಂದಿನ ಸರ್ಕಾರ ಕೂಡ ಈ ಕಂಟ್ರಾಕ್ಟ್‌ದಾರರು ಸರ್ಕಾರಕ್ಕೆ ಕಾರ್ಯಕ್ರಮದ ಅನುಷ್ಠಾನ ಮಾಡುವುದಕ್ಕೆ ಅಡ್ಡಿ ಬಂದಾಗ ಅವರಿಗೆ ಮಣಿಯಲಿಲ್ಲ. ಕೆಲವು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕಾದ ಪ್ರಮೇಯ ಬಂದಾಗ ಅದು ಆರ್‌ಬಿಟ್ರೇಷನ್‌ಗೆ ಹೋಯಿತು.

ಈ ಅರ್ಬಿಟ್ರೇಷಗೆ ಹೋಗಿದ್ದುದರಲ್ಲಿ ಸುಮಾರು ೧೨ ಕೆಲಸಗಳ ಬಗ್ಗೆ ಈಗಾಗಲೇ ಸರ್ವಾನುಮತದಿಂದ ನಿರ್ಣಯವಾಗಿದೆ ಎಂದು ನನಗೆ ತಿಳಿದು ಬಂದಿದೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ಕೊಡುತ್ತೀರಾ ?

ಎರಡನೆಯದಾಗಿ ಈಗ ತಾವು ಸೆಪ್ಟೆಂಬರ್ ಒಳಗಡೆ ಏನಾದರೂ ಮಾಡಿ ಕಂಟ್ರಾಕ್ಟರ್‌ಮುಖಾಂತರರವೋ ಅಥವಾ ನಿಮ್ಮ ಇಲಾಖಾ ಮುಖಾಂತರವೋ ಈ ಕೆಲಸಗಳನ್ನು ಮಾಡಿಸುತ್ತೀರಾ, ಇದು ನಿಮಗೆ ಬಿಟ್ಟದ್ದು. ಸುಮಾರು ಇನ್ನೂ ೨–೩ ವರ್ಷ ಕೆಲಸ ಮಾಡಬೇಕಾಗಿದೆ. ಈ ಕೆಲಸಕ್ಕೆ ಲೇಬರರ್ಸ್

ಬೇಕಾಗುತ್ತಾರೆ. ಈಗ ತೆಲುಗು ಗಂಗಾ ಪ್ರಾಜೆಕ್ಟ್ ಬೇರೆ ನವೆಂಬರ್‌ನಲ್ಲಿ ಶುರುವಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಅವರಿಗೆ ಅಡ್ವಾನ್ಸ್ ಮಾಡಿ ಸೆಪ್ಟೆಂಬರ್ ಒಳಗೆ ಅವರನ್ನು ಕರೆಸದೇ ಹೋದರೆ ಇನ್ನೂ ಒಂದು ವರ್ಷ ಈ ಕೆಲಸ ನಡೆಯುವ ಹಾಗೇ ಇಲ್ಲ. ಅಲ್ಲದೆ ಈವೊತ್ತಿನ ದಿವಸ ಯು.ಕೆ.ಪಿ.ನಲ್ಲಿ ಕೆಲಸವೇ ಇಲ್ಲ ಅಂತ ಘೋಷಣೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಈ ಕಂಟ್ರಾಕ್ಟರುಗಳು ಮಣಿಯದೇ ಹೋದರೆ ಈ ಕೆಲಸಗಳು ಇನ್ನೂ ಒಂದು ವರ್ಷ ಆಗುವ ಹಾಗೇ ಇಲ್ಲ. ಆದುದರಿಂದ ಈ ಕೆಲಸಗಳನ್ನು ಶುರು ಮಾಡುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀವಿ ಅನ್ನುವುದನ್ನು ಹೇಳುತ್ತೀರಾ ? ಆ ಕಂಟ್ರಾಕ್ಟರುಗಳ ಮೇಲೆ ನೀವು ಏನು ಬೇಕಾದರೂ ಕಠಿಣ ಕಾರ್ಯಕ್ರಮ ತೆಗೆದುಕೊಳ್ಳಿ, ಆದರೆ ನಮಗೆ ಬೇಕಾದ್ದು ಈ ಕೆಲಸ ನಮಗೆ ಇನ್ನು ೮-೯ ತಿಂಗಳಲ್ಲಿ ಆಗಬೇಕು. ಇಲ್ಲದೇ ಈ ಯು.ಕೆ.ಪಿ. ಪ್ರಾಜೆಕ್ಟ್ ಕೆಲಸ ಬಿದ್ದುಹೋಗುತ್ತದೆ. ನವೆಂಬರ್ ತಿಂಗಳಲ್ಲಿ ತೆಲುಗು ಗಂಗಾ ಪ್ರಾಜೆಕ್ಟ್ ಕೆಲಸ ಶುರುವಾದರೆ ಈ ಪಾಲ್ಮ್ರೀಚರಿ ಲೇಬರರ್ಸ್ ಸಿಕ್ಕುವುದಿಲ್ಲ, ಆದುದರಿಂದ ಅವರಿಗೆ ಅಡ್ವಾನ್ಸ್ ಮಾಡಿಯಾದರೂ ಸೆಪ್ಟೆಂಬರ್ ಒಳಗೆ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಈಗ ಇದರ ಬಗ್ಗೆ ಏನು ದುಡ್ಡು ಬಂದಿದೆ ಅದರ ಬಗ್ಗೆ ಎಲ್ಲಾ ಎಲ್ಲಾ ಕಾರ್ಯಕ್ರಮಗಳನ್ನೂ ಸಹ ತೆಗೆದುಕೊಂಡಿದ್ದೇವೆ. ತಮಗೆ ಹೇಳಬೇಕಾದರೆ Upto 69 kms. to complete all the work we need about Rs. 50 croses. ಈ ಪ್ರೋಗ್ರಾಂಗೆ ಎಷ್ಟು ಹಣಬೇಕಾಗುತ್ತದೋ ಅಷ್ಟು ದುಡ್ಡನ್ನು ಡ್ರಾ ಮಾಡಿದ್ದೇವೆ. ಆದರೆ ನಮ್ಮಲ್ಲಿ ಐ.ಡಿ.ಬಿ. ಕಂಟ್ರಾಕ್ಟರ್ಸ್ ಏನು ಇದ್ದಾರೋ ಅವರನ್ನು ಸಂಪೂರ್ಣವಾಗಿ ನಿಲ್ಲಿಸಿ ನಾವು ಕೆಲಸವನ್ನು ಮಾಡಬೇಕು ಅಂತ ಏನೂ ಇಲ್ಲ. ನಾವು ಕೊಟ್ಟ ಆಫರ್‌ಗೆ ಅವರು ಬಂದು ಕೆಲಸ ಮಾಡುವುದಾದರೆ ಅದಕ್ಕೆ ನಾವು ಸಿದ್ಧರಿದ್ದೇವೆ. ಇಲ್ಲದೇ ಹೋದರೆ ಕೋರ್ಟಿನಲ್ಲಿರತಕ್ಕಂಥಾ ಸ್ಟೇ ಆರ್ಡರ್ಸ್‌ನ್ನು ವೆಕೇಟ್ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ೮-೧೦ ಕೇಸ್‌ಗಳಲ್ಲಿ ಅರ್ಬಿಟ್ರೇಷನ್ ಅವಾರ್ಡ್ ಆಗಿದೆ. ಅದರ ಬಗ್ಗೆ ಕಂಟೆಸ್ಟ್ ಮಾಡಬೇಕೆಂದಿದ್ದೇವೆ. ಈ ವಿಚಾರವಾಗಿ ಸ್ಪೆಷಲ್ ಸೆಕ್ರಟರಿ, ಚೀಫ್ ಇಂಜಿನೀಯರ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ, ಅವರು ೧೮ ಕೋಟಿ ರೂಪಾಯಿ ಕೇಳಿದ್ದಾರೆ, ಇದು ೯-೯½ ಕೋಟಿ ರೂಪಾಯಿ ಆದರೆ ಕನ್ಸೀಡ್ ಮಾಡಿಕೊಳ್ಳಬಹುದು. ಎಂದು ಇಲಾಖೆಯ ಅಭಿಪ್ರಾಯ, ಆದುದರಿಂದ ಈ ಅರ್ಬಿಟ್ರೇಷನ್ ಅವಾರ್ಡ್ ಏನು ಇದೆ ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಾಪೂಗೌಡ ದಶನಾಪೂರ್.—ಈ ಪ್ರಾಜೆಕ್ಟ್ ಕೆಲಸ ಆಗುತ್ತಾ ಇರುವುದನ್ನು ನೋಡಿದರೆ ಬಹಳ ಕುಂಠಿತವಾಗಿ ಹೋಗುತ್ತಾ ಇದೆ ಎಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ವರ್ಲ್ಡ್ ಬ್ಯಾಂಕ್‌ನಲ್ಲಿ ಏನು ಅಸಿಸ್ಟೆನ್ಸ್ ತೆಗೆದುಕೊಳ್ಳುತ್ತೀರೋ, ಅವರ ಆದೇಶದ ಪ್ರಕಾರ ಟೆಂಡರ್ ಕರೆಯಬೇಕು, ಅವರ ನಿಯಮಾವಳಿಗಳಂತೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ ? ಈ ಗ್ಲೋಬಲ್ ಟೆಂಡರ್ ಅನ್ನು ಟನಲ್ ಬಗ್ಗೆ ಕರೆದಾಗ ಯಾವುದು ಲೋಯಸ್ಟ್ ಟೆಂಡರ್ ಇದೆಯೋ ಅದಕ್ಕೆ ಕೊಡಬೇಕಾಗಿತ್ತು, ಕೊಟ್ಟಿಲ್ಲಾ. ಈಗ ಟನಲ್ ಬಗ್ಗೆ ಇನ್ನೂ ೧೦ ಕೋಟಿ ರೂಪಾಯಿ ಕೆಲಸಗಳನ್ನು ತೆಗೆದುಕೊಳ್ಳುತ್ತೀರಾ. ಈಗ ಐ.ಡಿ.ಬಿ ಕಂಟ್ರಾಕ್ಟರ್ಸ್ ಏನು ಇದ್ದಾರೆ ಅವರನ್ನು ಯಾರೂ ಈಗ ಮಾತನಾಡಿಸುವ ಹಾಗೆ ಇಲ್ಲ. ಈವೊತ್ತು ಇದರ ಬಗ್ಗೆ ಕಾಂಟ್ರಾಕ್ಟ್ ಮಾಡಿಕೊಂಡಂಥಾ ಕರಾರುಗಳು ಏನು ಇವೆ ಇದರ ಬಗ್ಗೆ ಸರ್ಕಾರದವರು ವರ್ಲ್ಡ್ ಬ್ಯಾಂಕ್‌ನವರು ಒಪ್ಪಿದ ಪ್ರಕಾರ, ಅವರ ಆದೇಶದ ಪ್ರಕಾರ ಆ ಕರಾರುಗಳನ್ನು ಮಾಡಿಕೊಂಡಿದ್ದಾರೆಯೋ ? ಮತ್ತು ಈ ಕರಾರಿನ ಬಗ್ಗೆ ಏನು ನಿಯಮಾವಳಿಗಳು ಇವೆ. ಆ ಪ್ರಕಾರ ವರ್ಲ್ಡ್ ಬ್ಯಾಂಕ್‌ನವರು ಆದೇಶ ಕೊಟ್ಟಿರುವ ಪ್ರಕಾರ ನಡೆದುಕೊಂಡಿದ್ದರಿಂದ ಅವರು ಅದಕ್ಕೆ ಹಣ ಕೊಟ್ಟಿದ್ದರಿಂದ ಈ ಕೆಲಸ ಶುರುವಾಯಿತು. ಆದರೆ ಈವೊತ್ತು ಏನಾಗಿದೆ ಎಂದರೆ ೧೨-೧೩ ಮುಂದಿಗೆ ಅರ್ಬಿಟ್ರೇಷನ್ ಅವಾರ್ಡ್ ಪಾಸ್ ಆಗಿದೆ. ಇದನ್ನು ಕೋರ್ಟಿನಲ್ಲಿ ಕಂಟೆಸ್ಟ್ ಮಾಡಿ ಚಾಲೆಂಜ್ ಹೋದರೆ ಇನ್ನೂ ೧-೨ ವರ್ಷ ಇದು ಹೀಗೆಯೇ ಮುಂದುವರೆಯುವುದಾದರೆ ಅಲ್ಲಿ ಕೆಲಸದ ಗತಿ ಏನು, ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಹೆಚ್. ಡಿ. ದೇವೆಗೌಡ.—ನಾನು ಮೊದಲೇ ಸ್ಪಷ್ಟಪಡಿಸಿದ್ದೇನೆ. ಐ ಡಿ ಬಿ ಕಂಟ್ರಾಕ್ಟರ್ ಮಾಡಿಕೊಂಡು ಹೋಗುವಂಥಾ ಕೆಲಸವನ್ನು ನಾವು ನಿಲ್ಲಿಸುವುದಿಲ್ಲ ಎಂದು ಮೊದಲೇ ಹೇಳಿದ್ದೇನೆ. ಆ ಬಗ್ಗೆ ಕೋರ್ಟ್‌ನಲ್ಲಿ ಸ್ಟೇ ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲ್ಲವೇ ಅದನ್ನು

ಡಿಪಾರ್ಟ್‌ಮೆಂಟ್ ಮುಖಾಂತರವಾದರೂ ಕೆಲಸ ತೆಗೆದುಕೊಳ್ಳುತ್ತೇವೆ. ಆದರೆ ಒಂದು ಮಾತಂ ಹೇಳುತ್ತೇನೆ. ಅದೇನೆಂದರೆ ನಾವು ಕೊಟ್ಟಿರತಕ್ಕಂಥಾ ಆಫರ್‌ಗೆ ಅವರು ಒಪ್ಪಿಕೊಳ್ಳುವುದಾದರೆ ಅವರ್‍ನೆ ಮುಂದುವರೆಯುವುದಕ್ಕೆ ಅವಕಾಶ ಕೊಡುತ್ತೇವೆ. ಇದರಲ್ಲಿ ಮೂರು ಭಾಗ. ಒಂದನೇದು ಸರ್ಕಾರ ಅಂತಿಮವಾಗಿ ಸರ್ಕಾರ ಏನು ಹೇಳುತ್ತದೆ. ಅದಕ್ಕೆ ಅವರು ಒಪ್ಪಿಕೊಂಡರೆ ನಾನು ಮೊದಲೇ ಹೇಳಿದ ಹಾಗೆ ಅವರನ್ನೇ ಮುಂದುವರೆಸುತ್ತೇವೆ, ಇಲ್ಲದಿದ್ದರೆ ಆಗುವುದಿಲ್ಲ, ಆ ಬಗ್ಗೆ ಕೋರ್ಟಿನಲ್ಲಿ ಸ್ಟೇ ವೇಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಆ ಕೆಲಸಗಳನ್ನು ಡಿಪಾರ್ಟ್‌ಮೆಂಟ್ ಮುಖಾಂತರ ವಾಗಲಿ ಅಥವಾ ಬೇರೆ ಯಾವುದಾದರೂ ಏಜೆನ್ಸಿ ಮುಖಾಂತರವಾಗಲಿ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಈ ೫೦ ಕೋಟಿ ರೂಪಾಯಿ ಹಣವನ್ನು ಪೂರ್ತಾ ಖರ್ಚು ಮಾಡುವುದಕ್ಕೆ ಈಗಾಗಲೇ ತಕ್ಕ ಕಾರ್ಯಕ್ರಮ ಗಳನ್ನು ಹಾಕಿಕೊಂಡಿದ್ದೇವೆ, ಲ್ಯಾಪ್ಸ್ ಮಾಡುವುದಿಲ್ಲ. ಆದರೆ ಒಂದು ವಿಷಯ ಏನೆಂದರೆ ಇದಕ್ಕೆ ಹೆಚ್ಚು ಹಣ ಕೊಡಬೇಕು ಎಂದರೆ ಈ ಸದನ ತೀರ್ಮಾನ ಮಾಡಬೇಕು. ಈ ನೀರಾವರಿ ಬಗ್ಗೆ ಹೆಚ್ಚು ಸಂಪನ್ಮೂಲಗಳನ್ನು ಯಾವರೀತಿ ಒದಗಿಸಿಕೊಳ್ಳಬೇಕೆನ್ನುವುದನ್ನು ಈ ಸದನ ತೀರ್ಮಾನ ಮಾಡಬೇಕು. ಇದನ್ನು ಪಕ್ಷಾತೀತವಾಗಿ ಎಲ್ಲರೂ ನೋಡಬೇಕು. ನಾವು ಈ ನೀರಾವರಿಗೆ ೧೦೩೫ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಬೇಕಾಗಿದೆ, ಅದರಂತೆ ವರ್ಷಕ್ಕೆ ನಾವು ೧೦೦ ಕೋಟಿ ರೂಪಾಯಿ ಖರ್ಚು ಮಾಡಬೇಕಾದರೆ ಇಷ್ಟು ಹೆಚ್ಚುವರಿ ಹಣವನ್ನು ಒದಗಿಸಿಕೊಳ್ಳುವ ಸಾಮರ್ಥ್ಯ ನಮಗೆ ಇರಬೇಕು, ಅದರ ಬಗ್ಗೆ ನಾವೆಲ್ಲಾ ಕೂತುಕೊಂಡು ಸಮಾಲೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ರೈತರ ಹಿತವನ್ನು ಕಾಪಾಡುವುದಕ್ಕೆ ಯಾರೂ ಅಡ್ಡಿ ಮಾಡುವುದಿಲ್ಲ. ನಾನು ಹೇಳುವುದೇನೆಂದರೆ......

ಶ್ರೀ ಹೆಚ್. ಡಿ. ದೇವೇಗೌಡ.—ಈಗ ನಾನು ಉತ್ತರ ಕೊಡುವ ಕಾಲದಲ್ಲಿ ದಯವಿಟ್ಟು ಮಧ್ಯೆ ಮಧ್ಯೆ ಕೇಳುತ್ತಾ ಹೋದರೆ ಪೂರ್ಣವಾಗುವುದಿಲ್ಲ. ನಾನು ಏನು ಹೇಳಬೇಕೆಂದಿದ್ದೇನೋ ಅದು ಪೂರ್ಣವಾಗುವುದಿಲ್ಲ. ಬೇಕಾದರೆ ಕೊನೆಗೆ ಸಮಯ ಇದ್ದರೆ ಏನಾದರೂ ಕೇಳಬೇಕು ಅಂತ ಇದ್ದರೆ ಒಂದು ಗಂಟೆ ಬೇಕಾದರೂ ಕೇಳಿ, ಎಲ್ಲದಕ್ಕೂ ವಿವರಣೆ ಕೊಡುತ್ತೇನೆ.

ಉಪಾಧ್ಯಕ್ಷರು.—ದಯವಿಟ್ಟು ತಾವು ಯೀಲ್ಡ್ ಆಗಬೇಕು. ನಿಮ್ಮ ಉತ್ತರವನ್ನು ಮುಂದುವರೆಸಿ.

SRI M. VEERAPPA MOILY.—You have started yielding for every question. That is why Members are putting questions.

ಶ್ರೀ ಹೆಚ್. ಡಿ. ದೇವೇಗೌಡ.—ಇನ್ನು ಕಾರಂಜಿ ಬಗ್ಗೆ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಏನು ಹೇಳಿದ್ದಾರೆ. ಅದರ ಬಗ್ಗೆ ಹೇಳಬೇಕಾದರೆ ಸ್ಪಿಲ್‌ವೇ ಬ್ಯಾಲನ್ಸ್ ವರ್ಕ್ ೭೦ ಲಕ್ಷ ಇದೆ. ಗ್ಯಾರೇಜ್ ಪೋರ್‌ಷನ್ ವರ್ಕ ಬ್ಯಾಲೆನ್ಸ್ ೧೫ ಲಕ್ಷ ಇದೆ, ಸ್ಲೂಯಿಸ್ ೫ ಲಕ್ಷ ಇದೆ. ಈ ವರ್ಷ ಇದಕ್ಕೆ ಕೊಟ್ಟಿರತಕ್ಕಂಥಾ ಹಣ ಏನು ಇದೆ ಅದರ ಬಗ್ಗೆ ವಿವಿಧ ರೀತಿಯಲ್ಲಿ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದರ ಬಗ್ಗೆ ಅದರಲ್ಲಿ ಸ್ವಲ್ಪ ಪ್ರೋಗ್ರಾಂ ಅನ್ನು ಮಾರ್ಪಾಟು ಮಾಡಿದ್ದೇವೆ. ಈ ಅಚ್ಚುಕಟ್ಟು ಛಾನಲ್ ಏನು ಇದೆ ಅದನ್ನು ೧೫ ಕಿಲೋಮೀಟರ್‌ರವರೆಗೆ ಕಂಪ್ಲೀಟ್ ಮಾಡಬೇಕು ಅಂತ ಮಾಡಿದ್ದೇವೆ ಮತ್ತು ಛಾನಲ್ ವರ್ಕ್ಸ್ ಅನ್ನು ೯–೧೦ ಕಿಲೋಮೀಟರ್‌ರವರೆಗೆ ಕಂಪ್ಲೀಟ್ ಮಾಡಬೇಕೆಂದು ಇದ್ದೇವೆ. ಉಳಿದ ಎಲ್ಲಾ ಎಲ್ಲಾ ಹಣವನ್ನು ಕೂಡ ಡ್ಯಾಮ್‌ಗೆ ಖರ್ಚು ಮಾಡಬೇಕು ಎಂದು ನಿರ್ಣಯ ಮಾಡಿದ್ದೇವೆ. ಇದಕ್ಕೆ ಕಾರಣ ಬರಗಾಲ ಬಂದಾಗ ಆ ದುಷ್ಕಾಲದಲ್ಲಿ ಸುಮಾರು ೭೦–೮೦ ಕಿಲೋಮೀಟರ್‌ರವರೆಗೆ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಾಗ ಅಲ್ಲಿ ಜನರಿಗೆ ಸರಿಯಾಗಿ ಏನು ಕೆಲಸಗಳನ್ನು ಒದಗಿಸಿ ಕೊಡಬೇಕಾಗಿತ್ತೋ ಹಾಗೆ ಮಾಡದೆ ಅದರಲ್ಲಿ ಸ್ವಲ್ಪ ದೋಷವಾಗಿದೆ ಎಂದು ಕಂಡು ಬಂದಿದೆ. ಲೈನಿಂಗ್ ಮಾಡಿರುವ ಜಾಗದಲ್ಲಿ ಏನು ಮಾಡಿದ್ದಾರೆ ಎಂದರೆ ಅನೇಕ ಕಡೆ ನಾನು ನೋಡಿಕೊಂಡು ಬಂದಿದ್ದೇನೆ ಅನೇಕರು ಅಲ್ಲಿ ಷಹಬಾದ್ ಸ್ಟೋನ್ಸ್‌ನ್ನೆಲ್ಲಾ ಕಿತ್ತುಕೊಂಡು ಹೋಗಿ ತಮ್ಮ ಮನೆಯ ಮೆಲ್ಛಾವಣಿ ಮೇಲೆ ಹಾಕಿಕೊಂಡಿದ್ದಾರೆ. ಆದುದರಿಂದ ಅಲ್ಲಿ ಡ್ಯಾಮ್ ಕಂಪ್ಲೀಟ್ ಆಗಿಲ್ಲ. ಅದಗೋಸ್ಕರ ೧೯೮೫ರ ಜೂನ್ ಒಳಗೆ ಎಲ್ಲಾ ಭಾಗವನ್ನು ಸಹ ಮುಗಿಸುವುದಕ್ಕೆ ತಕ್ಕ ಕಾರ್ಯ ಕ್ರಮ ತೆಗೆದುಕೊಂಡು ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ವಿನಿಯೋಗಿಸಬೇಕು ಅನ್ನುವ ಆಶೆ ನಾನು ಇಟ್ಟುಕೊಂಡಿದ್ದೇನೆ. ಆದರೆ ಸ್ಪಿಲ್‌ವೇ ಸೆಕ್ಷನ್ ಬಗ್ಗೆ ಟೆಂಡರ್ ಕರೆದರೆ ಯಾರು ಟೆಂಡರ್ ಪ್ರಕಾರ

ಕೆಲಸ ಮಾಡಲಿಕ್ಕೆ ಇಷ್ಟಪಡುತ್ತಾರೋ ಅವನೇ ಆ ಕೆಲಸವನ್ನು ಮುಂದುವರೆಸಿಕೊಂಡು ಹೋಗಲಿ, ಯಾವ ಕಾರಣದಿಂದಲೇ ಆಗಲಿ ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಹೋಗುವುದಿಲ್ಲ.

೧೨-೩೦ ಪಿ. ಎಂ.

ಏನು ಮಾಡಿದರು, ಟೆಂಡರ್ ಹಾಕಿದರು. ಆ ಪರಿಸ್ಥಿತಿಯಲ್ಲಿ ಟೆಂಡರ್‌ನಲ್ಲಿ ಸ್ವಲ್ಪ ಹೆಚ್ಚು ಕೇಳಿದ್ದಾರೆ. ಅದಕ್ಕೆ ಅದನ್ನು ರಿಜೆಕ್ಟ ಮಾಡಿದರು. ಇಬ್ಬರು ಈ ಟೆಂಡರ್‌ನಲ್ಲಿ ಭಾಗವಹಿಸಿದ್ದರು. ಇವರದು ಹೈರೇಟು ಇತ್ತು ಎಂದು ಕ್ಯಾನ್ಸಲ್ ಮಾಡಿದರು. ಎರಡನೆಯ ಟೆಂಡರನ್ನು ಕರೆದಾಗ ಯಾರೂ ಇದಕ್ಕೆ ರೆಸ್ಪಾನ್ಸ್ ಮಾಡಲಿಲ್ಲ. ಯಾರು ಮುಂದೆ ಈ ಕೆಲಸವನ್ನು ಮಾಡುವುದಕ್ಕೆ ಸಿದ್ಧರಿರಲಿಲ್ಲ. ಇವತ್ತು ಮೂರನೆಯ ಟೆಂಡರ್ ಕರೆಯಬೇಕು. ಆದರೆ ನಾವು ಇದನ್ನು ನಮ್ಮ ಇಲಾಖೆಯವರೇ ಮಾಡಲಿ ಎಂದು ಆದೇಶವನ್ನು ಕೊಟ್ಟಿದ್ದೇವೆ. ಆದರೆ ನಮ್ಮ ನಿರೀಕ್ಷಣೆಗೆತಕ್ಕಂತೆ ಮೆಷನರಿಗಳು ಮತ್ತು ಎಕ್ವಿಪ್‌ಮೆಂಟಟ್ಸ್ ದೊರೆಯದೇ ಇದ್ದ ಕಾರಣ ಸಮರ್ಥರಾಗಲಿಲ್ಲ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಅಲ್ಲಿ ಸ್ಟಿಲ್‌ವೇ ಪೋಷನ್ ಉಳಿದಿರತಕ್ಕದ್ದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳಾಗಬಹುದು, ಆ ಕೆಲಸವನ್ನು ನಾವು ತೀವ್ರವಾಗಿ ಯಾವುದಾದರೂ ಒಂದು ಏಜೆನ್ಸಿಗೆ ಕೊಟ್ಟು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜೊತೆಗೆ ಇಲ್ಲಿ ನಾವು ರೀಷೆಡ್ಯೂಲ್ ಏನು ಮಾಡಿದ್ದೇವೆ ಇದರಿಂದ ಒಂದು ಸಾವಿರ ಹೆಕ್ಟೇರ್‌ವರೆಗೂ ಸಹ ನೀರನ್ನು ಕೊಡಲಿಕ್ಕೆ ಸಾಧ್ಯವಿದೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಇದಕ್ಕೆ ನಮಗೆ ಸ್ವಲ್ಪ ಹೆಚ್ಚು ಹಣವನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಆ ಭಾಗದಲ್ಲಿ ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಬಂದಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಂಡಿದ್ದೇನೆ, ನಮಗೆ ಇನ್ನೂ ಸ್ವಲ್ಪ ಹೆಚ್ಚು ಹಣ ಬೇಕು, ಎಂದು. ಇದಕ್ಕೆ ನಾವು ಎರಡು ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎಂದು ನಮ್ಮ ಆಕಾಂಕ್ಷೆ ಇದೆ ಇಲ್ಲಿ ನಮಗೆ ಸ್ವಲ್ಪ ಹಣದ ಕೊರತೆ ಇದೆ ಎನ್ನುವುದನ್ನು ತಮ್ಮಲ್ಲಿ ನಾನು ಹೇಳಿಕೊಳ್ಳಬೇಕಾಗಿರುತ್ತದೆ. ಏಕೆಂದರೆ ಇದು ಆ ಭಾಗ ಈ ಭಾಗದ ಪ್ರಶ್ನೆಯಲ್ಲ, ನಾವು ಕರ್ನಾಟಕ ರಾಜ್ಯವನ್ನು ಸಮಗ್ರದೃಷ್ಟಿಯಿಂದ ನೋಡಬೇಕು. ನಾವು ಬೆಣ್ಣೆ ತೊರೆ ಯೋಜನೆಗೆ ಹೆಚ್ಚಿನ ಗ್ರಾಂನಟ್ಸ್ ಕೇಳಿದ್ದೇವೆ, ಕಾರಂಜಿಯಕ್ಕೆ ಹೆಚ್ಚು ಹಣಬೇಕು ಎಂದು ಕೇಳಿದ್ದೇವೆ, ಲೋಯರ್ ಮುಲ್ಲಾಮಾರಿಗೆ ಹೆಚ್ಚುಗ್ರಾಂಟ್ ಬೇಕು ಎಂದು ಕೇಳಿದ್ದೇವೆ, ಚುಲ್ಕಿ ನಾಲಾಗೆ ೫೦ ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ, ಅಪ್ಪರ್ ಮುಲ್ಲಾಮಾರಿಗೆ ೪೮ ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಬೆಣ್ಣೆತೊರೆಗೆ ನಾವು ೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದರಲ್ಲಿ ಸುಮಾರು ೧೯ ಲಕ್ಷ ರೂಪಾಯಿಗಳು ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚಾಗುತ್ತದೆ ಆದಕ್ಕೆ ನಾವು ಏನಾದರೂ ಮಾಡಿ ೮ ಕೋಟಿ ರೂಪಾಯಿಗಳನ್ನಾದರೂ ಖರ್ಚುಮಾಡಿ ಈ ವರ್ಷ ಸ್ಟಿಲ್‌ವೇ ಪೋಷನ್ ತೆಗದುಕೊಳ್ಳಬೇಕು ಎಂದು ಮಾಡಿದ್ದೇವೆ

ಒಬ್ಬ ಮಾನ್ಯ ಸದಸ್ಯರು.—ಮುಲ್ಲಾಮಾರಿ ಯೋಜನೆಯ ಬಗ್ಗೆ ತಾವು ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.— ಲೋಯರ್ ಮುಲ್ಲಾಮಾರಿ ಯೋಜನೆಯದು ಒಂದು ದುರಂತ. ಈ ದುರಂತದಲ್ಲಿ ಸುಮಾರು ಒಂದೊವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಡ್ಯಾಮ್ ಪೋಷನ್‌ಗೆ ಸುಮಾರು ೧೦೦-೧೫೦ ಅಡಿಗಳವರೆಗೆ ಕಟ್ಟಿ ನಿಲ್ಲಿಸಿದ್ದಾರೆ. ಅಲ್ಲಿ ಕಲೆಕ್ಟ ಮಾಡಿದಂಥ ಸ್ಟೋನ್ಸ್‌ನ್ನು ಎಲ್ಲಾ ಒಂದು ಕಡೆ ಹಾಕಿಸಿ ಸ್ಟಾಕ್ ಮಾಡಿ ಎಂದು ಹೇಳಿದ್ದೇನೆ: ಇಲ್ಲಿ ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸರ್ಕಾರದ ಅಭಿಪ್ರಾಯ ಇದೆ.

ಮಸ್ಕಿ ನಾಲಾ ಪ್ರಾಜೆಕ್ಟ್‌ಗೆ ನಮ್ಮಲ್ಲಿ ಹಣದ ಕೊರತೆ ಇದೆ, ಇದಕ್ಕೆ ನಮ್ಮ ಸಂಪನ್ಮೂಲಗಳ ಕೊರತೆ ಇದೆಯೆಂದು ತಾವು ಒಪ್ಪುತ್ತೀರಿ ಎಂದು ನಾನು ತಿಳಿಯುತ್ತೇನೆ. ಈ ಎಲ್ಲಾ ಕಾರಣಗಳಿಂದ ೮೩-೮೪ರಲ್ಲಿ ಸುಮಾರು ೫ ಕೋಟಿ ರೂಪಾಯಿಗಳನ್ನು ಒದಗಿಸುವ ಸಾಧ್ಯತೆ ಇದೆ. ಸೆಕೆಂಡ್ ಅಪ್ರೇಸಲ್‌ನಲ್ಲಿ, ಹಾಫ್‌ಯಿಯರ್ಲಿ ರಿವ್ಯೂಮಾಡಾಗ ಮಾನ್ಯ ಮುಖ್ಯಮಂತ್ರಿಗಳು ನೋಡೋಣ ಎಂದು ಹೇಳಿದ್ದಾರೆ. ಇದಕ್ಕೆ ತಾವೆಲ್ಲರೂ ಸಹಕಾರ ಮಾಡಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಕಾರಂಜಿಯ ಯೋಜನೆಗೆ ತಾವು ಕೊಟ್ಟಿರುವ ಹಣದಲ್ಲಿ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಹಣವನ್ನು ಖರ್ಚುಮಾಡಿದ್ದೀರಿ ? ಡ್ಯಾಂ ಕೆಲಸಕ್ಕೆ ಟೆಂಡರ್ ಕರೆದರೆ ಯಾರೂ ಬರುವುದಿಲ್ಲ. ಕೆನಾಲ್ ಕೆಲಸವೂ ಕೂಡ ಆಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.— ನೀರಾವರಿ ಇಲಾಖೆಯಲ್ಲಿ ನಾವು ಯಾವುದೇ ಯೋಜನೆಗೆ ಇಟ್ಟಿರತಕ್ಕ ಹಣವನ್ನು ಲ್ಯಾಪ್ಸ್ ಆಗುವುದಕ್ಕೆ ಬಿಡುವುದಿಲ್ಲ, ಕಾರಂಜಿಯ ಯೋಜನೆಗೆ ಇಟ್ಟಿರತಕ್ಕ ಹಣವನ್ನು ನಾವು ಖರ್ಚುಮಾಡುತ್ತೇವೆ. ನಾವು ಇದಲ್ಲದೆ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಂಡು ತಮ್ಮೆಲ್ಲರ ಸಹಕಾರ ಸಿಕ್ಕಿದರೆ ಇನ್ನೂ ಹೆಚ್ಚು ಹಣ ಖರ್ಚು ಮಾಡತಕ್ಕ ಶಕ್ತಿ ನಮ್ಮ ಇಲಾಖೆಗೆ ಇದೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಮಸ್ಕಿ ನಾಲಾಕ್ಕೆ ಮೊದಲು ಒಂದು ಡಿಸೈನ್ ಮಾಡಿದರು, ಪುನ : ಏಕೆ ಅದನ್ನು ಮಾರ್ಪಾಡು ಮಾಡಿದರು ಎನ್ನುವುದರ ಬಗ್ಗೆ ತಾವು ಹೇಳಬೇಕು

ಶ್ರೀ ಎಚ್. ಡಿ. ದೇವೇಗೌಡ. ಇಲ್ಲಿ ಬಹಳ ಕಠಿಣವಾಗಿ ಟೀಕೆಗೆ ಒಳಗಾಗಿರತಕ್ಕ ಪ್ರಾಜೆಕ್ಟಗಳು ಎರಡು ಇವೆ. ನಾನು ಎಲ್ಲಾ ನೀರಾವರಿ ಯೋಜನೆಗಳ ಬಗ್ಗೆ ಹೇಳಬೇಕು ಎಂದರೆ ಇಡೀ ದಿವಸವೇ ನಾನು ಉತ್ತರವನ್ನು ಕೊಡಬೇಕಾಗುತ್ತದೆ. ಆದರೆ ಇಲ್ಲಿ ನಾನು ಹೇಮಾವತಿ ಯೋಜನೆಯ ಬಗ್ಗೆ ಸ್ವಲ್ಪ ವಿವರಣೆಯನ್ನು ಮಾತ್ರ ಕೊಡಬೇಕಾಗಿದೆ ಈ ಯೋಜನೆಯಿಂದ ಸುಮಾರು ೬ ಲಕ್ಷ ಎಕರೆಗೆ ನೀರನ್ನು ಕೊಡಬೇಕು ಎನ್ನುವುದು ನಮ್ಮ ಅಂತಿ ಗುರಿಯಿಂದೆ. ಇದಕ್ಕೆ ನಾವು ಇಲ್ಲಿಯವರೆಗೆ ೧೦೦ ಕೋಟಿ ರೂಪಾಯಿಗಳನ್ನೂ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇಲ್ಲಿ ೬ ಲಕ್ಷ ಎಕರೆಗೆ ನೀರನ್ನು ಕೊಡಬೇಕು ಎನ್ನುವುದರ ಬಗ್ಗೆ ಸರ್ವ ಪ್ರಯತ್ನವನ್ನು ನಾವು ಮಾಡಬೇಕು ಎಂದರೆ ೫ ಕ್ಯೂಸೆಕ್ಸ್ ನೀರು ಹರಿಯುವ ಕೆನಾಲ್‌ಗೆ ಸಿಸ್ಟಂಗೆ ಲೈನಿಂಗ್ ಮಾಡಬೇಕು ಎಂದರೆ ನಾವು ಸುಮಾರು ೩೫೦ ಕೋಟಿ ರೂಪಾಯಿಂಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಂದು ಕಾಲದಲ್ಲಿ ಇದಕ್ಕೆ ೧೬ ಕೋಟಿ ರೂಪಾಯಿಗಳ ಅಂದಾಜು ಏನು ಇತ್ತು, ಅದು ಇವತ್ತು ೩೫೦ ಕೋಟಿ ರೂಪಾಯಿಗಳವರೆಗೆ ಹೋಗುತ್ತದೆ. ಇದು ಒಂದು ವಾದ, ಇನ್ನೊಂದು ವಾದ ಎಂದರೆ, ದೇವೇಗೌಡರು ಹಾಸನ ಜಿಲ್ಲೆಯವರು ಅವರಿಗೆ ತುಮಕೂರು ಜಿಲ್ಲೆಗೆ ನೀರನ್ನು ಕೊಡುವ ಇಚ್ಛೆಯಿಲ್ಲ ಎಲ್ಲಾ ನೀರನ್ನು ಅವರೇ ಕಬಳಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಮಾತೂಕೂಡ ಬಂದಿದೆ. ಇಂಥ ದೂರು ಬಂದಮೇಲೆ ನಾನು ಈ ಭಾಗದ ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನಿಸಿ ಅವರೆಲ್ಲಾ ಅಲ್ಲಿಗೆ ಬಂದು ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಮಾಡಿರತಕ್ಕ ವಾಸ್ತವಾಂಶವನ್ನು ಅವರೇ ಅರ್ಥಮಾಡಿಕೊಂಡು ಬಂದಿದ್ದಾರೆ ಬಾಬು ನಾಲೆಯ ಕೆಲಸ ಯಾವ ಹಂತದಲ್ಲಿ ನಡೆಯುತ್ತಿದೆ, ಎನುವುದನ್ನು ಅವರು ತಮ್ಮ ಕಣ್ಣಿನಿಂದಲೇ ನೋಡಿಕೊಂಡು ಬಂದ್ದಾರೆ. ಅಲ್ಲಿರತಕ್ಕ ಪರಿಸ್ಥಿತಿಗೆ ಅನುಗುಣವಾಗಿ ನಾವು ಕೆಲಸ ಮಾಡುವುದಕ್ಕೆ ಅನೇಕ ಕಾರಣಗಳಿಂದ ಸಾಧ್ಯವಾಗಿಲ್ಲ. ಟನಲ್ ಕೆಲಸಕ್ಕೆ ನಾವು ಗೊತ್ತು ಮಾಡಿದಂಥ ಹಣಕ್ಕಿಂತ ಸುಮಾರು ಒಂದೂವರೆ ಪಟ್ಟು ಹಣ ಖರ್ಚಾಗಿದೆ. ಅಂದರೆ ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನೂ ಇದಕ್ಕೆ ೨೮ ಕೋಟಿ ರೂಪಾಯಿಗಳು ಬೇಕಾಗಬಹುದು. ಇವತ್ತಿನ ದರದಲ್ಲಿ ಇದು ೩೦-೩೫ ಕೋಟಿ ರೂಪಾಯಿಗಳಾಗಬಹುದು. ಈ ಕೆಲಸವನ್ನು ನಾವು ಮಾಡುವುದಕ್ಕೆ ಹಲವಾರು ತೊಡಕುಗಳು ತಾಪತ್ರಯಗಳು ಇವೆ. ಆದ್ದರಿಂದ ನಾವು ಇಲಾಖೆಯ ಅಧಿಕಾರಿಗಳಿಗೆ ಸ್ವಲ್ಪ ಹಣ ಖರ್ಚಾದರೂ ಚಿಂತೆಯಿಲ್ಲ ಆ ಕೆಲಸದ ವೇಗವನ್ನು ಹೆಚ್ಚು ಮಾಡಬೇಕು ಎನ್ನುವುದನ್ನು ಪರಿಶೀಲನೆ ಮಾಡಬೇಕು ಎಂದು ತಿಳಿಸಿದ್ದೇವೆ.

ಈಗಿರತಕ್ಕ ಕಂಟ್ರಾಕ್ಟರ ಮುಖಾಂತರ ಕೆಲಸ ಮಾಡಿಸಬೇಕೇ ಅಥವಾ ಏನಾದರೂ ಹೊಸ ಏಜನ್ಸಿ ಫಿಕ್ಸ್ ಮಾಡಬೇಕೇ ಅಥವಾ ಡಿಪಾರ್ಟ್‌ಮೆಂಟ್‌ನಿಂದ ಮಾಡಬೇಕೇ ಎಂದು ನೋಡಬೇಕಾಗಿದೆ. ಡಿಪಾರ್ಟ್‌ಮೆಂಟ್‌ನಿಂದ ಮಾಡಬೇಕು ಅಂದರೆ ನಮ್ಮ ಹತ್ತಿರ ಶಕ್ತಿ ಇಲ್ಲ. ಅದಕ್ಕೆ ಬೇಕಾದಂಥ ಯಂತ್ರೋಪಕರಣಗಳನ್ನು ಜೋಡಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಬೇಕಾದರೆ ೧೦೦-೨೦೦ ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅದೇ ಕಂಟ್ರಾಕ್ಟರಿಂದ ಮುಂದುವರಿಸಬೇಕು ಅಂದರೆ ೧೫-೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ, ಅದರ ಮೇಲೆ ಟೀಕೆ ಟಿಪ್ಪಣಿಗಳು ಬರುವುದಕ್ಕೆ ಸಾಧ್ಯವಾಗುತ್ತದೆ, ಆತನಿಗೆ ೧೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಬಡ್ಡಿ ಎಲ್ಲಾ

ಸೇರಿದರೆ ೨೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಸರ್ಕಾರದ ಹಣ ಆ ಕಂಟ್ರಾಕ್ಟರ್ ಮೇಲೆ ಬಿದ್ದಿದೆ. ಆದುದರಿಂದ ಈ ಒಂದು ವಿಷಯದ ಬಗ್ಗೆ ಅಂತಿಮ ನಿರ್ಣಯ ಆಗಬೇಕಾಗಿದೆ. ಸರ್ಕಾರದವರು ಎಷ್ಟೇ ತರದೂದು ಮಾಡುತ್ತೇವೆಂದು ಹೇಳಿದರೂ ಕೂಡ ಕನಿಷ್ಟಪಕ್ಷ ೧೯೮೯-೯೦ರವರೆಗೆ ಟನಲ್ ಕೆಲಸ ಮುಗಿಸುತ್ತೇವೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಇವತ್ತು ನಿಗದಿ ಮಾಡಿರತಕ್ಕ ಪ್ರಕಾರ ಕೆಲಸ ಸುಗಮವಾಗಿ ನಡೆದರೆ ಅಷ್ಟು ವರ್ಷ ಆಗುತ್ತದೆ. ಆದುದರಿಂದ ತುಮಕೂರು ಭಾಗಕ್ಕೆ ನಾವು ನೀರು ಕೊಡುವುದರ ಬಗ್ಗೆ ಏನು ನಿಗದಿಯಾಗಿದೆಯೆ ಆ ಅದರಲ್ಲಿ ಒಂದು ಇಂಚು ಭೂಮಿಯನ್ನೂ ಕೂಡ ಮಾರ್ಪಾಡು ಮಾಡುವುದಿಲ್ಲವೆಂದು ತುಮಕೂರು ಜಿಲ್ಲೆಯ ಮಹಾ ಜನತೆಗೆ ತಿಳಿಸಬಯಸುತ್ತೇನೆ. ಇನ್ನು ಬೆಣ್ಣೆತೊರೆ ವಿಷಯದ ಬಗ್ಗೆ ಮತ್ತೆ ಹೇಳಬೇಕಾದ್ದಿಲ್ಲ. ಅದು ಸರ್ಕಾರಕ್ಕೆ ಎಷ್ಟೇ ಕಷ್ಟವಾದರೂ ಮಾಡಬೇಕಾದಂಥ ಯೋಜನೆ. ಇದಕ್ಕೆ ೫ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಅದನ್ನು ಮುಗಿಸಬೇಕಾದರೆ ಇವತ್ತಿನ ವೆಚ್ಚದಲ್ಲಿ ಸುಮಾರು ೩೫ ಕೋಟಿ ರೂಪಾಯಿಗಳ ಮೇಲೆ ಖರ್ಚು ಮಾಡಬೇಕಾಗುತ್ತದೆ. ಒಂದು ಕಡೆ ಗುಲ್ಬರ್ಗ ನಗರಕ್ಕೆ ಕೂಡಲೇ ನೀರು ಕೊಡತಕ್ಕಂಥಾದ್ದಿದೆ. ಅದು ೫೦ ಸಾವಿರ ಎಕರೆ ಬರಡು ಭೂಮಿಗೆ ನೀರು ಸಿಗತಕ್ಕಂಥದ್ದು. ಆದರ ಬಗ್ಗೆ ಕೂಡ ಏನಾದರೂ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬ ಸರ್ಕಾರದ ಉದ್ದೇಶವಿದೆ. ತಾವೆಲ್ಲಾ ಸಹಕರಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ನಾನು ನೀರಾವರಿ ಬಗ್ಗೆ ತುಂಬ ಹೆಚ್ಚು ಕಾಲ ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಶ್ರೀಮಾನ್ ಒಡೆಯರಾಜ್ ಅವರು ಮಾತನಾಡುತ್ತಾ, ಮೈನರ್ ಇರಿಗೇಷನ್ ವರ್ಕ್ಸ್‌ನಲ್ಲಿ ನಮಗೂ ಬೇರೆದಕ್ಕೂ ತಾರತಮ್ಯ ಮಾಡಿದ್ದೀರಿ ಎಂದು ಕೇಳಿದರು. ೪೫ ಫ್ರೆಷ್ ವರ್ಕ್ಸ್‌ನ್ನು ತೆಗೆದುಕೊಳ್ಳಲಿಕ್ಕೆ ಬಡ್ಜೆಟ್‌ನಲ್ಲಿ ಅವಕಾಶ ಮಾಡಿಕೊಂಡಿದ್ದೇವೆ. ಇದಕ್ಕೆ ಒಟ್ಟು ವೆಚ್ಚ ೧೯೬ ಲಕ್ಷ ರೂಪಾಯಿಗಳಾಗುತ್ತವೆ. ಗುಲ್ಬರ್ಗ-೧೦, ಬೀದರ್-೫, ರಾಯಚೂರು-೧೯, ಬಳ್ಳಾರಿ-೧೧. ಈ ೪೫ ಕೆಲಸಗಳಿಗೆ ಈ ವರ್ಷದ ಬಡ್ಜೆಟ್‌ನಲ್ಲಿ ಅವಕಾಶ ಮಾಡಿಕೊಂಡಿದ್ದೇವೆ. ಆದುದರಿಂದ ಅವರ ಮನಸ್ಸಿನಲ್ಲಿರುವ ಸಂಶಯ ನಿವಾರಣೆಯಾಗುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇನ್ನೂ ಹೆಚ್ಚು ವಿವರಣೆ ಕೊಡುವುದಾದರೆ ೫ ಕೋಟಿ ೪೩ ಲಕ್ಷ ಅಡಿಷನಲ್ ಖರ್ಚು ಮಾಡುತ್ತೇವೆ. ಈ ಒಂದು ಪ್ರಪೋಸಲ್ ಸರ್ಕಾರದ ಮುಂದೆ ಇದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ ಅದನ್ನು ಅಪ್ರೈಸಲ್‌ನಲ್ಲಿ ಏನಾದರೂ ಮಾಡುವುದಕ್ಕೆ ಸಾಧ್ಯವೇ ಎನ್ನುವುದು ಸರ್ಕಾರದ ಗಮನದಲ್ಲಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ಈ ಮೈನರ್ ಇರಿಗೇಷನ್ ವರ್ಕ್ಸ್ ತೆಗೆದುಕೊಳ್ಳುವುದರಲ್ಲಿ ಈಗಿರತಕ್ಕ ವ್ಯವಸ್ಥೆಯನ್ನು ನಾವು ಮಾರ್ಪಾಡು ಮಾಡಬೇಕು ಎಂದು ಇದ್ದೇವೆ. ಇದರ ಬಗ್ಗೆ ನಮ್ಮ ಸ್ನೇಹಿತರು ಹೇಳಿದ್ದಾರೆ, ಕಾಸ್ಟ್ ಬೆನಿಫಿಟ್ ರೇಷಿಯೋಗೆ ಒಪ್ಪಿಕೊಂಡಿದ್ದಾರೆ. ಈಗ ಕೇವಲ ಒಂದು ವಾರದ ಹಿಂದೆ ಮುಖ್ಯ ಮಂತ್ರಿಗಳ ಕಚೇರಿಯಲ್ಲಿ ನಿರ್ಣಯ ಮಾಡಿದೆವು. ಈ ವಿಷಯದ ಬಗ್ಗೆ ಚರ್ಚೆಯಾಗಿ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಒಪ್ಪಿಕೊಂಡಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ, ಆದರೆ ಶಾಸ್ತ್ರೀಯವಾಗಿ ಈ ಕಾಸ್ಟ್ ಬೆನಿಫಿಟ್ ರೇಷಿಯೋಗೆ ೨೫ ಸಾವಿರ ಖರ್ಚುಮಾಡಬೇಕೇ ಅಥವಾ ೫೦ ಸಾವಿರ ಖರ್ಚು ಮಾಡಬೇಕೇ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಮಾನ್ಯ ಕೆ. ಹೆಚ್. ರಂಗನಾಥ್‌ರವರು ಪ್ರಸ್ತಾಪ ಮಾಡಿದ್ದಾರೆ, ಎಕನಾಮಿಕಲ್ ಆಗಿ ವರ್ಲ್ಡ್ ಬ್ಯಾಂಕ್ ಹಣ ಹೇಗೆ ಖರ್ಚಾಗುತ್ತಿದೆ ಎಂದು ಹೇಳಿದ್ದಾರೆ. ಬಹುಶಃ ಹಿಂದೆ ಮಾಡಿರುವುದನ್ನು ನಿಲ್ಲಿಸಬೇಕೇ ಅಥವಾ ಬಿಡಬೇಕೇ ಎನ್ನುವುದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದರಲ್ಲಿ ಕಷ್ಟವಿದೆ ಎಂದು ಹೇಳಿದರು. ಇದನ್ನು ನಾವು ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ ಎಕ್ಸ್‌ಪರ್ಟ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಅದರಲ್ಲಿ ಥರೋ ಎಕನಾಮಿಕ್ಸ್ ವ್ಯವಸಾಯ ಇಲಾಖೆಯ ತಜ್ಞರು, ಇಂಜಿನಿಯರಿಂಗ್ ಇಲಾಖೆಯ ತಜ್ಞರು, ಆರ್ಥಿಕ ಇಲಾಖೆಯ ತಜ್ಞರು ಇದ್ದಾರೆ. ಅವರೆಲ್ಲಾ ಸೇರಿ ಶಾಸ್ತ್ರೀಯವಾಗಿ ಗೈಡ್‌ಲೈನ್ಸ್ ಏನು ಕೊಡುತ್ತಾರೋ ಅದನ್ನು ಅಳವಡಿಸಬೇಕು ಎನ್ನುವುದು ಇವತ್ತಿನ ನಮ್ಮ ಅಭಿಪ್ರಾಯವಾಗಿದೆ, ಆದುದರಿಂದ ಅತ್ಯಂತ ಶೀಘ್ರವಾಗಿ ಕಮಿಟಿ ವರದಿ ತರಿಸಿ ನಾವು ನಿರ್ಣಯ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದನ್ನು ತತ್ವತ: ಒಪ್ಪಿಕೊಂಡಿದ್ದೇವೆ ಇನ್ನು ಹೊಸ ಸರ್ಕಾರದ ಅಭಿಪ್ರಾಯವೇನೆಂದರೆ, ಬಾಗಲಕೋಟೆಯ ವಿಷಯ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ, ನಾವು ಬಾಗಲಕೋಟೆಯನ್ನು ಬೇರೆ ಕಡೆ ಸ್ಥಳಾಂತರಿಸಬೇಕು ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳ ಶ್ರಮದಿಂದ ಅಂತಿಮ ನಿರ್ಣಯಕ್ಕೆ ಬರಲಿಕ್ಕೆ ಸಾಧ್ಯವಾಗಿದೆ. ಅದಕ್ಕೆ ವಿರೋಧ ಮತ್ತು ಪರ ಎರಡೂ ಇದೆ. ಆದುದರಿಂದ ಎಲ್ಲಾ ವರ್ಗದ ಜನರನ್ನು ಕರೆಸಿ, ತಾವು ಒಂದು

ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳಬೇಕೆಂಬ ನಿರ್ಣಯ ತೆಗೆದುಕೊಂಡರು. ಬಾಗಲಕೋಟೆಯನ್ನು ಸ್ಥಳಾಂತರಿಸಬೇಕಾದರೆ ೧೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡುತ್ತೇವೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಸ್ಟಾಚುಟರಿ ಬಾಡಿ ಇದ್ದಹಾಗೆ ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿ ಎಂದು ಒಂದು ಅಥಾರಿಟಿಯನ್ನು ಮಾಡುವುದರ ಬಗ್ಗೆ ಸರ್ಕಾರದ ಆಲೋಚನೆ ಇದೆ ಎಂದು ತಿಳಿಸಬಯಸುತ್ತೇನೆ. ಅದೇ ರೀತಿ ಯು.ಕೆ.ಪಿ. ಬಗ್ಗೆ ಹೈಪವರ್ ಕಮಿಟಿ ಕೂಡ ಮಾಡಲಿಕ್ಕೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ಕಮಿಟಿ ಕಾನ್‌ಸ್ಟ್ರಕ್ಟ್ ಆಗಿದೆ. ಅಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಇರತಕ್ಕಂಥ ತೊಂದರೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅನೇಕರಿಗೆ ಟೆಂಟ್‌ಗಳಲ್ಲಿ ವಾಸಮಾಡತಕ್ಕ ಪರಿಸ್ಥಿತಿ ಇದೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಅದಕ್ಕೋಸ್ಕರ ಅಧಿಕಾರಿಗಳನ್ನು ವರ್ಗ ಮಾಡಿದರೆ ಅಲ್ಲಿ ಹೋಗಲಿಕ್ಕೆ ಇಷ್ಟಪಡುವುದಿಲ್ಲ. ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ಇಂತಹ ಬೃಹತ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವಾಗ ಕ್ವಾರ್ಟರ್ಸ್ ಕಟ್ಟಿಸುವುದಕ್ಕೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಅದನ್ನು ಮಾಡದೇ ಹೋದ ಪರಿಣಾಮವಾಗಿ ಇವತ್ತು ಅಸಿಸ್ಟೆಂಟ್ ಇಂಜಿನಿಯರ್ಸ್, ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಹೋಗಿ ಟೆಂಟ್‌ಗಳಲ್ಲಿ ವಾಸ ಮಾಡುತ್ತಾರೆ ಅಂದರೆ ಕಷ್ಟವಾಗುತ್ತದೆ. ೧೦ × ೧೦ ಅಳತೆಯ ರೂಮಿನಲ್ಲಿ ೫-೬ ಜನ ಅಧಿಕಾರಿಗಳು ವಾಸ ಮಾಡುತ್ತಿದ್ದಾರೆ, ಶೌಚಗೃಹ ಎಲ್ಲಾ ಅಲ್ಲೇ ಅವರಿಗೆ. ಆದುದರಿಂದ ತೀವ್ರವಾಗಿ ವಾಸಕ್ಕೆ ಕಟ್ಟಡಗಳನ್ನು ಕಟ್ಟಿಸಬೇಕು. ಆಮೇಲೆ ಮದುವೆಯಾಗದೇ ಇರತಕ್ಕವರಿಗೆ ಸ್ವಲ್ಪ ಡಾರ್ಮೆಟರಿ ಟೈಪ್ ಕಟ್ಟಿಸಬೇಕು ಎಂಬ ಯೋಚನೆ ಇವೆ.

ಶ್ರೀ ಸಂಗಮೇಶ್ವರ ಸರ್ದಾರ್.— ಯು.ಕೆ.ಪಿ. ಬಗ್ಗೆ ಹೈಪವರ್ ಕಮಿಟಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಈಗ ನಮ್ಮ ರಾಯಚೂರು ಜಿಲ್ಲೆಗೆ ಅನ್ಯಾಯವಾಗಿದೆ. ಅಪ್ಪರ್ ಕೃಷ್ಣದಲ್ಲಿ ಬಲದಂಡೆ ತೆಗೆದುಕೊಂಡಿಲ್ಲ. ಲಿಂಗಸೂಗೂರು ದೇವದುರ್ಗ ಮತ್ತು ರಾಯಚೂರು ಒಂದು ಸೈಡೆಡ್ ಪ್ರಾಜೆಕ್ಟ್ ನಮಗೂ ನದಿ ಇದೆ, ನಮ್ಮದು ಬರಗಾಲ ಪ್ರದೇಶ ಇದೆ. ಆದುದರಿಂದ ಅಪ್ಪರ್ ಕೃಷ್ಣಾದ ಬಲದಂಡೆ ಯೋಜನೆ ದಯಮಾಡಿಟ್ಟು ತೆಗೆದುಕೊಳ್ಳಲೇಬೇಕು ಎಂದು ಕೇಳಿಕೊಳ್ಳುತ್ತೇನೆ. ಮೇಲಿಂದ ಮೇಲೆ ನಮ್ಮ ಭಾಗ ಬರಗಾಲಕ್ಕೆ ತುತ್ತಾಗುತ್ತಿದೆ. ಆದರೂ ಬಲದಂಡೆ ತೆಗೆದುಕೊಂಡಿಲ್ಲ. ಆದುದರಿಂದ ಈಗ ಹೇಗಾದರೂ ಮಾಡಿ ವರ್ಲ್ಡ್ ಬ್ಯಾಂಕ್ ಅಸಿಸ್ಟೆಂಟನಿಂದ ಅಪ್ಪರ್ ಕೃಷ್ಣ ಬಲದ್ಕಡೆ ತೆಗೆದುಕೊಳ್ಳಬೇಕು ಎಂದು ಬಿನ್ನವಿಸಿಕೊಳ್ಳುತ್ತೇನೆ.

ಸ್ವಾಮಿ, ನಾನು ಆಗಲೇ ಹೇಳಿದೆ, ಈ ರಾಜ್ಯದಲ್ಲಿ ನಮ್ಮ ಜಲಸಂಪತ್ತನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿದರೆ ಕೆಲವು ಕಾಠಿಣ್ಯ ಕ್ರಮನ್ನು ತೆಗೆದು ಕೊಳ್ಳಬೇಕಾಗುತ್ತದೆ. ಅದಕ್ಕೆ ಈ ಸದನದ ಸದಸ್ಯರೂ ಸಹಾ ಸಿದ್ಧರಾಗ ಬೇಕಾಗುತ್ತದೆ. ಇದರಲ್ಲಿ ಬರೀ ಕೇವಲ ರಾಜಕೀಯವನ್ನು ಮಾಡಿಕೊಂಡು ಹೋದರೆ ಸಾಧ್ಯವಾಗುವುದಿಲ್ಲ. ನಮ್ಮ ದುರ್ದೈವ ೩೫ ವರ್ಷದ ದುರಂತವೇನೆಂದರೆ ಪ್ರತಿಯೊಂದು ಹಂತದಲ್ಲೂ ಅವರೂ ತಪ್ಪು ಮಾಡಿದ್ದಾರೆ ನಾವು ತಪ್ಪು ಮಾಡಿದ್ದೇವೆ, ಎಲ್ಲರೂ ಮಾಡಿದ್ದೇವೆ. ಇದರಿಂದಾಗಿ ಒಂದೊಂದು ಪ್ರಾಜೆಕ್ಟನ್ನೂ ಸಹ ನಾವು ಆದಷ್ಟು ಬೇಗ ಮುಗಿಸಬೇಕೆಂದು, ಅದಕ್ಕೆ ಸಾಕಷ್ಟು ಹಣ ಬೇಕಾಗಿದೆ. ಇದಕ್ಕೆ ನಾವು ಹೆಚ್ಚಿನ ಹಣವನ್ನು ಒದಗಿಸದಿದ್ದರೆ ಈ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮುಗಿಸಬೇಕಾದರೆ ಇನ್ನೂ ೩೦ ವರ್ಷಗಳು ಬೇಕಾಗುತ್ತದೆ, ಇದರ ಬಗ್ಗೆ ಇವತ್ತು ಅಮೂಲ್ಯವಾದ ಸಲಹೆಗಳನ್ನು ಮಾನ್ಯ ಶ್ರೀ ರಂಗನಾಥ್‌ರವರು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಾರಿಯಾಗಿದ್ದೇನೆ. ಇವರ ಬಗ್ಗೆ ನನಗೆ ನಿಜವಾಗಿಯೂ ಆಸಕ್ತಿ ಇದ್ದುದರಿಂದ ಪರಿಶೀಲನೆ ಮಾಡಲು ಈ ಒಂದು ಸದನದ ಸಮಿತಿಯನ್ನು ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರ ಹತ್ತಿರ ಮನವಿ ಮಾಡಿಕೊಂಡಿದ್ದೇನೆ, ಅವರೂ ಸಹ ಇದಕ್ಕೆ ಸಮ್ಮತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಒಂದು ಸಮಿತಿ ಮಾಡಿ ಆ ಸಮಿತಿಯವರು ೨-೩ ತಿಂಗಳೊಳಗೇ ವರದಿಯನ್ನು ಕೊಡುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಸಮಿತಿಯ ವರದಿ ಎಂದರೆ ೬-೭ ತಿಂಗಳು ಆದರೆ, ಅದರಿಂದ ಪ್ರಾಜೆಕ್ಟ್‌ಗಳಿಗೆ ಏನೂ ಪ್ರಯೋಜನವಾಗುವುದಿಲ್ಲ ಆದುದರಿಂದ ಇದರ ಬಗ್ಗೆ ಕೇವಲ ೨-೨ ತಿಂಗಳಲ್ಲಿ ಸಂಪೂರ್ಣವಾಗಿ ಪರಿಶೀಲನೆ ಮಾಡಿ ತೀರ್ಮಾನ ತೆಗೆದು ಕೊಳ್ಳಿ, ವಾಟರ್ ರೇಟ್ ಕಲೆಕ್ಟ್ ಮಾಡತಕ್ಕದ್ದರಲ್ಲಿ, ಬೆಟರ್‌ಮೆಂಟ್ ಲೆವಿಯನ್ನು ಕಲೆಕ್ಟ್ ಮಾಡತಕ್ಕದಕರಲ್ಲಿ, ಇದೂ ಅಲ್ಲದೇನೇ ಅನ್ ಆಥರೈಜ್ಡ್ ಅಗಿ,

ಕಲ್ಟಿವೇಷನ್ ಮಾಡಿರತಕ್ಕಂತವರಿಗೆ ಕೆಲವು ಪೆನಾಲ್ಟಿ ಹಾಕಿದ್ದಾರೆ. ಇದೆಲ್ಲದರ ಬಗ್ಗೆ ಅವರು ಪರಿಶೀಲನೆ ಮಾಡಬೇಕಾಗಿದೆ. ಅಲ್ಲಿ ಏನಾಗಿದೆ ಎಂದರೆ ಸುಮ್ಮನೆ ಡಿಮ್ಯಾಂಡ್ ಏರಿಸಿದ್ದಾರೆ, ಆದರೆ ಬರುತ್ತಿಲ್ಲ. ಇದರಲ್ಲಿ ರೈತರ ತಪ್ಪಿಲ್ಲ, ಸುಮ್ಮನೇ ಅನ್ಯಾಯವಾಗಿ ನೀರು ಸಮುದ್ರಕ್ಕೆ ಹೋಗುವ ಬದಲು ಮತ್ತು ಬೇರೆ ರಾಜ್ಯದವರು ಉಪಯೋಗಿಸುವ ಬದಲು ನಮ್ಮ ರಾಜ್ಯದ ರೈತರು ಉಪಯೋಗಿಸಿಕೊಂಡು ಬೆಳೆದಿದ್ದಾರೆ, ಅದಕ್ಕೆ ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಈಗ ನಾವು ವಾಟರ್ ರೇಟನ್ನು ಮತ್ತು ಬೆಟರ್ ಮೆಂಟ್ ಲೆವಿಯನ್ನು ಕಲೆಕ್ಟ್ ಮಾಡುವಾಗ ಯಾವ ರೀತಿಯಾಗಿ ಕಲೆಕ್ಟ್ ಮಾಡಬೇಕು ಎನ್ನುವ ಬಗ್ಗೆ ಪರಿಶೀಲನೇ ಮಾಡಬೇಕಾಗಿದೆ. ಆ ಮೇಲೆ ಕ್ರಾಪ್ ಪ್ಯಾಟ್ರನ್ ವೈಯಲೇಟ್ ಮಾಡಿದರೆ ಆ ಪ್ಯಾಟ್ರನನ್ನು ಡಿಸ್ಪ್ಲೆಯ್ ಮಾಡತಕ್ಕದ್ದು ಮತ್ತು ಡಿಮ್ಯಾಂಡ್‌ನ್ನು ಏರಿಸಿ ಕಲೆಕ್ಷನ್ ಮಾಡತಕ್ಕದ್ದನ್ನೆಲ್ಲಾ ನೀರಾವರಿ ಇಲಾಖೆಯವರಿಂದಲೇ ಮಾಡಿಸಬೇಕೇ ಅಥವಾ ಬೇರೆ ರಾಜ್ಯದಲ್ಲಿ ಇದ್ದ ಹಾಗೆ ಕಠಿಣ ಕ್ರಮವನ್ನು ತೆಗೆದು ಕೊಳ್ಳುವುದಕ್ಕೆ ಪೋಲಿಸ್ ಸ್ಕ್ವಾಡ್‌ಸಿಂದ ಮಾಡಿಸಬೇಕೇ ಎನ್ನುವ ಬಗ್ಗೆ ಪರಿಶೀಲನೆ ಮಾಡಿ ಒಂದು ವರದಿಯನ್ನು ಕೊಡುವಂತೆ ಈ ಸದನದ ಒಂದು ಸಮಿತಿಯನ್ನು ಮಾಡಬೇಕು ಇವತ್ತು ಸಂಜೆಯೊಳಗಾಗಿ ವಿರೋದ ಪಕ್ಷದ ನಾಯಕರನ್ನು ಮತ್ತು ವಿವಿಧ ರಾಜಕೀಯ ಪಕ್ಷಗಳ ಮುಖಂಡ ರೊಡನೆ ಸಮಾಲೊಚನೆ ಮಾಡಿ, ಅನಂತರ ಮುಖ್ಯ ಮಂತ್ರಿಗಳೊಡನೆ ಸಮಾಲೊಚನೆ ಮಾಡಿ, ಆ ಸಮಿತಿಯೊಳಗೆ ಯಾರು ಯಾರು ಇರಬೇಕು ಎನ್ನುವ ಬಗ್ಗೆ ನಿರ್ಣಯ ಮಾಡಿ ಇವತ್ತು ಸಂಜೆಯೊಳಗೆ ಅನೌನ್ಸ್ ಮಾಡಬೇಕು ಎನ್ನುವ ಇಚ್ಛೆ ಇದೆ..

ಶ್ರೀ ಜಿ.ಪಿ. ಒಡೆಯರಾಜ್ .— ಹೈ ಪವರ್ ಕಮಿಟಿ ಮಾಡಿದ್ದಾರಲ್ಲಾ, ಅದರಲ್ಲಿ ಯಾರು ಯಾರಿದ್ದಾರೆ ?

ಶ್ರೀ ಎಚ್.ಡಿ. ದೇವೇಗೌಡ .— ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಅದರ ಛೇರ್ಮನ್ ಮಿಕ್ಕವರೆಲ್ಲಾ ಅಫಿಶಿಯಲ್ಸ್

ಇನ್ನು ಸ್ವಾಮಿ, ಟೆಕ್ನಿಕಲ್ ಕಮಿಟಿ ಎಂದು ಹೊಸದಾಗಿ ಬದಲಾವಣೆ ಮಾಡಿದ್ದೇವೆ. ಇದುರೆಗೂ ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್ ಎಂದು ಕಮಿಟಿ ಇತ್ತು, ಅಲ್ಲಿ ಒಬ್ಬರೇ ಸದಸ್ಯರಿದ್ದುದರಿಂದ ಅಲ್ಲಿ ಸ್ವಲ್ಪ ಡಬಲ್ ಚೆಕ್ ಮಾಡುವುದಕ್ಕೆ ಅವಕಾಶ ವಿರಬೇಕು ಎನ್ನುವ ಬಗ್ಗೆ ಯೋಚನೆ ಮಾಡಿ ನಮ್ಮ ಸರ್ಕಾರದವರು ತೆಗೆದು ಕೊಂಡಿರತಕ್ಕ ನಿರ್ಣಯವಿದು. ಅಲ್ಲಿ ಏನಾದರೂ ತಾಂತ್ರಿಕವಾಗಿ ದೋಷ ಕಂಡು ಬಂದರೆ ಅದನ್ನು ಪರಿಶೀಲನೆ ಮಾಡಲಿಕ್ಕೆ ಏನಾದರೂ ಒಂದು ವ್ಯವಸ್ಥೆ ಇರಬೇಕೆಂದು ಮತ್ತು ಕೆಲಸ ಕೂಡಾ ಜಾಗ್ರತೆಯಾಗಿ ಆಗಬೇಕು ಎನ್ನುವ ಕಾರಣಕ್ಕಾಗಿ ಮತ್ತು ಸೆಕೆಂಡ್ ಸ್ಕ್ರೂಟನಿಗೂ ಅವಕಾಶವಿರಬೇಕು ಎನ್ನುವ ದೃಷ್ಟಿಯಿಂದ ಹೊಸದಾಗಿ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಪ್ರಯತ್ನ ಮಾಡಿದ್ದೇವೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ .— ಮಾನ್ಯ ಮಂತ್ರಿಗಳವರು ಎಲ್ಲಾ ವಿಚಾರವನ್ನೂ ಹೇಳಿದರು ಆದರೆ ನಮ್ಮ ಕಬಿನಿ ೨-೩ ನೇ ಸ್ಟೇಜ್‌ನ ವಿಚಾರ ಹೇಳಲಿಲ್ಲ. ದಿ. ಚನ್ನ ಬಸಪ್ಪನವರು ನಮ್ಮಲ್ಲಿ ಲಿಫ್ಟ್ ಇರಿಗೇಷನ್ ಆಗುವ ಬಗ್ಗೆ ರೆಕಮೆಂಡೇಷನ್ ಮಾಡಿದ್ದಾರೆ. ಆದುದರಿಂದ ದಯಮಾಡಿ ತಾವು ಕಬಿನಿ ವಿಚಾರ ಹೇಳುತ್ತೀರಾ, ಎಂದು ಇದ್ದೆ ತಾವು ಹೇಳಲಿಲ್ಲ ಆದುದರಿಂದ ವರುಣಾ ಚಾನಲ್ ಬಗ್ಗೆ ಕೂಡ ಹೇಳಿ ನಮ್ಮ ಮೈಸೂರಿನ ಭಾಗದ ಕಡೆಗೂ ಗಮನ ಕೊಟ್ಟು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೆಗೌಡ .— ಕಬಿನಿ ಎರಡನೇ ಹಂತದ ಯೋಜನೆಯಿಂದ ಒಂದೂವರೆ ಲಕ್ಷ ಎಕರೆ ನೀರಾವರಿ ಆಗ ಬೇಕು ಎಂಬ ವಿಚಾರವಿದೆ. ಆದರೆ ಇದಕ್ಕೆಲ್ಲಾ ಸಂಪನ್ಮೂಲದ ಕೊರತೆ ಇದೆ. ಅದಕ್ಕೆ ನಾನು ಮೊದಲೇಹೇಳಿದ ಹಾಗೆ ಕೆಲವು ಕಾಠಿಣ್ಯದ ಕ್ರಮವನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ಚುನಾವಣೆಗೋಸ್ಕರವಾಗಿ, ಬರೀ ಓಟಿಗೋಸ್ಕರಿವಾಗಿ, ಮನಸ್ಸಿಗೆ ಬಂದ ಹಾಗೆ ನಿರ್ಣಯ ಮಾಡುವುದಾದರೆ, ಯಾವ ಕೆಲಸವೂ ಆಗುವುದಿಲ್ಲ. ಇವತ್ತು ಕಬಿನಿ ಎರಡನೇ ಯೋಜನೆ, ಮಲಪ್ರಭಾ ಲಿಫ್ಟ್ ಇರಿಗೆಷನ್, ಅಪ್ಪರ್ ಕೃಷ್ಣಾ, ಹಿಪ್ಪರಿ ಡ್ಯಾಂ ಇವೆಲ್ಲವನ್ನೂ ನಾವು ತೆಗೆದುಕೊಳ್ಳವುದಾದರೆ ಸುಮಾರು ೧೦೦೦ ಕೋಟಿ ಖರ್ಚು ಮಾಡಿದರೂ ಅದರ ಎರಡರಷ್ಟು ಖರ್ಚಾದರೂ ಸಹ ಅದನ್ನೆಲ್ಲಾ ಎಲ್ಲಿಂದ ತರಬೇಕು ? ಅದಕ್ಕಾಗಿಯೇ ಈ ಸದನ ಮಾಡಬೇಕು ಎಂದು ಸಲಹೆ ಕೊಟ್ಟಿರತಕ್ಕ ಶ್ರೀ ರಂಗನಾಥ್‌ರವರು ಮತ್ತು ಶ್ರೀ ಹುಚ್ಚ ಮಾಸ್ತಿಗೌಡರವರಿಗೆ ನಾನು ಅಭಾರಿಯಾಗಿದ್ದೇನೆ. ನೀರಾವರಿ ವಿಷಯದಲ್ಲಿ ಬಹುಶಃ ಇರತಕ್ಕಂಥ ಇವತ್ತಿನ ಚಿತ್ರವನ್ನು ಸಭೆಯ ಗಮನಕ್ಕೇ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಭದ್ರಾ ಮಾಡರ್ನೈಜೇಷನ್ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—೬೦ ಕೋಟಿ ಖರ್ಚು ಮಾಡಬೇಕಾಗುತ್ತದೆ. ತಾವು ಹಣ ಕೊಟ್ಟರೆ ಮಾಡುತ್ತೇವೆ. ಇದಕ್ಕಾಗಿ ನಾವು ವರ್ಲ್ಡ್ ಬ್ಯಾಂಕ್‌ನವರಿಂದ ಸಹಾಯ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಒಂದೇ ಅಲ್ಲದೇನೇ ತುಂಗಭದ್ರಾ, ಮಲಪ್ರಭಾ ಮತ್ತು ಘಟಪ್ರಭಾಕ್ಕೂ ಸಹ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಮತ್ತು ನೀರಾವರಿ ಇಲಾಖೆಯ ಬಗ್ಗೆ ನಾನಾ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಅವರು ಪ್ರಸ್ತಾಪ ಮಾಡಿರತಕ್ಕ ಎಲ್ಲಾ ವಿಷಯಗಳ ಬಗ್ಗೆ ನಾನು ಸಾಧ್ಯವಾದಷ್ಟು ಮಟ್ಟಿಗೆ ಪ್ರಸ್ತಾಪ ಮಾಡಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಲೋಕೋಪಯೋಗಿ ಇಲಾಖೆಯಲ್ಲಿ ಇವತ್ತು ಸುಮಾರು ೭೭ ಸಹಸ್ರ ಕಿಲೋ ಮೀಟರ್ ರಸ್ತೆಗಳು ನಮ್ಮ ವಶದಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ರಸ್ತೆಯ ಬೆಳವಣಿಗೆಯನ್ನು ನೋಡಿದರೆ ನಾವು ಆಲ್ ಇಂಡಿಯಾ ಆವರೇಜ್‌ಗಿಂತ ಸ್ವಲ್ಪ ಮುಂದಿದ್ದೇವೆ. ೪೯ ಪರ್ಸೆಂಟ್ ಆಲ್ ಇಂಡಿಯಾ ಆವರೇಜ್ ಇದ್ದರೆ ನಮ್ಮದು ೫೨ ಪರ್ಸೆಂಟ್ ಇದೆ. ಆದರೆ ಒಂದನ್ನು ಮಾತ್ರ ನಾವು ಈ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದು ಏನೆಂದರೆ ನಾವು ಗಾತ್ರದಲ್ಲಿ ಬೆಳೆದಿದ್ದೇವೆ, ಆದರೆ ಗುಣಮಟ್ಟದಲ್ಲಿ ಬೆಳೆಯುವುದಕ್ಕೆ ಆಗಿಲ್ಲ. ಇದಕ್ಕೆ ಕಾರಣವಿಷ್ಟೇ, ಕೊಡತಕ್ಕ ಹಣ ಸಾಕಷ್ಟು ಇಲ್ಲ. ಸಾಕಷ್ಟು ಹಣವನ್ನು ಇದರಲ್ಲಿ ತೊಡಗಿಸತಕ್ಕುದರಲ್ಲಿ ನಾವು ಸಮರ್ಥರಿಲ್ಲ. ಇದು ಈಗ ಇರತಕ್ಕಂಥ ವಾಸ್ತವಾಂಶ. ನಾವು ಸ್ಟೇಟ್ ಹೈವೇಸ್‌ಗೆ ೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಈ ವರ್ಷ ಆ ರೀತಿಯಾಗಿ ಖರ್ಚು ಮಾಡಬೇಕೆಂದು ನಿರ್ಣಯಮಾಡಿದ್ದೇವೆ, ಮೇಜರ್ ಡಿಸ್ಟ್ರಿಕ್ ರೋಡ್ಸ್ ಪರ್ ಕಿಲೋಮೀಟರ್‌ಗೆ ೧೫ ಸಾವಿರ ಮಾಡಬೇಕೆಂದು ಇದ್ದೇವೆ. ಬೇರೆ ಡಿಸ್ಟ್ರಿಕ್ಟ್ ರೋಡ್ಸ್‌ಗೆ ೩,೬೦೦ ಮಾಡಬೇಕೆಂದು, ವಿಲೇಜ್ ರೋಡ್ಸ್ ೧ ೫೦೦ ಕಿಲೋ ಮೀಟರ್ ಮಾಡಬೇಕೆಂದು ಮಾಡಿದ್ದೇವೆ. ಫೈನಾನ್ಸ್ ಕಮಿಷನ್‌ರವರ ಮುಂದೆ, ಎಕನಾಮಿಕ್ ಪ್ಲಾನಿಂಗ್ ಕೌನ್ಸಿಲ್‌ರವರ ಮುಂದೆ ನಾವು ನಮ್ಮ ಬೇಡಿಕೆಯನ್ನು ಇಟ್ಟಿದ್ದೇವೆ. ಅಂದರೆ ಸ್ಟೇಟ್ ಹೈವೇಗೆ ೯ ಸಾವಿರ ಖರ್ಚು ಮಾಡಬೇಕಾಗುತ್ತದೆ, ಮೇಜರ್ ಡಿಸ್ಟ್ರಿಕ್ಟ್ ರೋಡುಗಳಿಗೆ ೬ ಸಾವಿರ ಖರ್ಚು ಮಾಡಬೇಕಾಗುತ್ತದೆ, ಬೇರೆ ಡಿಸ್ಟ್ರಿಕ್ಟ್ ರೋಡ್ಸ್‌ಗೆ ೫೪೦೦, ವಿಲೇಜ್ ರೋಡ್ಸ್ ಪರ್ ಕಿಲೋಮೀಟರ್‌ಗೆ ೨ ೫೦೦ ರೂ. ಖರ್ಚು ಮಾಡಬೇಕೆಂದು ಹೇಳಿ ಪ್ರೊಜೆಕ್ಷನ್ ಇಟ್ಟಿದ್ದೇವೆ. ಅಂತಿಮವಾದ ನಿರ್ಣಯ ಆಗಿಲ್ಲ. ಆದರೆ ೧೯೮೩-೮೪ ರಲ್ಲಿ ನಮ್ಮ ಮೊದಲಿನ ಅಂದಾಜಿನ ಪ್ರಕಾರವಾಗಿ ೨೭ ಕೋಟಿ ೭೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇದ್ದೇವೆ ಅದೇ ಹಿಂದಿನ ಸರ್ಕಾರದವರು ಹಿಂದಿನವರ್ಷದಲ್ಲಿ ೨೪ ಕೋಟಿ ೮೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಎಕಾನಮಿಕ್ ಕೌನ್ಸಿಲ್‌ನವರು ಒಪ್ಪಿಕೊಂಡರೆ ಆಗ ನಾವು ಸುಮಾರು ೩೭ ಕೋಟಿ ರೂಪಾಯಿಗಳನ್ನು ಮೇನ್‌ಟೆನೆನ್ಸ್ ಗ್ರಾಂಟಿನಿಂದ ಖರ್ಚು ಮಾಡಲಿಕ್ಕೆ ಅವಕಾಶವಾಗುತ್ತದೆ. ಇದೆಲ್ಲಾ ಅಂತಿಮವಾಗಿ ನಿರ್ಣಯವಾಗತಕ್ಕದ್ದು ಎಲ್ಲಾ ಎಕನಾಮಿಕ್ ಪ್ಲಾನಿಂಗ್ ಕಮಿಷನ್‌ರವರ ರಿಪೋರ್ಟ್‌ನ ಆಧಾರದ ಮೇಲೆ ಎನ್ನತಕ್ಕದ್ದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

೧ ಪಿ.ಎಂ.

ಇನ್ನು ಟಿ.ಡಿ.ಬಿ. ರಸ್ತೆಗಳು ೨೬೬೨೦ ಕಿಲೋಮೀಟರ್‌ಗಳು ಇವೆ. ಇವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಇದರ ಜೊತೆಗೆ ಐಸಿಆರ್‌ಸಿ.ಯ ಮೊದಲನೇ ಫೇಸ್‌ನಲ್ಲಿ ಕೆಲಸ ಮಾಡಿರುವುದು ೧೦೪೯ ಕಿಲೋಮೀಟರ್, ೨ನೇ ಫೇಸ್‌ನಲ್ಲಿ ೫೦೭೧ ಕಿಲೋಮೀಟರ್, ೩ನೇ ಫೇಸ್‌ನಲ್ಲಿ ೩೯೦೫ ಕಿಲೋಮೀಟರ್ ಮತ್ತು ೪ನೇ ಫೇಸ್‌ನಲ್ಲಿ ಮೆಟಲ್‌ವರ್ಕ್ ಪೂರ್ಣ ಮಾಡಿರುವುದು ೭೪೯ ಕಿಲೋಮೀಟರ್. ಈ ರಸ್ತೆಗಳ ಜೊತೆಗೆ ಎಂ.ಎನ್.ಪಿ. ರಸ್ತೆಗಳು ೧೪೯ ಕಿಲೋಮೀಟರ್ ಮತ್ತು ಅಂಗನವಾಡಿ ರಸ್ತೆ ೧೧೯ ಕಿಲೋಮೀಟರ್ ಇದೆ ಹೀಗೆ ಇರತಕ್ಕ ಎಲ್ಲ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರೇ ವಹಿಸಿಕೊಳ್ಳಬೇಕೆಂದು ಸದಸ್ಯರ ಒತ್ತಡ ಇದೆ. ಈ ಎಲ್ಲ ಕೆಲಸಗಳನ್ನು ತೆಗೆದುಕೊಂಡು ಮಾಡುತ್ತೇವೆಂದರೆ ೨೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ವಿವಿಧ ಹಂತಗಳಲ್ಲಿರತಕ್ಕ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡು ಮಾಡಬೇಕೆಂದರೆ ಇದರ ಕಷ್ಟ ಎಷ್ಟು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಭಾರ ಬರುತ್ತದೆ, ಇದರ

ಜೊತೆಗೆ ೧೬೦೬ ರಸ್ತೆರಹಿತ ಗ್ರಾಮಗಳೇನಿವೆ ಅದಕ್ಕೆ ಆದ್ಯತೆ ಕೊಟ್ಟು ಕೆಲಸ ಮಾಡಬೇಕೆಂದರೆ ೪೦-೫೦ ಕೋಟಿ ರೂಪಾಯಿ ಹಣ ಬೇಕಾಗುತ್ತದೆ ಇದನ್ನೆಲ್ಲ ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಈ ಇಲಾಖೆಯಲ್ಲಿ ಕೂಡ ಸಂಪನ್ಮೂಲದ ಕೊರತೆ ಇದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ದೊಡ್ಡಬೋರೇಗೌಡ.—ವಿಶಾಲ ಕರ್ನಾಟಕ ಆದಮೇಲೆ ಇದುವರೆಗೆ ಅಂದರೆ ಸುಮಾರು ೩ ಗಂಟೆಗಳ ಕಾಲ ಮಂತ್ರಿಗಳು ಪ್ರಸ್ತಾಪ ಮಾಡಿರುವುದು ಹೈದರಾಬಾದ್ ಕರ್ನಾಟಕ ಮತ್ತು ಮಹಾರಾಷ್ಟ್ರ ಕರ್ನಾಟಕಕ್ಕೆ ಎಷ್ಟೆಷ್ಟು ಹಣವನ್ನು ಒದಗಿಸಿದ್ದೇವೆ ಎಂಬುದನ್ನು ಮಾತ್ರ ಹಳೇ ಮೈಸೂರು ಭಾಗಕ್ಕೆ ಎಷ್ಟು ಹಣ ಒದಗಿಸಿದ್ದಾರೆ ಮತ್ತು ಅಲ್ಲಿನ ಅಭಿವೃದ್ಧಿ ಕಾರ್ಯದಲ್ಲಿ ಸರ್ಕಾರ ಏನು ಆಸಕ್ತಿ ವಹಿಸಿದೆ ಎಂಬುದನ್ನು ಹೇಳಲಿಲ್ಲ. ಹುಚ್ಚಮಾಸ್ತಿಗೌಡರು ಮಾತನಾಡುತ್ತಾ, ಹಳೇ ಮೈಸೂರು ಭಾಗದಲ್ಲಿರತಕ್ಕ ಕೆರೆಗಳು ನೂರಾರು ವರ್ಷಗಳ ಹಿಂದೆ ನಿರ್ಮಾಣವಾದ ಕಾರಣ ಅವುಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ಮತ್ತು ಅವುಗಳ ರಿಪೇರಿ ಬಗ್ಗೆ ಏನು ಮಾಡಿದ್ದೀರೆಂದು ಕೇಳಿದರು. ಅದರ ಬಗ್ಗೆ ಮಂತ್ರಿಗಳು ಹೇಳಲಿಲ್ಲ. ಇವತ್ತಿನ ದಿವಸ ಬಹುತೇಕ ಕೆರೆಗಳನ್ನು ಒತ್ತುವರಿ ಮಾಡಿದ್ದಾರೆ ಇದರ ಬಗ್ಗೆ ಸರ್ಕಾರದವರು ಶಿಸ್ತಿನ ಕ್ರಮ ಕೈಗೊಳ್ಳಬೇಕು. ಸಿದ್ಧರಾಮಪ್ಪನವರು ಮಾತನಾಡುತ್ತಾ, ಕಾವೇರಿ ವಿವಾದದ ಬಗ್ಗೆ ಹೇಳಿದರು ಮತ್ತು ಕಾವೇರಿಯಿಂದ ನೀರು ತರುವ ವಿಚಾರದಲ್ಲಿ ಹಿಂದೆ ಸರ್ವೆ ಆಗಿದ್ದರೂ ಆ ಬಗ್ಗೆ ಸರ್ಕಾರ ಏನೂ ಕಾರ್ಯಕ್ರಮ ಕೈಗೊಂಡಿಲ್ಲವೆಂದರು. ಆ ಬಗ್ಗೆ ಕೂಡ ಮಂತ್ರಿಗಳು ಹೇಳಬೇಕು

ಶ್ರೀ ಹೆಚ್.ಡಿ. ದೇವೇಗೌಡ,—ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಹಣ ಒದಗಿಸಿದ್ದೇವೆ. ಎಂಬುದನ್ನು ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ತುಂಬ ವಿವರವಾಗಿ ಹೇಳಬೇಕೆಂದರೆ ಇನ್ನೂ ಎರಡು ಗಂಟೆ ಕಾಲ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ,—ಅಡ್ಡಿಯಿಲ್ಲ ಏನಾಗಿದೆ ಎಂಬುದನ್ನು ಕೇಳಬೇಕಲ್ಲ.

ಶ್ರೀ ದೊಡ್ಡಬೋರೇಗೌಡ.—ಕಳೆದ ೧೫ ವರ್ಷಗಳಿಂದ ಈ ಭಾಗಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ಇದು ಅನ್ನದ ಮತ್ತು ನೀರಿನ ಸಮಸ್ಯೆ. ನಮಗೆ ನೀರು ಮತ್ತು ಅನ್ನ ಬಹಳ ಮುಖ್ಯ. ಇದು ಹಳೆಯ ಸಮಸ್ಯೆ.

ಶ್ರೀ ಕೆ.ಹೆಚ್, ರಂಗನಾಥ್.—ಪುಸ್ತಕ ಕೊಟ್ಟಿದ್ದಾರೆ, ಓದಿ.

ಶ್ರೀ ದೊಡ್ಡಬೋರೇಗೌಡ.—ಅಲ್ಲಿ ವ್ಯವಸಾಯ ಮಾಡುವುದಕ್ಕಾಗುತ್ತಿಲ್ಲ ತಾವು ವಕೀಲರು, ಅವರು ರಾಜಕಾರಣಿಗಳು, ನಿಮಗೆ ಇದು ಗೊತ್ತಾಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ —ಈ ವರ್ಷ ರಸ್ತೆ ಕೆಲಸಕ್ಕಾಗಿ ಎಷ್ಟು ಹಣ ಇಟ್ಟಿದ್ದೇವೆಂಬ ಜಿಲ್ಲಾವಾರು ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತೇನೆ, ಬೆಂಗಳೂರಿಗೆ ೧೦೭.೬ ಲಕ್ಷ ಬೆಳಗಾಂಗೆ ೧೪೯.೧೭ ಲಕ್ಷ ದಕ್ಷಿಣ ಕನ್ನಡಕ್ಕೆ ೧೭೯.೯೬ ಲಕ್ಷ ಗುಲ್ಬರ್ಗಕ್ಕೆ ೧೩೫ ಲಕ್ಷ ಹಾಸನಕ್ಕೆ ೯೬ ಲಕ್ಷ ಅದರಲ್ಲಿ ಹೊಳೇನರಸೀಪುರಕ್ಕೆ ಕೆಲಸ ಮಾಡಬೇಡಿ ಅಂದರೆ...

ಶ್ರೀ ಜಿ.ಪಿ ಒಡೆಯರಾಜ್.—ಕಳೆದ ಒಂದೆರಡು ವರ್ಷಗಳಿಂದ ಹೊಳೇನರಸೀಪುರಕ್ಕೆ ಎಷ್ಟು ಖರ್ಚಾಗಿದೆ?

ಶ್ರೀ ಹೆಚ್.ಡಿ, ದೇವೇಗೌಡ.—ಆಡಳಿತ ಮಂಜೂರಾತಿ ಕೊಟ್ಟಿರಬಹುದು ಅಷ್ಟೆ. ನಾನು ಇದನ್ನು ಸೀರಿಯಸ್ ಆಗಿ ಹೇಳುತ್ತಿದ್ದೇನೆ. ಹಿಂದಿನ ವರ್ಷದ್ದನ್ನು ಬೇಕಾದರೆ ಸಭೆಯ ಮುಂದಿಡುತ್ತೇನೆ,

ಶ್ರೀ ಸಿ. ಬೈರೇಗೌಡ.—ಸಣ್ಣ ನೀರಾವರಿ ದೊಡ್ಡ ನೀರಾವರಿ ಇತ್ಯಾದಿಗಳಿಗೆ ಸರ್ಕಾರದ ಹಣ ಖರ್ಚು ಮಾಡತಕ್ಕದ್ದು ಏನಿದೆ ಆ ಎಲ್ಲ ಬಾಬುಗಳ ವಿವರಗಳನ್ನು ಜಿಲ್ಲಾವಾರು ಒದಗಿಸಿದರೆ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು,—ಬೈರೇಗೌಡರು ಹೇಳಿದ ಹಾಗೆ ಜಿಲ್ಲಾವಾರು ವಿವರಗಳನ್ನು ಕೊಡತಕ್ಕದ್ದು ಒಳ್ಳೆಯದು. ಅದನ್ನು ಸದನದ ಮುಂದೆ ಹೇಳಿಕೆ ಮೂಲಕವಾಗಲಿ ಅಥವಾ ಲಿಖಿತ ಮೂಲಕವಾಗಲಿ ಕೊಟ್ಟರೆ ನಮಗೆ ಒಂದು ರೀತಿಯ ಸಮಾಧಾನವಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಅದನ್ನು ಟೈಂ ಕೊಟ್ಟರೆ ಕೊಡುತ್ತೇನೆ. ಸಭೆಗೆ ಯಾವುದನ್ನೂ ಮರೆಮಾಚಬೇಕೆಂಬ ಉದ್ದೇಶ ಇಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನೀರಾವರಿ ವಿಷಯ ಪ್ರಸ್ತಾಪ ಮಾಡಿದಿರಿ. ಬೈರೇಗೌಡರು ಮತ್ತು ದೊಡ್ಡಬೋರೇಗೌಡರು ಹೇಳಿದ ಹಾಗೆ ಹಳೆ ಮೈಸೂರು ಭಾಗದಲ್ಲಿ ಯಾವ್ಯಾವ ಕೆರೆಗಳನ್ನು ಕಟ್ಟಿದ್ದಾರೆ ಅವುಗಳ ಜೀರ್ಣೋದ್ಧಾರ ಮಾಡುವುದಕ್ಕೆ (ರಿಪೇರಿ ಮಾಡುವುದಕ್ಕೆ) ಹಣದ ಕೊರತೆ ಇದೆ ಎಂದು ಹೇಳುತ್ತಿದ್ದೀರಿ. ಈಗ ಹೊಸದಾಗಿ ಬೆಂಗಳೂರು ಜಿಲ್ಲೆಯಲ್ಲಾಗಲೀ ಕೋಲಾರ ಜಿಲ್ಲೆಯಲ್ಲಾಗಲಿ ಕೆರೆಗಳನ್ನು ಕಟ್ಟುವುದು ಬೇಡ. ಕಟ್ಟಿರುವ ಕೆರೆಗಳನ್ನು ದುರಸ್ತಿ ಮಾಡಿದರೆ ಸಾಕು ಅವುಗಳಿಂದ ಸಾಕಷ್ಟು ನೀರಾವರಿ ಆಗುತ್ತದೆ.

ಶ್ರೀ ಹೆಚ್,ಡಿ. ದೇವೇಗೌಡ —ಹಳೇ ಮೈಸೂರಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಕಟ್ಟಿದ ಕೆರೆಗಳನ್ನು ಮೆಯಿಂಟೇನ್ ಮಾಡುವುದಕ್ಕಾಗುತ್ತಿಲ್ಲ. ಅದರ ಬಗ್ಗೆ ರಂಗನಾಥ್‌ರವರು ಹೇಳಿದರು, ಆ ಭಾಗದಲ್ಲಿ ಅದರ ಬೆಳವಣಿಗೆಯ ವೇಗ ಏನಿದೆ ಅದನ್ನು ಸದಸ್ಯರು ಅರ್ಥ ಮಾಡಿಕೊಂಡಿಲ್ಲವೆಂದರು. ಸಣ್ಣ ನೀರಾವರಿಗಾಗಲಿ ದೊಡ್ಡ ನೀರಾವರಿಗಾಗಲಿ. ರಸ್ತೆಗಳಿಗಾಗಲೀ ಯಾವುದಕ್ಕೆ ಆಗಲಿ ಸರ್ಕಾರ ಎಷ್ಟು ಖರ್ಚು ಮಾಡಿದೆವೆಂಬುದನ್ನು ಹೇಳುವುದಕ್ಕೆ ಹಿಂದೆ ಬೀಳುವುದಿಲ್ಲ. ೧೯೮೦–೮೧ರಲ್ಲಿ ರಸ್ತೆಗಳ ಹೊಸ ಕೆಲಸಗಳನ್ನು ತೆಗೆದುಕೊಳ್ಳಲಾಗಿತ್ತು. ೧೯೮೦–೮೧ರಲ್ಲಿ ೬೨ ೮೧–೮೨ರಲ್ಲಿ ೭೮ ಮತ್ತು ೮೨–೮೩ರಲ್ಲಿ ೪೯೧ ಹೊಸ ರಸ್ತೆಕೆಲಸಗಳನ್ನು ತೆಗೆದುಕೊಂಡಿದ್ದೇವೆ. ೧೯೮೩–೮೪ರಲ್ಲಿ ೬೬೭ ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಅದೇರೀತಿ ೮೦–೮೧ರಲ್ಲಿ ೨, ೮೧–೮೨ರಲ್ಲಿ ೪೨ ೮೨–೮೩ರಲ್ಲಿ ೧೭೮ ಹೊಸ ಸೇತುವೆ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ೮೩–೮೪ರಲ್ಲಿ ೨೮೨ ಹೊಸ ಸೇತುವೆಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ನೆನೆಗುದಿಗೆ ಬಿದ್ದ ಕೆಲವು ಸೇತುವೆಗಳು ಏನಿದ್ದವು ಅವನ್ನು ತೆಗೆದುಕೊಂಡಿದ್ದೇವೆ. ೧೯೬೯ರಲ್ಲಿ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ಕಟ್ಟೆ ಕ್ಯಾತನಹಳ್ಳಿ ಎಂಬ ಸೇತುವೆಯನ್ನು ಮಂಜೂರ್ಮಾಡಿದರು. ಅದು ನಿಂತು ಹೋಗಿತ್ತು. ಅದನ್ನು ಈಗ ಕ್ಲಿಯರ್ ಮಾಡಿದ್ದೇವೆ. ಅದೇರೀತಿ ೧೪ ವರ್ಷಗಳಿಂದ ನಿಂತಿದ್ದ ಮಹದೇವಪುರದ ಸೇತುವೆ ಕೆಲಸವನ್ನು ಇವತ್ತು ಕ್ಲಿಯರ್ ಮಾಡಿದ್ದೇವೆ. ಈ ಪ್ರಕಾರವಾಗಿ ನೆನೆಗುದಿಗೆ ಬಿದ್ದ ಕೆಲಸಗಳಿಗೆ ಸಹ ಆದ್ಯತೆ ಕೊಟ್ಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ,

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಯಾರೂ ಅನ್ಯಥಾ ಭಾವಿಸಬಾರದು. ನಮ್ಮ ಆನ್ಯುಯಲ್ ಪ್ಲಾನ್‌ನಲ್ಲಿ ಇತ್ತ ಕಡೆ ಗಮನ ಕಡಿಮೆಯಾಗಿತ್ತು. ಕೊನೇ ಗಳಿಗೆಯಲ್ಲಿ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಒತ್ತಡ ತಂದಮೇಲೆ ಇಷ್ಟೊಂದು ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬೇರೆ ಖರ್ಚಿನಲ್ಲಿ ಕಡಿಮೆ ಮಾಡಿ ಈ ಕಡೆ ೧೫ ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ನಿರ್ಣಯ ತೆಗೆದುಕೊಂಡರು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಅಂದರೆ ಸುಮಾರು ೧೦ ಕೋಟಿ ರೂಪಾಯಿಗಳು ಕಮ್ಯುನಿಕೇಷನ್‌ನ ಹೊಸ ಕೆಲಸಗಳಿಗೆ, ನೀರಾವರಿಗೆ ಮೂರು ಕೋಟಿ ರೂಪಾಯಿಗಳು, ಮೇಜರ್ ಇರಿಗೇಷನ್‌ನಲ್ಲಿ ಮಂಡ್ಯ ಮಾಡ್ರನೈಜೇಷನ್ ಆಫ್ ಕೆನಾಲ್‌ಗೆ ೨ ಕೋಟಿ ರೂಪಾಯಿಗಳು, ಈ ಸಾರಿ ಕೊಟ್ಟಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಇಷ್ಟು ಹಣ ಖರ್ಚಾಗಿರಲಿಲ್ಲ. ಕೊನೇ ಗಳಿಗೆಯಲ್ಲಿ ೧೫ ಕೋಟಿ ರೂಪಾಯಿಗಳನ್ನು ಕೊಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಔದಾರ್ಯ ತೋರಿಸಿದರು. ಅವರಿಗೆ ಅಭಾರಿಯಾಗಿದ್ದೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಹೇಳುವುದಾದರೆ ಇಡೀ ರಾಷ್ಟ್ರದ ಅಂಕಿಅಂಶವನ್ನು ನೋಡಿದಾಗ ನಮ್ಮ ರಾಜ್ಯಕ್ಕೆ ಕಡಿಮೆ ಕೆಲಸ ಆಗಿದೆ ಎಂದು ಹೇಳಬೇಕಾಗಿದೆ. ಹಿಂದಿನ ಸರ್ಕಾರ ಕೂಡ ಈ ವಿಷಯದಲ್ಲಿ ಹೆಚ್ಚು ಪ್ರಯತ್ನ ಮಾಡಿದೆ; ನಾಲ್ಕಾರು ಪತ್ರಗಳನ್ನು ಹಿಂದಿನ ಮಂತ್ರಿಗಳು ಬರೆದಿದ್ದಾರೆ. ಆದರೂ ಹೊಸ ರಸ್ತೆಗಳ ಸೇರ್ಪಡೆಗೆ ಅವಕಾಶ ಆಗಿಲ್ಲ. ಈ ವರ್ಷ ೧೯೮೩–೮೪ರಲ್ಲಿ ೧೧ ಕೋಟಿ ೨೧ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡತಕ್ಕ ವ್ಯವಸ್ಥೆ ಮಾಡಿಕೊಂಡಿದ್ದೇವೆ. Improvement and strengthening ಗೆ ೯ ಕೋಟಿ ೬೦ ಲಕ್ಷ ರೂಪಾಯಿಗಳು, ಸೇತುವೆಗಳಿಗೆ ೧ ಕೋಟಿ ೬೧ ಲಕ್ಷ ರೂಪಾಯಿಗಳು ಒಟ್ಟು ೧೧ ಕೋಟಿ ೨೧ ಲಕ್ಷ ರೂಪಾಯಿಗೆ ಖರ್ಚು ಮಾಡುವ ವ್ಯವಸ್ಥೆಯನ್ನು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಾಡಿದ್ದೇವೆ. ಅರೇಬಿಯನ್ ಕಂಟ್ರಿಯಿಂದ ಬರುವ ಅಸಿಸ್ಟೆನ್ಸ್ ಮತ್ತು ವಿಶ್ವಬ್ಯಾಂಕ್ ಸಹಾಯದಿಂದ ಕೆಲವು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಶಿಫಾರಸು ಮಾಡಿದೆ. ಅದಕ್ಕೆ ೪೬ ಕೋಟಿ ೨೫ ಲಕ್ಷ ರೂಪಾಯಿಗಳು ಬೇಕು ಎಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ

ಕಳುಹಿಸಿಕೊಟ್ಟಿದ್ದೇವೆ, ಪ್ರಾಮುಖ್ಯವಾಗಿ ಬೆಂಗಳೂರು ಮತ್ತು ತುಮಕೂರು ರಸ್ತೆಯಲ್ಲಿ ಟ್ರಾಫಿಕ್ ಹೆಚ್ಚಾಗಿರುವುದರಿಂದ ಅದನ್ನು ನಾಲ್ಕು ಲೈನ್ ಮಾಡುವುದಕ್ಕೆ ೧೭ ಕೋಟಿ ೧೦ ಲಕ್ಷ ರೂಪಾಯಿಗಳು, re-construction of bridge across Netravathy – ೪ ಕೋಟಿ ರೂಪಾಯಿಗಳು, ನ್ಯಾಷನಲ್ ಹೈ ವೇ ನಾಲ್ಕರಲ್ಲಿ ಬೈ ಪಾಸ್ ಕನೆಕ್ಟಿಂಗ್ ರಸ್ತೆ ಮಾಡುವುದಕ್ಕೆ ಬೆಂಗಳೂರು ನಗರ ಕಾರ್ಪೊರೇಷನ್ ಲಿಮಿಟ್‌ನಲ್ಲಿ ೨೦ ಕೋಟಿ ೧೫ ಲಕ್ಷ ರೂಪಾಯಿಗಳು, ಹುಬ್ಬಳ್ಳಿ ಧಾರವಾಡ ಕಾರ್ಪೋರೇಷನ್ ಲಿಮಿಟ್‌ನಲ್ಲಿ ಕಂಬೈಂಡ್ ಬೈಪಾಸ್ ರಸ್ತೆ ನಿರ್ಮಾಣಕ್ಕೆ ೫ ಕೋಟಿ ರೂಪಾಯಿಗಳು ಹೀಗೆ ೪೬ ಕೋಟಿ ರೂಪಾಯಿಗಳ ಕಾರ್ಯಕ್ರಮ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಹಣ ಸಿಗತಕ್ಕ ಆಶಯ ಇದೆ. ಕೇಂದ್ರ ಸರ್ಕಾರ ಇದರ ಬಗ್ಗೆ ಕೊಟ್ಟಿರುವ ಇಂಡಿಕೇಷನ್ ಪ್ರಕಾರ ನಮಗೆ ಆರ್ಥಿಕ ನೆರವು ದೊರೆಯಬಹುದೆಂಬ ಖಚಿತ ಅಭಿಪ್ರಾಯ ನನಗಿದೆ. ಹೊಸ ರಸ್ತೆಗಳಲ್ಲಿ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಕಾರವಾರ ನ್ಯಾಷನಲ್ ಹೈವೇ ೭ರಿಂದ ೧೭ರವರೆಗೆ ಊಟಿಯಿಂದ ಕಾರವಾರದವರೆಗೆ ೪೨೨ ಕಿಲೋಮೀಟರ್ ತೆಗೆದುಕೊಳ್ಳಬೇಕು ಎಂಬುದು ಒಂದು : ಬೆಂಗಳೂರು, ಮೈಸೂರು, ನಂಜನಗೂಡು, ಗುಂಡ್ಲುಪೇಟೆ ಊಟಿ, ಕೊಯಮತ್ತೂರು ಮಾರ್ಗವಾಗಿ ಹೋಗುವ ೨೨೦ ಕಿಲೋಮೀಟರ್: ಮೈಸೂರು, ಶ್ರೀರಂಗಪಟ್ಟಣ, ನಾಗಮಂಗಲ, ಸಿ.ಎನ್. ಹಳ್ಳಿ, ಹಿರಿಯೂರು, ಬಳ್ಳಾರಿ, ಸಿರಗುಪ್ಪ: ಶಹಾಪುರ, ಗುಲ್ಬರ್ಗ, ಹೈದರಾಬಾದ್ ಇದಕ್ಕೆ ಕನೆಕ್ಟ್ ಮಾಡುವಂಥ ೬೨೦ ಕಿಲೋಮೀಟರ್ ರಸ್ತೆ, ತುಮಕೂರು ಹೊನ್ನಾವರ ರಸ್ತೆ ೩೬೨ ಕಿಲೋಮೀಟರ್ : ಬೆಂಗಳೂರು, ಮೈಸೂರು, ಮಡಿಕೇರಿ, ಮಂಗಳೂರು ರಸ್ತೆಯಲ್ಲಿ ೩೮೬ ಕಿಲೋಮೀಟರ್ ; ಬೆಳಗಾಂ, ಬಿಜಾಪುರ, ಹುಮ್ನಾಬಾದ್ ರಸ್ತೆಯಲ್ಲಿ ೩೬೪ ಕಿಲೋಮೀಟರ್, ಹೀಗೆ ೨,೪೫೧ ಕಿಲೋಮೀಟರ್ ರಸ್ತೆಯನ್ನು ನ್ಯಾಷನಲ್ ಹೈವೇಗೆ ಸೇರಿಸಿಕೊಳ್ಳಬೇಕು ಎಂದು ಕೇಂದ್ರಕ್ಕೆ ಹೇಳಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ ನಮ್ಮ ರಾಜ್ಯದಲ್ಲಿ ತುಂಬಾ ಕಡಿಮೆ ಪ್ರಮಾಣದಲ್ಲಿರುವುದರಿಂದ ಇದನ್ನು ಸೇರಿಸಿಕೊಳ್ಳಬೇಕು ಎಂದು ಕೇಂದ್ರಕ್ಕೆ ಒತ್ತಾಯ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಬಗ್ಗೆ ಪತ್ರ ಬರೆದಿದ್ದಾರೆ, ಬೆಂಗಳೂರು – ತುಮಕೂರು ರಸ್ತೆ ೪ ಲೈನ್ ಮಾಡುವುದನ್ನು ಈ ವರ್ಷ ಕ್ಲಿಯರ್ ಮಾಡುತ್ತೇವೆಂಬ ಇಂಡಿಕೇಷನನ್ನು ನಮಗೆ ಈಗಾಗಲೇ ಕೊಟ್ಟಿದ್ದಾರೆ. ಬಹುಶಃ ಈ ಯೋಜನೆ ಕಾರ್ಯಗತವಾಗುವ ಸಾಧ್ಯತೆ ಇದೆ. ಇನ್ನು ಈ ಸರ್ಕಾರ ಬಂದಮೇಲೆ ಈ ಇಲಾಖೆಯಲ್ಲಿ ಸುಧಾರಣೆ ಏನಾಗಿದೆ ಎಂಬ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಇಲಾಖೆಯ ಬಗ್ಗೆ ಮಾನ್ಯ ಮಿತ್ರರೊಬ್ಬರು ಮಾತನಾಡುತ್ತಾ ಲೋಕೋಪಯೋಗಿ ಇಲಾಖೆ ಎನಿಮಿ ನಂಬರ್ ಟು ಎಂದು ರಾಜಗೋಪಾಲಚಾಯವರು ಹೇಳಿದ್ದನ್ನು ಉದಾಹರಿಸಿದರು. ನಾನು ಇದರ ಬಗ್ಗೆ ವಿವಾದಕ್ಕೆ ಹೋಗುವುದಿಲ್ಲ. ಆದರೆ ಲೋಕೋಪಯೋಗಿ ಇಲಾಖೆ ಬಿಟ್ಟರೆ ಕೆಲಸ ಮಾಡುವುದಕ್ಕೆ ಬೇರೊಂದು ಇಲಾಖೆ ಬೇಕಲ್ಲ, ಹೆಸರು ಏನಾದರೂ ಕರೆಯೋಣ. ಸುಧಾರಣೆಗೆ ಸಲಹೆ ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈ ದೇಶ ನಿರ್ಮಾಣ ಮಾಡತಕ್ಕ, ಈ ದೇಶದ ಅಭಿವೃದ್ಧಿ ಕಾರ್ಯವನ್ನು ಮಾಡತಕ್ಕ ಹೊಣೆಗಾರಿಕೆ ಹೊತ್ತಿರತಕ್ಕವರೇ ಲೋಕೋಪಯೋಗಿ ಇಲಾಖೆಯವರು. ಇವತ್ತು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅವರದು ಮಹತ್ತರ ಪಾತ್ರ ಇದೆಯೆಂಬುದನ್ನು ಯಾರು ಮರೆಯುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿ ಇಂಜಿನಿಯರಿಂಗ್ ಇಲಾಖೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂಬ ಭಾವನೆ ಇದೆ. ಸ್ವಾಮಿ, ತಾವು ಬೇಸರ ಮಾಡಿಕೊಳ್ಳದಿದ್ದರೆ ಹೇಳುತ್ತೇನೆ ಮುಖ್ಯಮಂತ್ರಿಗಳು ಇದಕ್ಕೆ ಅನುಮತಿ ಕೊಡಬೇಕು ; ಈ ಮಾತನ್ನು ಹೇಳಿದಾಗ ಸರ್ಕಾರದಲ್ಲಿ ಬೇರೆ ಇಲಾಖೆಯ ಬಗ್ಗೆ ದೇವೇಗೌಡರು ದೂರುವುದಕ್ಕೆ ಹೊರಟರು ಎಂಬ ಭಾವನೆ ಬರಬಾರದು ಇಲ್ಲಿ ಏನಾದರೂ ಕೆಲಸ ಮಾಡಿದರೆ ಮಾಡಿರತಕ್ಕ ಕೆಲಸವನ್ನು ಟೇಪ್ ಹಿಡಿದ ಅಳತೆ ಮಾಡಿ ನೋಡುವುದಕ್ಕೆ ಸಾಧ್ಯತೆಯಾದರೂ ಇದೆ. ಆದರೆ ಬೇರೆ ಇಲಾಖೆಗಳಲ್ಲಿ ಅದೂ ಕೂಡ ಕಣ್ಣಿಗೆ ಗೋಚರವಾಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.— ಅಳತೆಗೆ ಟೇಪ್ ಒದಗಿಸಿಕೊಡಿ.

ಶ್ರೀ ಎಚ್.ಡಿ. ದೇವೇಗೌಡ.— ಅಳತೆ ಮಾಡಿ ನೋಡುವುದಕ್ಕೆ ಇಲ್ಲಿ ಏನಾದರೂ ಸಿಗುತ್ತದೆ. ಆದರೆ ಬೇರೆ ಇಲಾಖೆಯಲ್ಲಿ ಅದೂ ಸಿಗುವುದಿಲ್ಲ. ಅಭಿವೃದ್ಧಿ ಇಲಾಖೆಯಲ್ಲಿ, ಅರಣ್ಯ ಇಲಾಖೆಯಲ್ಲಿ, ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯಲ್ಲಿ, ಅಬಕಾರಿ ಇಲಾಖೆಯಲ್ಲಿ, ಏನೇನು ನಡೆಯುತ್ತಿದೆ ಎಂಬುದನ್ನು ನೋಡಿ. ಒಬ್ಬೊಬ್ಬ ಎಕ್ಸೈಜ್ ಇನ್‌ಸ್ಪೆಕ್ಟರ್‌ಗಳು ಎಷ್ಟೆಷ್ಟು ಆಸ್ತಿಗಳನ್ನು ಮಾಡಿಕೊಂಡಿದ್ದಾರೆ ಎಂಬುದನ್ನು ಹುಡುಕಿ ನೋಡಬೇಕು. ಸಾಯಿಲ್ ಕನ್ಸರ್ವೇಷನ್ ಇಲಾಖೆಯಲ್ಲಿ ನೋಡಬೇಕು. ಈ

ಜಾಳಿ ಹೊಸದಲ್ಲ : ಹಿಂದಿನಿಂದ ನಡೆದುಕೊಂಡುಬಂದಿದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಜವಾಬ್ದಾರಿ ಹೊತ್ತಿರತಕ್ಕವರು ತಪ್ಪು ಮಾಡಬಹುದು. ಆದರೆ ಸಾರಾಸಗಟಾಗಿ ಇಲಾಖೆಯನ್ನೇ ದೂಷಣೆ ಮಾಡುವುದಾದರೆ, ಅಲ್ಲಿ ಕೆಲಸ ಮಾಡತಕ್ಕ ಇಂಜಿನಿಯರ್‌ಗಳಿಗೆ ಆ ರೀತಿ ಲೇಬಲ್ ಹಚ್ಚುವುದಾದರೆ ಅವರು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಎಷ್ಟುಮಟ್ಟಿಗೆ ಉತ್ತೇಜನ ಬರುತ್ತದೆ, ಆಸಕ್ತಿ ಬರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್. ಚಿಕ್ಕೇಗೌಡ.— ಕೆಲಸಕ್ಕೆ ಉಪಯೋಗಿಸಿದ ಸಿಮೆಂಟ್, ಕಬ್ಬಿಣವೇ ಕಿತ್ತುಕೊಂಡು ಹೋದರೆ ಏನನ್ನುತ್ತೀರಿ ?

ಶ್ರೀ ಎಂ. ಸೂರ್ಯನಾರಾಯಣರಾವ್.—ರಾಜಗೋಪಾಲಾಚಾರಿಯವರು ಹೇಳಿದ ಮಾತನ್ನು ಹೇಳಿದರು ಎಂದು ಮಂತ್ರಿಗಳು ಹೇಳಿದರು ಪಾಡಿಕೆಯ ಗಾದೆ ಮಾತನ್ನು ಹೇಳಿರುವುದೇ ಹೊರತು ಬೇರೆಯೇನಲ್ಲ. ಆಗಿನ್ನೂ ದೇಶಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. ಅಭಿವೃದ್ಧಿ ಕಾರ್ಯಗಳು ಇಷ್ಟು ಹೆಚ್ಚಾಗಿರಲಿಲ್ಲ

ಶ್ರೀ ಎಂ. ಎಸ್. ಕೃಷ್ಣನ್.— ಚೀಫ್ ಇಂಜಿನಿಯರ್ ೨ ವರ್ಷದಲ್ಲಿ ೩ ಲಕ್ಷ ರೂಪಾಯಿಗಳನ್ನು ಸಂಪಾದಿಸಿ ಆಸ್ತಿಪಾಸ್ತಿಮಾಡಿಕೊಳ್ಳುತ್ತಾನೆ. ಎಕ್ಸೈಜ್ ಇಲಾಖೆಯಲ್ಲಿ ಒಂದೇ ವರ್ಷದಲ್ಲಿ ಮಾಡಿಕೊಳ್ಳುತ್ತಾನೆ, ಇನ್ನೊಂದು ಇಲಾಖೆಯಲ್ಲಿ ಮೂರು ವರ್ಷ ಆಗಬಹುದು. ಅಷ್ಟೇ ವ್ಯತ್ಯಾಸ,

ಶ್ರೀ ಎಚ್. ಡಿ. ದೇವೇಗೌಡ.— ರಾಜಕಾರಣದಲ್ಲಿ ಒಂದೇ ವರ್ಷದಲ್ಲಿ ಮಂತ್ರಿಯಾಗುತ್ತಾರೆ, ಒಂದೇ ವರ್ಷದಲ್ಲಿ ಭವಿಷ್ಯವನ್ನು ಬದಲಾವಣೆ ಮಾಡಿಕೊಳ್ಳುತ್ತಾರೆ. ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.— ನಿಮ್ಮಂಥವರು ಒಂದೇ ಸಾರಿಗೆ ಮಂತ್ರಿಗಳಾದರೆ ತೊಂದರೆಯಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಯಾವರೀತಿ ಬೆಟರ್‌ಮೆಂಟ್ ಲೆವಿ ಹಾಕಬೇಕು ಎಂಬ ಬಗ್ಗೆ ಪರಿಶೀಲನೆ ಮಾಡಲು ಕಮಿಟಿ ಮಾಡುತ್ತಿದ್ದಾರೆ. ಭ್ರಷ್ಟಾಚಾರವನ್ನು ತಡೆಗಟ್ಟಿದರೆ ಈ ತೆರಿಗೆ ಹಾಕುವ ಅವಶ್ಯಕತೆಯೇ ಇರುವುದಿಲ್ಲ. ಭ್ರಷ್ಟಾಚಾರ ಹೇಗೆ ತಡೆಗಟ್ಟಬೇಕು ಎಂಬುದಕ್ಕೆ ಒಂದು ಕಮಿಟಿ ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ರಾಜಕೀಯ ಮಾಡಬಾರದು ಎಂದು ಮೊದಲೇ ನಾನು ಹೇಳಿದ್ದೇನೆ ,ಎಲ್ಲಾ ಬೇಕು. ಕಾಮಧೇನುವಿನ ಕೆಚ್ಚಲಿನಲ್ಲಿ ಕರೆಯುತ್ತಿದ್ದರೆ ಹಾಲು ಬರುತ್ತದೆ. ಆದರೆ ಜಾಸ್ತಿ ಕರೆದರೆ ಹಾಲು ಬರುವುದಿಲ್ಲ, ರಕ್ತ ಬರುತ್ತದೆ. ಭ್ರಷ್ಟಾಚಾರ ತಡೆಗಟ್ಟೋಣ, ಶುಚಿ ಮಾಡೋಣ. ತಾವು ಅದಕ್ಕೆ ಪ್ರಯತ್ನ ಮಾಡಿ, ನಿಮ್ಮ ಮುಂದೆ ಇಲ್ಲದಿದ್ದರೂ ಹಿಂದೆ ಇರುತ್ತೇನೆ,

ಸ್ವಾಮಿ, ಲೋಕೋಪಯೋಗಿ ಇಲಾಖೆಯಲ್ಲಿ ಇವತ್ತು ನಾವು ಅಧಿಕಾರಕ್ಕೆ ಬಂದ ಮೇಲೆ ಏನೇನು ಮಾಡಿದ್ದೇವೆ ಎಂಬುದನ್ನು ಹೇಳಬೇಕಾಗುತ್ತದೆ. ಸಾರ್ವಜನಿಕರ ಹೆಚ್ಚು ಹಣ ಖರ್ಚು ಮಾಡತಕ್ಕ ಇಲಾಖೆ ಇದಾಗಿದೆ. ಈ ಇಲಾಖೆಯಲ್ಲಿ ಏನೇನು ಸುಧಾರಣೆಗಳನ್ನು ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಅದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ಇಲಾಖೆಯನ್ನು ರೀಆರ್ಗನೈಸ್ ಮಾಡಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಪ್ರಾಮಾಣಿಕರಾದ ಹಿರಿಯ ಶ್ರೀ ಬಿ. ಸಿ. ಅಂಗಡಿಯವರ ಮುಖಂಡತ್ವದಲ್ಲಿ ಸುಧಾರಣೆಯ ಬಗ್ಗೆ ಏಕ ಸದಸ್ಯ ಆಯೋಗವನ್ನು ರಚನೆ ಮಾಡಿದ್ದೇವೆ ಈ ಒಂದು ಇಲಾಖೆಯ ಸುಧಾರಣೆ ಬಗ್ಗೆ ಅವರು ತಮ್ಮ ಅಂತಿಮ ವರದಿಯನ್ನು ಸಲ್ಲಿಸಿಲ್ಲ. ಅವರು ಅದನ್ನು ಸಲ್ಲಿಸುವವರಿದ್ದಾರೆ. ಈ ಇಲಾಖೆಯನ್ನು ಪುನರ್ ವಿಂಗಡಣೆ ಮಾಡಬೇಕು ಎನ್ನುವ ವಾದ ಮೊದಲಿನಿಂದಲೂ ಇದೆ. ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸನ್ನು, ನ್ಯಾಷನಲ್ ಹೈವೇಸನ್ನು, ದೊಡ್ಡ ನೀರಾವರಿಯನ್ನು, ಸಣ್ಣ ನೀರಾವರಿಯನ್ನು ಬೇರೆ ಬೇರೆ ವಿಂಗಡಣೆ ಮಾಡುವ ಬಗ್ಗೆ, ಪಿ. ಎಚ್. ಇ. ಮತ್ತು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಏನಿದೆ ಇವುಗಳನ್ನು ಒಂದು ವ್ಯಾಪ್ತಿಗೆ ತರುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ಎಲ್ಲಾ ವಿಷಯಗಳನ್ನು ಅಲ್ಲಿ ಪರಿಶೀಲಿಸಬೇಕಾಗಿದೆ. ಪಿ. ಡಬ್ಲ್ಯು. ಡಿ. ಕೋಡನ್ನು ಬದಲಾವಣೆ ಮಾಡತಕ್ಕದ್ದು, ಅದೇ ರೀತಿ ವರ್ಕ್ ಲೋಡ್ ಜೋನ್ ವೈಸ್; ಸರ್ಕಲ್ ವೈಸ್, ಸಬ್ ಡಿವಿಜನ್ ವೈಸ್ ಎಷ್ಟು ಇದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ಅವರು ಒಂದು ವರದಿಯನ್ನು ಕೊಡಬೇಕಾಗಿದೆ. ಇನ್ನು ಕೋಡಲ್ ರೂಲ್ಸ್ ಮಾರ್ಪಾಡು ಮಾಡಬೇಕೆಂದು ಅದನ್ನು ಪರಿಶೀಲನೆ ಮಾಡಬೇಕೆಂದು ಹೇಳಿದ್ದೇವೆ. ಅವರು ವರದಿಯನ್ನು ಕೊಟ್ಟಮೇಲೆ ಸರ್ಕಾರ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಲೋಕೋಪಯೋಗಿ ಇಲಾಖೆ ಒಬ್ಬ ಪಿ. ಡಬ್ಲ್ಯು. ಡಿ. ಸೆಕ್ರೆಟರಿ ತಾಂತ್ರಿಕ ತಜ್ಞರು

ಇರಬೇಕು ಎಂಬುದು ಬಹು ದಿನದ ಬಯಕೆ ಇತ್ತು. ಅದು ಅಷ್ಟು ಸುಲಭ ಅಲ್ಲ. ಆ ನಿರ್ಣಯವನ್ನು ತೆಗೆದುಕೊಳ್ಳುವುದು ಅಷ್ಟು ಸುಲಭ ಅಲ್ಲ ಎಂಬುದನ್ನು ನಾನು ಅನುಭವದಿಂದ ತಿಳಿದುಕೊಂಡಿದ್ದೇನೆ. ಏನು ಐ.ಎ.ಎಸ್ ಅಧಿಕಾರಿಗಳ ಸೂಪ್ರೆಮೆಸಿ ಇದೆ, ಅವರ ಒತ್ತಡ ಏನು ಇದೆ ಅದಕ್ಕೂ ಮಣಿಯದೇ ಮುಖ್ಯ ಮಂತ್ರಿಗಳು ಏನು ನಿರ್ಣಯ ತೆಗೆದುಕೊಳ್ಳಲು ಆ ಕಡೆ ಮನಸ್ಸು ಮಾಡಿದರೋ ಅದಕ್ಕೆ ನಾನು ಶ್ಲಾಘನೆ ವ್ಯಕ್ತಪಡಿಸುತ್ತೇನೆ. ಎಂದರೆ ಇದು ಕೇವಲ ಮಾನ್ಯ ರಾಮಕೃಷ್ಣ ಹೆಗ್ಗಡೆ ಯವರು ಮುಖ್ಯ ಮಂತ್ರಿಗಳಾಗಿರುವಾಗ, ದೇವೇಗೌಡರು ಲೋಕೋಪಯೋಗಿ ಮಂತ್ರಿಗಳಾಗಿರುವಾಗ, ಈ ವ್ಯವಸ್ಥೆ ಇರಬೇಕು ಎಂದಲ್ಲ. ಈ ಒಂದು ವ್ಯವಸ್ಥೆಗೆ ಎಂದೂ ಅಂತ್ಯ ಬರಬಾರದು. ಇವತ್ತು ಕೆ. ಸಿ ರೆಡ್ಡಿ ಇರಬಹುದು, ನಾಳೆ ಬೇರೆಯವರು ಬರಬಹುದು. ಏನು ಐ.ಎ.ಎಸ್. ಅಧಿಕಾರಿಗಳ ಸ್ಥಾನದಲ್ಲಿ ಒಬ್ಬ ನಾನ್ ಐ.ಎ.ಎಸ್.ನ್ನು ತರಲು ಕಳೆದ ೭೫ ವರ್ಷಗಳಿಂದ ಪ್ರಯತ್ನಪಡಲಾಯಿತು ಈ ಒಂದು ವ್ಯವಸ್ಥೆಗೆ ಎಂದೂ ಆತಂಕವಾಗಬಾರದು ಅಪಾಯವಾಗಬಾರದು.

ಶ್ರೀ ಎನ್. ಚಿಕ್ಕೇಗೌಡ.—ಬೇರೆ ಇಲಾಖೆಗಳಲ್ಲೂ ಇಂತಹ ವ್ಯವಸ್ಥೆಯನ್ನು ತನ್ನಿ ವ್ಯವಸಾಯ, ಹೈನುಗಾರಿಕೆ ಇಲಾಖೆಗಳಲ್ಲಿ ಐ. ಎ. ಎಸ್. ಅಧಿಕಾರಿಗಳು ಏಕೆ ಇರಬೇಕು ?

ಶ್ರೀ ಎಂ. ಎಸ್. ಕೃಷ್ಣನ್,—ಕನ್ನಡ ಅಂಡ್ ಕಲ್ಚರ್‌ಗೆ ಐ. ಪಿ. ಎಸ್. ಅಧಿಕಾರಿ ಏಕೆ ಬೇಕು ?

ಶ್ರೀ ಎಚ್. ಡಿ. ದೇವೇಗೌಡ —ಅವರನ್ನೆಲ್ಲಾ ನಾವು ಹಾಕಿದ್ದಲ್ಲ ಬೇರೆಯವರು ಹಾಕಿದ್ದು ಅವರು ಮುಂದುವರೆದುಕೊಂಡು ಬಂದಿದ್ದಾರೆ. ಹಾಗೂ ತಾವು ಹೇಳಿದ ಸಲಹೆಗಳನ್ನು ಪರಿಶೀಲಿಸೋಣ ಎಂದು ಹೇಳುತ್ತೇನೆ.

ಇನ್ನು ಡಿಸೈನ್ ಅಂಡ್ ಕಾಲ್ವಿಟಿ ಕಂಟ್ರೋಲ್ ಬಗ್ಗೆ ಮಾನ್ಯ ಚಿಮ್ಮನಕಟ್ಟಿಯವರು ಪ್ರಸ್ತಾಪ ಮಾಡಿದರು. ಪಿ. ಡಬ್ಲ್ಯು. ಡಿ. ಗೆ ಸಂಬಂಧಪಟ್ಟ ಹಾಗೆ ಸೂಪರಿಂಟೆಂಡಿಂಗ್ ಎಂಜಿನಿಯರ್ ವ್ಯಾಪ್ತಿಯಲ್ಲಿ ಡಿಸೈನ್ಸ್ ಆರ್ಗನೈಸೇಷನ್ ಇಲ್ಲ. ಎಕ್ಸಿಕ್ಯೂಟಿವ್ ಎಂಜಿನಿಯರ್ ಲೆವೆಲ್‌ನಲ್ಲಿ ಇಲ್ಲ. ಯಾವುದೇ ಒಂದು ಎಸ್ಟಿಮೇಟ್ ಡಿಸೈನ್ ತೆಗದು ಕೊಳ್ಳಬೇಕಾದರೆ ಸೆಂಟ್ರಲ್ ಆಫೀಸಿಗೆ ಬರಬೇಕು, ಇದನ್ನು ಸ್ವಲ್ಪ ಮಾರ್ಪಾಟು ಮಾಡುತ್ತಿದ್ದೇವೆ. ಇವತ್ತು ಡಿಸೈನ್ ವಿಂಗ್ ಮಾಡಿ ಸುಮಾರು ೨೦ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್, ೧೦ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳನ್ನು ಆಯಾಯ ಸರ್ಕಲ್‌ನಲ್ಲಿ ಕ್ರಿಯೇಟ್ ಮಾಡಿ ಎಕ್ಸಿಕ್ಯೂಟಿವ್ ಎಂಜಿನೀಯರ್ಸ್ ಲೆವೆಲ್‌ನಲ್ಲಿ ಸ್ವಲ್ಪ ಹೆಚ್ಚು ಶಕ್ತಿಯನ್ನು ತುಂಬಬೇಕೆಂಬ ಅಭಿಪ್ರಾಯ ಇದೆ. ಈ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ತೆಗೆದು ಕೊಂಡಿದ್ದೇವೆನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದೇ ರೀತಿ ಸೆಂಟ್ರಲ್ ಆರ್ಗನೈಸೇಷನ್ ಲೆವೆಲ್‌ನಲ್ಲಿ ಸೂಪರಿಂಟೆಂಡಿಂಗ್ ಎಂಜಿನಿಯರ್ (ಡಿಸೈನ್ಸ್) ಇರುತ್ತಾರೆ. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆಗಳ ಬಗ್ಗೆ ಕ್ವಾಲಿಟಿ ಕಂಟ್ರೋಲ್ ಇಲ್ಲ. ಇವತ್ತು ಮೈನರ್ ಇರಿಗೇಷನ್‌ನಲ್ಲಿ, ಮೇಜರ್ ಇರಿಗೇಷನ್ನಿನಲ್ಲಿ ಅದು ಇದೆ. ಆದುದರಿಂದ ಈ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಇದನ್ನು ಅತ್ಯಂತ ಶೀಘ್ರವಾಗಿ ಅನುಷ್ಠಾನಕ್ಕೆ ತರುತ್ತೇವೆನ್ನುವ ವಿಷಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕ್ರಿಯೇಷನ್ ಆಫ್ ಟ್ರಾಫಿಕ್‌ಸೆಲ್ ಬಗ್ಗೆ ಏನು ಸಲಹೆ ಮಾಡಿದ್ದಾರೆ ಅದು ಕೂಡಾ ಇವತ್ತು ಟ್ರಾಫಿಕ್ ಎಂಜಿನಿಯರಿಂಗ್ ಸೆಲ್ ಎಂದು ಈಗಾಗಲೇ ಅಸ್ತಿತ್ವದಲ್ಲಿ ಇದೆ. ಅದು ಸರಿಯಾದ ರೀತಿಯಲ್ಲಿ ಕೆಲಸ ಮಾಡಿ ರಸ್ತೆ ಅಪ ಘಾತಗಳನ್ನು ತಪ್ಪಿಸುವ ಬಗ್ಗೆ, ರಸ್ತೆಗಳ ತಿರುವುಗಳಲ್ಲಿನ ಟೆಕ್ನಿಕಲ್ ಪ್ರಾಬ್ಲಮ್ಸ್ ಬಗ್ಗೆ ರಸ್ತೆಗಳ ನಿರ್ಮಾಣದ ಬಗ್ಗೆ ಅದಕ್ಕೆ ಜವಾಬ್ದಾರಿ ಕೊಟ್ಟು ನಿರ್ವಹಣೆ ಮಾಡುವುದಕ್ಕೆ ಸರ್ಕಾರದಲ್ಲಿ ಈಗಾಗಲೇ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಇನ್ನು ಇಲಾಖೆಯಲ್ಲಿ ತೊಡಗಿಸತಕ್ಕ ಹಣ ತುಂಬಾ ಅಪವ್ಯಯ ವಾಗುತ್ತಿದೆ ಎಂದು, ಮತ್ತು ಲೋಪದೋಷ ಇದೆಯೆಂದು ಏನು ಹೇಳಿದ್ದಾರೆ ಇದರಲ್ಲಿ ಪ್ರತಿಯೊಂದು ವಿಷಯಕ್ಕೂ ವಿಜಿಲೆನ್ಸ್ ಕಮಿಷನ್‌ಗೆ ರೆಫರ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಅದಕ್ಕಾಗಿಯೇ ನಾವು ಫ್ಲೈಯಿಂಗ್ ಸ್ಕ್ವಾಡ್ ಮಾಡಿದ್ದೇವೆ. ಈ ಬಗ್ಗೆ ೧೮-೪-೧೯೮೩ರಲ್ಲಿ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗಿದೆ. ಅಲ್ಲಿ ಹಿರಿಯ ಅಧಿಕಾರಿಗಳಾದ ಸೂಪರಿಂಟೆಂಡಿಂಗ್ ಎಂಜಿನಿಯರ್ ಏನಿದ್ದಾರೆ ಅವರ ಪ್ರಾಮಾಣಿಕತೆಯ ಬಗ್ಗೆ ಯಾರೂ ಪ್ರಶ್ನೆ ಮಾಡುವುದಿಲ್ಲ. ಅವರು ಒಳ್ಳೆಯ ಪ್ರಾಮಾಣಿಕ ವ್ಯಕ್ತಿ, ಇವರು ಈಗಾಗಲೇ ಸುಮಾರು ೩೧ ಕೇಸ್‌ಗಳನ್ನು ಡಿಟೆಕ್ಟ್ ಮಾಡಿದ್ದಾರೆ. ಇದು ವಿಜಿಲೆನ್ಸ್

ಕಮಿಷನ್ ಅಲ್ಲ ಪ್ರತಿಯೊಂದು ವಿಷಯವನ್ನು ವಿಜಿಲೆನ್ಸ್‌ಗೆ ಕಳುಹಿಸಿದರೆ ಅದರಲ್ಲಿ ೧ ವರ್ಷ ೨ ವರ್ಷ ತಡವಾಗತಕ್ಕದ್ದು ಉಂಟು. ಆದ್ದರಿಂದ ಅಲ್ಲಲ್ಲಿಯೇ ಕ್ರಮ ತೆಗೆದು ಕೊಳ್ಳುವ ಸಲುವಾಗಿ, ಯಾವುದೇ ಅಧಿಕಾರಿ ಮೇಲೆ ದೂರು ಬಂದರೆ ಆ ಬಗ್ಗೆ ತಪಾಸಣೆ ಮಾಡುವುದಕ್ಕೆ ಒಂದು ಫ್ಲೈಯಿಂಗ್ ಸ್ಕ್ವಾಡ್ ಮಾಡಿದ್ದೇವೆ. ಅಲ್ಲಿ ತಪಾಸಣೆ ಆದ ಮೇಲೆ ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ತೆಗೆದು ಕೊಳ್ಳಬಹುದೆಂದು ಇದನ್ನು ಮಾಡಲಾಗಿದೆ. ಈ ಫ್ಲೈಯಿಂಗ್ ಸ್ಕ್ವಾಡನ್ನು ಮಾಡಿರತಕ್ಕದ್ದು ಇದೇ ಪ್ರಥಮ ಎಂದು ಹೇಳುತ್ತೇನೆ. ಈಗಾಗಲೇ ೩೧ ಕೇಸ್‌ಗಳ ಬಗ್ಗೆ ಡಿಟೆಕ್ಟ್ ಮಾಡಿ ೨೬ ಜನ ತಪ್ಪಿತಸ್ಥರು ಎಂದು ನಿರ್ಣಯವಾಗಿದ್ದು ಅವರ ಮೇಲೆ ಇಲಾಖೆಯ ತನಿಖೆ ನಡೆಯುತ್ತಿದೆ ಎನ್ನುವುದನ್ನು ತಿಳಿಸಬಯಸುತ್ತೇನೆ. ಇನ್ನು ಅಲ್ಲಿ ಸರಪ್ರೈಸ್ ಚೆಕ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. ತಿಂಗಳಲ್ಲಿ ಚೀಫ್ ಎಂಜಿನಿಯರ್‌ರವರು ೫ ಸರ್‌ಪ್ರೈಸ್ ಚೆಕ್‌ಗಳನ್ನು, ಸೂಪರಿಂಟೆಂಡಿಂಗ್ ಎಂಜಿನಿಯರ್‌ರವರು ೮ ಸರ್‌ಪ್ರೈಸ್ ಚೆಕ್‌ಗಳನ್ನು ಎಕ್ಸಿಕ್ಯೂಟಿವ್ ಎಂಜಿನಿಯರ್‌ರವರು ೧೨ ಸರ್‌ಪ್ರೈಸ್ ಚೆಕ್‌ಗಳನ್ನು ಮಾಡಬೇಕೆಂದು ಕಡ್ಡಾಯ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದರ ಫಲವಾಗಿ ಇವತ್ತು ಇಲಾಖೆಯಲ್ಲಿ ಸಾಕಷ್ಟು ಆರೋಪಗಳು ತೊಡೆದುಹಾಕದೇ ಇದ್ದರೂ ಸಾಕಷ್ಟು ಈ ದಿಸೆಯಲ್ಲಿ ಯಶಸ್ವಿಯಾಗುವುದಕ್ಕೆ ಈ ಎರಡು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಕಾನ್ಫಿಡೆನ್ಷಿಯಲ್ ರಿಪೋರ್ಟ್ ಬಗ್ಗೆ ಮಾನ್ಯ ಚಿಮ್ಮನಕಟ್ಟಿಯವರು ಬಹಳ ಪ್ರಸ್ತಾಪ ಮಾಡಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಾಗ ಈ ಬಗ್ಗೆ ಏನು ಪ್ರಯತ್ನ ಮಾಡಿದರೋ ಗೊತ್ತಿಲ್ಲ. ಈ ಬಗ್ಗೆ ನನಗೆ ಸಿಕ್ಕಿರತಕ್ಕ ಸರ್ಕಾರಿ ದಾಖಲೆಗಳಲ್ಲಿ ಈ ಬಗ್ಗೆ ದಾಖಲೆ ಸಿಕ್ಕಿಲ್ಲ. ನಾನು ಎಲ್ಲಾ ಫೈಲ್‌ಗಳನ್ನು ನೋಡಿದ್ದೇನೆ. ನಾನು ಮಂತ್ರಿಯಾಗಿ ಹೇಳುತ್ತೇನೆ, ಈ ಬಗ್ಗೆ ಸರ್ಕಾರಕ್ಕೆ ಪ್ರಾಮಾಣಿಕವಾದ ಒಂದು ಅಭಿಪ್ರಾಯ ಇದೆ, ಈ ಒಂದು ವಿಷಯ ಪರಿಶೀಲನಾ ಹಂತದಲ್ಲಿ ಇದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಡೆಪ್ಯುಟಿ ಕಮಿಷನರ್ ಸಿ. ಆರ್. ಬರೆಯಬೇಕೆಂದು ಇದೆ. ಇದು ಮುಂಚೆ ಇರಲಿಲ್ಲ. ಆದುದರಿಂದ ಇದನ್ನು ತಪ್ಪಿಸಬೇಕು. He is slow ಎಂದು ಸಿ. ಆರ್. ಬರೆಯುತ್ತಾರೆ. ಆತ ಯಾವುದರಲ್ಲಿ ಸ್ಲೋ? ಆದ್ದರಿಂದ ಈ ನಿಯಮ ಬೇಡ ಎಂದು ನಾನು ಹೇಳುತ್ತೇನೆ.

೧–೩೦ ಪಿ. ಎಂ.

ಆತ ಎಷ್ಟರಮಟ್ಟಿಗೆ ಕೆಲಸ ನಿರ್ವಹಿಸಿದ್ದಾನೆ ಎಂಬುದರ ಬಗ್ಗೆ ಬರೆಯಬೇಕು, ಆ ಒಂದು ಬೇಸಿಸ್ ಮೇಲೆ ಗುಪ್ತ ವರದಿಯನ್ನು ಬರೆಯಬೇಕು ಬೇಕಾದವರಿಗೆ ಅನುಕೂಲವಾಗುವ ಹಾಗೆ ಬರೆಯುವುದು ಬೇಡವಾದವರಿಗೆ ಒಂದು ರೀತಿಯಲ್ಲಿ ಬರೆಯುವುದು ಇವೆಲ್ಲಾ ನಡೆದುಕೊಂಡು ಬಂದಿದೆ, ಎಷ್ಟೋ ಸಾರಿ ಸಮಾಜಾಯಿಷಿನಿ ಕೂಡ ಕೇಳುವುದಿಲ್ಲ.

ಶ್ರೀ ಎಸ್ ಸೂರ್ಯನಾರಾಯಣರಾವ್.— ಗುಪ್ತ ವರದಿಯಿಂದ ಫೇವರಿಟಿಸಂಗೆ ಅವಕಾಶವಾಗಬಾರದು.

ಶ್ರೀ ಹೆಚ್. ಡಿ. ದೇವೇಗೌಡ.— ಇದು ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

ಶ್ರೀ ಕೆ. ಎಚ್. ರಂಗನಾಥ್.— ತಾವು ಒಂದು ಸಾರಿ ಮುಖ್ಯಮಂತ್ರಿಗಳು ತಾವು ಭಾಗವಹಿಸಿದ ಸಭೆಯಲ್ಲಿ ತೆಗೆದು ಬಿಡುತ್ತೇವೆಂದು ಹೇಳಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.— ಈ ವಿಷಯವನ್ನು ಎಲ್ಲಾ ಚೀಫ್ ಇಂಜಿನಿಯರುಗಳು ಎಸ್.ಇಗಳು ಸೇರಿದಂಥ ಸಭೆಯಲ್ಲಿ ಮಂಡನೆ ಮಾಡಿದ್ದರು. ಸರ್ಕಾರ ಪ್ರಾಮಾಣಿಕವಾಗಿ ಪರಿಶೀಲನೆ ಮಾಡುತ್ತದೆ ಎಂಬ ಹಂತದಲ್ಲಿ ಇದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್ ಸಂಸ್ಥೆಯ ಅಸ್ತವ್ಯಸ್ತದ ಬಗ್ಗೆ ಪಬ್ಲಿಕ್ ಅಕೌಂಟ್ ಕಮಿಟಿಯಲ್ಲೂ ಕೂಡ ವರದಿ ಬಂದಿದೆ ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ಅನುಪಯುಕ್ತ ಮಿಷನರಿಗಳು ಇದೆ ಎಂದು ಹೇಳಿದ್ದಾರೆ. ಸ್ವಾಮಿ, ಇದರ ಬಗ್ಗೆ ಹಿರಿಯ ಚೀಫ್ ಇಂಜಿನಿಯರ್ ಒಬ್ಬರನ್ನು ನೇಮಕ ಮಾಡಿ ಅಲ್ಲಿರತಕ್ಕ ನ್ಯೂನತೆಗಳನ್ನೂ ಸರಿಪಡಿಸಬೇಕೆಂದೂ. ಪ್ರತಿಯೊಂದು ವಾಹನಗಳ ಮೇಲೂ ಹೂಡಿರತಕ್ಕಂಥ ಬಂಡವಾಳ, ಮೆಂಟೆನೇನ್ಸ್‌ಗಾಗಿ ಖರ್ಚು ಮಾಡಿರತಕ್ಕಂಥಾದ್ದು

ಆದರಿಂದ ಬರತಕ್ಕ ರಿಟರ್ನ್ಸ್ ಮತ್ತು ಆದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವ ಸಲುವಾಗಿ ಆರ್ಗನೈಜೇಷನ್ನು ಶಕ್ತಿಯುತವಾಗಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಪ್ರತಿಯೊಂದು ವಿಭಾಗಗಳಲ್ಲಿ ವಾಹನಗಳ, ಇನ್ನಿತರ ಮಿಷನರಿಗಳ ತಪಾಸಣೆ ಮಾಡಿಸಲಾಗಿದೆ. ನನಗೆ ಬಂದಿರತಕ್ಕ ವರದಿಯ ಆಧಾರದ ಮೇಲೆ ಸುಮಾರು ೪೦-೪೫ ಕೋಟಿ ರೂಪಾಯಿಗಳು ಆಗುತ್ತದೆ. ಅದಕ್ಕಿಂತ ಹೆಚ್ಚು ಆಗುವುದಿಲ್ಲ. ಆಡಿಟ್‌ರಿಪೋರ್ಟ್‌ನಲ್ಲಿ ಇರುವಂತೆ, ೧೦೦ ಕೋಟಿ ರೂಪಾಯಿಗಳಾಗುವುದಿಲ್ಲ. ಏನೇನು ಉಪಯೋಗಕ್ಕೆ ಬಾರದೇ ಇರತಕ್ಕ ಲಾರಿಗಳು, ಟ್ರಾಕ್ಟರುಗಳು, ಬಿಲ್ಲರುಗಳು, ಕಾಂಕ್ರೀಟ್ ಮಿಕ್ಸ್‌ಚರ್‌ಗಳು ಇವೆ. ಇವೆಲ್ಲವನ್ನೂ ಲೆಕ್ಕ ಮಾಡಿ ಇಡಲಾಗಿದೆ. ಒಂದು ರೀತಿಯ ಗುಜರಿ ಅಂಗಡಿಗಳು ಇದ್ದ ಹಾಗೆ, ಇವೆಲ್ಲವನ್ನು ದಾಖಲೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕೂ ಕೂಡ ಹಲವಾರು ಅಡ್ಡಿಗಳು ಇವೆ, ಇದರ ಬಗ್ಗೆ ತಮಗೂ ಕೂಡ ಹಳೆಯ ಅನುಭವ ಇದೆ. ಯಾವಾಗ ಕೊಂಡಿರಿ, ಏನು ಎತ್ತ, ಎಂದು ದಾಖಲೆ ಕೊಡಬೇಕು ಆದರೂ ಇದರ ಬಗ್ಗೆ ಈ ಗಟ್ಟಿಯಾದ ಹರಾಜು ಮಾಡುತ್ತೇವೆ. ಮತ್ತೆ ಷೆಡ್ಯೂಲ್‌ರೇಟುಗಳನ್ನು ಕರಾರುವಕ್ಕಾಗಿ ಮಾಡುವುದಿಲ್ಲ. ಇದರಲ್ಲಿ ಹಲವಾರು ದೋಷಗಳು ಇವೆ. ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಷೆಡ್ಯೂಲ್ ರೇಟ್ ಗೊತ್ತು ಮಾಡುತ್ತಿಲ್ಲ. ಟೆಂಡರ್ ಮತ್ತು ಎಸ್ಟಿಮೇಟ್‌ಗೆ ೩೫ರಿಂದ ೪೦-೮೦ ಪರ್ಸೆಂಟ್ ಹೋಗತಕ್ಕಂಥಾ ಸಂದರ್ಭ ಇದೆ. ಮತ್ತೆ ಕಂಟ್ರಾಕ್ಟರ್ ಫಾರಂಗಳಲ್ಲಿ ಕೆಲವು ನ್ಯೂನತೆಗಳು ಇವೆ. ತಮಿಳುನಾಡು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಬೇರೆ ಬೇರೆ ರೀತಿಯಲ್ಲಿ ಇವೆ. ಕಾಲಂ ೯ (ಎ) ಏನು ಇಟ್ಟುಕೊಂಡಿದ್ದಾರೆ ಅದನ್ನು ಯಾರೂ ಕೂಡ ಅನುಷ್ಠಾನಕ್ಕೆ ತರಲಿಲ್ಲ. ಕಂಟ್ರಾಕ್ಟರ್ ಮನೆ ಹರಾಜು ಮಾಡಿ ನಷ್ಟವನ್ನು ತುಂಬಿಕೊಳ್ಳುವಂಥ ಒಂದು ನಿರ್ಣಯ ಮಾಡಲಿಲ್ಲ. ಇದರ ಬಗ್ಗೆ ಕೂಲಂಕುಶವಾಗಿ ವರದಿ ಕೊಡಲು ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಈಗಾಗಲೇ ಅವರು ೪-೫ ಮೀಟಿಂಗ್ ಮಾಡಿದ್ದಾರೆ. ವರದಿಯನ್ನು ಗಮನದಲ್ಲಿಟ್ಟುಕೊಂಡು ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ಕಂಟ್ರಾಕ್ಟರ್ ರಿಜಿಸ್ಟ್ರೇಷನ್ ಸಿಸ್ಟಂ ಬದಲಾವಣೆ ಮಾಡಬೇಕೆಂಬ ಮನಸ್ಸು ಮತ್ತು ಅಭಿಪ್ರಾಯ ನನಗೆ ಇದೆ. ಕ್ಲಾಸ್ (೧) ಕಂಟ್ರಾಕ್ಟರ್ ಆದರೆ ಅವನ ಎಷ್ಟು ಕೋಟಿ ರೂಪಾಯಿ ಕೆಲಸ ಬೇಕಾದರೂ ತೆಗೆದುಕೊಳ್ಳಬಹುದು. ಅದಕ್ಕೆ ಎಲ್ಲೆ ಕಟ್ಟು ಇಲ್ಲ. ಲಿಮಿಟ್ ಇಲ್ಲ. ಇದಕ್ಕೆ ಸೀಲಿಂಗ್ ಆಗ ಬೇಕೆನ್ನುವುದು ನನ್ನ ಅಭಿಪ್ರಾಯ ಕಾರಣ ಇಷ್ಟೇ ಯಾವ ಕಂಟ್ರಾಕ್ಟರೇ ಆಗಲೀ, ಟೆಂಡರ್ ಹಾಕುವಾಗ ಅಡ್ವಾನ್ಸ್ ಕಟ್ಟುತ್ತಾನೆ. ಅದು ಕೂಡ ಸರ್ಕಾರದ ದುಡ್ಡು ತೆಗೆದುಕೊಂಡೇ ಕಟ್ಟುತ್ತಾರೆ. ಬ್ಯಾಂಕ್ ಗ್ಯಾರಂಟೀ ಮೇಲೆ ಮತ್ತು ರಿಜಿಸ್ಟ್ರೇಷನ್ ಅರ್ಹತೆ ಪಡೆದಿದ್ದರ ಮೇಲೆ ಹಣ ಇಲ್ಲದೇ ಇದ್ದರೂ ಕೆಲಸ ಮಾಡುತ್ತಾನೆ. ಈ ಒಂದು ಹಳೇ ವ್ಯವಸ್ಥೆಯನ್ನು ಮಾರ್ಪಾಡು ಮಾಡುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ. ಯಾವ ಕಂಟ್ರಾಕ್ಟುದಾರನಿಗೆ ಯೋಗ್ಯತೆ ಇದೆಯೋ? ಅರ್ಹತೆ ಇದೆಯೋ? ಅಂಥವರು ಕೆಲಸ ಮಾಡಿಕೊಂಡು ಹೋಗುತ್ತಾರೆ. ಈ ದಿಸೆಯಲ್ಲಿ ಸರ್ಕಾರ ಚಿಂತನೆ ಮಾಡುತ್ತಿದೆ.

ಇನ್ನು ಡೆಲಿಗೇಷನ್ ಆಫ್ ಪವರ್ ಹೆಚ್ಚು ಮಾಡಬೇಕೆಂಬ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ ಯಾವುದೋ ಒಂದು ಕಾಲದಲ್ಲಿ ನಿಗದಿಯಾಗಿರತಕ್ಕಂಥ ಕಾಸ್ಟ್ ಕೂಡ ಬದಲಾವಣೆಯಾಗ ಬೇಕಾಗಿದೆ. ಒಂದಕ್ಕೆ ೩-೪-೫-೬-೧೦ ಪಟ್ಟು ಹೆಚ್ಚಾಗಿರತಕ್ಕಂಥ ಸನ್ನಿವೇಶದಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರುಗಳಿಗೆ ಹೆಚ್ಚು ಅಧಿಕಾರ ಕೊಡುವ ವಿಚಾರವು ಇದೆ. ಎಸ್.ಇ ಅವರಿಗೆ ಪವರ್ ಕೊಡುವ ಬಗ್ಗೆ ಬೋರ್ಡ್ ಆಫ್ ಚೀಫ್ ಇಂಜಿನಿಯರ್‌ಗಳ ಅಭಿಪ್ರಾಯ ಕೇಳಿದ್ದೇವೆ. ಅವರು ವರದಿ ಕೊಟ್ಟ ಮೇಲೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಈ ಸದನದಲ್ಲಿ ಯಾವ ವಿಷಯವನ್ನೂ ಮುಚ್ಚುವುದಕ್ಕೆ ಪ್ರಯತ್ನ ಮಾಡುವುದಿಲ್ಲ; ಒಂದೊಂದು ಸಾರಿ ಚೀಫ್ ಇಂಜಿನಿಯರ್‌ಗೆ ಇರತಕ್ಕ ಪವರ್ ವಿಧಾನಸೌಧದಲ್ಲಿರುವ ಕಾರ್ಯದರ್ಶಿಗೆ ಇರುವುದಿಲ್ಲ. ಇದು ನನಗೆ ಹೊಸ ಅನುಭವ. ಚೀಫ್ ಇಂಜಿನಿಯರ್‌ರವರು ಇಷ್ಟು ಲಕ್ಷದವರೆಗೆ ಮಂಜೂರು ಮಾಡುವುದಕ್ಕೆ ಅಧಿಕಾರ ಇದೆ. ಸೆಕ್ರೆಟೇರಿಯಟ್‌ಗೆ ಬಂದಾಗ ೫ ಲಕ್ಷದ ಮೇಲೆ ಹೆಚ್ಚಾಗಿದ್ದರೆ ಇಲ್ಲ ಸೆಕ್ರಟರಿ ಮಂಜೂರು ಮಾಡುವುದಕ್ಕೆ ಅಧಿಕಾರ ಇಲ್ಲ. ಅದು ಹಣಕಾಸಿನ ಇಲಾಖೆಗೆ ಹೋಗಲೇಬೇಕು. ಸದನದಲ್ಲಿ ಒಪ್ಪಿಗೆ ಸಿಕ್ಕಿ, ಬಡ್ಜೆಟ್‌ನಲ್ಲಿ ಅದನ್ನು ಅಳವಡಿಸಿದ್ದರೂ ಕೂಡ ಹಣಕಾಸಿನ ಇಲಾಖೆಗೆ ಹೋಗಬೇಕು. ಇದರಿಂದ ಅನಾವಶ್ಯಕವಾದ ವಿಳಂಬವಾಗುತ್ತಿದೆ ಎನ್ನುವುದು ನನ್ನ ಭಾವನೆ ಮಾನ್ಯ ಮುಖ್ಯಮಂತ್ರಿಗಳು ತಮಗೆ ಇರತಕ್ಕ ಅನುಭವದಲ್ಲಿ ಇದಕ್ಕೆ ಒಂದು ಹೊಸ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಕಾಲ

ವಿಳಂಬವಾಗುವುದರಿಂದ ಕಾಸ್ಟ್ ಕೂಡ ಹೆಚ್ಚಾಗುತ್ತದೆ. ಮಾನ್ಯ ಸದಸ್ಯರಾದ ಗಂಗಾಧರನ್‌ರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಮೈಸೂರು ಜಿಲ್ಲೆಯಲ್ಲಿ ಕೋರ್ಟ್ ಕಾಂಪ್ಲೆಕ್ಸ್ ಬಗ್ಗೆ ಬಹಳ ಆವೇಶದಲ್ಲಿ ಮಾತನಾಡಿದರು. ಟೆಂಡರ್ ಆದರೂ ೮-೯ ತಿಂಗಳಿಂದ ಕೆಲಸ ಆಗಿಲ್ಲವೆಂದರು, ಅದು ಹಳೇ ಕಾಲದ್ದು, ನನ್ನ ಕಾಲದಲ್ಲಿ ಆಗಿಲ್ಲ. ಟಾಸ್ ಓವರ್ ಮಾಡುವುದಕ್ಕೆ ವ್ಯವಸ್ಥೆಯ ವಿಧಾನ ಏನು ಇದೆ. ಅದನ್ನು ಬದಲಾವಣೆ ಮಾಡಬೇಕಾದುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿರ್ಣಯ ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹೆಚ್ಚಿಗೆ ಟೀಕೆಗೆ ಒಳಗಾದ ವಿಷಯ ಅಂದರೆ ಸರ್ವೀಸ್ ಕಂಡೀಷನ್, ಇವತ್ತು ಬೆಳಿಗ್ಗೆ ಕೆಲ ಹುಡುಗರು ಚೀಟಿ ಎಸೆದರು. ಕಳೆದ ೨೨ ವರ್ಷಗಳಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಯಾರೂ ನಿರ್ಣಯ ಮಾಡಿರಲಿಲ್ಲ. ಇದಕ್ಕಿಂತ ಮುಂಚಿತವಾಗಿ ಮಾನ್ಯ ಸದಸ್ಯರಾದ ಒಡೆಯರಾಜ್‌ರವರು ಪ್ರಸ್ತಾಪ ಮಾಡಿದ ಸಸ್ಪೆಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಯಾವತ್ತೂ ಸಸ್ಪೆಷನ್ ರಿವೋಕ್ ಮಾಡಿಲ್ಲ. ಮಾಡಲಿಲ್ಲ. ಅಂತ ಹೇಳಿದರೆ, ಕೋರ್ಟಿನಲ್ಲಿ ಚಾರ್ಜ್‌ಷೀಟ್ ಹಾಕಿರತಕ್ಕಂಥ, ಟ್ರಾಪ್ ಕೇಸಸ್, and cases where the assets are found disproportionate to their known sources of income

ಈ ಮೂರು ಕೆಟಗರಿಯ ಅಧಿಕಾರಿಗಳನ್ನು ಯಾರು ಸಸ್ಪೆಂಡ್ ಮಾಡಿದ್ದಾರೆ ಅಂದರೆ ಹಿಂದಿನ ಸರ್ಕಾರದವರು, ಯಾವನನ್ನೂ ಕೂಡ ನಾನು ಸಸ್ಪೆನ್‌ಷನ್‌ನಿಂದ ರಿವೋಕ್ ಮಾಡಿಲ್ಲ, ಆದರೆ ೨೪ ಜನ ಅಧಿಕಾರಿಗಳು ಇದಕ್ಕೆ ಹೊರತಾಗಿ ಇದ್ದಂಥ ಅಧಿಕಾರಿಗಳು ಯಾವ ದಾಕ್ಷಿಣ್ಯಕ್ಕೂ ಮಣಿಯದೇ ರೀಇನ್‌ಸ್ಟೇಟ್ ಮಾಡಿದ್ದೇನೆ. ಪ್ರತಿಯೊಂದು ಇಂಡಿವಿಜುಯಲ್ ಕೇಸನ್ನು ನಾನು ನೋಡಿಲ್ಲ. ಮೂರು ಕೆಟಾಗರಿಯನ್ನು ಬಿಟ್ಟು ಮಿಕ್ಕ ಎಲ್ಲಾ ಅಧಿಕಾರಿಗಳನ್ನು ರೀಇನ್‌ಸ್ಟೇಟ್ ಮಾಡಿದ್ದೇನೆ. ಇದರ ಬಗ್ಗೆ ದೊಡ್ಡ ವಾದ ವಿವಾದ ಇತ್ತು. ಅಲ್ಲಿ ಕೂತು ನಾನು ಆರ್ಗ್ಯೂ ಮಾಡಿದ್ದೇನೆ. ಒಬ್ಬ ಅಧಿಕಾರಿ ನಾಲ್ಕು ವರ್ಷವಾದರೂ ತೀರ್ಮಾನವಾಗದೇ ಇದ್ದರೆ ಹೇಗೆ ಇಡಬೇಕು? ಎಫ್.ಐ.ಆರ್. ಚಾರ್ಜ್‌ಷೀಟ್ ಇದ್ದರೂ ಹೇಗೆ ಕೊಡಬೇಕು.

ರೀಇನ್‌ಸ್ಟೇಟ್ ಮಾಡಬೇಕೆ, ಇದರ ಬಗ್ಗೆ ವಾದ ವಿವಾದ ಇದೆ. ಒಂದು ಕಡೆ ಅಂಥ ಅಧಿಕಾರಿ ಯಾವನು ತಪ್ಪಿತಸ್ಥನಿದ್ದಾನೆ ಅವನ ಮೇಲೆ ಚಾರ್ಜ್‌ಷೀಟ್ ಫೈಲ್ ಮಾಡಿದ್ದರೆ ಮಾಡಕೂಡದು ಅಂಥ ಪ್ರಬಲ ವಿರೋಧ ಇದೆ. ವೈಯಕ್ತಿಕ ಅಭಿಪ್ರಾಯ ಹೇಳುವುದಾದರೆ ಅಷ್ಟು ತನ್ನ ಮಾನಸಿಕ ವೇದನೆಗೆ ಅವಕಾಶ ಮಾಡುವುದು ಸರಿಯಲ್ಲ ಎಂದು ನಾನು ಹೇಳುವುದು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅದನ್ನು ಜಾರಿಗೆ ತನ್ನಿ.

ಶ್ರೀ ಹೆಚ್.ಡಿ. ದೇವೇಗೌಡ.—ಅಷ್ಟು ಸುಲಭ ಅಲ್ಲ. ಕಷ್ಟ ಇದೆ. ಒಬ್ಬ ಚೀಫ್ ಇಂಜಿನಿಯರ್ ಮೇಲೆ ಯಾವುದೋ ಮೊಕದ್ದಮೆ ಹೂಡಿದರೆ, ಆ ಮೊಕದ್ದಮೆ ನಾಲ್ಕೈದು ವರ್ಷ ಇದ್ದರೆ. ಇಡೀ ಜೀವಮಾನ ಅವನು ಹಾಗೆ ಕಳೆದು ಮನೆಗೆ ಹೋಗಬೇಕು. ಕೋರ್ಟ್ ನಿರಪರಾಧಿ ಎಂದು ಡಿಕ್ಲೇರ್ ಮಾಡಿದರೆ ಅವನು ಮಾನಸಿಕ ವೇದನೆ ಏನು ಅನುಭವಿಸುತ್ತಾನೆ, ಅದಕ್ಕೆ ನಾವು ಏನು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ವಿಜಿಲೆನ್ಸ್ ಕಮಿಷನರ್ ಒಂದು ಕೇಸಿನಲ್ಲಿ dis-proportinate to the known sources of income. ಎಂದು ಒಂದು ಕೇಸ್ ರೆಕಮಂಡ್ ಮಾಡಿದರೆ, ಒಂದು ಕಡೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈಯಿರಿ ಮಾಡುತ್ತಾರೆ. ಇನ್ನೊಂದು ಕೇಸ್‌ನಲ್ಲಿ ಅಥವಾ ಬಾಕಿ ಎಲ್ಲಾ ಕೇಸ್‌ನಲ್ಲಿ ಚಾರ್ಜ್‌ಷೀಟ್ ಮಾಡುತ್ತಾರೆ. ಉದಾಹರಣೆಗೆ ಹೇಳಬೇಕೆಂದರೆ, ಶ್ರೀಮಾನ್ ಕೆಂಚರಸೇಗೌಡರಿಗೆ, ಅವರ ಇನ್‌ಕಮ್...........

"Thus the officer was found in possession of assets of Rs. ... disproportionate to his known sources of income."

ಇವರಲ್ಲಿ ಡಿಪಾರ್ಟ್‌ಮೆಂಟಲ್ ಎನ್‌ಕ್ವೈಯಿರಿ ಆಗಬೇಕೆಂದು ಬರೆಯುತ್ತಾರೆ.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ಫೈಲ್ ನೋಡಿದ್ದೇನೆ.

ಶ್ರೀ ಗೋವಿಂದ ಪಿ ಒಡೆಯರಾಜ್.—ವಿಜಿಲೆನ್ಸ್‌ನವರು ಡಿರ್‌ಪ್ರಪೋಪನೇಟ್ ನಡೆದಾಗ ಕೋರ್ಟಿಗೆ ಚಾರ್ಜ್‌ಶೀಟ್ ಬರೆಯಿರಿ ಎಂದು ಹೇಳಂತ್ತಾರೆ. ಇನ್ನೊಂದು ಕಡೆ ಒ.ಎ.ಎಸ್ ಅಧಿಕಾರಿಗಳು ಸೇರಿ ಸಂಬಂಧಪಟ್ಟ ಅಧಿಕಾರಿಗಳು ಇದ್ದರೆ, ಡಿಪಾರ್ಟ್‌ಮೆಂಟಲ್ ಎನ್‌ಕ್ವೈಯಿರಿ ಮಾಡುತ್ತಾರೆ. ಈ ತರಹ ಮಾಡುವುದು ನ್ಯಾಯವೇ ?

ಶ್ರೀ ಹೆಚ್.ಡಿ. ದೇವೇಗೌಡ.--ನಾನು ವಿಜಿಲೆನ್ಸ್ ಕಮೀಷನರ್ ವಿರುದ್ಧವಾಗಿ ಮಾಡಬೇಕೆಂದು ಮಾಡಿಲ್ಲ. ನಾನು ಯಾವುದೇ ಆ ತರಹ ನಿರ್ಣಯ ಮಾಡಿಲ್ಲ. ನಿರ್ಣಯ ಮಾಡಿದ್ದರೆ ಹಳೆಯ ಸರ್ಕಾರ ಮಾಡಿರಬೇಕು............Why should I hide the facts? ಶ್ರೀಮಾನ್ ಕೆಂಚರಸೇಗೌಡರ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನರ್ ಏನು ಮಾಡಿದ್ದಾರೆ ಆ ನಿರ್ಣಯ ಒಪ್ಪಿಕೊಂಡಿದ್ದೇವೆ. ಯಾವುದನ್ನು ಬದಲಾವಣೆ ಮಾಡಲಿಕ್ಕೆ ಹೋಗಿಲ್ಲ. ವಿಜಿಲೆನ್ಸ್ ಕೊಡತಕ್ಕ ವಿಚಾರ ಯಾವ ದೋಷ ಇಲ್ಲ ಎಂದು ನಾನು ಅಂದುಕೊಳ್ಳುವುದಿಲ್ಲ. ವೈಯಕ್ತಿಕ ಅಭಿಪ್ರಾಯ. ನಾನು ಅಲ್ಲಿಯೂ ಹೇಳಿದ್ದೇನೆ, ಇಲ್ಲಿಯೂ ಹೇಳುತ್ತೇನೆ. ನಾನು ಇಲ್ಲಿಗೆ ಬಂದಮೇಲೆ ಆ ಮಾತು ಬದಲಾವಣೆ ಮಾಡಲಿಕ್ಕೆ ಸಿದ್ಧ ಇಲ್ಲ. ಕೆಲವಾರು ಸಾರಿ ಕೆಲವಾರು ರೀತಿ ನಡೆದುಕೊಂಡು ಹೋಗಿದೆ. ಕೆಲವು ಶಿಫಾರಸ್ಸುಗಳು ಬರುತ್ತವೆ ಆಗ ಪರಿಶೀಲನೆ ಮಾಡಬೇಕಾಗುತ್ತದೆ. ನಾನು ಆ ನಿರ್ಣಯ ಮಾಡಿಲ್ಲ ಎಂದು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ವೇದನೆಯಿಂದ ಹೇಳಬೇಕಾಗುತ್ತದೆ. ಕೆಲವರು ರಿಟೈರ್ ಆಗುವುದಕ್ಕೆ ಮುಂಚೆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ಹಲವಾರು ದೋಷಗಳನ್ನು ಮಾಡಿರತಕ್ಕುದ್ದು ಇದೆ. ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಿರುವವರು ರಿಟೈರ್ ಆಗುವುದಕ್ಕೆ ಮುಂಚೆ ಏನಾದರೂ ಮಾಡಿ ಹೋಗಬಹುದು ಎಲ್ಲ ರೂಲ್ಸ್‌ನಲ್ಲಿ ಏನೇನು ಇದೆ ಅದನ್ನು ಚಲಾಯಿಸಿ ಸರ್ಕಾರಕ್ಕೆ ಸಾಕಷ್ಟು ಹಾನಿ ಮಾಡಿ ಹೋಗಿರತಕ್ಕುದ್ದು ನಮ್ಮ ಗಮನಕ್ಕೆ ಬಂದಿದೆ ಕೆಲವು ಸನ್ನಿವೇಶದಲ್ಲಿ ನಾವು ರಿಟೈರ್ ಆದಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಫೈನಾನ್ಷಿಯಲ್ ಮಿಸ್ ಅಪ್ರೋಪ್ರಿಯೇಷನ್ ಬಂದರೆ ಪ್ರಾಸಿಕ್ಯೂಟ್ ಮಾಡಕೂಡದು, ಅದಕ್ಕೆ ರೂಲ್ಸ್ ಅಮೆಂಡ್‌ಮೆಂಟ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಜೊತೆಗೆ ಈ ರೀತಿ ಕೆಲವರು ರಿಟೈರ್ ಆಗುವುದಕ್ಕೆ ಒಂದು ಅಥವಾ ಎರಡು ವರ್ಷ ಮುಂಚೆ ಆ ಸ್ಥಳದಲ್ಲಿಯೇ ಇಡಬೇಕೆಂದು ರೂಲ್ಸ್ ಮಾಡಿಕೊಂಡಿದ್ದಾರೆ. ಅವಶ್ಯಕತೆ ಬಿದ್ದರೆ, ಅದನ್ನು ದೂಪರ್ಾಡು ಮಾಡಿ ನಾನ್‌ಸೆನ್‌ಸಿಟೀವ್ ಪ್ಲೇಸ್‌ಗೆ ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಅದರ ಕಡೆ ಸರ್ಕಾರ ಯೋಚನೆ ಮಾಡುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಸರ್ವಿಸ್ ಕಂಡೀಷನ್ ಬಗ್ಗೆ ಬರುತ್ತೇನೆ. ಡೈರೆಕ್ಟ್ ರೆಕ್ರೂಟ್‌ಮೆಂಟ್ ೧೯೬೦ಕ್ಕೆ ನಿಂತು ಹೋಯಿತು. ಬಹುಶಃ ಅದಕ್ಕೆ ಇವೊತ್ತು ನಮ್ಮ ಸ್ನೇಹಿತರು ಒಂದು ಒಳ್ಳೆಯ ಮಾತನ್ನು ಹೇಳಬೇಕು. ೪೦ ಪರ್‌ಸೆಂಟ್ ಇವೊತ್ತು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡತಕ್ಕದ್ದಕ್ಕೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಬದಲಾವಣೆ ಮಾಡಿದ್ದೇವೆ ಇದರ ಬಗ್ಗೆ ಸಾಕಷ್ಟು ಪ್ರತಿಭಟನೆ ಬಂದಿದೆ. ರಾಜ್ಯಪಾಲರವರ ಹೋಗಿ ನಮ್ಮ ಮೇಲೆ ದೂರು ಕೊಟ್ಟಿರು, ಅನೇಕ ಜನ ಸನ್ಮಾನ್ಯ ಸ್ನೇಹಿತರು ಪತ್ರ ಬರೆದಿದ್ದಾರೆ. ಚರ್ಚೆಯಾಗಿದೆ. ಅವರು ಹೇಳಿರತಕ್ಕದ್ದರಲ್ಲಿ ಯಾವುದು ತಿರುಳಿಲ್ಲ ಎಂದು ಹೇಳಲಿಕ್ಕೆ ಸಿದ್ಧ ಇಲ್ಲ. ಕೆಲವರಿಗೆ ೧೫-೨೦ ವರ್ಷ ಆದರೂ ಪ್ರಮೋಷನ್ ಸಿಕ್ಕುವುದಿಲ್ಲ ಎನ್ನುವ ವಾದ ಇದೆ. ಸ್ವಾಭಾವಿಕವಾಗಿ ಸರ್ವಿಸ್‌ಗೆ ಸೇರಿಕೊಂಡಿರುವ ಅಸಿಸ್ಟೆಂಟ್ ಇಂಜಿನಿಯರುಗಳು ಪ್ರತಿಭಟನೆ ಸಲ್ಲಿಸತಕ್ಕುದ್ದು ನಿಜ. ಆದರೆ ನೇರ ನೇಮಕಾತಿ ಸರ್ಕಾರ ಕೈಬಿಡಬೇಕೆಂದವ ಸಂಪೂರ್ಣ ಇದಕ್ಕೆ ತದ್ವಿರುದ್ಧ ಇದ್ದೇನೆ. ನಮ್ಮ ರಾಜ್ಯ ೪೦ ಪರ್ಸೆಂಟ್ ನೇರ ನೇಮಕಾತಿ ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಬೇರೆ ರಾಜ್ಯಗಳಲ್ಲಿ ಕಡಿಮೆ ಇದೆ, ಬದಲಾವಣೆ ಮಾಡಿ ಎನ್ನುವ ವಾದ ಏನಿದೆ ಅದರ ಬಗ್ಗೆ ಪರಿಶೀಲನೆ ಮಾಡಲಿಕ್ಕೆ ಸಿದ್ಧ ಇದ್ದೇನೆ. ಸರ್ಕಾರ ಸಿದ್ಧ ಇದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಯು ಕೆ.ಪಿ. ಕನ್‌ಸ್ಟ್ರಕ್ಷನ್‌ನಲ್ಲಿ ಒಬ್ಬ ಎಂ.ಇ. ಪದವೀಧರ ಫಸ್ಟ್‌ಕ್ಲಾಸ್ ಸ್ಟೂಡೆಂಟ್ ಇದ್ದಾನೆ. ಅವನು ಸ್ಟ್ರಕ್ಚೂರಲ್ ಇಂಜಿನಿಯರ್ ಪಾಸ್ ಮಾಡಿಕೊಂಡು ಬಂದಿರುವ ಹುಡುಗ ಜ್ಯೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದಾನೆ. ಎಲ್ಲಾ ಅಧಿಕಾರಿಗಳ ಸಭೆಯಲ್ಲಿ ಎದ್ದು ನಮಗೆ ಕೊಡುತ್ತಿರುವ ಉತ್ತೇಜನ ಸರಿ ಇಲ್ಲ ಎಂದು ಹೇಳಿದ. ಇವೊತ್ತು ಅನೇಕ ಜನ ಬ್ರಿಲಿಯೆಂಟ್ ಬಾಯ್ಸ್ ಇದ್ದಾರೆ. ಅಂಥವರಿಗೆ ಉತ್ತೇಜನ ಕೊಡಬೇಕಾಗುತ್ತದೆ. ಆದರೆ ಎಲ್ಲರೂ ಅದೇ ರೀತಿ ಎಂದು ಹೇಳಲಿಕ್ಕೆ ಆಗುವುದಿಲ್ಲ. ಪರೀಕ್ಷೆಯಲ್ಲಿ ವಾಮ ಮಾರ್ಗದಿಂದ ಮಾಡಿಕೊಂಡು ಬರುತ್ತಾರೆಂದು ಹೇಳಲಿಕ್ಕು ಸಿದ್ಧ ಇಲ್ಲ.

There certain telented boys. we have to give them encouragement. ಈ ನಿರ್ಣಯವನ್ನು ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕಂಥಾದ್ದಕ್ಕೆ ಸರ್ಕಾರ ನಿರ್ಣಯ ಮಾಡಿದ್ದೇವೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ಸ್ ರೂಲ್ಸ್ ಅಮೆಂಡ್‌ಮೆಂಟ್ ಮಾಡಿದ್ದೇವೆ. ಅದು ಈ ವರ್ಷದಿಂದಲೇ ಅನುಷ್ಠಾನಕ್ಕೆ ಬರುತ್ತದೆಂದು ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದರ ಹಿಂದೆ ಅನ್ಯಾಯವಾಗಿತ್ತು, ಅದನ್ನು ಸರಿಪಡಿಸಲಿಕ್ಕೆ ಸಾಧ್ಯ ಎನ್ನುವುದು ಒಪ್ಪಿಕೊಳ್ಳಬೇಕಾಗುತ್ತದೆ. ಯಾರು ಹುಡುಗರಿಂದ ಚೀಟಿ ಎರಚಿಸಿ, ಕೂಗಲಿಕ್ಕೆ ಪ್ರಯತ್ನ ಮಾಡಿಸಿದರೋ, ಈ ಪರಿಶಿಷ್ಟ ಸಮಾಜದವರಿಗೆ ಹೇಳುತ್ತೇನೆ. ಈ ಒಂದು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿರುವುದರಿಂದ, ಕನಿಷ್ಠಪಕ್ಷ ಒಬ್ಬ ಷೆಡ್ಯೂಲ್‌ಕ್ಯಾಸ್ಟ್ ಪರ್‌ಸನ್ ೮–೧೦ ವರ್ಷವಾದರೂ ಚೀಫ್ ಇಂಜಿನಿಯರ್ ಆಗಲಿಕ್ಕೆ ಸಾಧ್ಯವಾಗುತ್ತದೆ ಈ ವ್ಯವಸ್ಥೆಯನ್ನು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಿದಾಗ ಸಾಕಷ್ಟು ಟೀಕೆ ಬಿಟ್ಟರೆ ಒಂದು ಒಂದು ಒಳ್ಳೆಯ ಮಾತು ಯಾರು ಹೇಳಲಿಕ್ಕೆ ಸಿದ್ಧ ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಇದು ಹೇಗೆ ವಿವರಣೆ ಕೊಡಬೇಕು. ಪ್ರಮೋಷನ್‌ಗೆ ೩ ವರ್ಷ ಇದ್ದುದನ್ನು ೫ ವರ್ಷ ಮಾಡಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ.—ಅದಕ್ಕೆ ಸಂಬಂಧ ಇಲ್ಲ. ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿದಂಥ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಷೆಡ್ಯೂಲ್‌ಕ್ಯಾಸ್ಟ್ ಇದ್ದರೆ ಆತ ೫ನೇ ವರ್ಷಕ್ಕೆ ಎಕ್ಸಿಕ್ಯುಟೀವ್ ಇಂಜಿನಿಯರ್ ಆಗುತ್ತಾನೆ. ೯.೧೦ನೇ ವರ್ಷಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗುತ್ತಾನೆ. ೧೪–೧೫ನೇ ವರ್ಷಕ್ಕೆ ಚೀಫ್ ಇಂಜಿನಿಯರ್ ಆಗುತ್ತಾನೆ ಅವನು ೨೫ನೇ ವಯಸ್ಸಿನಲ್ಲಿ ಸರ್ವೀಸ್‌ಗೆ ಸೇರಿದರೆ ಅವನು ೪೧ನೇ ವಯಸ್ಸಿಗೆ ಚೀಫ್ ಇಂಜಿನಿಯರ್ ಆಗಲಿಕ್ಕೆ ಸಾಧ್ಯವಿದೆ. ಆತ ಸುಮಾರು ೧೨ ವರ್ಷ ಚೀಫ್ ಇಂಜಿನಿಯರ್ ಆಗಿರಲಿಕ್ಕೆ ಸಾಧ್ಯವಿದೆ. ಇದಕ್ಕೆ ಸಾಮಾನ್ಯವಾಗಿ ಕೇವಲ ರಾಜಕೀಯ ಒತ್ತಡ, ಹಣದ ಒತ್ತಡ ಕೂಡ ನಡೆದಿದೆ. ಇದು ೨೦ ವರ್ಷದ ನೆನೆಗುದಿಯಾಗಬೇಕಾದರೆ ಸಾಕಷ್ಟು ಕಾರಣ ಇದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಯಾವಾಗಿನಿಂದ ಇದನ್ನು ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ —ಈ ವರ್ಷದಿಂದಲೇ ನಾನು ಹೋದಮೇಲೆ ಜಾರಿಗೆ ಬರಬೇಕೆಂದು ಹೇಳುತ್ತಿಲ್ಲ. ಈ ವರ್ಷದಿಂದ ಜಾರಿಗೆ ತರುತ್ತಿದ್ದೇವೆ.

ಶ್ರೀ ಧರ್ಮಸಿಂಗ್.—ಬೇಗ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಅಕಸ್ಮಾತ್ ನಾನು ಹೋದರೆ, ನೀವು ಈ ಕಡೆ ಬಂದಾಗ ಇದನ್ನು ತಡೆಹಿಡಿಯುತ್ತೀರಿ ಎನ್ನುವ ಸಂಶಯ ಇಲ್ಲ.

ಒಬ್ಬ ಮಾನ್ಯ ಸದಸ್ಯರು.—ನೀವು ಹೋಗುತ್ತೇವೆ ಎನ್ನುವ ನಂಬಿಕೆ ಇದೆಯೇ.

ಶ್ರೀ ಹೆಚ್.ಡಿ. ದೇವೇಗೌಡ.—ಕಾಳಜಿ ಕೂಡ ಇಲ್ಲ, ಚಿಂತೆ ಕೂಡ ಇಲ್ಲ.

ಇಲ್ಲಿ ಏನಾಗಿದೆ ಎಂದರೆ ಈ ದೇಶದಲ್ಲಿ ಅಧಿಕಾರಕ್ಕೆ ಬಂದವರು ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದು ಮಾಡಬಾರದ ಪ್ರಯತ್ನಗಳನ್ನು ಮಾಡಿ ಈ ಒಂದು ಹೊಲಸು ಕೆಲಸಮಾಡಿದ್ದಾರೆ ಈ ಸಂದರ್ಭದಲ್ಲಿ ಸೋಷಿಯಲ್ ಜಸ್ಟೀಸ್ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ತಾವು ಒಂದು ಸೂಚನೆಯನ್ನು ಕೊಟ್ಟಿರಿ. ಯಾವುಯಾವುದರಲ್ಲಿ ಯಾರ್ಯಾರು ತರಬೇತಿಯನ್ನು ಹೊಂದಿರುತ್ತಾರೋ ಅವರನ್ನು ಆ ತರಬೇತಿ ಹೊಂದಿರತಕ್ಕ ಜಾಗಕ್ಕೆ ಇಡತಕ್ಕ ಕೆಲಸ ಆಗಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂದು ಹೋದರೆ ಇದನ್ನು ಕಟ್ಟುನಿಟ್ಟಾಗಿ ಜಾರಿಗೆತರುವುದಕ್ಕೆ ಸಾಧ್ಯವಿಲ್ಲ. ಇದು ಇರತಕ್ಕ ದೋಷ. ಇದರ ಬಗ್ಗೆ ನಾನು ಆ ಕಡೆ ಕೂತಿದ್ದಾಗಲೂ ವಾದ ಮಾಡಿದ್ದೇನೆ. ಸಂಪೂರ್ಣವಾದ ಚಿಂತನೆಯನ್ನು ಮಾಡಿದ್ದೇನೆ. ಉದಾಹರಣೆಗೆ ಪಿ.ಎಚ್.ಇ. ಸ್ಪೆಷಲೈಸೇಷನ್ ಆಗಿರುವವರನ್ನು ತೆಗೆದುಕೊಂಡು ಹೋಗಿ ಬೇರೆಕಡೆ ಹಾಕುತ್ತಾರೆ. ಅಥವಾ ಸ್ಟ್ರಕ್ಚರಲ್ ಇಂಜಿನಿಯರಿಂಗ್ ಆಗಿರುವವರನ್ನು ತೆಗೆದುಕೊಂಡು ಹೋಗಿ ಬೇರೆ ಕಡೆ ಹಾಕುತ್ತಾರೆ ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂಬ ತತ್ವಕ್ಕೆ ಕಟ್ಟುಬಿದ್ದು ಇಂಥ ಕೆಲಸವನ್ನು ಮಾಡುತ್ತೇವೆ. ಇದನ್ನು ಅನುಷ್ಠಾನಕ್ಕೆ ತರಬೇಕೆಂದು ಪ್ರಯತ್ನ ಮಾಡಿದಾಗ ಕೆಲವು ಸಂದರ್ಭದಲ್ಲಿ ನಾವು ಕಾಂಪ್ರೊಮೈಸ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಆಂಧ್ರದಲ್ಲಿ ಡಿವಿಜನ್‌ವೈಸ್ ರಿಕ್ರೂಟ್‌ಮೆಂಟ್ ಮಾಡಿರುವಂತೆ ಇಲ್ಲೂ ಮಾಡುತ್ತೀರಾ ? ನಮ್ಮ ಜಿಲ್ಲೆಯಲ್ಲಿ ಇವತ್ತು ಇಂಜಿನಿಯರ್‌ಗಳು ಕಡಿಮೆ ಇದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ರಾಜ್ಯದ ಜನತೆಗೆ ಒಂದು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಲೋಕೋಪಯೋಗಿ ಇಲಾಖೆ ಕಳೆದ ೧೭-೧೮ ವರ್ಷದಿಂದ ಮುಂದುವರಿದ ಜನಾಂಗದವರ ಕೈಗೆ ಸಿಕ್ಕಿರಲಿಲ್ಲ. ಶ್ರೀಮಾನ್ ಶ್ರೀಕಂಠಯ್ಯನವರು ಸ್ವಲ್ಪ ದಿವಸ ಇದ್ದರು. ದೇವರಾಜ ಅರಸರ ಮಂತ್ರಿ ಮಂಡಲದಲ್ಲಿ ಅದನ್ನು ತೆಗೆದರು, ೧೯೬೯ರ ಪೂರ್ವದಲ್ಲಿ ಅಂದರೆ ಕಾಂಗ್ರೆಸ್ ವಿಭಜನೆ ಆಗುವುದಕ್ಕೆ ಮುಂಚಿತವಾಗಿ ಅಂದರೆ ಚನ್ನಬಸಪ್ಪನವರಿಗಿಂತಲೂ ಮುಂಚಿತವಾಗಿ. ಆದರೆ ದೇವೇಗೌಡರ ಕಾಲದಲ್ಲಿ ಸಾಮಾಜಿಕ ನ್ಯಾಯ ಸಿಕ್ಕುತ್ತಿಲ್ಲ ಎನ್ನುವ ಕೂಗು ಬರುತ್ತಡೆ, ದೇವೇಗೌಡರ ಕಾಲದಲ್ಲಿ ಪರಿಶಿಷ್ಟ ಜನಾಂಗದ ಅಧಿಕಾರಿಗಳಿಗೆ ರಕ್ಷಣೆ ಇಲ್ಲ ಎನ್ನುವ ಕೂಗು ಕೇಳಿಬರುತ್ತದೆ, ದೇವೇಗೌಡರ ಕಾಲದಲ್ಲಿ ಯಾವುದೋ ಒಂದೇ ಜಾತಿಗೆ ಹೆಚ್ಚಿನ ಸೌಲಭ್ಯ ಇದೆ ಎನ್ನುವ ಕೂಗು ಕೇಳಿಬರುತ್ತದೆ, ಬಹುಶಃ ನನ್ನ ಒಂದು ಜಾತಿಯನ್ನು ಬಿಟ್ಟರೆ ಉಳಿದ ಎಲ್ಲ ಜಾತಿಯವರಿಗೂ ಅನ್ಯಾಯವಾಗಿದೆ ಎನ್ನುವ ಕೂಗು ಈ ಸದನದ ಒಳಗೆ ಮತ್ತು ಹೊರಗೆ ಇದೆ. ತಾವು ನೇರವಾಗಿ ಹೇಳದಿದ್ದರೂ ಪರೋಕ್ಷವಾಗಿ ಪ್ರಸ್ತಾಪ ಮಾಡಿದ್ದೀರಿ. ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂದು ತಾವು ಹೇಳಿದ್ದೀರಿ. ಈ ದೂರಿಗೆ ವಿವರಣೆಯನ್ನು ಕೊಡಬೇಕಾದ್ದು ನನ್ನ ಧರ್ಮ. ಕೇವಲ ಆ ಕಡೆಯ ದೂರು ಮಾತ್ರವಲ್ಲ. ನನ್ನ ಕಡೆಯಲ್ಲೂ ಕೂಡ ದೂರು ಇದೆ; ಇದನ್ನು ನನ್ನ ರಾಜಕೀಯ ಜೀವನದಲ್ಲಿ ಅನುಭವಿಸಿಕೊಂಡು ಬಂದಿದ್ದೇನೆ. I can trust an open enemy rather than a coward friend. ಈ ಮಾತನ್ನು ನಾನು ಬಹಳ ನೊಂದು ಹೇಳುತ್ತಿದ್ದೇನೆ. ನನ್ನ ೨೫ ವರ್ಷಗಳ ರಾಜಕೀಯ ಜೀವನದಲ್ಲಿ ಅನುಭವಿಸಿಕೊಂಡು ಬಂದಿರುವುದೇ ಅಲ್ಲದೆ ಇಂದೂ ಕೂಡ ಅನುಭವಿಸುತ್ತೀದ್ದೇನೆ. ಆದರೆ ವಾಸ್ತವಾಂಶ ಏನು ಎಂಬುದನ್ನು ತಿಳಿದುಕೊಳ್ಳಬೇಕು. ರಾಜ್ಯದ ೪ ಕೋಟಿ ಜನರಿಗೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ತಮ್ಮ ಅನುಮತಿಯನ್ನು ಕೇಳಿ ಈ ವೇದಿಕೆಯನ್ನು ಉಪಯೋಗಿಸಿಕೊಳ್ಳಲಿ. ರಿಕ್ರ್ಯೂಟ್‌ಮೆಂಟ್ ಕಮಿಟಿಯನ್ನು ಮಾಡಿದಾಗ ಅದರಲ್ಲಿ ನನ್ನ ಜಾತಿಯವರನ್ನು ಯಾರನ್ನೂ ಅದಕ್ಕೆ ಹಾಕಲಿಲ್ಲ. ಲಿಂಗಾಯಿತರನ್ನು ಹಾಕಲಿಲ್ಲ, ಬ್ರಾಹ್ಮಣರನ್ನು ಹಾಕಲಿಲ್ಲ, ಅದನಲ್ಲಿ ಒಬ್ಬ ನಿಮ್ಮ ವರ್ಗದವರನ್ನು, ಒಬ್ಬ ಅಲ್ಪಸಂಖ್ಯಾತರ ಕೋಮಿನ ಅಂದರೆ ಮುಸ್ಲಿಮರನ್ನು ಒಬ್ಬ ಕುರುಬ ಸಮಾಜದವರನ್ನು ಹಾಕಲಾಗಿದೆ. ಇದರಿಂದ ನನ್ನ ಇಲಾಖೆಯ ಕೆಲಸ ಪ್ರಾರಂಭವಾಯಿತು. ಈ ವಿಷಯವನ್ನು ಸಭೆಯ ಪರಿಶೀಲನೆಗಾಗಿ ಇಡುತ್ತೇನೆ. ಆದಕ್ಕಾಗಿ ಎಲ್ಲ ಪಟ್ಟಿಯನ್ನೂ ತರಿಸಿದ್ದೇನೆ. ೧೯೮೦ರಲ್ಲಿ ವರ್ಕಿಂಗ್ ಜೋನ್‌ನಲ್ಲಿ ನಿಮ್ಮವರ್ಗಕ್ಕೆ ಸೇರಿದ ಇಬ್ಬರು ಚೀಫ್ ಇಂಜಿನಿಯರ್‌ಗಳು ಇದ್ದರು. ಇವತ್ತು ನೇರವಾಗಿ ನನ್ನ ವ್ಯಾಪ್ತಿಯ ಇಲಾಖೆಯಲ್ಲಿ ಕೆಲಸಮಾಡತಕ್ಕವರು ೩ ಜನರಿದ್ದಾರೆ. ಒಬ್ಬರನ್ನು ಕರ್ನಾಟಕ ಪವರ್ ಕಾರ್ಪೊರೇಷನ್ ಚೀಫ್ ಇಂಜಿನಿಯರ್ ಆಗಿ ಮಾಡಿದ್ದೇವೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಛೇರ್ಮನ್ ಕಮ್ ಮ್ಯಾನೇಜಿಂಗ್ ಡೈರೆಕ್ಟರ್ ಎನ್ನುವ ವ್ಯವಸ್ಥೆಯನ್ನು ಮಾಡಿದ್ದು ಎಂದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ, ಜನತಾ ಪಕ್ಷದ ಸರ್ಕಾರ, ಅಥವಾ ದೇವೇಗೌಡರ ಕಾಲದಲ್ಲಿ ಆಗಿದೆ. ಇವತ್ತು ಸಿ. ಅಂಡ್ ಬಿ. ನಿಂದ ಒಬ್ಬ ಚೀಫ್ ಇಂಜಿನಿಯರ್‌ನ್ನು ತೆಗೆದಿದ್ದೇನೆ. ಆದರೆ ಅಲ್ಲಿಗೆ ನಮ್ಮ ಜಾತಿಯವರನ್ನು ನಾನು ಹಾಕಲಿಕ್ಕೆ ಹೋಗಲಿಲ್ಲ. ಅಲ್ಲಿಗೆ ಒಬ್ಬ ದಕ್ಷತೆ ಹಾಗೂ ನಿಷ್ಠೆಯುಳ್ಳ ಪ್ರಾಮಾಣಿಕ ವ್ಯಕ್ತಿಯನ್ನು ನಾನು ನೇಮಕ ಮಾಡಿದ್ದೇನೆ. ಆತನ ಸತ್ಯಸಂಧತೆಯ ಬಗ್ಗೆ ಯಾರೂ ಕೂಡ ಪ್ರಶ್ನೆ ಮಾಡುವಂತಿಲ್ಲ. ಆದರೆ ನಾನು ಆ ವ್ಯಕ್ತಿಯನ್ನು ಅಲ್ಲಿಂದ ತೆಗೆದಮೇಲೆ ಪಟ್ಟಭದ್ರಹಿತಾಸಕ್ತಿಗಳು ಏನಿವೆ ಅವು ಬೇರೆಬೇರೆ ಕಾರಣಗಳಿಂದ ನನ್ನ ವಿರುದ್ಧವಾಗಿ ಪ್ರಚಾರ ಮಾಡಲು ಹಣವನ್ನು ವಿನಿಯೋಗಮಾಡುತ್ತಿವೆ. ಈ ಮಾತನ್ನು ನಾನು ಬಹಳ ನೊಂದು ಹೇಳತ್ತಿದ್ದೇನೆ. ನನ್ನ ಸಮಾಜಕ್ಕೆ ಸೇರಿದಂಥ ೩ ಜನ ಚೀಫ್ ಇಂಜಿನಿಯರ್‌ಗಳು ಇದ್ದಾರೆ. ಒಬ್ಬ ಕರ್ನಾಟಕ ಪವರ್ ಕಾರ್ಪೊರೇಷನ್ನಲ್ಲಿ ಕೆಲಸಮಾಡುತ್ತಿದ್ದಾನೆ, ಇನ್ನೊಬ್ಬ ವಿಜಿಲೆನ್ಸ್‌ನಲ್ಲಿ ಕೆಲಸಮಾಡುತ್ತಿದ್ದಾನೆ. ಇನ್ನೊಬ್ಬ ನ್ಯಾಷನಲ್ ಹೈವೇನಲ್ಲಿ ಚೀಫ್ ಇಂಜಿನಿಯರ್ ಆಗಿ ಕೆಲಸಮಾಡುತ್ತಿದ್ದಾನೆ. ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದ, ಅತ್ಯಂತ ಪ್ರಾಮಾಣಿಕ ವ್ಯಕ್ತಿಯನ್ನು ನೇಮಕ ಮಾಡಿದ್ದೇನೆ. ದೇವೇಗೌಡರು ತಮ್ಮ ಸಮಾಜಕ್ಕೆ ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ; ಬೇರೆ ಸಮಾಜದವರಿಗೆ ಅನ್ಯಾಯ ಎಂದು ಹೇಳಬಹುದು. ರಾಜಕೀಯವಾಗಿ ಒಬ್ಬ ಮನುಷ್ಯನನ್ನು ಕೊಲ್ಲಬಹುದು. ಸ್ವಾಮಿ, ೧೯೮೦ನೇ ಇಸವಿಯಲ್ಲಿ ವರ್ಕಿಂಗ್

ಸರ್ಕಲ್‌ನಲ್ಲಿ ೪ ಜನ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಇದ್ದರು. ಇವತ್ತು ೧೪ ಜನ ಇದ್ದಾರೆ ಇವರು ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾರೆ. ನಾನು ಅಧಿಕಾರಕ್ಕೆ ಬಂದಾಗ ಈ ವರ್ಕಿಂಗ್ ಸರ್ಕಲ್‌ನಲ್ಲಿ ಇಬ್ಬರು ಒಕ್ಕಲಿಗ ಸಮಾಜಕ್ಕೆ ಸೇರಿದವರು ಇದ್ದರು. ಆದರ ಇವತ್ತು ಒಬ್ಬ ಮಾತ್ರ ಇದ್ದಾನೆ.

ಒಬ್ಬ ಮಾನ್ಯ ಸದಸ್ಯರು.—ನಮ್ಮವರು ಎಂದು ಹೇಳಿ ಯೋಗ್ಯತೆ ಇದ್ದರೂ ಕೂಡ ಅವರಿಗೆ ಅನ್ಯಾಯ ಮಾಡಬೇಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಆದರೆ ಇವತ್ತು ವಾಸ್ತವಾಂಶವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಸಿ ಅಂಡ್ ಬಿ ಇರಬಹುದು, ಜಲಮಂಡಲಿ ಇರಬಹುದು, ನೀರಾವರಿ ಇಲಾಖೆ ಇರಬಹುದು, ಅಲ್ಲಿ ವರ್ಕಿಂಗ್ ಡಿವಿಜನ್‌ನಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ೨೪ ಜನ ಇದ್ದರು ಇವತ್ತು ೨೮ ಜನರಿದ್ದಾರೆ. ಇವರು ನಿಮ್ಮ ವರ್ಗಕ್ಕೆ ಸೇರಿದವರು. ನಾವು ಏನು ಪ್ರಾಮಾಣಿಕ ಕೆಲಸವನ್ನು ಮಾಡಿದ್ದೇವೆ ಎಂಬುದನ್ನು ರಾಜ್ಯದ ಜನತೆಯ ತೀರ್ಮಾನಕ್ಕೆ ಬಿಟ್ಟಿದ್ದೇವೆ. ನನ್ನಿಂದ ಏನಾದರೂ ಅನ್ಯಾಯವಾಗಿದ್ದರೆ ಅವರು ಹೇಳಲಿ. ೧೯೮೦ರಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ವರ್ಕಿಂಗ್ ಸಬ್ ಡಿವಿಜನ್‌ನಲ್ಲಿ ೨೭ ಜನರಿದ್ದರು: ಆದರೆ ಇವತ್ತು ೧೩೧ ಜನರಿದ್ದಾರೆ. ತಾವು ಕೇಳಿದರೆ ಕೊಡುವ ಸಲುವಾಗಿ ಪ್ರತಿಯೊಬ್ಬರ ಹೆಸರುಗಳನ್ನೂ ಪಟ್ಟಿ ಮಾಡಿಸಿ ತರಿಸಿದ್ದೇನೆ. ಅಷ್ಟೇ ಅಲ್ಲ ಈ ೬ ತಿಂಗಳಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ ಎನ್ನುವ ಬಗ್ಗೆ ಇಲ್ಲಿ ತಮಗೆ ಸ್ಪಷ್ಟೀಕರಣ ಕೊಡುತ್ತೇನೆ. ಇವತ್ತು ಎಸ್ಟ್ಯಾಬ್ಲಿಷ್‌ಮೆಂಟ್‌ನ್ನು ನೋಡಿಕೊಳ್ಳುವ ಚೀಫ್ ಇಂಜಿನಿಯರ್‌ರವರು ನಿಮ್ಮ ವರ್ಗಕ್ಕೆ ಸೇರಿದವರು. ಇದು ರಾಜ್ಯಾಧ್ಯಂತ ಒಂದು ಗುಲ್ಲು

೨. ಪಿ. ಎಂ.

ರಾಜ್ಯಾದ್ಯಂತ ಸ್ವಾಮಿ, Today it is 131, out of cadre strength of 153 scheduled castes Assistant Executive Engineers... ಈ 153 cadre strength Assistant Executive Engineersಗಳಲ್ಲಿ ಕೇವಲ ೨೨ ಮಾತ್ರ ಇನ್‌ವೆಸ್ಟಿಗೇಷನ್ ಬೇರೆ ಬೇರೆ ಕೆಲಸಗಳಲ್ಲಿ ಕೆಲಸಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಂದರೆ ೧೯೮೦-೮೧ ರಲ್ಲಿ ಇದ್ದುದಕ್ಕಿಂತ ಜಾಸ್ತಿ ಮಾಡಿದ್ದೇವೆ ಎನ್ನುವುದು ನಿಮ್ಮ ವಾದವೆ ?

ಶ್ರೀ ಎಚ್. ಡಿ. ದೇವೇಗೌಡ.—೨೦ ಜನರಿಂದ ೧೦ ಜನರನ್ನು ಮಾಡಿದ್ದೇವೆ. ನಾವು ಏನು ನಿರ್ಣಯವನ್ನು ಮಾಡಿದ್ದೇವೆ ಎಂದರೆ ಸ್ವಾಮಿ ಈ ಟ್ರಾನ್ಸ್‌ಫರ್ಸ್ ಬಗ್ಗೆ ನಾವು ಹೆಚ್ಚಿನ ಮಹತ್ವವನ್ನು ಕೊಡಲಿಕ್ಕೆ ಹೋಗುವುದಿಲ್ಲ. ಸುಮಾರು ೨೨ ವರ್ಷಗಳಿಂದ ನಾನು ಇಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ಅದರ ಬಗ್ಗೆ ಈವತ್ತು ನಾನು ಹೆಚ್ಚಿಗೆ ಮಹತ್ವವನ್ನು ಕೊಡಲಿಕ್ಕೆ ಹೋಗುವುದಿಲ್ಲ. ಟ್ರಾನ್ಸ್‌ಫರ್ಸ್ ಮಾಡುವಾಗ ಎರಡು ಮಾರ್ಗಗಳನ್ನು ಅನುಸರಿಸುತ್ತೇವೆ.' ಒಂದು, ಅಧಿಕಾರಿಗಳು ಕಳುಹಿಸಿಕೊಡತಕ್ಕಂಥ ವರದಿಯ ಆಧಾರದ ಮೇಲೆ ಮಾಡುತ್ತೇವೆ. ಮತ್ತೊಂದು ಸಾರ್ವಜನಿಕ ಪ್ರತಿನಿಧಿಗಳು, ಒಂದು ಲಕ್ಷ ಜನರನ್ನು ಪ್ರತಿನಿಧಿಸತಕ್ಕಂಥ ಜನರು, ಅವರಿಗೂ ಕಾಳಜಿ ಇದೆ. ಇಲ್ಲಿ ಕುಳಿತುಕೊಂಡು ಕೆಲಸ ಮಾಡತಕ್ಕಂಥ ಜನರಿಗೆ ನೇರವಾದ ಜವಾಬ್ದಾರಿ ಇರುತ್ತದೆ. ಅದು ಯಾವುದೇ ಜನರು ಇರಲಿ ಕಾಂಗ್ರೆಸ್ ಇರಲಿ, ಬಿ.ಜೆ.ಪಿ. ಇರಲಿ, ಸಿ.ಪಿ.ಎಂ., ಸಿ.ಪಿ.ಐ., ಇರಲಿ, ಸಿ.ಪಿ.ಐ., ಸಿ.ಪಿ.ಎಂ. ಎಂದು ಬೇರೆ ಮಾಡುವುದಕ್ಕೆ ಹೋಗಲಿಲ್ಲ. ಮಾನ್ಯ ಒಡೆಯರಾಜ್‌ರವರು ಏತಕ್ಕೆ ಮಿಕ್ಸ್ ಮಾಡಿದ್ದಾರೋ ಗೊತ್ತಿಲ್ಲ. ನಾನು ಇದನ್ನು ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಕಾಂಗ್ರೆಸ್‌ನವರು ಹೇಳಿದರೂ ಮಾಡಬಾರದು ಎಂದು ನಿರ್ಣಯ ಮಾಡಿಲ್ಲ. ಬಿ.ಜೆ.ಪಿ. ಯವರು ಹೇಳಿದರೂ ಮಾಡಬಾರದೆಂದು ಮಾಡಲಿಲ್ಲ. ಅಥವಾ ಸಿ.ಪಿ.ಐ. ಮತ್ತು ಸಿ.ಪಿ.ಎಂ. ಹೇಳಿದರೂ ಮಾಡಬಾರದೆಂದು ಮಾಡಲಿಲ್ಲ. ಈವತ್ತು ನೇರವಾಗಿ ಈ ಸದನದ ೨೨೪ ಜನ ಒಂದು ಲಕ್ಷ ಪ್ರತಿನಿಧಿಗಳು ಚುನಾಯಿಸಿ ಬಂದಿರತಕ್ಕಂಥವರು ಹೇಳುವಾಗ ಅವರಿಗೆ ಕಾಳಜಿ ಇಲ್ಲವೇ ? ಈ ಇಲಾಖೆ ಆಡಳಿತದಲ್ಲಿ ಸುಧಾರಣೆ ತರಬೇಕು, ನಾವು ಖರ್ಚುಮಾಡತಕ್ಕಂಥ ಹಣ ವ್ಯವಸ್ಥಿತವಾದ ರೀತಿಯಲ್ಲಿ ಖರ್ಚಾಗಬೇಕು. ಎನ್ನುವ ಬಯಕೆ ಇರುವಾಗ ಏತಕ್ಕೆ ಸಂಶಯವನ್ನು ವ್ಯಕ್ತಪಡಿಸಬೇಕು ? ಎಲ್ಲ ಹಂತದಲ್ಲೂ ಒಬ್ಬರೇ ಆವೇಶ ಮಾಡಿದ್ದಾರೆಂದು ಈ ಸದನದ ಆಸಕ್ತಿಯನ್ನು ನೀಡಲಿಕ್ಕೆ ಸತ್ಯವಾಗಿದ್ದರೆ, ಈ ಸಂದರ್ಭದಲ್ಲಿ

ಹೇಳತಕ್ಕಂಥ ಮಾತನ್ನು ಗಣನೆಗೆ ತೆಗೆದುಕೊಂಡು ಇನ್‌ವೆಸ್ಟಿಗೇಷನ್ ವರದಿಯನ್ನು ತರಿಸಿ ವಾಸ್ತವಾಂಶವನ್ನು ಪರಿಶೀಲನೆ ಮಾಡಬಹುದು. ಈವತ್ತು ಇಲಾಖೆಯ ಆಡಳಿತದಲ್ಲಿ ಪ್ರಾಮಾಣಿಕತೆಯಿಂದ ಕೆಲಸ ನಿರ್ಧಾರ ಮಾಡಿರುವಾಗ ಭ್ರಷ್ಟಾಚಾರದ ಆರೋಪವನ್ನು ಏತಕ್ಕೆ ಹೊರಿಸಬೇಕು ?

ಶ್ರೀ ಜಿ.ಪಿ. ಒಡೆಯ ರಾಜ್.--ನನ್ನ ಭಾಷಣದಲ್ಲಿ ಏನು ಹೇಳಿದ್ದು ಎಂದರೆ, ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಇರತಕ್ಕಂಥ ಷೆಡ್ಯೂಲ್‌ಕ್ಯಾಸ್ಟ್ ಷೆಡ್ಯೂಲ್‌ಟ್ರೈಬ್ಸ್ ಜನರನ್ನು ಡಿಸ್‌ಪ್ಲೇಸ್ ಮಾಡುವಾಗ ಯಾರಿಗೂ ಪ್ರೊಟೆಕ್ಷನ್ ಸಿಕ್ಕಲಿಲ್ಲ. When they were to be shifted from one place to another then only I represented. ಎಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ.

ಶ್ರೀ ಎಚ್ ಡಿ. ದೇವೇಗೌಡ.—ಅವರದಷ್ಟೇ ಅಲ್ಲ ಲಿಂಗಾಯತರದೂ ಹೇಳಿದ್ದೀರಿ, ನಾವು ಈ ದೇಶದ ಕೊಡುಗೆಯಾಗಿ ಇಲ್ಲಿ ಕುಳಿತಿದ್ದೇವೆ. ಸಾರ್ವಜನಿಕರ ಪ್ರತಿನಿಧಿಗಳಾಗಿ ಬಂದಿದ್ದೇವೆ. ಸಂದರ್ಭ ಬಂದಾಗ ಹೇಳಬೇಕಾಗುತ್ತದೆ. Why do you try to attribute motive ? ಅದರ ಅವಶ್ಯಕತೆ ಇಲ್ಲ, ಏತಕ್ಕೆಂದರೆ ಸರ್ಕಾರ ಯಾರು ಹೇಳದೆ ತೀರ್ಮಾನ ಮಾಡುತ್ತದೆ. ನಮ್ಮ ಗೌರ್ನಮೆಂಟ್ ಕಾರ್ಯಕ್ರಮಕ್ಕೆ ಅನುಗುಣವಾಗಿ ಕೆಲಸ ಮಾಡತಕ್ಕಂಥದ್ದಾಗಿರುತ್ತದೆ ಅಂತಿಮವಾದ ತೀರ್ಮಾನ ಕೊನೆಗೆ ಸರ್ಕಾರಕ್ಕೆ ಸೇರಿರತಕ್ಕಂಥದ್ದು ಸ್ವಾಮಿ ಎಷ್ಟು ಪರ್ಸೆಂಟೇಜ್ ಟ್ರಾನ್ಸ್‌ಫರ್ ಮಾಡಿದ್ದೇವೆ ಎನ್ನುವುದನ್ನು ಸಭೆಯ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ೧೯೮೦ರಲ್ಲಿ ಕೇಡರ್ ಸ್ಟ್ರೆಂತ್ ಅಸಿಸ್ಟೆಂಟ್ ಇಂಜಿನೀಯರ್ಸ್ ೩೦೦೦ ಇತ್ತು. ನಾವು ೪೦೭ ಜನರನ್ನು ವರ್ಗ ಮಾಡಿದ್ದೇವೆ. ಅಂದರೆ ೧೩.೫೭ ಪರ್ಸೆಂಟ್ ೧೯೮೩ ರಲ್ಲಿ ಕೇಡರ್ ಸ್ಟ್ರೆಂತ್ ೩೫೮೭ ಇದರಲ್ಲಿ ಟ್ರಾನ್ಸ್‌ಫರ್ಸ್ ಎಫೆಕ್ಟ್ ಆದುದು ೫೭೧ ಅಂದರೆ ೧೫.೯೨ ಪರ್ಸೆಂಟ್. ಅದೇ ರೀತಿಯಲ್ಲಿ ಜೂನಿಯರ್ ಇಂಜಿನಿಯರ್ಸ್ ೧೯೮೦ ರಲ್ಲಿ ೨೯೨೫ ಕೇಡರ್ ಸ್ಟ್ರೆಂತ್ ಇದ್ದುದು, ಇದರಲ್ಲಿ ಟ್ರಾನ್ಸ್‌ಫರ್ ಎಫೆಕ್ಟೆಡ್ ಆದುದು ೪೦೮. ಅಂದರೆ ೧೩.೯೫ ಪರ್ಸೆಂಟ್. ೧೯೮೩ರಲ್ಲಿ ಜೂನಿಯರ್ ಇಂಜಿನೀಯರ್ಸ್ ಕೇಡರ್ ಸ್ಟ್ರೆಂತ್ ಇದ್ದುದು ೩೯೧೪ ಇದರಲ್ಲಿ ಟ್ರಾನ್ಸ್‌ಫರ್ ಎಫೆಕ್ಟೆಡ್ ಆದುದು ೩೫೧ ಅಂದರೆ ೮.೯೫ ಪರ್ಸೆಂಟ್. ಕೆಲವು ಟ್ರಾನ್ಸ್‌ಫರ್ ಆಗಿರತಕ್ಕಂಥವರಲ್ಲಿ ಎಷ್ಟು ಜನ ಹೋಗಿ ರಿಪೋರ್ಟ್ ಮಾಡಿಕೊಂಡಿಲ್ಲ ಎಂಬ ಫಿಗರ್ಸ್ ಸಿಕ್ಕಿಲ್ಲ. ಈ ಟ್ರಾನ್ಸ್‌ಫರ್ಸ್ ಏತಕ್ಕೆ ಮಾಡಿರತಕ್ಕಂಥದ್ದು ಎಂದು ಹೇಳುತ್ತೇನೆ. ಸ್ವಾಮಿ ಇದರಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಮುಂದುವರಿಸುವ ಬಗ್ಗೆ ಕಂಡಿಷನಲ್ ಟ್ರಾನ್ಸ್‌ಫರ್ ಕೊಡುತ್ತೇವೆ. Unless substitute goes and relives him, he cannot be transfered. ರಿಲೀವ್ ಆಗಬೇಕಾದ್ದು ಇದೆ, ನಾಲ್ಕನೂರು ಜನ ನೇಮಕ ಮಾಡಿದ್ದೇವೆ. ಅಸಿಸ್ಟೆಂಟ್ ಇಂಜಿನೀಯರ್ಸ್‌ಗಳನ್ನು, ಸುಮಾರು ನಾಲ್ಕನೂರು ಜನ ಜೆ.ಇ.ಗಳನ್ನು ನೇಮಕ ಮಾಡಿರುತ್ತೇವೆ ಅಲ್ಲಿಗೆ ನೇಮಕಾತಿ ಆದಂತವರು ಚಾರ್ಜಸ್ ತೆಗೆದುಕೊಂಡಮೇಲೆ ರಿಲೀವ್ ಮಾಡಬೇಕೆಂದು ತಿಳಿಸಿದ್ದೇವೆ. ಅದರ ಜೊತೆಗೆ ಸ್ವಾಮಿ ೩೦೩ ಜನಕ್ಕೆ ಪ್ರಮೋಷನ್ ಕೊಟ್ಟಿದ್ದೇವೆ. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನೀಯರ್ಸ್‌ಗೆ ಸುಮಾರು ೧೦೭-೧೦೮ಜನ ಬೇರೆ ಬೇರೆ ಇಲಾಖೆಯಲ್ಲಿ ಇರತಕ್ಕಂಥವರಿಗೆ ಪ್ರಮೋಷನ್ ಕೊಟ್ಟಿದ್ದೇವೆ ಹಲವಾರು ವರ್ಷಗಳಿಂದ ಬಡ್ತಿ ಸಿಕ್ಕದೆ ನೆನೆಗುದಿಗೆಯಲ್ಲಿ ಬಿದ್ದಿದ್ದಂಥವರಿಗೆ ನಾನು ಹನ್ನೊಂದನೇ ತಾರೀಖು, ಹನ್ನೆರಡನೇ ತಾರೀಖು ಚಾರ್ಜ್ ತೆಗೆದುಕೊಂಡರೆ ೧೯ನೇ ತಾರೀಖು ಪ್ರಮೋಷನ್ ಕೊಟ್ಟಿದ್ದೇನೆ.

ಆಗ ಪ್ರಮೋಷನ್ ಸಿಕ್ಕಿದವರಿಗೆಲ್ಲಾ ಗಾಬರಿಯಾಯಿತು ಇಷ್ಟೊಂದು ಸುಲಭವಾಗಿ ಪ್ರಮೋಷನ್ ಸಿಗುತ್ತಿದೆಯೆಲ್ಲಾ ಎಂದು ಅವರಿಗೆ ಗಾಬರಿ ಆಗಿದೆ. ೧೫೨ ಜನರಿಗೆ ಪ್ರಮೋಷನ್ ಕೊಡಲಾಯಿತು. ನಾನು ಇದಕ್ಕೆ ಸಂಬಂಧಪಟ್ಟ ಫೈಲ್‌ನ್ನು ಮುಖ್ಯಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋದಾಗ ಅವರು ಎಲ್ಲವನ್ನೂ ವಿವರವಾಗಿ ನೋಡಿದ್ದೇನೆಂದುಕೊಂಡು ಕೇವಲ ೫ ನಿಮಿಷಗಳಲ್ಲಿ ಸಹಿ ಮಾಡಿದರು, ಈ ರೀತಿ ಪ್ರಮೋಷನ್ ಕೊಟ್ಟಾಗ ಪ್ರಮೋಷನ್ ಪಡೆದವರು ಅಕೌಂಟೆಂಟ್ ಜನರಲ್ ಅವರು ಕೆಲವು ನಿಯಮಗಳ ಪ್ರಕಾರ ನಡೆದುಕೊಳ್ಳಬೇಕಾಗಿತ್ತು. ಈ ಸಂದರ್ಭದಲ್ಲಿ ಕೆಲವರನ್ನು ಓ. ಓ. ಡಿ. ಮೇಲೆ ಬೇರೆ ಬೇರೆ ಇಲಾಖೆಗಳಿಗೆ ಕಳುಹಿಸಿಕೊಡಲಾಗಿತ್ತು. ಇಂತಹವರು ಪ್ರಮೋಷನ್ ಕೊಟ್ಟು ತೋರಿಸಿದ್ದ ಜಾಗಗಳಿಗೆ ಕೂಡಲೇ ಹೋಗುವುದಕ್ಕಾಗಲಿಲ್ಲವಾದ್ದರಿಂದ ಅನಿವಾರ್ಯವಾಗಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕಾಯಿತು. ಇಲ್ಲಿ ನಾವು ಎಂ. ಎಲ್. ಎ. ಗಳು ಹೇಳಿದರು ಎಂಬ ಕಾರಣದಿಂದ ಬದಲಾವಣೆ ಮಾಡಲಿಲ್ಲ. ೧೯೮೩-೮೪ ಜನ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ಪ್ರಮೋಷನ್ ಕೊಟ್ಟಿದ್ದೇವೆ ಮತ್ತು ೧೮ ಜನ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳಿಗೆ ಪ್ರಮೋಷನ್

ಕೊಟ್ಟಿದ್ದೇವೆ. ಈ ರೀತಿ ಪ್ರಮೋಷನ್ ಕೊಟ್ಟಾಗ ನಾವು ತೋರಿಸಿದ ಜಾಗಗಳಿಗೆ ಹೋಗಲು ಕೆಲವರಿಗೆ ನಿಜವಾದಂಥ ತೊಂದರೆಗಳಿವೆ ಎಂದು ತಿಳಿದೂ ಬಂದಾಗ ಕೆಲವು ಬದಲಾವಣೆಗಳನ್ನು ಮಾಡಿರಬಹುದು. ಈಗ ನಾನು ಇಲ್ಲವೆಂದು ಹೇಳುವುದಿಲ್ಲ. ಒಂದು ಕ್ಷೇತ್ರದಲ್ಲಿ ಒಬ್ಬ ಅಧಿಕಾರಿ ಒಂದು ವರ್ಷ ಸೇವೆ ಸಲ್ಲಿಸಿರಬಹುದು, ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿರಬಹುದು. ಆದರೆ ಚುನಾವಣೆ ಸಮಯದಲ್ಲಿ ಈ ಕೆಲವು ಅಧಿಕಾರಿಗಳು ಕೆಲವು ಅಭ್ಯರ್ಥಿಗಳಿಗೆ ವಿರುದ್ಧವಾಗಿ ಕೆಲಸ ಮಾಡಿದ ಉದಾಹರಣೆಗಳಿವೆ. ಹಣ ಸಂಗ್ರಹ ಮಾಡಿದ ಉದಾಹರಣೆಗಳಿವೆ. ಇಂತಹ ಅಧಿಕಾರಿಗಳು ತಮ್ಮ ಕ್ಷೇತ್ರದಲ್ಲಿರುವುದು ಬೇಡ. ಉತ್ತಮರಾದಂಥ ಅಧಿಕಾರಿ ಬೇಕೆಂದು ಒಂದು ಕ್ಷೇತ್ರದ ಶಾಸಕರು ಬಂದು ಕೇಳಿದಾಗ ನಾವು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇಂತಹ ಕೆಲಸ ಮಾಡುವವರು ಯಾರು ಎಂಬುದು ಬೇರೆ ಪ್ರಶ್ನೆ. ಕರಪ್ಷನ್ ಬಗ್ಗೆ ನಾವು ಮಾತನಾಡುವಾಗ ಅಧಿಕಾರಿಗಳ ಮೇಲೆ ದೋಷ ಹೊರಿಸುವುದಕ್ಕೆ ಬದಲು ನಮ್ಮನ್ನು ನಾವು ತಿದ್ದಿಕೊಳ್ಳುವುದು ಒಳ್ಳೆಯದು. ಒಂದು ಕಾಲದಲ್ಲಿ ಒಬ್ಬರು ಚೀಫ್ ಇಂಜಿನಿಯರ್‌ಗೆ ಒಂದು. ಎರಡು ಇಲ್ಲವೇ ೩ ತಿಂಗಳ ಎಕ್ಸ್‌ಟೇನ್‌ಷನ್ ಕೊಡಲು ೩ ರಿಂದ ೪ ಲಕ್ಷದವರೆಗೆ ಕಲೆಕ್ಷನ್ ಮಾಡಿರುವುದು ಉಂಟು. ಒಂದು ಪ್ರಮೋಷನ್ ಕೊಡಬೇಕಾದರೂ ಸಹ ಹಣ ಕಲೆಕ್ಷನ್ ಮಾಡುವಂತಹ ಕಾಲ ಇತ್ತು. ೧೯೬೭ ರಿಂದ ಇಲ್ಲಿಯವರೆಗೆ ಈ ಬಗ್ಗೆ ನಾನು ಯಾವ ಒಬ್ಬ ವ್ಯಕ್ತಿಯನ್ನು ಕುರಿತು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದನ್ನೆಲ್ಲಾ ನೋಡಿದಾಗ ನಮ್ಮ ಅಧಿಕಾರಿಗಳ ಬಾಳು ಯಾವ ರೀತಿ ಆಗಿದೆ ಎಂದರೆ. ನಾನು ಅವರ ಬಗ್ಗೆ ಸಿಂಪಥಿ ತೋರಿಸುತ್ತೇನೆ. ಒಂದು ಕಾಲದಲ್ಲಿ ಈ ಅಧಿಕಾರಿಗಳು ರಾಜಕಾರಣಿಗಳಾದವರಿಗೆ ಎಲ್ಲ ವ್ಯವಸ್ಥೆಯನ್ನೂ ಮಾಡಬೇಕಾಗಿತ್ತು.

ಶ್ರೀ ಪಿ. ರಾಮದೇವ್,—ಈ ಗಂಟುಕಳ್ಳರ ಬಗ್ಗೆ ತನಿಖೆ ಮಾಡಬೇಕಾಗಿದೆ,

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಚೆನ್ನಬಸಪ್ಪನವರನ್ನು ನಾವು ಅನೇಕ ಸಲ ನೆನೆಸಿಕೊಳ್ಳುತ್ತೇವೆ. ಇದೇ ಮಾನ್ಯ ಚೆನ್ನಬಸಪ್ಪನವರು ಈ ಒಂದು ಇಲಾಖೆಯ ಮೇಲೆ ಮಾತನಾಡಿದಂಥ ಭಾಷಣ ರೆಕಾರ್ಡಿನಲ್ಲಿದೆ. ತಾವುಗಳು ಬೇಕಾದರೆ ತೆಗೆದು ನೋಡಬಹುದು. ಕೆಲವು ರಾಜಕಾರಣಿಗಳಿಗೆ ಅಧಿಕಾರಿಗಳು ವಿದೇಶಿ ಮದ್ಯ. ಹಾಗೂ ಪರಸತಿಯನ್ನು ಒದಗಿಸಬೇಕಾಗಿದೆ ಎಂದು ಇವರು ಉಲ್ಲೇಖ ಮಾಡಿರುವುದು ಕಡತದಲ್ಲಿದೆ. ಇದು ನಮ್ಮ ಅಧಿಕಾರಿಗಳ ಪಾಡು. ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಅಕ್ಕಪಕ್ಕದ ಮನೆಗಳಲ್ಲಿದ್ದೇವೆ. ಆದ್ದರಿಂದ ನಾನು ಅವರಲ್ಲಿ ಹೇಳುವುದಿಷ್ಟೆ. ನಾನು ಅಧಿಕಾರ ತೆಗೆದುಕೊಂಡ ದಿವಸದಿಂದ ಹಿಡಿದು ಅಧಿಕಾರ ಬಿಟ್ಟು ಹೋಗುವವರೆಗೆ ಯಾವುದೇ ಒಂದು ಸಂದರ್ಭದಲ್ಲಿ ಅಧಿಕಾರ ದುರುಪಯೋಗ ಮಾಡಿ ಕೊಂಡಂತಹ ಒಂದೇ ಒಂದು ಆಪಾದನೆಯನ್ನು ಮಾಡಿದಾಗ ನಾನು ಈ ಸ್ಥಾನದಲ್ಲಿ ಒಂದು ನಿಮಿಷ ಕೂಡ ಇರುವುದಿಲ್ಲ. ಬೇಕಾದರೆ ಮುಂದೆ ಕಾದು ನೋಡಲಿ, ಕಾದು ನೋಡಲು ಕಳೆದ ೬ ತಿಂಗಳುಗಳಿಂದ ಸಾಕಷ್ಟು ಸಮಯ ಇಲ್ಲದಿರಬಹುದು ಆದರೆ ನಾನು ಎಷ್ಟು ದಿವಸ ಅಧಿಕಾರದಲ್ಲಿರುತ್ತೇನೆಂಬುದು ಮುಖ್ಯವಲ್ಲ. ಆದರೆ ನಾನು ಅಧಿಕಾರದಲ್ಲಿರುವವರೆಗೆ ಪ್ರತಿ ಹಂತದಲ್ಲಿಯೂ ಕಾದು ನೋಡಲಿ. ನಾನು ಅಧಿಕಾರವನ್ನು ದುರುಪಯೋಗಪಡಿಸಿ ಕೊಂಡ ಒಂದೇ ಒಂದು ಘಟನೆ ಈ ಸಭೆಯ ಮುಂದೆ ಬಂದಾಗ ನಾನು ಈ ಸ್ಥಾನ ತೆರವು ಮಾಡುವುದಕ್ಕೆ ಸಿದ್ಧನಿದ್ದೇನೆ. ನಾವೆಲ್ಲರೂ ಜವಾಬ್ದಾರಿ ಸ್ಥಾನಗಳಲ್ಲಿರತಕ್ಕಂಥ ಚುನಾಯಿತ ಪ್ರತಿನಿಧಿಗಳಾಗಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲ ರಾಜಕಾರಣಿಗಳನ್ನು ತಾವು ಒಂದೇ ರೀತಿ ನೋಡುವುದು ಸರಿಯಲ್ಲ. ಏಕೆಂದರೆ, ೧೯೬೨ ರಿಂದ ೧೯೭೮ ರ ವರೆಗೆ ನಾವು ಕೆಲವರು ಇಲ್ಲಿ ಸದಸ್ಯರಾಗಿದ್ದಾಗ ಯಾರಿಂದಲೂ ಸಹ ನಾವು ಒಂದು ಪೈಸೆ ಕೂಡ ತೆಗೆದುಕೊಂಡಿಲ್ಲ. ಇದಕ್ಕೆ ನಾವು ಪರಮ ವಿರೋಧಿಗಳು.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅಧಿಕಾರದಲ್ಲಿದ್ದವರಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಎಲ್ಲ ಪಕ್ಷಗಳಲ್ಲಿಯೂ ಸಹ ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ.

ಒಬ್ಬರು ಸದಸ್ಯರು.—ಭ್ರಷ್ಟಾಚಾರ ಯಾರೂ ಮಾಡಿದರೂ ಸಹ ತಪ್ಪಾಗುತ್ತದೆ.

ಶ್ರೀ ದೊಡ್ಡ ಬೋರೇಗೌಡ.—ಕುಂಬಳಕಾಯಿ ಕಳ್ಳ ಎಂದರೆ ಇಲ್ಲಿ ಕೆಲವರು ಏತಕ್ಕೆ ತಮ್ಮ ತಮ್ಮ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಹೀಗೇಲ್ಲ ಮಾತನಾಡಿದರೆ ಹೇಗೆ ? ಏಕೆಂದರೆ. ಆ ಕಡೆ ಇದ್ದಂಥ ಕೆಲವರು ಈಗ ಈ ಕಡೆ ಇದ್ದಾರೆ ಮತ್ತು ಈ ಕಡೆ ಇದ್ದಂಥ ಕೆಲವರು ಆ ಕಡೆ ಇದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದರ ಬಗ್ಗೆ ಹೆಚ್ಚಿನ ಚರ್ಚೆಗೆ ಹೋಗುವುದಿಲ್ಲ ನಾವು ತೆಗೆದುಕೊಂಡ ಕೆಲವು ನಿರ್ಣಯಗಳ ಬಗ್ಗೆ ಈ ಸದನದಲ್ಲಿ ಆದಂಥ ಟೀಕೆಗಳಿಗೆ ನಾನು ಗತ್ಯಂತರವಿಲ್ಲದೆ ಉತ್ತರ ಕೊಡಬೇಕಾಯಿತು, ಮತ್ತು ಕೆಲವೊಂದು ವಿವರಣೆಗಳನ್ನು ಕೊಡಬೇಕಾಗಿ ಬಂತು.

ಇನ್ನು ದಿನಗೂಲಿ ಕೆಲಸಗಾರರ ಬಗ್ಗೆ ಹೇಳಬೇಕೆಂದರೆ, ಇವರ ಕೆಲಸದ ಬಗ್ಗೆ ಮೊನ್ನೆ ಕೆಲವರು ಇಲ್ಲಿ ಮಾತನಾಡುವಾಗ ಸಂಶಯ ವ್ಯಕ್ತಪಡಿಸಿದ್ದಾರೆ. ಆದರೆ ಇವರ ಕೆಲಸದ ಬಗ್ಗೆ ಸಂಶಯ ವ್ಯಕ್ತಪಡಿಸಬೇಕಾದ ಅಗತ್ಯವಿಲ್ಲ. ಇವರ ಬಗ್ಗೆ ಸರ್ಕಾರ ಏನು ಒಂದು ನಿರ್ಣಯ ತೆಗೆದುಕೊಳ್ಳುತ್ತ ದೆಂದು ಹೇಳಿತ್ತೋ, ಅದನ್ನು ಪ್ರಾಮಾಣಿಕವಾಗಿ ಕಾರ್ಯರೂಪದಲ್ಲಿ ತರುತ್ತೇವೆ. ಇದರಿಂದ ಸುಮಾರು ೨೦-೨೨ ಸಾವಿರ ಜನರಿಗೆ ಪರಿಹಾರ ಸಿಗುತ್ತದೆ. ಇನ್ನುಳಿದ ಹತ್ತು ಸಾವಿರ ಜನರು ಏನಿದ್ದಾರೆ, ಇವರಲ್ಲಿ ಯಾರು ೨೪೦ ದಿವಸಗಳ ಕಾಲ ಕೆಲಸ ಮಾಡಿದ್ದಾರೆ, ಅಂತಹವರನ್ನು ನಾವು ಕೆಲಸದಿಂದ ತೆಗೆಯುವುದಿಲ್ಲ, ರೆಗ್ಯುಲರ್ ಪೋಸ್ಟ್‌ಗಳಲ್ಲಿ ಇವರನ್ನು ನೇಮಕ ಮಾಡುವವರೆಗೂ ಕೆಲಸದಲ್ಲಿ ಮುಂದುವರೆಸುತ್ತೇವೆ, ಆದ್ದರಿಂದ ಇವರ ಬಗ್ಗೆ ತಮಗೆ ಯಾವುದೇ ಸಂಶಯವಾಗಲೀ, ಕಾಳಜಿ ಆಗಲೀ ಬೇಡ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇವರನ್ನು ಕೆಲಸದಲ್ಲಿ ಖಾಯಂ ಮಾಡಬೇಕಾದರೆ ಸರ್ಕಾರದ ಆಜ್ಞೆ ಆಗಬೇಕು. ಇದಕ್ಕೆ ಎಷ್ಟು ದಿವಸ ಬೇಕು ?

ಶ್ರೀ ಎಚ್. ಡಿ ದೇವೇಗೌಡ.—ಇದಕ್ಕೆ ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕಾಗಿದೆ. ಗ್ಯಾಂಗ್ ಕೂಲಿಗಳ ಬಗ್ಗೆ ಅತಿ ಜಾಗ್ರತೆ ಇಷ್ಟೂ ಮಾಡುತ್ತೇವೆ. ಅದೇ ರೀತಿ ಸೌಡಿಗಳ ಬಗ್ಗ......

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ತಾವು ತೆಗೆದುಕೊಂಡಿರುವ ನಿರ್ಣಯದಿಂದ ಗ್ಯಾಂಗ್ ಕೂಲಿಯವರಿಗೆ ಅನುಕೂಲವಾಗಿದೆ. ಆದರೆ ಇವರಿಗೆ ಇಷ್ಟೇ ಕೂಲಿ ಕೊಡಬೇಕೆಂದು ಕೋರ್ಟಿನ ತೀರ್ಮಾನವಾಗಿದ್ದರೂ ಸಹ ಅದನ್ನು ಸರ್ಕಾರ ಜಾರಿಗೆ ತರದಿದ್ದರೆ ಏನು ಮಾಡುವುದು ? ಇದೇ ನಮಗೆ ಬಂದಿರುವ ವ್ಯಥೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವರಿಗೆ ೨೫ ಸಾವಿರ ೧ ಸಾವಿರ ಈ ರೀತಿ ಹಣ ಬಾಕಿ ಬರಬೇಕಾಗಿದೆ ಸರ್ಕಾರ ತೀರ್ಮಾನ ಮಾಡಿರುವುದು, ಅದನ್ನು ತಮ್ಮ ಕಡೆಗೆ ಕಳುಹಿಸಿ ಕೊಡುತ್ತೇನೆ. ಅದರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ. —ಕೋರ್ಟ್ ನಿರ್ಣಯವನ್ನು ಮಾನ್ಯತೆ ಮಾಡುವುದಕ್ಕೆ ಹೋದರೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ವ್ಯಾಪ್ತಿಯಲ್ಲಿ ನಿರ್ಣಯ ಮಾಡಿಕೊಂಡು ಬಂದಿದ್ದಾರೆ ಆ ಒಂದು ಜಡ್ಜ್‌ಮೆಂಟ್ ನನ್ನ ಕಡೆ ಇದೆ. ಅದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಕಷ್ಟವಿದೆ ಎರಡು ಮೂರು ಜಡ್ಜ್‌ಮೆಂಟ್‌ಗಳನ್ನು ತಂದು ನನ್ನಲ್ಲಿ ಚರ್ಚೆ ಮಾಡಿದ್ದಾರೆ. ಸೂರ್ಯನಾರಾಯಣರಾವ್‌ರವರು ಕೂಡ ಬಂದಿದ್ದಾರೆ, ಬೇರೆ ಬೇರೆಯವರು ಕೂಡ ಬಂದು ಚರ್ಚೆಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರ ಈಗಾಗಲೇ ಏನು ನಿರ್ಣಯ ತೆಗೆದುಕೊಂಡಿದೆ ಎನ್ನುವುದನ್ನು ಹೇಳಿದ್ದೇನೆ ತಮ್ಮ ನಿರ್ಣಯ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿ ಮಾಡಿದರೆ ಪರಮ ಅನ್ಯಾಯವಾಗುವುದಿಲ್ಲವೆ ?

ಶ್ರೀ ಎಚ್. ಡಿ. ದೇವೇಗೌಡ.—ಒಂದೊಂದು ಭಾಗದಲ್ಲಿ ಒಂದೊಂದು ವ್ಯವಸ್ಥೆ ಇದೆ. ಒಂದೊಂದೆ ನಿರ್ಣಯವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸಾಮೂಹಿಕವಾದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಸರ್ಕಾರಿ ನೌಕರರಿಗೆ ಏನೇನು ಅನುಕೂಲತೆಗಳು ಇವೆಯೋ ಆ ಎಲ್ಲಾ ಅನುಕೂಲತೆಗಳನ್ನು ಅಳವಡಿಸಿ ಸರ್ಕಾರಿ ಆದೇಶ ಬರುತ್ತದೆ. ಆ ಆದೇಶ ಬಂದಮೇಲೆ ತಮಗೆ ಗೊತ್ತಾಗುತ್ತದೆ. ಸೌಡಿಗಳು ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೂ ಕೂಡ ವ್ಯಾಪಕವಾದ ಬದಲಾವಣೆ

ಮಾಡಲಾಗುತ್ತದೆ. ಅವರು ಎಷ್ಟು ಎಕರೆ ನೀರಾವರಿ ಪ್ರದೇಶ ನೋಡಿಕೊಳ್ಳಬೇಕು ಎನ್ನುವುದರ ಬಗ್ಗೆ ಒಂದು ಸಮಿತಿ ನೇಮಕ ಮಾಡಿದ್ದೇವೆ. ಆ ಸಮಿತಿ ವರದಿ ಕೊಟ್ಟ ತಕ್ಷಣ ಗ್ಯಾಂಗ್ ಕೂಲಿಗಳಿಗೆ ಏನೇನು ಅನುಕೂಲಗಳನ್ನು ಒದಗಿಸಿ ಕೊಟ್ಟಿದ್ದೇವೆಯೋ ಅದೇರೀತಿ ಇವರಿಗೂ ಕೂಡ ಮಾಡಲಾಗುತ್ತದೆ. ತಾತ್ಕಾಲಿಕವಾಗಿ ಕೆಲಸ ಮಾಡತಕ್ಕವರು ಇನ್‌ಕ್ರೀಮೆಂಟ್ ತೆಗೆದುಕೊಂಡಿಲ್ಲ ಅವರಿಗೂ ಎಲ್ಲಾ ವ್ಯವಸ್ಥೆಯನ್ನು ಮಾಡಿ ಅವರನ್ನು ಖಾಯಂ ಮಾಡುವುದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿ ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಒಳ್ಳೊಳ್ಳೆಯ ವಿಷಯಗಳನ್ನು ಹೇಳಿದ್ದಾರೆ ಅದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ಕೋರ್ಟ್‌ನಲ್ಲಿ ಒಂದು ತೀರ್ಮಾನವಾಗಿದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಅನ್ವಯವಾಗುವುದಿಲ್ಲ ಅಂದರೆ ಕಾರ್ಮಿಕರಿಗೆಲ್ಲಾ ಅನ್ಯಾಯವಾಗುತ್ತದೆ. ತೀರ್ಮಾನವಾದಂತಹ ವಿಷಯದ ಬಗ್ಗೆ ಬೇರೊಂದು ರೀತಿಯ ತೀರ್ಮಾನ ಮಾಡಿದರೆ, ಕೋರ್ಟಿನ ತೀರ್ಮಾನಕ್ಕಿಂತ ಕಡಿಮೆಯಾದರೆ ಏನು ಮಾಡುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಈಗಾಗಲೇ ಮೇಲಿನ ಕೋರ್ಟ್‌ಗೆ ಅಪೀಲ್ ಹಾಕಿದ್ದೇವೆ. ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ

ಶ್ರೀ ಎಂ. ಎಸ್. ಕೃಷ್ಣನ್.—ಬರಬೇಕಾದ ಬಾಕಿಯನ್ನು ಕೇಳುತ್ತಿದ್ದಾರೆ ಅದರ ಪಟ್ಟಿಯನ್ನು ತಮಗೆ ಕೊಟ್ಟಿದ್ದೇನೆ. ಹಳೆಯ ಬಾಕಿಯನ್ನು ಕೊಡಿಸಿಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ —ಅದನ್ನು ಪರಿಶೀಲನೆ ಮಾಡುತ್ತೇನೆ. ೨೦ ವರ್ಷಗಳಿಂದ ಇದ್ದಂತಹ ಸಮಸ್ಯೆಯನ್ನು ಬಗೆಹರಿಸಲು ಈಗ ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ನೀವು ಮೆಚ್ಚುಗೆ ವ್ಯಕ್ತಪಡಿಸಬೇಕಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಮೆಚ್ಚುಗೆ ವ್ಯಕ್ತಪಡಿಸಿದ್ದೇನೆ. ಮಾನ್ಯ ದೇವೇಗೌಡರು ತಪ್ಪು ತಿಳಿದುಕೊಳ್ಳಬಾರದು ಮುಂದೆ ಹೋಗಿದ್ದೀರಿ, ಇನ್ನೂ ಮುಂದೆ ಹೋಗಿ.

ಶ್ರೀ ಎಚ್. ಡಿ. ದೇವೇಗೌಡ.—ಆಯಿತು, ನೋಡೋಣ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಬರಿ ಕೈಗಿಂತ ಹಿತ್ತಾಳೆ ಕಡಗ ಮೇಲು.

ಶ್ರೀ ಮದನಗೋಪಾಲ ನಾಯಕ್.—೬೯ರಿಂದ ಎನ್.ಎಂ.ಆರ್.ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇಪತ್ತಿನವರೆಗೂ ಅವರಿಗೆ ಖಾಯಂ ಆಗಿಲ್ಲ. ೨೦ ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ಇವತ್ತು ತೆಗೆಯುತ್ತಿದ್ದಾರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—೧-೪-೧೯೮೭ರವರೆಗೆ ಯಾರು ೨೪೦ ದಿವಸಗಳು ಕೆಲಸ ಮಾಡಿದ್ದಾರೆ ಅಂತಹವರನ್ನು ತೆಗೆಯುವುದಿಲ್ಲವೆಂದು ಸ್ಪಷ್ಟೀಕರಣ ಮಾಡಿದ್ದೇನೆ. ಅವರನ್ನು ತೆಗೆಯುವ ಪ್ರಶ್ನೆ ಬರುವುದಿಲ್ಲ. ಅಂತಹವರನ್ನು ಏನಾದರೂ ತೆಗೆದಿದ್ದರೆ ರಿ ಇನ್‌ಸ್ಟೇಟ್ ಮಾಡಿಕೊಳ್ಳುವುದಕ್ಕೆ ಆದೇಶ ಕೊಡುತ್ತೇನೆ. ಇದರ ಬಗ್ಗೆ ಯಾವುದೇ ರೀತಿಯ ಸಂಶಯ ಇಟ್ಟುಕೊಳ್ಳುವುದು ಬೇಡವೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಕೊನೆಯದಾಗಿ ಒಂದು ವಿನಂತಿಮಾಡಿಕೊಳ್ಳುತ್ತೇನೆ. ಆ ರೀತಿ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಇಲಾಖೆಯ ಆಡಳಿತ ಸುಧಾರಣೆಯಾಗಬೇಕು, ಅದಕ್ಕೆ ಎಲ್ಲರ ಸಹಕಾರ ಬೇಕು. ಚುನಾಯಿತ ಪ್ರತಿನಿಧಿಗಳ ಸಹಕಾರ ಬೇಕು ಸಾರ್ವಜನಿಕರ ಸಹಕಾರ ಬೇಕು. ಯಾವುದೇ ಕೆಲಸ ನಡೆಯುವಾಗ ಮಾಡತಕ್ಕಂತಹ ಕೆಲಸದಲ್ಲಿ ಅಕ್ರಮ ನಡೆಯುತ್ತಿದೆ ಎನ್ನುವುದು ನನಗೆ ನೇರವಾಗಿ ಸುದ್ದಿ ಮುಟ್ಟಲಿಕ್ಕೆ ಸಾಧ್ಯವಿಲ್ಲ. ನಮ್ಮ ಅಧಿಕಾರಿಗಳು ತಪ್ಪು ಮಾಡುತ್ತಾರೆ ಅದನ್ನು ನೋಡಲಿಕ್ಕೆ ತಮ್ಮ ಸಹಕಾರ ಕೇಳುತ್ತೇನೆ, ಸಾರ್ವಜನಿಕರ ಸಹಕಾರ ಕೇಳುತ್ತೇನೆ ತಮ್ಮ ಸಹಕಾರದಿಂದ ಸುಧಾರಣೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಇಲಾಖೆ ಪಾಪಾಪಾ ಕೆಟ್ಟಿದೆ ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಲಾಖೆಯಲ್ಲಿ ತುಂಬಾ ಯೋಗ್ಯರು ಪ್ರಾಮಾಣಿಕರು ಇದ್ದಾರೆ ಅವರನ್ನು ಗುರುತಿಸಿ ಅಂತಹವರನ್ನು ಯೋಗ್ಯ ಕೆಲಸ ಮಾಡಲಿಕ್ಕೆ ಹಚ್ಚಬೇಕು. ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ರಾಜಕೀಯ ಬೆರೆಸುವುದು ಬೇಡ. ಯಾವುದೇ ರಾಜಕೀಯ ಮಾಡುವುದಕ್ಕೆ

ನಾನು ತಯಾರಾಗಿಲ್ಲ. ಯಾವ್ಯಾವ ಕ್ಷೇತ್ರಗಳಲ್ಲಿ ಏನೇನು ಕೆಲಸವಾಗಿದೆ ಎನ್ನುವ ಪಟ್ಟಿ ನನ್ನಲ್ಲಿದೆ ಕೆಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವಾಗ ಕೆಲಸ ಅರೆಬರೆ ಇದ್ದರೂ ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಾನು ಮೊದಲೇ ವಿನಂತಿಸಿಕೊಂಡಿದ್ದೇನೆ, ಇದು ಬಹಳ ಬೃಹದಾಕಾರ ಸಮಸ್ಯೆ. ರಾಜ್ಯದ ರೈತಾಪಿ ಜನಗಳಿಗೆ ಇರತಕ್ಕ ಜಲಸಂಪತ್ತನ್ನು ಒದಗಿಸಿಕೊಡತಕ್ಕ ಕಾರ್ಯಕ್ರಮ ಮಾಡಬೇಕಾದರೆ ಈ ಸದನದ ಎಲ್ಲಾ ಪಕ್ಷಗಳ ಸದಸ್ಯರುಗಳ ಸಹಕಾರ ಮುಖ್ಯವೆಂದು ಹೇಳಿ ಲೋಕೋಪಯೋಗಿ ಇಲಾಖೆಯ ಮೇಲಿನ ಬೇಡಿಕೆಗಳಿಗೆ ಈ ಸಭೆಯ ಮಂಜೂರಾತಿ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯ್ಲಿ — ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಚಿವರು ತಮ್ಮ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಕೆಲವು ಪ್ರಮುಖ ವಿಚಾರಗಳನ್ನು ಹೇಳಿದ್ದಾರೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ ಬಗ್ಗೆ ಹೇಳಿ ವಿಶ್ಲೇಷಣೆ ಕೂಡ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಅನೇಕ ಸಭೆಗಳನ್ನು ಕೂಡ ಮಾಡಿದ್ದಾರೆ. ಮಾರ್ಚಿ ಮತ್ತು ಏಪ್ರಿಲ್ ತಿಂಗಳಲ್ಲಿ ಮೂರ್‍ನಾಲ್ಕು ಮೀಟಿಂಗ್‌ಗಳನ್ನು ಮಾಡಿದ್ದೀರಿ. ಕಂಟ್ರಾಕ್ಟರು, ಅಧಿಕಾರಿಗಳು ಮತ್ತು ಶಾಸಕರು ಕೂಡ ಸೇರಿ ಸಭೆ ನಡೆಸಿದ್ದಾರೆ. ಕಂಟ್ರಾಕ್ಟರ್ ಮತ್ತು ಅಧಿಕಾರಿಗಳು ಒಂದು ಒಮ್ಮತಕ್ಕೆ ಬರುವ ದೃಷ್ಟಿಯಿಂದ ಸಭೆ ನಡೆಸಿದ್ದಾರೆ. ಚರ್ಚೆಯಲ್ಲಿ ಒಮ್ಮತಕ್ಕೆ ಬಂದು, ಇಲ್ಲಿ ಸಚಿವಾಲಯ ಮಟ್ಟಕ್ಕೆ ಬಂದಾಗ ಅದು ಬದಲಾವಣೆ ಆಯಿತು. ಅಧಿಕಾರಿಗಳು ಮತ್ತು ಕಂಟ್ರಾಕ್ಟರ್‌ಗಳಿಗೆ ಘರ್ಷಣೆಯಾಗಿದೆ, ಸಂಘರ್ಷಣೆಗೆ ಕರೆ ಕೊಟ್ಟಿದ್ದಾರೆ ಕಂಟ್ರಾಕ್ಟರ್‌ಗೆ ಮತ್ತು ಅಧಿಕಾರಿಗಳಿಗೆ ಇರತಕ್ಕ ಸಮಸ್ಯೆಯನ್ನು ಬಿಡಿಸತಕ್ಕ ವಿಷಯದಲ್ಲಿ ಏನೋ ಒಂದು ಆಸೆಯಿತ್ತು, ಅದು ಈಗ ಇಲ್ಲ. ಇನ್ನು ಮುಂದೆ ತಾವು ಅನುಷ್ಠಾನ ಮಾಡುತ್ತೀರಿ ಎನ್ನುವ ವಿಶ್ವಾಸವನ್ನು ತಾವು ಹುಟ್ಟಿಸಬೇಕು. ತಾವು ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದೀರಿ. ಮಾಡುವ ಅಭಿವೃದ್ಧಿ ಕಾರ್ಯಕ್ರಮದಲ್ಲಿ ರಾಜಕೀಯ ಬರಬಾರದು ಎಂದು, ನಾವು ಕೂಡ ಸಂಪೂರ್ಣವಾಗಿ ಒಪ್ಪುತ್ತೇವೆ. ತಮಗೆ ಏನು ಸಹಕಾರ ಬೇಕೋ ಅದನ್ನು ಕೊಡುತ್ತೇವೆ. ವರ್ಗಾವಣೆ ಮಾಡುವ ವಿಷಯದಲ್ಲಿ ಶಾಸಕರು ಹಣ ತೆಗೆದುಕೊಂಡು ಮಾಡುತ್ತಾರೆ ಎನ್ನುವುದು ಸರಿಯಲ್ಲ. ಎಲ್ಲಾ ಶಾಸಕರು ಕೂಡ ಅವರವರ ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸಗಳು ಆಗಬೇಕು ಎನ್ನುವ ದೃಷ್ಟಿಯಿಂದ ಚೆನ್ನಾಗಿ ಕೆಲಸಮಾಡುವ ಅಸಿಸ್ಟೆಂಟ್ ಇಂಜಿನಿಯರ್ ಬೇಕು ಎಂದು ಕೇಳಿ ಹಾಕಿಸಿಕೊಳ್ಳಬಹುದು. ಶಾಸಕರು ಪ್ರಜಾಪ್ರಭುತ್ವದಲ್ಲಿ ಅವರವರ ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸಗಳನ್ನು ಮಾಡತಕ್ಕಂತಹದ್ದು ಇದೆ. ಅದು ನಡೆದಿದೆ.

೨-೩೦ ಪಿ. ಎಮ್.

ಸ್ವಾಮಿ ತಾವು ಯಾವ ಧಾಟಿಯಲ್ಲಿ ಉತ್ತರ ಕೊಟ್ಟಿದ್ದೀರೋ ನನಗೇನೂ ಅರ್ಥವಾಗುವುದಿಲ್ಲ. ಕೆಲವರು ಇದರಲ್ಲಿ ರಾಜಕೀಯವನ್ನು ಬೆರೆಸಿ ಮಾತನಾಡಿದ್ದಾರೆಂದು ಕೂಡ ಹೇಳಿದ್ದೀರಿ ಆದರೆ ಅದೇ ಸಂದರ್ಭದಲ್ಲಿ ತಾವು ಹಣ ಸಂಗ್ರಹಣೆ ಮಾಡಿದ್ದಾರೆಂದು ಕೂಡ ಹೇಳಿದ್ದೀರಿ. ಆದರೆ ಆ ರೀತಿಯಾಗಿ ಯಾರು ಹಣ ಸಂಗ್ರಹಣೆ ಮಾಡಿದ್ದಾರೆ ? ಎಂಬುದನ್ನು ಪತ್ತೆ ಹಚ್ಚಬೇಕಾಗಿದೆ. ಒಂದು ವೇಳೆ ಯಾವ ಶಾಸಕರು ಹಣವನ್ನು ಸಂಗ್ರಹಣೆ ಮಾಡಿದ್ದಾರೆ ಅಥವಾ ಅಧಿಕಾರಿಗಳು ಹಣ ಸಂಗ್ರಹಣೆ, ಮಾಡಿದ್ದಾರು ಎಂಬುದು ಗೊತ್ತಾಗಬೇಕು. ತಾವು ಈ ರೀತಿ ಆಪಾದನೆ ಮಾಡಿದರೆ ಇದರಿಂದ ನಾಳೆ ನಿಮಗೂ ಕೂಡ ತೊಂದರೆಯಾಗುತ್ತದೆ. ಭ್ರಷ್ಟಾಚಾರ ನಡೆದಿದೆ ಎನ್ನುವ ಮಾತನ್ನು ಮಾನ್ಯ ದೇವೇಗೌಡರು ಮಾತನಾಡುವಾಗ ಹೇಳಿದರು. ಆದರೆ ತಾವು ಉತ್ತರ ಕೊಡುವಾಗ ಈ ರೀತಿಯ ತಿರವು ಮುರುವು ಉತ್ತರ ಕೊಡುವುದು ಸರಿಯಲ್ಲ. ಆದರೆ ತಾವು ರಾಜಕಾರಣಿಗಳನ್ನು ಬಿಟ್ಟು ಅಧಿಕಾರಿಗಳನ್ನು ಹಿಡಿದುಕೊಂಡಿದ್ದೀರಿ. ಅಧಿಕಾರಿಗಳ ಮೇಲೆ ಬಲಪ್ರಯೋಗ ಮಾಡುವುದಕ್ಕೆ ಹೊರಟಿದ್ದೀರಿ. ಇದರಿಂದ ಅಲ್ಲಿ ಪ್ರಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಭಯವಾಗುತ್ತದೆ. ಅಧಿಕಾರಿಗಳು ಹಣ ಸಂಗ್ರಹಣೆ ಮಾಡಿ ಕೊಡುತ್ತಾರೆಂದು ತಾವು ಹೇಳಿದ್ದೀರಿ. ಇದು ಸರಿಯಾದ ಮಾತಲ್ಲ. ಒಂದು ವೇಳೆ ತಾವು ವಿರೋಧಪಕ್ಷದ ಸದಸ್ಯರಿಗೆ ಹೇಳಿದರೂ ಪರವಾಗಿಲ್ಲ. ಆದರೆ ಅಧಿಕಾರಿಗಳನ್ನು ಏತಕ್ಕೆ ಬಳಸಿಕೊಂಡು ತಾವು ಈ ಮಾತನ್ನು ಹೇಳಿದಿರಿ ? ತಾವು ಹೇಳಿದಂಥ ಮಾತು ತಮಗೆ ರಿಫ್ಲೆಕ್ಷನ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಗುತ್ತದೆ. ಹಣವನ್ನು ಸಂಗ್ರಹ ಮಾಡಿ ಚುನಾವಣೆಯ ಸಂದರ್ಭದಲ್ಲಿ ಕೊಡುತ್ತಾರೆ ಎನ್ನುವ ರೀತಿಯಲ್ಲಿ ತಾವು ಹೇಳಿದ್ದೀರಿ, ಇದರಿಂದ ನಮಗೆ ಸಾಕಷ್ಟು ಅನಾನುಕೂಲವಾಗುತ್ತದೆ. ಎರಡನೆಯದಾಗಿ ಜನತಾ ಪಕ್ಷದ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಇರುವಂಥ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕೆಂದು ಪತ್ರ ಬರೆದರೆ ಆಗ ತಾವು ಅವರನ್ನು ವರ್ಗಾವಣೆ ಮಾಡಿದರೆ ಆಗ ತಮ್ಮ ಪಕ್ಷದ ಸದಸ್ಯರು ಕೂಡ ಹಣ ಸಂಗ್ರಹಣೆ ಮಾಡಿದ್ದಾರೆಂದು ಅರ್ಥವಾಗುತ್ತದೆ. ಆದ್ದರಿಂದ ತಾವು ಈ ರೀತಿ ಮಾತನಾಡುವುದು ಸರಿಯಲ್ಲ. ಆದರೆ ತಾವು ಯಾರ ಒಂದು ಮರ್ಜಿಗೂ ಮಣಿದು ವರ್ಗಾವಣೆ ಮಾಡಬೇಕೆಂದು ಇಲ್ಲ. ಕಾನೂನು ಪ್ರಕಾರ ವರ್ಗಾವಣೆ ಮಾಡಬೇಕಾಗುತ್ತದೆ. ಆದರೆ ತಾವು ಕೆಲವೊಂದು ರೂಲ್ಸ್ ಪ್ರಕಾರ ವರ್ಗಾವಣೆ ಮಾಡಬೇಕಾಗುತ್ತದೆ. ಆ ರೂಲ್ಸ್‌ಗಳು ಈ ದಿನಾಂಕಗಳಲ್ಲಿ ಮಾಡಲಾಗಿದೆ. ಒಂದು ೨೭-೨-೮೭ರಂದು ಹೊರಡಿಸಿದಂಥ ಆಜ್ಞೆ. ಎರಡನೆಯದಾಗಿ ೧೬-೬-೮೨ ರಂದು ಹೊರಡಿಸಲಾದಂಥ ಆಜ್ಞೆ. ಪ್ರೀ ಮೆಚೂರ್ ಟ್ರಾನ್ಸ್‌ಫರ್ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವಶ್ಯಕವಿಲ್ಲ. ಆಯಾ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಮಾಡಬಹುದು, ಆ ಆಜ್ಞೆ ೧೧-೩-೮೩ ರಂದು ಹೊರಡಿಸಲಾಗಿದೆ. ಇಂಥ ಸಂದರ್ಭದಲ್ಲಿ ಮಂತ್ರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ಚುನಾವಣೆ ನಡೆದಂಥ ಸಂದರ್ಭದಲ್ಲಿ ಎಷ್ಟು ವರ್ಗಾವರ್ಗಿಗಳನ್ನು ಮಾಡಿದ್ದೀರಿ ಎನ್ನುವ ಬಗ್ಗೆ ತಾವು ಮಾಹಿತಿಯನ್ನು ಈ ಸಭೆಗೆ ಒದಗಿಸಿ ಕೊಡಬೇಕಾಗುತ್ತದೆ. ಮತ್ತೆ ಯಾವ ಕಾರಣಕ್ಕಾಗಿ ವರ್ಗಾವಣೆ ಮಾಡಲಾಗಿದೆ ಎನ್ನುವುದನ್ನು ಕೂಡ ರೆಕಾರ್ಡ್ ಮಾಡಬೇಕು. ಆ ಬಗ್ಗೆ ಹೇಳುವುದಾದರೆ ಹಣ ಸಂಗ್ರಹಣೆ ಮಾಡಿ ಯಾವ ಯಾವ ಶಾಸಕರು ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎನ್ನುವ ಬಗ್ಗೆ ಕೂಡ ತಾವು ರೆಕಾರ್ಡ್ ಮಾಡಿರಬೇಕಾಗುತ್ತದೆ. ಚುನಾವಣೆಯ ಸಂದರ್ಭದಲ್ಲಿ ಹಣ ಸಂಗ್ರಹಣೆ ಮಾಡಿ ಕೊಟ್ಟಿದ್ದಾರೆಂದು ಕೂಡ ತಾವು ಹೇಳಿದ್ದೀರಿ. ಆದರೆ ಹಣಸಂಗ್ರಹಣೆ ಮಾಡಿವರ್ಗಾವಣೆಮಾಡಿಸಿ ಕೊಂಡಿದ್ದಾರೆಂದು ತಾವು ಎಷ್ಟು ಜನ ಶಾಸಕರ ಬಗ್ಗೆ ರೆಕಾರ್ಡ್ ಮಾಡಿದ್ದೀರಿ ಎಷ್ಟು ಕೇಸಿನಲ್ಲಿ ರೆಕಾರ್ಡ್ ಮಾಡಿದ್ದೀರಿ ಎನ್ನುವುದು ತಿಳಿಸಬೇಕು. ಆ ವಿಷಯವನ್ನು ತಾವು ತಿಳಿಸದಿದ್ದರೆ ಇದು ಸಾರ್ವಜನಿಕರಲ್ಲಿ ಒಂದು ರೀತಿ ಕೆಟ್ಟ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ. ತಾವು ಹೇಳಿರತಕ್ಕಂಥ ವಿಚಾರ ಹಾಗೆ ಉಳಿದು ಬಿಡುತ್ತದೆ. ತಾವು ಎಲ್ಲಾ ಶಾಸಕರಿಗೂ ಕೂಡ ಒಂದು ದೊಡ್ಡ ಲೇಬಲ್ ಹಚ್ಚುವ ಕೆಲಸಕ್ಕೆ ಕೈ ಹಾಕಿದ್ದೀರಿ. ಆದರೆ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೆಲವು ಪ್ರಮಾಣಿಕವಾದ ವಿಷಯಗಳನ್ನು ಹೇಳಿದ್ದೀರಿ ಅದನ್ನು ನಾನು ಕೂಡ ಮೆಚ್ಚುತ್ತೇನೆ. ಆದರೆ ತಾವು ನಮ್ಮ ಮೇಲೆ ಅಥವಾ ಶಾಸಕರ ಮೇಲೆ ಆಗಲಿ ಅಥವಾ ಅಧಿಕಾರಿಗಳ ಮೇಲೆ ಆಗಲಿ ಯಾವ ದುರುದ್ದೇಶವಿಟ್ಟುಕೊಂಡು ಮಾತನಾಡಲಿಲ್ಲವೆಂದು ನನಗನಿಸುತ್ತದೆ. ತಾವು ಮಾತನಾಡುವ ಉದ್ವೇಗದಿಂದ ಆ ರೀತಿ ಮಾತನಾಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ ಆದರೆ ತಾವು ಪದೇ ಪದೇ ಆ ಮಾತನ್ನು ಹೇಳಿದ್ದೀರಿ. ಆದ್ದರಿಂದ ತಾವು ಅದರ ಬಗ್ಗೆ ನಮಗೆ ಉತ್ತರ ಕೂಡ ಬೇಕಾಗುತ್ತದೆ ತಾವುಜವಾಬ್ದಾರಿಯನ್ನು ನಿರ್ವಹಣೆ ಮಾಡುವಂಥವರು. ಆದೇ ರೀತಿಯಲ್ಲಿ ಸದಸ್ಯರು ಕೂಡ ತಮ್ಮ ಜವಾಬ್ದಾರಿಯನ್ನು ಅರಿತು ಮಾತನಾಡಬೇಕಾಗುತ್ತದೆ. ಆದ್ದರಿಂದ ತಾವು ಈಗ ಇಡೀ ತಮ್ಮ ಲೋಕೋಪಯೋಗಿ ಇಲಾಖೆಗೆ ಮಸಿ ಬಳಿಯುವಂಥ ಕೆಲಸಕ್ಕೆ ಕೈ ಹಾಕಿದ್ದೀರಿ ಇದರಿಂದ ಯಾರಿಗೂ ಅನುಕೂಲವಾಗುವುದಿಲ್ಲ. ಆದ್ದರಿಂದ ತಾವು ಈ ಬಗ್ಗೆ ನನಗೆ ಉತ್ತರ ಹೇಳಿದರೆ ಒಳ್ಳೆಯದು. ಕಾರಣವೇನೆಂದರೆ ಮಾನ್ಯ ಮಂತ್ರಿಗಳು ಮಾಡಿದಂಥ ಅಪಾದನೆ ರೆಕಾರ್ಡ್‌ನಲ್ಲಿ ಹೋಗಿದೆ. ಆದ್ದರಿಂದ ಇದರಲ್ಲಿ ಜನರಿಗೆ ಒಂದು ಕೆಟ್ಟ ಅಭಿಪ್ರಾಯ ಬರುತ್ತದೆ. ಆದರೆ ಯಾವುದೇ ಒಬ್ಬ ಜಾತಿಯ ಬಗ್ಗೆ ತೆಗೆದುಕೊಳ್ಳತಕ್ಕಂಥ ವಿಚಾರ ಕೂಡ ಅಲ್ಲ. ಅದು ಆ ರೀತಿ ತೆಗೆದುಕೊಳ್ಳುವುದು ಕೂಡ ಸರಿಯಾದುದ್ದಲ್ಲ. ಈಗ ಕೆಲವೊಂದು ನಿದರ್ಶನದಿಂದ ನಾನು ಹೇಳುವುದಾದರೆ ೮ದಿವಸಗಳಿಗೆ ಮತ್ತು ೧೦ ದಿವಸಗಳಿಗೆ ಒಂದು ಸಾರಿ ವರ್ಗಾವಣೆ ಮಾಡಿದ್ದೀರಿ. ಆ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೆಲವು ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ಕ್ಷೇತ್ರಕ್ಕೆ ಒಳ್ಳೆಯ ಅಧಿಕಾರಿಗಳುಬೇಕೆಂದು ಹೇಳಿ ವರ್ಗಾವಣೆ ಮಾಡಿಸಿಕೊಂಡಿರಬಹುದು. ಆದರೆ ಆ ಶಾಸಕರು ಹಣ ಸಂಗ್ರಹಣೆ ಮಾಡಿ ವರ್ಗಾವಣೆ ಮಾಡಿಸಿದ್ದಾರೆಂದು ಹೇಳುತ್ತೀರಾ ? ಆದ್ದರಿಂದ ತಾವು ಅಧಿಕಾರಿಗಳ ಮುಖಕ್ಕೆ ಒಂದು ಲೇಬಲ್ ಹಚ್ಚುವಂಥ ಕೆಲಸವನ್ನು ಮಾಡಿದ್ದೀರಿ. ಆದ್ದರಿಂದ ಮಾನ್ಯಮಂತ್ರಿಗಳು ಆ ಬಗ್ಗೆ ನನಗೆ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ ನನ್ನ ಇಲಾಖೆಯ ಅಧಿಕಾರಿಗಳ ರಕ್ಷಣೆಗೆ ಯಾರು ಬೇಕಾಗಿಲ್ಲ. ಎಲ್ಲಿಯವರೆಗೆ ನಾನು ಆ ಜಾಗದಲ್ಲಿ ಕುಳಿತುಕೊಂಡಿರುತ್ತೇನೆಯೋ ಅಲ್ಲಿಯವರೆಗೆ ಪ್ರಾಮಾಣಿಕ ಅಧಿಕಾರಿಗಳೂ ಯಾರು ಇದ್ದಾರೆ ಅವರಿಗೆ ಈ ದೇವೇಗೌಡರ ಸಹಕಾರ ಸದಾ ಇರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. The PWD is not far away from me. ಇದು ಒಬ್ಬ ಜೂನಿಯರ್ ಇಂಜನೀಯರ್ ಪ್ರಶ್ನೆಯಲ್ಲ. ಇದು ೧೯೭೧ರಿಂದ ನಡೆದುಕೊಂಡು ಬಂದಿರತಕ್ಕಂಥ ವಿಚಾರ. ಈ ವಿಚಾರ ಎಲ್ಲರಿಗೂ ಗೊತ್ತಿದೆ. ಆದರೆ ಅದನ್ನು ನಾನು ಈ ವೇದಿಕೆಯಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. The whole country knows as to how the Chief Engineer has been misused. All the members of the House know it. Why only P.W.D, ? Various departments have also done this ಪ್ರತಿಯೊಂದು ವಿಷಯಕ್ಕೂ ಸಾಕ್ಷಿ ಬೇಕಾಗಿಲ್ಲ. ನಾವು ಇವತ್ತು ಎಷ್ಟೋ ಜನ ನೌಕರರನ್ನು ನೇಮಕ ಮಾಡಿದ್ದೇವೆ. ಆದರೆ ನಾನು ಯಾವುದನ್ನು ಕೂಡ ಜಾತಿಯ ಆಧಾರದ ಮೇಲೆ ಮಾಡಿಲ್ಲ. ಆದರೆ ನಾನು ಹಣ ಸಂಗ್ರಹಣೆ ಮಾಡಿ ಕೊಡಿ ಎಂದು ಕೇಳಿದ್ದರೆ ನಾನು ಒಂದು ೫ ನಿಮಿಷ ಕೂಡ ಇಲ್ಲಿ ಕುಳಿತುಕೊಳ್ಳುವುದಕ್ಕೆ ಇಚ್ಛೆ ಪಡುವುದಿಲ್ಲ. ಸ್ವಾಮಿ ಇವತ್ತು ಕೆಲವಾರು ವಿಷಯಗಳನ್ನು ಅಂದರೆ ಮೈನರ್ ಇರಿಗೇಷನ್ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷರು ಪರಿಶೀಲನೆ ಮಾಡಿದ್ದಾರೆ. The Chief Minister used to preside over that high level committee. How can any cofficer get ourage to preside over the committee? The Major Irrigation Control Board is a weapon to settle claims of the contractor presided over by the Chief Ministers. ನಾನು ಯಾರೋ ಒಬ್ಬ ಜೂನಿಯರ್ ಇಂಜಿನೀಯರ್ ಬಗ್ಗೆ ಮಾತನಾಡುವುದಕ್ಕೆ ಹೋಗಲಿಲ್ಲ. ಹಣ ಸಂಗ್ರಹಣೆ ಮಾಡಿರುವುದು ೧೯೭೨ರಿಂದ ನಡೆದಿದೆ. ಆದರೆ ವಿರೋಧಪಕ್ಷದವರೇ ಮಾಡಿದರು ಅಥವಾ ಇಂಥ ಒಬ್ಬ ವ್ಯಕ್ತಿ ಹಣ ಸಂಗ್ರಹಣೆ ಮಾಡಿದ್ದಾರೆಂದು ನಾನು ಹೇಳಲಿಲ್ಲ. ಆದರೆ ನಾನು ಆ ಬಗ್ಗೆ ಒಂದು ವಿಚಾರವನ್ನು ತಮಗೆ ಹೇಳಬೇಕೆಂದರೆ I was an Opposition Leader. On that Particular day the offier came to my house actually shivering.

ಇಂತಹ ಅಧಿಕಾರಿಗಳಿಗೆ ರಕ್ಷಣೆ ಕೊಡುವುದಕ್ಕೆ ಈ ವೇದಿಕೆ ಇದೆ. I am sincerely telling this. I give a call to my officers, whether he is a Junior Engineer or Chief Engineer, they must resist whenever such thing are going to happen and they must live like honourable citizens. They should not become collecting agents. ಇದು ಈಗಿನದಲ್ಲ. ೧೯೬೬ ರಿಂದ ನಡೆದುಕೊಂಡು ಬಂತು. I am prepared to withstand any type of political pressures. ...The officers became scapegoats. I know that.

ಶ್ರೀ ಎಂ, ವೀರಪ್ಪಮೊಯ್ಲಿ.—ಇದು ಯಾವ ಅಧಿಕಾರಿಗಳು ದುರುಪಯೋಗ ಮಾಡಿಕೊಂಡಿದ್ದಾರೆಂಬುದು ಚರ್ಚೆಯಾಗಲಿ. ನಾನು ಜವಾಬ್ದಾರಿಯಿಂದ ಇಲ್ಲಿ ಮಾತನಾಡುತ್ತಿದ್ದೇನೆ, ೧೯೭೧ಕ್ಕೆ ಏಕೆ ಇಡುತ್ತೀರಿ ? ಹಿಂದೆ ಯಾರು ಮುಖ್ಯಮಂತ್ರಿಗಳಾಗಿದ್ದರೋ. ಆ ವರ್ಷದಿಂದ ಪ್ರಾರಂಭವಾಗಲಿ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಇದರ ಬಗ್ಗೆ ತನಿಖೆ ಏಕೆ ಆಗಬಾರದು ? Whether he is a Minister or Chief Minister why enquiry should not be conducted and the guilty punished ?

ಶ್ರೀ ಎಚ್. ಡಿ. ದೇವೇಗೌಡ.—೧೯೭೧ ರಿಂದ ಮಾಡಲಿಕ್ಕೆ ನಾನು ಸಿದ್ಧನಿಲ್ಲ. ಅದರ ನಂತರ ಆದದ್ದು ಬೇಕಾದರೆ ತನಿಖೆಯಾಗಲಿ.

(ಸಭಾಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಒಬ್ಬರು ಮಾನ್ಯ ಸದಸ್ಯರು.—ಲೋಕಾಯುಕ್ತ ಬರುತ್ತದೆ. ಅದು ಬಂದ ಮೇಲೆ ಎಲ್ಲಾ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಸದನದಲ್ಲಿ ಯಾವುದನ್ನೂ ಮರೆಮಾಚುವುದು ಬೇಡ. ಶರಾವತಿಯ ಮೂಲಸ್ಥಾನದಿಂದ ಎಲ್ಲಿ ಭ್ರಷ್ಟಾಚಾರ ನಡೆದಿದೆ ಅದರ ಪ್ರಾರಂಭ ದಿಂದಲೇ ಏನು ನಡೆದಿದೆಯೋ ಅದನ್ನು ನೋಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದಿನದು ಈಗ ಬೇಕಾಗಿಲ್ಲ. ಇವತ್ತು ನಾನು ಅಧಿಕಾರದಲ್ಲಿ ಇರುವಂಥ ಕಾಲದಲ್ಲಿ ಇದು ಆಗಿದ್ದರೆ ಈ ದೇಶಕ್ಕೆ ಈ ಜನತೆಗೆ ಮತ್ತು ಈ ಶಾಸನಸಭೆಗೆ ನಾನು ಜವಾಬ್ದಾರನಾಗಿದ್ದೇನೆ. ಹಿಂದಿನದ್ದೆಲ್ಲಾ ತೆಗೆದುಕೊಂಡು ಹೇಳುವುದಾದರೆ ಇವತ್ತು ಅಪ್ಪರ್ ಕೃಷ್ಣಾದಲ್ಲಿ ಏನು ಆಗಿದೆ ! ಕಾರಂಜಾದಲ್ಲಿ ಏನು ಆಗಿದೆ ? ಹೇಮಾವತಿಯಲ್ಲಿ ಏನು ಆಗಿದೆ ? ಇದರ ಬಗ್ಗೆ ತನಿಖೆ ಮಾಡುವುದಾದರೆ ಕೆಲವರು ಸತ್ತು ಸ್ವರ್ಗದಲ್ಲಿದ್ದಾರೆ. ಹಿಂದೆ ಮೂರು ಮೂರು ತಿಂಗಳು, ನಾಲ್ಕು ನಾಲ್ಕು ತಿಂಗಳು ಮಂತ್ರಿಗಳ ಮನೆಯಲ್ಲಿ ಫೈಲುಗಳು ಇರುತ್ತಿದ್ದವು. ಬೇಕಾದರೆ ಇದರ ಬಗ್ಗೆ ವಿವರ ತರಿಸಿ ನಾನು ಈ ಸಭೆಯ ಮುಂದೆ ಇಡುತ್ತೇನೆ ಅದರ ಬಗ್ಗೆ ಅವರು ನೋಡುವ ಮನಸ್ಸನ್ನು ಕೂಡ ಮಾಡುತ್ತಿರಲಿಲ್ಲ. ಇವತ್ತು ನನ್ನ ಮನೆಯಲ್ಲಿ ಕೂಡ ಯಾವುದೇ ಫೈಲು ಎರಡು ತಿಂಗಳು, ಒಂದು ತಿಂಗಳು ಇದ್ದರೂ ಕೂಡ ಅದಕ್ಕೆ ನಾನು ಜವಾಬ್ದಾರನಾಗಿರುತ್ತೇನೆ. ಸಕಾಲದಲ್ಲಿ ಫೈಲು ಹೊರಗಡೆ ಬರಬೇಕು. ಇದನ್ನು ನಾನು ಪಾಲಿಸುತ್ತಿದ್ದೇನೆ. ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಕೊಡುವುದಕ್ಕೆ ಯಾರೂ ಕಾಳಜಿ ವಹಿಸಬೇಕಾಗಿಲ್ಲ. ಅವರ ಮನಸ್ಸಿನಲ್ಲಿ ಯಾವುದೇ ಜಿಜ್ಞಾಸೆ ಬೇಕಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಯಾವುದೇ ಅಧಿಕಾರಿ ಹಣ ಸಂಗ್ರಹ ಮಾಡಕೂಡದು ಎನ್ನುವ ಆದೇಶ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಇದು ಒಳ್ಳೆ ಮಾತು. ಹಿಂದಿನಿಂದ ೧೯೭೦ ರಿಂದ ಇದು ನಡೆದುಕೊಂಡು ಬಂದಿದೆ ಎಂದು ಹೇಳಿದರು. ಅದರ ಅರ್ಥ ೧೯೭೦ರವರೆಗೆ ಸಂಗ್ರಹ ಮಾಡಿದ್ದರು ಎಂಬ ಅರ್ಥ ಬರುತ್ತದೆ ಎಂಬ ಅಭಿಪ್ರಾಯ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇರಬಹುದು ಎಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಹೇಳಿದ್ದು ೭೦ಕ್ಕೆ ಮಾತ್ರ ಏಕೆ ಗಡುವು ಹಾಕುತ್ತೀರಿ ? ಯಾರು ಸತ್ತು ಹೋಗಿದ್ದಾರೆ ಅವರದ್ದು ಬೇಡ. ಆದರೆ ಯಾರು ಬದುಕಿದ್ದಾರೆ ಅವರ ವಿಚಾರದಲ್ಲಿ ತನಿಖೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವರು ತಪ್ಪು ಮಾಡಿ ಕಾಲವಾಗಿದ್ದಾರೆ. ಆದ್ದರಿಂದ ಬದುಕಿರುವವರ ಬಗ್ಗೆ ನೋಡೋಣ. ಎಲ್ಲರ ಚರಿತ್ರೆಯೂ ಬಂದು ಬಿಡಲಿ. ಯಾರ್‍ಯಾರು ಏನು ಮಾಡಿದ್ದಾರೆ ಅದು ಗೊತ್ತಾಗಿ ಬಿಡಲಿ ಇದರಿಂದ ನಿಮಗೇನೂ ಕಳಂಕ ಬರುವುದಿಲ್ಲವಲ್ಲ ?

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಕಳೆದ ೩೦ ವರ್ಷಗಳಿಂದ ಎಷ್ಟು ಜನ ಆರಿಸಿಬಂದಿದ್ದಾರೆ, ಎಂ.ಎಲ್.ಎ ಆಗುವುದಕ್ಕೆ ಮುಂಚೆ ಅವರ ಆಸ್ತಿ ಎಷ್ಟು ಇತ್ತು ? ಎಂ.ಎಲ್.ಎ. ಆದ ಮೇಲೆ ಅವರ ಆಸ್ತಿ ಎಷ್ಟು ಇದೆ. ಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲೀ, ಅಧಿಕಾರಿಗಳೇ ಆಗಲಿ, ಎಲ್ಲರ ತನಿಖೆಯನ್ನೂ ಏಕೆ ಮಾಡಬಾರದು ? Is it not your duty to enquire into the matter and punish them ? Whether the Minister is there or not, it is your duty to enquire where corruption is going on. ಇದು ತಮಗೆ ಗೊತ್ತಿದೆ. ನನಗೆ ಗೊತ್ತಿದೆ. ಇಡೀ ರಾಜ್ಯಕ್ಕೆ ಗೊತ್ತಿದೆ. ತಹಸೀಲ್ದಾರ್ ಆಯ್ಕೆಗೆ ಐದು ಸಾವಿರ, ಹತ್ತು ಸಾವಿರ ರೂಪಾಯಿಗಳು, ಅಸಿಸ್ಟೆಂಟ್ ಕಮೀಷನರ್ ಆಗಬೇಕಾದರೆ ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುವ ಉದಾಹರಣೆಗಳು ನನ್ನ ಗಮನಕ್ಕೆ ಬಂದಿವೆ. ಇವೆಲ್ಲವನ್ನೂ ತನಿಖೆ ಮಾಡಿ. ಇದರ ಬಗ್ಗೆ ಎಷ್ಟೋ ಸಲ ಹೇಳಿದ್ದರೂ ಇದು ನಡೆದಿಲ್ಲ. You are a Minister and it is your duty and it is our request to you, you please enquire into the matter. ಎನ್‌ಕ್ವೈರಿ ಕಮಿಟಿ ಮಾಡಿ ಮೂವತ್ತು ವರ್ಷಗಳಿಂದ ಯಾರ್‍ಯಾರ ಪ್ರಾಪರ್ಟಿ ಇವತ್ತು ಏನಿದೆ, ಹಿಂದೆ ಏನಿತ್ತು ಎಂಬುದನ್ನು ತನಿಖೆ ಮಾಡಿ.

ಶ್ರೀ ಹೆಚ್. ಗಂಗಾಧರನ್.—ಮಾಜಿ ಲೋಕೋಪಯೋಗಿ ಮಂತ್ರಿಗಳು ಮತ್ತು ನಿವೃತ್ತ ಚೀಫ್ ಇಂಜಿನೀಯರ್ ಸೇರಿಸಿಕೊಂಡು ಕಮಿಟಿ ಮಾಡಿ.

ಒಬ್ಬ ಮಾನ್ಯ ಸದಸ್ಯರು .—ಶಾಸಕರನ್ನೂ ಕೂಡ ತನಿಖೆಗೆ ಒಳಪಡಿಸಿ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ಸ್ವಾತಂತ್ರ್ಯ ಬಂದಲಾಗಾಯ್ತು ಮಂತ್ರಿಗಳಾಗಿದ್ದವರು, ಆಗದೇ ಇರುವವರು ಅಧಿಕಾರ ದುರುಪಯೋಗ ಮಾಡಿಕೊಂಡು ಆಸ್ತಿಪಾಸ್ತಿ ಮಾಡಿದ್ದಾರೆ ಎಂದು ತನಿಖೆ ಮಾಡುವುದಕ್ಕೆ ಸಮಿತಿಯನ್ನು ರಚಿಸುವ ಬಗ್ಗೆ ನನ್ನ ಒಪ್ಪಿಗೆ ಇದೆ.

ಒಬ್ಬರು ಮಾನ್ಯ ಸದಸ್ಯರು.—ಈಗ ಲೋಕಾಯುಕ್ತ ಬರುತ್ತದೆ. ಏಕೆ ಅವಸರ ಮಾಡುತ್ತೀರಿ?

ಶ್ರೀ ಪಿ. ರಾಮದೇವ್.—ಒಂದು ಸಂತೋಷ ಏನೆಂದರೆ ೩೬ ವರ್ಷಗಳಿಂದ ಈ ಮಾತನ್ನು ಕೇಳಿರಲಿಲ್ಲ. ಈಗ ಕೇಳುತ್ತಿದ್ದೇವೆ

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಕಳೆದ ೨೦-೨೧ ವರ್ಷಗಳಿಂದಲೂ ಕೇಳುತ್ತಿದ್ದೇವೆ. ಯಾರೂ ಇದರ ಬಗ್ಗೆ ಗಮನ ಕೊಟ್ಟಿಲ್ಲ,

ಶ್ರೀ ಎಚ್. ಡಿ. ದೇವೇಗೌಡ.—ವಿಷಯ ಎಲ್ಲಿಂದ ಎಲ್ಲಿಗೋ ಹೋಗುತ್ತದೆ. ೧೯೪೭ ರಿಂದ ಇಲ್ಲಿಯವರೆಗೆ ಇರತಕ್ಕಂಥ ಎಲ್ಲಾ ಲೆಕ್ಕಗಳ ತನಿಖೆ ಮಾಡಬೇಕೆಂದು ಏನು ಹೇಳುತ್ತಿದ್ದೀರಿ, ಅದಕ್ಕೂ ಈಗ ಲೋಕೋಪಯೋಗಿ ಇಲಾಖೆಯ ಮೇಲಿನ ಚರ್ಚೆಗೂ ಯಾವ ಸಂಬಂಧವೂ ಇಲ್ಲ,

ಶ್ರೀ ಎಂ. ಎಸ್. ಕೃಷ್ಣನ್.—ಭ್ರಷ್ಟಾಚಾರಿ ಮಂತ್ರಿಗಳು ಯಾರು ಇದ್ದಾರೆ ಭ್ರಷ್ಟಾಚಾರಿ ಅಧಿಕಾರಿಗಳು ಯಾರು ಇದ್ದಾರೆ ಎಂದು ತಿಳಿಯಲು ಈ ಲೆಕ್ಕದಿಂದ ಉಪಯೋಗ ಆಗುತ್ತದೆ. ತನಿಖೆ ಮಾಡಿ ಎಂದು ಎಲ್ಲರೂ ಹೇಳುತ್ತಿರುವಾಗ ತಾವು ಇದರ ಬಗ್ಗೆ ಸಂತೋಷಪಡಬೇಕು.

ಶ್ರೀ ಎನ್. ಜಿ. ನಾಯಕ್. —ಇದು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ದಿವಸ ನೀವು ರಸ್ತೆ ಮಾಡ್ಬೇಕು ಅಂತ ಹೇಳಿ . ನಿಮ್ಮ ಊರಿಗೆ ರಸ್ತೆ ಮಾಡಿಸಬೇಕಾದರೆ ಇಂಜಿನೀಯರಿಂಗ್ ಆಫೀಸ್‌ನ್ನು ಮುಚ್ಚಿಸಿ ಬಿಡೋಣ. ತಹಸೀಲ್ದಾರ್‌ಗೋ, ಬಿ.ಡಿ.ಓಗೋ ಕೊಡೋಣ. ಆಗ ಗೊತ್ತಾಗುತ್ತದೆ. ವಿಷಯ ಎಲ್ಲಿಂದ ಎಲ್ಲಿಗೋ ಹೋಗುವುದು ಬೇಡ.

ಶ್ರೀ ಎನ್. ಚಿಕ್ಕೇಗೌಡ.—ನೀರಾವರಿ ಯೋಜನೆಯಿಂದ ರಾಜಕಾರಣಕ್ಕೆ ವಿಷಯ ಹೋಗಿದೆ ಅಷ್ಟೆ.

ಶ್ರೀ ಎಚ್.ಡಿ. ದೇವೇಗೌಡ.—ಲೋಕೋಪಯೋಗಿ ಇಲಾಖೆಯ ಬಗ್ಗೆ ಈಗ ಮಾತನಾಡೋಣ. ಕೊನೆಯದಾಗಿ ಅಪ್ಪರ್ ಕೃಷ್ಣಾ ಬಗ್ಗೆ ಕೆಲವು ಮಾನ್ಯ ಸದಸ್ಯರು ಸಂಶಯ ವ್ಯಕ್ತಪಡಿಸಿದರು. ಕಂಟ್ರಾಕ್ಟ್‌ದಾರರ ಬಗ್ಗೆ ನಮಗೆ ಸೇಡಿನ ಮನೋಭಾವನೆ ಇಲ್ಲ. ಸೇಡಿನ ಮನೋಭಾವ ಇಟ್ಟುಕೊಳ್ಳಬೇಕಾದ ಅವಶ್ಯಕತೆಯೂ ಇಲ್ಲ. ಆದರೆ ಕಂಟ್ರಾಕ್ಟ್‌ದಾರರು ಆರ್ಬಿಟ್ರೇಶನ್ ಕ್ಲಾಸ್ ಇರುವುದರಿಂದ ಸರ್ಕಾರವನ್ನು ಜಗ್ಗಿಸುತ್ತೇವೆ, ಬಗ್ಗಿಸುತ್ತೇವೆ ಎಂದು ಮುಂದುವರಿದರೆ ಆದರ ಬಗ್ಗೆ ಮಣಿಯುವುದಕ್ಕೆ ಮಾತ್ರ ಸಾಧ್ಯವಿಲ್ಲ

ಅದರ ಬಗ್ಗೆ ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಈಗಾಗಲೇ ೩ ಮೀಟಿಂಗ್‌ಗಳಾಗಿವೆ. ಶಾಸಕರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಅವರ ಜೊತೆಗೆ ಸಮಾಲೋಚನೆ ಮಾಡಿದ್ದೇನೆ. ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಅವರು ೨೫ ಪರ್ಸೆಂಟ್ ಎಸ್ಕಲೇಷನ್ ಕೊಡಬೇಕೆಂದು ಕೇಳಿದ್ದಾರೆ. ನಾವು ೧೪ ಪರ್ಸೆಂಟ್ ಎಸ್ಕಲೇಷನ್ ಚಾರ್ಜಸ್ ಕೊಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಜೊತೆಗೆ ರಿಸರ್ವ್ ಬ್ಯಾಂಕಿನ ನಿಯಮದ ಪ್ರಕಾರ ಕಾಸ್ಟ್ ಎಸ್ಕಲೇಷನ್ ಕೂಡ ಕೊಡುತ್ತೇವೆಂದು ಹೇಳಿದ್ದೇವೆ. ಅದಕ್ಕೂ ಒಪ್ಪದೆ, ತೊಂದರೆ ಕೊಡುತ್ತಿದ್ದಾರೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಅನಿವಾರ್ಯ.

ಶ್ರೀ ಗೋವಿಂದ ಪಿ. ಒಡೆಯರಾಜ್ —ಅಪ್ಪರ್ ಕೃಷ್ಣ ಯೋಜನೆಯ ಮೊದಲನೆ ಹಂತದಲ್ಲಿ ವಿಶ್ವ ಬ್ಯಾಂಕಿನಿಂದ ಈವರೆಗೆ ೧೦೭ ಕೋಟಿ ರೂಪಾಯಿಗಳು ಮರುಪಾವತಿಯಾಗಬೇಕಾಗಿತ್ತು. ಇವತ್ತಿನವರೆಗೆ

೫೬ ಕೋಟಿ ರೂಪಾಯಿಗಳು ಮಾತ್ರ ಮರುಪಾವತಿಯಾಗಿದೆ ಎಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕಾಗಿ ಆದಂತಹ ಅಗ್ರಿಮೆಂಟ್ ಕೂಡ ೧೯೮೩ಕ್ಕೆ ಎಕ್ಸ್‌ಪೈರ್ ಆಗಿದೆ ಅಂತ ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಚ್, ಡಿ. ದೇವೇಗೌಡ.—ಎಕ್ಸ್‌ಟೆಂಡ್ ಮಾಡಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಎಕ್ಸ್‌ಟೆಂಡ್ ಆಗಿದೆ ಎಂಬ ಮಾತನ್ನು ಹೇಳಿದ್ದಾರೆ. ಸಂತೋಷ. ಈ ಅವಧಿಯಲ್ಲಾದರೂ ಇನ್ನುಳಿದ ೫೧ ಕೋಟಿ ಹಣವನ್ನು ಮರುಪಾವತಿಯಾಗಿ ಮಾಡಿಕೊಳ್ಳುತ್ತೀರಾ ? ಈ ಯೋಜನೆಗೆ ೧೦೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಆದರೆ ಇವತ್ತಿನವರಿಗೆ ಆಗಿರತಕ್ಕಂಥ ಖರ್ಚು ಸುಮಾರು ೭೩೦ ಕೋಟಿ ರೂಪಾಯಿಗಳು. ಇದಕ್ಕಾಗಿ ಇನ್ನೂ ೭೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಅದಕ್ಕೋಸ್ಕರ ಮತ್ತೆ ವಿಶ್ವಬ್ಯಾಂಕಿನ ಸಹಾಯವನ್ನು ಕೇಳುತ್ತೀರಾ ? ಅದನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂಬ ವಿಷಯವನ್ನು ತಿಳಿಸಬೇಕು. ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ವಿಶ್ವಬ್ಯಾಂಕಿನ ನೆರವನ್ನು ಪಡೆದಿದ್ದರಿಂದ, ಆರ್‌ಬಿಟ್ರೇಷನ್ ಕ್ಲಾಸ್‌ನ್ನು ವಿಶ್ವಬ್ಯಾಂಕಿನವರು ಹಾಕಿದ್ದರಿಂದ, ಇಷ್ಟೆಲ್ಲಾ ತೊಂದರೆಗೆ ಆಸ್ಪದವಾಗಿದೆ. ಆದರೂ ಹಿಂದೆ ಸರ್ಕಾರ ಒಪ್ಪಿಕೊಂಡಿದೆ. ಶರಾವತಿ ಕರ್ಮಕಾಂಡ ಆದಮೇಲೆ ಯಾವ ಕಂಟ್ರಾಕ್ಟ್‌ದಾರನಿಗೂ ಪಂಚಾಯಿತಿ ಎಂಬತಕ್ಕಂತಹ ಕ್ಲಾಸ್ ಇರಬಾರದು ಎಂಬುದಾಗಿ ಹಿಂದೆ ಸರ್ಕಾರ ನಿರ್ಣಯ ಕೈಗೊಂಡಿದೆ. ಆದರೆ ಯಾವ ಕಾರಣಕ್ಕಾಗಿ ಈ ಪಂಚಾಯಿತಿ ಕ್ಲಾಸ್‌ನ್ನು ಒಪ್ಪಿಕೊಂಡಿದ್ದರೋ ಗೊತ್ತಿಲ್ಲ. ಆರ್‌ಬಿಟ್ರೇಷನ್‌ನಿಂದ ಬಹಳಷ್ಟು ಅನಾಹುತವಾಗುವುದಕ್ಕೆ ಕಾರಣವಾಗಿದೆ ಎಂಬುದು ನಿಸ್ಸಂಶಯ. ತಾವು ಅಗ್ರಿಮೆಂಟನ್ನು ಮುಂದುವರಿಸುತ್ತೇನೆಂದು ಹೇಳಿದ್ದೀರಿ. ಆ ಸಮಯದಲ್ಲಿ ಆರ್‌ಬಿಟ್ರೇಷನ್ ಕ್ಲಾಸ್‌ನ್ನು ಯಾವುದೇ ಒಂದು ಸಂದರ್ಭದಲ್ಲೂ ಒಪ್ಪಿಕೊಳ್ಳಬಾರದು ಎಂಬುದು ನನ್ನ ಕಳಕಳಿಯ ಮನವಿ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು. ಮೂರನೆಯದಾಗಿ, ಸಿಮೆಂಟ್ ಸ್ಕ್ಯಾಂಡಲ್ ಆಗಿದೆ. ಇವತ್ತಿಗೂ ಆಗುತ್ತಿದೆ. ತಾವು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉದ್ಯಮ ಮಂತ್ರಿಗಳು ಹೋದಾಗ ಹುಣಸಗಿಯಲ್ಲಿ ಮೀಟಿಂಗ್ ಆಯಿತು. ಆ ಮೀಟಿಂಗ್ ಆದ ಮೇಲೆ ಮುಖ್ಯಮಂತ್ರಿಗಳು ಹೋಗುತ್ತಾರೆ. ಅಲ್ಲಿಂದ ಎರಡು ಲಾರಿ ಸಿಮೆಂಟ್ ಮಹಾರಾಷ್ಟ್ರಕ್ಕೆ ಹೋಗತಕ್ಕಂಥ ವರದಿ ಬಂದಿದೆ. ಅದನ್ನು ನನ್ನ ಭಾಷಣದಲ್ಲೂ ಹೇಳಿದ್ದೇನೆ. ಅದರ ಬಗ್ಗೆ ತಮ್ಮ ಗಮನ ಏಕೆ ಹರಿಯಲಿಲ್ಲವೋ ತಿಳಿಯದು ಇನ್ನೂ ಕೂಡ ಸಿಮೆಂಟ್ ಸ್ಕ್ಯಾಂಡಲ್ ನಡೆಯುತ್ತಿದೆ. ಅದನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಮತ್ತೆ ಅಲ್ಲಿಂದ ಹೇಮಾವತಿಗೆ ಸಿಮೆಂಟ್ ಹೋಗುತ್ತಿದೆ ಎಂಬ ಸಂಶಯ ಇದೆ. ಇವಿಷ್ಟು ವಿಚಾರಗಳಿಗೆ ವಿವರಣೆ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ವಿಶ್ವಬ್ಯಾಂಕಿನ ಅಗ್ರಿಮೆಂಟ್‌ನಲ್ಲಿ ಅಳವಡಿಸಿರತಕ್ಕಂತಹ ಆರ್‌ಬಿಟ್ರೇಷನ್ ಕ್ಲಾಸ್ ಅಂತ ಹೇಳಿದ್ದಾರೆ ಹಿಂದೆ ನಡೆದಿರತಕ್ಕಂತಹ ಶರಾವತಿ ಕರ್ಮ ಕಾಂಡದಲ್ಲಿ ಕೈಸುಟ್ಟುಕೊಂಡ ಮೇಲೆ ಮತ್ತೆ ಏಕೆ ಮಾಡಿದರು ಎನ್ನುವ ಮಾತನ್ನು ಹೇಳಿದ್ದಾರೆ. ವಿಶ್ವಬ್ಯಾಂಕಿನವರು ನಮಗೆ ಸಹಾಯವನ್ನು ಕೊಡಬೇಕಾದರೆ ಆ ಷರತ್ತನ್ನು ಹಾಕಿದ್ದಾರೆ. ಆಗಿನ ಸರ್ಕಾರ ದುರುದ್ದೇಶದಿಂದ ಮಾಡಿಕೊಂಡಿದೆ ಅಂತ ಹೇಳುತ್ತಿಲ್ಲ. ಹಣವನ್ನು ತೆಗೆದುಕೊಳ್ಳಬೇಕು ಎಂಬ ಒಂದೇ ಒಂದು ಗುರಿಯಿಂದ ಇದಕ್ಕೆ ಒಪ್ಪಿಕೊಂಡಿದ್ದಾರೆ. ಇದನ್ನು ಡಿಲೀಟ್ ಮಾಡಿದರೆ ನಾವು ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ಎಂಬುದರ ಬಗ್ಗೆ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ಆ ಷರತ್ತು ಇರಲೇಬೇಕು. ಇದು ವಿಶ್ವಬ್ಯಾಂಕಿನ ನಿಯಮ ಅಂತ ಅವರು ಹೇಳುವುದಾದರೆ ವಿಶ್ವ ಬ್ಯಾಂಕಿನ ಸಹಾಯವನ್ನು ಬಿಟ್ಟುಬಿಡಬೇಕಾಗುತ್ತದೆ. ಇಲ್ಲ ಹಣವನ್ನು ತೆಗೆದುಕೊಳ್ಳಬೇಕಾಗಿದ್ದರೆ, ಅವರು ಹಾಕತಕ್ಕಂತಹ ಷರತ್ತಿಗೆ ಒಪ್ಪಬೇಕಾಗುತ್ತದೆ. ಪರವಾಯಿಲ್ಲ, ಎಚ್ಚರಿಕೆಯಿಂದ ಮುಂದೆ ಹೋಗೋಣ, ಆರ್ಥಿಕ ನೆರವು ಬೇಕು, ಅಂತ ಹೇಳಿದರೆ ಅವರು ಹಾಕತಕ್ಕಂತಹ ಷರತ್ತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹಣವೂ ಬೇಡ ಆ ಷರತ್ತೂ ಬೇಡ ಅಂತ ಹೇಳಿದರೆ ನನ್ನದೇನೂ ತಕರಾರು ಇಲ್ಲ. ಎರಡನೆಯದಾಗಿ ಬಾಕಿ ಇರುವ ೫೦ ಕೋಟಿ ಹಣವನ್ನು ರೀ, ಇಂಬರ್ಸ್‌ಮೆಂಟ್ ಮಾಡುವುದಕ್ಕೆ ತಿಳಿಸಿದ್ದೇವೆ. ಅದು ವಾಪಸ್ಸು ಬರುತ್ತದೆ, ಏಕೆಂದರೆ ಅದು ಖರ್ಚು ಮಾಡಿರತಕ್ಕಂತಹ ಹಣ. ಅವಧಿಯನ್ನೂ ಕೂಡ ವಿಸ್ತರಿಸಬೇಕೆಂದು ಹೇಳಿದ್ದೇವೆ. ವಿಸ್ತರಿಸತಕ್ಕಂತಹ ಸನ್ನಿವೇಶ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಎಷ್ಟು ವರ್ಷ ?

ಶ್ರೀ ಎಚ್. ಡಿ. ದೇವೇಗೌಡ.—೧೯೮೫ರವರೆಗೆ ವಿಸ್ತರಿಸಬೇಕೆಂದು ಹೇಳಿದ್ದೇವೆ. ಅಷ್ಟರಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳುತ್ತೇವೆ. ಮತ್ತೆ ಅಪ್ಪರ್ ಕೃಷ್ಣ ಯೋಜನೆಯ ಎರಡನೇ ಹಂತದ ಬಗ್ಗೆ ವಿಶ್ವ ಬ್ಯಾಂಕಿನ ನೆರವಿಗೆ ಕಳುಹಿಸಬೇಕೆಂದಿದ್ದೇವೆ. ಏಕೆಂದರೆ ನಮಗೆ ಹಣದ ಸಹಾಯ ಬೇಕಾಗುತ್ತದೆ. ಸಿಮೆಂಟ್ ಸ್ಕ್ಯಾಂಡಲ್ ಬಗ್ಗೆ ಹೇಳಿದ್ದಾರೆ. ಮುಖ್ಯ ಮಂತ್ರಿಗಳು ಮೀಟಿಂಗ್ ಮಾಡಿದ ದಿವಸ ಸಿಮೆಂಟ್ ಅಲ್ಲಿಂದ ಹೋಗಿಲ್ಲ. ಅದರ ಬಗ್ಗೆ ಅಧಿಕಾರಿಗಳಿಂದ ವರದಿಯನ್ನು ತರಿಸಿದ್ದೇನೆ. ಅದು ಬೇರೆ ಸಿಮೆಂಟ್ ಫ್ಯಾಕ್ಟರಿಯಿಂದ ಹೋಗತಕ್ಕಂತಹ ಸಿಮೆಂಟ್. ಪೋಲೀಸ್ ಅಧಿಕಾರಿಗಳಿಂದ ವರದಿ ನನಗೆ ಬಂದಿದೆ. ಅದು ಅಪ್ಪರ್ ಕೃಷ್ಣ ಯೋಜನೆಯ ಸಿಮೆಂಟ್ ಅಲ್ಲ. ಮತ್ತೆ ಅಪ್ಪರ್ ಕೃಷ್ಣ ಯೋಜನೆಯ ಸಿಮೆಂಟ್‌ನ್ನು ಹೇಮಾವತಿಗೆ ಡೈವರ್ಟ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆ ರೀತಿ ಮಾಡಿಲ್ಲ. ಅವಶ್ಯಕತೆ ಬಿದ್ದರೆ ಆ ರೀತಿ ಮಾಡಿದರೂ ತಪ್ಪೇನೂ ಅಲ್ಲ. ಮತ್ತೆ ೬೫ ಸಣ್ಣ ನೀರಾವರಿ ಯೋಜನೆಗೆ ತಾವು ಹಣಕಾಸಿನ ಮಂತ್ರಿಗಳಾಗಿ ೧೦ ಕೋಟಿ ಹಣವನ್ನು ಒದಗಿಸಿದ್ದೀರಿ. ಅದು ಖರ್ಚು ಆಗಲಿಲ್ಲ. ಅದರಲ್ಲಿ ನನಗೆ ತಿಳಿದ ಹಾಗೆ ಮೂರು ಕೋಟಿ ರೂಪಾಯಿಗೆ ಸಿಮೆಂಟ್‌ನ್ನು ತೆಗೆದುಕೊಂಡಿದ್ದೇವೆ. ಏಕೆಂದರೆ ಹಣ ಲ್ಯಾಪ್ಸ್ ಆಗಬಾರದು ಅಂತ. ಅದನ್ನು ನಾವು ಶೇಖರಣೆ ಮಾಡಿದ್ದೇವೆ. ಎಷ್ಟು ಬೇಕೋ ಅಷ್ಟನ್ನು ಉಪಯೋಗ ಮಾಡಿಕೊಳ್ಳುತ್ತೇವೆ. ಅಪ್ಪರ್ ಕೃಷ್ಣ ಯೋಜನೆಯ ಕೆಲಸವನ್ನು ಸ್ಥಗಿತಗೊಳಿಸಿ ಆದಕ್ಕಾಗಿ ಒದಗಿಸಿದಂತ ಸಿಮೆಂಟನ್ನು ಬೇರೆ ಕಡೆಗೆ ವರ್ಗಾಯಿಸುವ ಅವಶ್ಯಕತೆ ಬಂದಿಲ್ಲವೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ನಾನು ಈ ಇಲಾಖೆಯ ಆಯವ್ಯಯದ ಮೇಲೆ ಆದಂತಹ ಚರ್ಚೆಯಲ್ಲಿ ಭಾಗವಹಿಸುತ್ತಾ, ಯಾವ ಬ್ಯಾಕ್‌ವರ್ಡ್ ಏರಿಯಾ ಇದೆ, ಅದನ್ನು ರೀಜನಲ್ ಇಂಬ್ಯಾಲೆನ್ಸ್ ಅಂತ ಏನು ಕರೆಯುತ್ತೇವೆ, ಅದನ್ನು ತೆಗೆಯುವುದಕ್ಕೆ ಯೋಜನೆಯನ್ನು ಮಾಡಬೇಕೆಂದು ಹೇಳಿದ್ದೆ. ನಮ್ಮ ಭಾಗದಲ್ಲಿ ಕೇವಲ ೩ ಪರ್ಸೆಂಟ್ ಇರಿಗೇಷನ್ ಇರುವುದು. ಸ್ಟೇಟ್ ಅವರೇಜ್ ೨೩ ಪರ್ಸೆಂಟ್. ಇದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕೆಂಬ ಮಾತನ್ನು ಹೇಳಿದ್ದೆ. ಅದಕ್ಕೆ ತಾವು ಒಪ್ಪಿದ್ದೀರಿ. ಅದರಬಗ್ಗೆ ವಿವರಣೆ ಬೇಕು. ಮೂರನೆಯದಾಗಿ ಈ ವರ್ಷ ಇದಕ್ಕಾಗಿ ೨.೨೫ ಕೋಟಿ ಹಣವನ್ನು ಇಟ್ಟಿದ್ದೀರಿ. ಈಗ ನನಗೆ ತಿಳಿದ ಹಾಗೆ ೪ ಕೋಟಿ ಹಣ ಖರ್ಚಾಗಿದೆ. ಈ ವರ್ಷ ೫ ಕೋಟಿ ಹೆಚ್ಚಿಗೆ ಹಣ ಖರ್ಚಾಗಬೇಕಾಗಿದೆ. ಅದಕ್ಕೆ ತಾವು ಒಪ್ಪಿದ್ದೀರಿ. ಈ ೬ ತಿಂಗಳಲ್ಲಿ ಈವರೆಗೆ ಚಾನಲ್ ಕೆಲಸ ಸಂಪೂರ್ಣ ನಿಂತು ಹೋಗಿದೆ. ಡ್ಯಾಂ ಕೆಲಸಕ್ಕೆ ಟೆಂಡರ್ ಕರೆದಿಲ್ಲ. ಟೆಂಡರ್‌ನ್ನು ಕರೆಯುವುದಕ್ಕೆ ಎಷ್ಟು ದಿವಸ ಬೇಕು ? ಈವರೆಗೆ ೬೦ ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ. ೪ ಕೋಟಿ ೬೫ ಲಕ್ಷ ಹಣ ಖರ್ಚಾಗಬೇಕು. ಇನ್ನುಳಿದ ೬ ತಿಂಗಳಲ್ಲಿ ಅಷ್ಟು ಹಣವನ್ನು ಹೇಗೆ ಖರ್ಚು ಮಾಡುತ್ತೀರಿ ? ಟೆಂಡರ್ ಆಗಿಲ್ಲ, ಕೆಲಸ ನಿಂತಿದೆ. ಚಾನಲ್ ಮತ್ತು ಡ್ಯಾಂ ಕೆಲಸ ಸಮಾನವಾಗಿ ಮಾಡಬೇಕಾಗುತ್ತದೆ. ಆ ರೀತಿ ಮಾಡುತ್ತೀರಾ ? ಮತ್ತೆ ಮಾಂಜ್ರಾ ಒಂದು ದೊಡ್ಡ ನದಿ ನಮ್ಮ ಜಿಲ್ಲೆಯಲ್ಲಿ ಹರಿಯುತ್ತಿದೆ. ಮಹಾರಾಷ್ಟ್ರದಲ್ಲಿ ಆದಕ್ಕೆ ಹಂತ ಹಂತವಾಗಿ ಅಣೆಕಟ್ಟನ್ನು ಕಟ್ಟಿ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ನಮಗೆ ನೀರೇ ಸಿಕ್ಕುವುದಿಲ್ಲ. ಆದ್ದರಿಂದ ಮಾಂಜ್ರಾ ಏತ ನೀರಾವರಿ ಯೋಜನೆಯ ಬಗ್ಗೆ ಏನು ಮಾಡುತ್ತೀರಿ ? ಎಷ್ಟು ದಿವಸ ಬೇಕಾಗುತ್ತದೆ. ಅದನ್ನು ಪ್ರಾರಂಭ ಮಾಡುವುದಕ್ಕೆ ? ಕಮ್ಯೂನಿಟಿ ಇರಿಗೇಷನ್ ಬಗ್ಗೆ ೨೫ ಲಕ್ಷ ರೂಪಾಯಿಗಳನ್ನು ೧೯೬೬ರಲ್ಲಿ ಬರಗಾಲ ಯೋಜನೆಯಲ್ಲಿ ಖರ್ಚು ಮಾಡಲಾಗಿದೆ. ಆದರೆ ಅವುಗಳೆಲ್ಲವೂ ಪೂರ್ತಿಯಾಗಿಲ್ಲ. ಹತ್ತು ವರ್ಷಗಳಿಂದ ಹಾಗೇ ಇವೆ. ಅವುಗಳಿಗೆ ಇನ್ನುಳಿದ ಹತ್ತನೇ ಒಂದು ಭಾಗದಷ್ಟು ಹಣವನ್ನು ಖರ್ಚು ಮಾಡಿದರೆ ಅವುಗಳಿಂದ ಜನರಿಗೆ ಉಪಯೋಗವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೆ ಅದರ ಬಗ್ಗೆ ವಿವರಣೆ ಬೇಕು. ೧೫ ಕೋಟಿ ರೂಪಾಯಿಗಳಷ್ಟು ಮಾರುಕಟ್ಟೆ ಸೆಸ್‌ನ ಬಗ್ಗೆ ಹೈಕೋರ್ಟಿನಲ್ಲಿ ಸ್ಟೇಯಾಗಿತ್ತು. ಈಗ ಅದು ವೆಕೇಟ್ ಆಗಿದೆ. ಬೀದರ್‌ನ ಮಾರುಕಟ್ಟೆ ಸಮಿತಿಯ ಸುತ್ತ ಮುತ್ತ ಇನ್ನೂ ರಸ್ತೆ ಇಲ್ಲ. ಆ ಹಣವನ್ನು ಖರ್ಚು ಮಾಡುವ ಸಲುವಾಗಿ ಸರ್ಕಾರದ ನೀತಿ ಏನು ? ಸಕ್ಕರೆ ಕಾರ್ಖಾನೆಯಿಂದ ನಾವು ೫ ಕೋಟಿ ಹಣವನ್ನು ಕೊಟ್ಟಿದ್ದೇವೆ. ಇದರಲ್ಲಿ ೩ ಕೋಟಿಯನ್ನು ಖರ್ಚು ಮಾಡಿದ್ದಾರೆ. ಇನ್ನೂ ೨ ಕೋಟಿ ಹಣ ಇದೆ. ಆ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಯಾವ ಕ್ರಮ ಕೈಗೊಳ್ಳುತ್ತೀರಿ ಎಂಬ ಬಗ್ಗೆ ಸಚಿವರಿಂದ ಉತ್ತರ ಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಕಾರಂಜ ಪ್ರಾಜೆಕ್ಟ್‌ಗೆ ೩ ಕೋಟಿಯನ್ನು ಇಟ್ಟಿದ್ದೇವೆ. ಈವರೆಗೆ ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೂರು ಕೋಟಿಯನ್ನೂ ಸಂಪೂರ್ಣವಾಗಿ

ಖರ್ಚು ಮಾಡುತ್ತೇವೆ. ಇನ್ನೂ ಸ್ವಲ್ಪ ಸಂಪನ್ಮೂಲವನ್ನು ರೂಢಿಸಿಕೊಂಡು ೨ ಕೋಟಿ ೨೦ ಲಕ್ಷ ಹಣವನ್ನು ಖರ್ಚು ಮಾಡಬೇಕೆಂಬ ಆಶೆ ಇದೆ. ಆ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇವೆಲ್ಲವೂ ಪುನಃ ಹಣದ ಸಂಪನ್ಮೂಲ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದರ ಬಗ್ಗೆ ಅವಲಂಬನೆ ಯಾಗುತ್ತದೆ. ಇದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಮಾಂಜ್ರಾ ಏತ ನೀರಾವರಿಯನ್ನು ಮಾಡಬೇಕೆಂದಿದ್ದೇವೆ. ಅದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಅದೂ ಕೂಡ ಹಣದ ಸಂಪನ್ಮೂಲದ ಮೇಲೆ ಅವಲಂಬನೆಯಾಗುತ್ತದೆ. ೭ನೇ ಪಂಚವಾರ್ಷಿಕ ಯೋಜನೆಗಯಲ್ಲಿ ೩೭ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಅಂದರೆ ಗೋದಾವರಿ ನದಿಯ ಟ್ರಿಬ್ಯೂನಲ್‌ನಲ್ಲಿ ಆದಂತಹ ಒಪ್ಪಂದದ ಪ್ರಕಾರ ಆ ನದಿಯಿಂದ ನಮಗೆ ನೀರು ಬರುತ್ತದೆ. ಅದೂ ಕೂಡ ಇನ್ನೂ ಪರಿಶೀಲನೆಯ ಹಂತದಲ್ಲಿವೆ ಎಂಬುದನ್ನು ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲೋಯರ್ ಭೀಮಾ ಪ್ರಾಜೆಕ್ಟ್‌ಗೆ ಆಂಧ್ರ ಪ್ರದೇಶದಿಂದ ಆ ಯೋಜನೆಗೆ ಆಗತಕ್ಕಂತಹ ಪೂರ್ಣ ವೆಚ್ಚದ ಶೇಕಡ ೫೦ ರಷ್ಟನ್ನು ಕೊಡುವುದಕ್ಕೆ ತಯಾರಿದ್ದಾರೆ. ಆ ಒಂದು ದೃಷ್ಟಿಯಿಂದ ತಾವು ಯೋಚನೆ ಮಾಡಿ, ಅಲ್ಲಿರತಕ್ಕಂತಹ ನೀರಾವರಿ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿ ಒಂದು ವೇಳೆ ಸಾಧ್ಯವಾಗುವುದಾದರೆ ಏಕೆ ತೆಗೆದುಕೊಳ್ಳಬಾರದು ?

೩–೦೦ ಪಿ. ಎಂ.

ಮಾನ್ಯ ಸದಸ್ಯರು ಹೇಳಿದುದನ್ನು ಪರಿಶೀಲನೆ ಮಾಡೋಣ. ಆ ಬಗ್ಗೆ ನಾನು ಈಗಲೇ ಉತ್ತರ ಹೇಳುವುದಕ್ಕಾಗುವುದಿಲ್ಲ. ಈ ತುಂಗಭದ್ರಾನಿಂದ ೧೫೦–೪೫೦ ಟಿಎಂಸಿಎಫ್‌ಟಿ ಅಷ್ಟು ನೀರು ಏನು ಹರಿದು ಹೋಗುತ್ತಾ ಇದೆ, ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅಲ್ಲಿಗೆ ನಾವು ಹೋದಾಗ ತಾವು ಹೇಳಿದುದನ್ನು ಪರಿಶೀಲನೆ ಮಾಡುತ್ತೇನೆ. ಈ ಕೆಲಸವನ್ನು ಜಾಯಿಂಟ್ ವೆಂಚರ್‌ನಲ್ಲಿ ತೆಗೆದು ಕೊಳ್ಳುವುದಾದರೆ ಅದನ್ನೂ ಪರಿಶೀಲನೆ ಮಾಡೋಣ. ಮಾನ್ಯ ಭೀಮಣ್ಣ ಖಂಡ್ರೆಯವರು ಷುಗರ್‌ಕೇನ್ ಸೆಸ್ ವಿಚಾರ ಹೇಳಿದರು. ಅದರ ಬಗ್ಗೆ ನಾವು ಆತುರಾತುರವಾಗಿ ತರುವುದಿಲ್ಲ ಎಂದು ಹೇಳುತ್ತೇನೆ. ಇನ್ನು ಮಾರ್ಕೆಟ್ ಸೆಸ್ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಇರತಕ್ಕಂಥಾ ೧೫ ಕೋಟಿ ರೂಪಾಯಿಯನ್ನು ಕನ್‌ಸಾಲಿಡೇಟ್ ಫಂಡ್ ಆಗಿ ತೆಗೆದುಕೊಂಡಿದೆ, ಇದು ಹಿಂದಿನ ಸರ್ಕಾರ ಮಾಡಿದ್ದು. ಇದನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗುತ್ತದೋ ಇಲ್ಲವೋ ಅನ್ನುವುದನ್ನು ನೋಡಬೇಕು.

ಶ್ರೀ ಎನ್. ಭೀಮಣ್ಣ ಖಂಡ್ರೆ.—ಸ್ವಾಮಿ, ಈ ವರ್ಷ ಕಾರಂಜಿ ಪ್ರಾಜೆಕ್ಟ್‌ಗೆ ೫ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಅನ್ನುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಕಾಳಜಿ ನನಗೂ ಅರ್ಥವಾಗುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.—ಸ್ವಾಮಿ, ಹಳೆ ಮೈಸೂರಿನ ಭಾಗದಲ್ಲಿ ಕೆರೆಗಳು ಏನು ಕಟ್ಟಿದ್ದೀರಿ ಅವುಗಳ ದುರಸ್ತಿ ಕೆಲಸ ನಿಂತುಹೋಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೆಯೇ ಈ ಕೆರೆಗಳ ಹೂಳು, ಮಣ್ಣು ತೆಗೆಸುವ ಕೆಲಸವೂ ಕೂಡ ಆಗಿಲ್ಲ. ಇದರಲ್ಲಿ ಎಕನಾಮಿಕ್, ಅಥವಾ ಅನ್‌ಎಕನಾಮಿಕ್ ಅನ್ನುವ ಪ್ರಶ್ನೆಯೇ ಬೇರೆ. ಹಳೇ ಮೈಸೂರು ಭಾಗದಲ್ಲಿರತಕ್ಕಂಥಾ ಕೆರೆಗಳ ರಿಪೇರಿಗೆ ಸಾಕಷ್ಟು ಹಣವನ್ನು ಒದಗಿಸತಕ್ಕಂಥಾದ್ದು, ಮತ್ತು ಟೇಕನ್‌ಓವರ್ ರೋಡ್ಸ್ ಏನು ಇದೆ ಅದನ್ನೂ ಸಹ ರಿಪೇರಿ ಮಾಡಿಸುವುದಕ್ಕೆ ಹಣವನ್ನು ಒದಗಿಸಿ ಕೊಡತಕ್ಕಂಥಾದ್ದು, ಇದರ ಬಗ್ಗೆ ಸರ್ಕಾರದ ನೀತಿ ಏನು ಇದೆ ಅನ್ನುವುದನ್ನು ತಿಳಿಸುತ್ತೀರಾ ?

ಮೂರನೆಯದಾಗಿ, ತಮ್ಮ ಹತ್ತಿರ ೫೦ ಕೋಟಿ ರೂಪಾಯಿಯಷ್ಟು ಮೆಷಿನರಿ ಏನು ಇದೆ ಅದನ್ನು ಡಿಸ್‌ಪೋಸಲ್ ಮಾಡುವ ಬಗ್ಗೆ ಸರ್ಕಾರದ ನೀತಿ ಏನು ? ಮತ್ತು ಕೆಲವು ಯಂತ್ರೋ ಪ್ರಕರಣಗಳ ಕೊರತೆ ಏನು ಇದೆ ಟಿಪ್ಪರ್ಸ್ ರೋಲರ್ಸ್ ಕಾನ್‌ಕ್ರೀಟ್ ಮಿಕ್ಸರ್ಸ್ ಇವುಗಳನ್ನು ಆದಷ್ಟು ಜಾಗ್ರತೆ ಕೊಡುಕೊಂಡು ಬಾಕಿ ಇರತಕ್ಕ ಕೆಲಸಗಳನ್ನು ಬೇಗನೆ ಮುಗಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.--ಸರ್ಕಾರಕ್ಕೆ ಬೇಕಾದ ಟಿಪ್ಪರ್ಸ್, ರೋಲರ್ಸ್, ಕಾಂಕ್ರೀಟ್ ಮಿಕ್ಸರ್ಸ್ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಬೇಕೆನ್ನುವ ಇಚ್ಛೆ ಇದೆ. ಹಾಗೆಯೇ ಅನುಪಯುಕ್ತವಾದ ಯಂತ್ರೋಪಕರಣಗಳನ್ನು ಮಾರಾಟ ಮಾಡಿ ಅದರಲ್ಲಿ ಬರತಕ್ಕಂಥಾ ಪ್ರೊಸೀಡ್ಸ್ ಮಂತ್ರ ಜೊತೆಗೆ ಸರ್ಕಾರದ ಹಣವನ್ನೂ ಸ್ವಲ್ಪ ಕೂಡಿಸಿ ಹೊಸ ಯಂತ್ರೋಪಕರಣಗಳನ್ನು ತೆಗೆದುಕೊಳ್ಳಬೇಕೆನ್ನುವುದು ಸರ್ಕಾರದ ಇಚ್ಛೆಯಾಗಿದೆ. ಆ ರೀತಿಯಾಗಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಎರಡನೆಯದಾಗಿ ಸಿಲ್ಟ್ ರಿಮೂವಲ್ ಕೆಲಸ ದುಬಾರಿ ಆದುದರಿಂದ ಅದನ್ನು ಹಂತ ಹಂತವಾಗಿ ತೆಗೆದುಕೊಳ್ಳಬೇಕು. ಎನ್‌ಆರ್‌ಇಪಿ ಗ್ರಾಂಟ್‌ನಲ್ಲಿ ಅದಕ್ಕೆ ಆದ್ಯತೆ ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಮತ್ತು ಎಲ್ಲಾ ಕೆರೆಗಳಲ್ಲಿ ಸಿಲ್ಟ್ ರಿಮೂವಲ್ ಮಾಡುವ ಕೆಲಸವನ್ನು ಮತ್ತು ಟೇಕನ್ ಓವರ್ ರೋಡ್ಸ್ ಕೆಲಸಗಳನ್ನೂ ಅನೇಕ ಕಡೆಗಳಲ್ಲಿ ದುರಸ್ತಿ ಮಾಡಬೇಕಾಗುತ್ತದೆ. ಅನೇಕ ಕಡೆ ಹೊಸ ಕೆರೆಗಳನ್ನು ನಿರ್ಮಾಣ ಮಾಡುವುದರ ಬಗ್ಗೆಯೂ ನಾವು ಹೆಚ್ಚು ಆದ್ಯತೆ ಕೊಡಬೇಕಾಗಿರುವುದರಿಂದ ಈ ಸಿಲ್ಟ್ ರಿಮೂವಲ್ ಕೆಲಸವನ್ನು ನಾವು ಹಂತಹಂತವಾಗಿ ಮಾಡಬೇಕೇ ವಿನಾ ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.--ಹೇಮಾವತಿ ಬಗ್ಗೆ ಮೊದಲು ಪ್ರಸ್ತಾಪ ಮಾಡಿದಾಗ ಹೇಳಿದರು, ೭ ಲಕ್ಷ ಎಕರೆಗೂ ಪೂರ್ತಾ ನೀರು ಕೊಡುವುದಕ್ಕೆ ಕಷ್ಟವಾಗುತ್ತದೆ ಎಂದು. ಕೊನೆಯಲ್ಲಿ ಇದರ ಬಗ್ಗೆ ಸರ್ವಪ್ರಯತ್ನ ಮಾಡುತ್ತೇನೆಂದು ಹೇಳಿದರು. ನಮ್ಮ ಶಾಸಕರನ್ನು ಕರೆದುಕೊಂಡು ಹೋಗಿ ಅಲ್ಲಿಯ ವಿದ್ಯಮಾನಗಳನ್ನು ನೇರವಾಗಿ ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶ ಕಲ್ಪಿಸಿ ಕೊಟ್ಟಿದ್ದುದು ನಿಜ. ಈಗ ಅಲ್ಲಿ ಕೆಲಸ ನಿಂತು ಹೋಗಿದೆ ಎಂದು ಕೇಳಿದ್ದೇನೆ. ಈ ಪ್ರಶ್ನೆ ಈಗ ಇತ್ಯರ್ಥವಾಗದೇ ಹೋದರೆ ಬಹಳ ಕಷ್ಟ. ಈ ಹೇಮಾವತಿ ಟನಲ್ ವರ್ಕ್ಸ್ ಬಗ್ಗೆ ಮೂರು ಆಲ್ಟರ್ ನೇಟೀವ್ಸ್ ಇದೆ. ಮೊದಲನೆಯದಾಗಿ ಹೇಳಬೇಕಾದರೆ ಉತ್ತರೋತ್ತರವಾಗಿ ಇದನ್ನು ಒಂದೇ ಇಲಾಖೆಗೆ ಸೇರಿಸಿಕೊಂಡು ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಇದಕ್ಕೆ ಬೇಕಾದಂಥಾ ಯಂತ್ರ ಸಾಮಗ್ರಿಗಳನ್ನು ಅವರು ಹಂಚಿಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ಕೂಡಲೇ ಕೆಲಸವಾಗುವ ಹಾಗೆ ಇತ್ಯರ್ಥ ಮಾಡಬೇಕು. ಆಮೇಲೆ ಮಾನ್ಯ ಮಂತ್ರಿಗಳು, ಹೇಳಿದರು ನಾವೆಲ್ಲಾ ಹೋದಾಗ ೧೯೮೪ನೇ ಇಸವಿ ಆಖೈರು ಆಗುತ್ತದೆ. ಈಗ ೧೯೮೭ನೇ ಇಸವಿ ಎಂದು ಹೇಳುತ್ತಾರೆ. ನಾನು ಹೇಳುತ್ತೇನೆ ೧೯೮೭ನೇ ಇಸವಿಗೆ ಅಲ್ಲಿ ಸುರಂಗ ಮಾರ್ಗವೂ ಸಹ ಆಖೈರು ಮಾಡುವುದಾಗಲಿ, ನಾಲೆಗಳ ಕೆಲಸ ಮಾಡುವುದಾಗಲಿ ಮುಗಿಯುವುದಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಕೆಲಸವನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಹಣ ಸಾಲದೇ ಹೋದರೆ ವರ್ಲ್ಡ್ ಬ್ಯಾಂಕ್‌ನಿಂದಲಾದರೂ ಸಾಲ ಏತಕ್ಕೆ ತೆಗೆದುಕೊಳ್ಳಬಾರದು ? ಈಗ ಕೃಷ್ಣ ಭಾಗದಲ್ಲಿ ಕೆಲಸವಾಗುವ ಬಗ್ಗೆ ಆಂಧ್ರಕ್ಕೂ ನಿಮಗೂ ಇರತಕ್ಕಂಥಾ ವ್ಯಾಜ್ಯ ಬಗೆಹರಿದಿದೆ. ಆದರೆ ಇದರ ವ್ಯಾಜ್ಯ ಇನ್ನು ಬಗೆಹರಿದಿಲ್ಲ. ಇನ್ನು ಕಾವೇರಿ ಜಲಾಶಯನದಲ್ಲಿರತಕ್ಕಂಥಾ ಜಮೀನುಗಳಿಗೆ ನೀರು ಒದಗಿಸಬೇಕಾದರೆ ಅಲ್ಲಿ ನೀರಾವರಿ ಕಾಮಗಾರಿಗಳ ಕೆಲಸ ಆಗದೇ ಹೋದರೆ ಮುಂದೆ ಅದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಹಾಗೆಯೇ ಹೇಮಾವತಿ ಕೆಲಸ ಮುಗಿಸುವುದಕ್ಕೆ ತಾವು ಸರ್ವಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ಬಹುಮುಖ್ಯವಾದ ವಿಷಯ ಎಂದರೆ ಏತನೀರಾವರಿ ಬಗ್ಗೆ ಹೇಳುವುದಾದರೆ ದುಡ್ಡು ಇಲ್ಲದೇ ಹೋದರೆ ಇದಕ್ಕೆ ಏನು ಖರ್ಚು ಬೀಳುತ್ತದೋ ಅದನ್ನು ವಿಂಗಡಿಸಿ ರೆವಿನ್ಯೂ ಡಿಪಾರ್ಟ್‌ಮೆಂಟ್ ಮುಖಾಂತರ ವಸೂಲ್ಮಾಡಿಸಿ ಆ ಕೆಲಸ ಮಾಡಿಸಿ. ಹಾಗೆ ಮಾಡುವುದಕ್ಕೆ ಸಾಧ್ಯವೇ ?

ಮೂರನೆಯದಾಗಿ ೧೯೫೭ನೇ ಇಸವಿಯಲ್ಲಿ ಟೇಕನ್‌ಓವರ್ ರೋಡ್ಸ್ ಏನು ಇದೆ ಆ ಡಿಸ್ಟ್ರಿಕ್ಟ್ ಬೋರ್ಡ್ಸ್ ರಸ್ತೆಗಳ ರಿಪೇರಿ ಇನ್ನೂ ಆಗಿಲ್ಲ. ಆ ರಸ್ತೆಗಳಿಗೆ ಜಲ್ಲಿ ಕೂಡ ಹಾಕಿಲ್ಲಾ. ಆ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡ್‌ನಿಂದ ಇಂಜಿನಿಯರಿಂಗ್ ಇಲಾಖೆಗೆ ತೆಗೆದುಕೊಂಡಿದ್ದಾರೆ. ಇದುವರೆಗೂ ಅಲ್ಲಿ ಕೆಲಸ ಆಗಿಲ್ಲಾ. ಆದುದರಿಂದ ಇದಕ್ಕೆ ಆದ್ಯತೆ ಕೊಟ್ಟು ಆ ಕೆಲಸಗಳನ್ನು ಮಾಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಒಂದು ವಿಚಾರ ಏನೆಂದರೆ ತುಮಕೂರು ಮತ್ತು ಚಿತ್ರದುರ್ಗ ಈ ಜಿಲ್ಲೆ ಕ್ಷಾಮದ ಪ್ರದೇಶ. ಈ ಪ್ರದೇಶದಲ್ಲಿರುವ ವ್ಯವಸಾಯಗಾರರಿಗೆ ಪರಿಹಾರ ಮಾಡಿಕೊಡಬೇಕಾದರೆ ಒಂದೇ ಒಂದು ಮಾರ್ಗ ಏನೆಂದರೆ ಹೇಮಾವತಿ ಕೆಲಸ ಮಾಡಿಕೊಡಬೇಕಾದ್ದು. ಆ ಕೆಲಸ ಮಾಡಿಕೊಡ ಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ಕ್ಲಾರಿಫಿಕೇಷನ್ ಅದು ಏನೆಂದರೆ ಮಾನ್ಯ ಚಿಕ್ಕೇಗೌಡರು ಈಗತಾನೇ ಹೇಳಿದಂತೆ ಸಾವಿರಾರು ಕೆರೆಗಳಲ್ಲಿ ದುರಸ್ತಿ ಕೆಲಸ ಮಾಡಿಸಬೇಕಾಗಿದೆ. ಇದರ ಜೊತೆಗೆ ಅನೇಕ ಸಣ್ಣ ಸಣ್ಣ ಕೆರೆಗಳೂ ಇವೆ. ಅದರಲ್ಲೂ ತೂಬುವಗೈರೆ ಕೆಲಸ ಮಾಡಿಸಬೇಕಾಗುತ್ತದೆ. ಇದಕ್ಕೆ ಹಣ ಇಲ್ಲ ಎಂದರೆ ಬಹಳ ಕಷ್ಟ. ಈ ಸಣ್ಣ ಸಣ್ಣ ಕೆರೆಗಳನ್ನು ಅವಲಂಬಿಸಿರತಕ್ಕಂಥಾ ಆ ಪ್ರದೇಶದ ಜನರಿಗೆ ಆ ಕೆರೆಯ ದುರಸ್ತಿ ವಗೈರೆ ಕೆಲಸ ಮಾಡಿಸದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಟ್ಟು ಇದಕ್ಕೆ ಹೆಚ್ಚು ಹೆಚ್ಚು ಹಣ ಒದಗಿಸಿ ಈ ವರ್ಷವೇ ಆ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಈಗ ೭ ಲಕ್ಷ ಎಕರೆಯಷ್ಟು ಜಮೀನು ಈ ಹೇಮಾವತಿ ನದಿಯಿಂದ ಸಾಗುವಳಿಗೆ ಬರುತ್ತದೆ. ಅದರಲ್ಲಿ ತುಮಕೂರು ಮತ್ತು ನಾಗಮಂಗಲಕ್ಕೆ ಬರಬೇಕಾದ್ದು 3½ ಲಕ್ಷ ಎಕರೆ.

ಇಲ್ಲಿ ಮೂರುವರೆ ಲಕ್ಷ ಎಕರೆ ನೀರಾವರಿಯಾಗುತ್ತದೆ, ಅದಕ್ಕೆ ತಕ್ಕಂಥ ಸಿಬ್ಬಂದಿಯನ್ನು ಕೆಲಸ ಮಾಡುವುದಕ್ಕೆ ನೇಮಿಸಿಲ್ಲ ಎಂದು ಹೇಳಿದ್ದಿರಿ. ಇಲ್ಲಿ ಡ್ಯಾಂಗೆ ಒಂದು ಸರ್ಕಲ್ ಮಾಡಿದ್ದಾರೆ, ಹೈಲೆವಲ್ ಕೆನಾಲಿಗೆ ಒಂದು ಸರ್ಕಲ್ ಮಾಡಿದ್ದಾರೆ, ಆಮೇಲೆ ಚೆನ್ನರಾಯಪಟಣ್ಣ ಮತ್ತು ತುಮಕೂರು ಡಿವಿಷ ನ್‌ಗೆ ಒಂದು ಸರ್ಕಲ್ ಮಾಡಿದ್ದಾರೆ, ಮತ್ತೆ ಸಾಕಷ್ಟು ಸಿಬ್ಬಂದಿಯನ್ನು ನವಿಲು ಬಾಗಿಲು ಟನ್‌ಲ್‌ಗೆ ನೇಮಿಸಿಲ್ಲ. ಇದರ ಬಗ್ಗೆ ನಾನು ಸರ್ಕಾರಕ್ಕೆ ಬರೆದಿದ್ದೇನೆ. ಆಮೇಲೆ ಸುರಂಗದ ಮಾರ್ಗದ ಮುಂದಕ್ಕೆ ಡ್ರಾಪ್ ಕಟ್ ಕಟ್ಟುತ್ತಾರೆ ಇದು ಬಹಳ ಪ್ರಮುಖವಾದುದು. ಈ ಡ್ರಾಪ್ ಕಟ್ ಮಾಡುವುದಕ್ಕೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ನಡೆದಿಲ್ಲ. ಇದಕ್ಕೆ ಕಾರಣ ಎಂದರೆ, ಮೂರು ನಾಲ್ಕು ಸೈಟ್‌ಗಳನ್ನು ಅಧಿಕಾರಿ ಗಳು ಸೆಲೆಕ್ಟ್ ಮಾಡಿರುವುದರಿಂದ ಈ ಕೆಲಸ ನಡೆದಿಲ್ಲ. ತಾವು ಯಾವುದನ್ನಾದರೂ ಸೆಲೆಕ್ಟ್ ಮಾಡಿ ಕೊಳ್ಳಿ ನಾವು ಅಲ್ಲಿ ಇಲ್ಲಿ ಮಾಡಿ ಎಂದು ಕೇಳುವುದಿಲ್ಲ. ನಮಗೆ ಬೇಕಾಗಿರುವುದು ನೀರು. ಅಕ್ವಿಸಿಷನ್ ಮಾಡತಕ್ಕದ್ದನ್ನು ಬೇಗ ತೀರ್ಮಾನ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಅದನ್ನು ತಾವು ಮಾಡಿಲ್ಲ. ಇದು ನಿಧಾನವಾಗುವುದಕ್ಕೆ ಅವಕಾಶ ಕೊಡದೆ ಬೇಗ ಈ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಆಮೇಲೆ ಇಲ್ಲಿ ಕಂಟ್ರಾಕ್ಟುದಾರರ ಸಮಸ್ಯೆ ಇದೆ. ಇದನ್ನು ತಾವು ಏನಾದರೂ ಮಾಡಿ ಬಗೆಹರಿಸಬೇಕು. ಅವನಿಗೆ ಈಗಾಗಲೇ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮತ್ತು ಅವನಿಗಿರುವ ತೊಂದರೆಯನ್ನು ತಪ್ಪಿಸಿ ಬೇಗ ಈ ಕೆಲಸವನ್ನು ಮಾಡಿಸುವುದಕ್ಕೆ ಸೂಕ್ತ ಏರ್ಪಾ ಡನ್ನು ಮಾಡಬೇಕು. ತುಮಕೂರು ಜಿಲ್ಲೆಯ ಜನ ನೀರು ಇಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ಇಲ್ಲಿಗೆ ಬರಗಾಲ ಬಂದಿರತಕ್ಕ ಸಂದರ್ಭದಲ್ಲಿ ಚಾನಲ್ ಕೆಲಸವನ್ನು ಮಾಡಿಸಬೇಕು. ತಿಪಟೂರು ತುರುವೆಕೆರೆ, ಮುಂದಕ್ಕೆ ನಾಗಮಂಗಲ ಸ್ಥಳಗಳಲ್ಲಿ ಸುಮಾರು ೫೦–೧೦೦ ಕಿಲೋಮಿಟರ್ ದೂರದ ವರೆಗೆ ಚಾನಲ್ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ. ಆ ನಂತರ ಟನಲ್‌ನಲ್ಲಿ ಸ್ವಲ್ಪ ಮಣ್ಣು ಬರುತ್ತಾ ಇದೆ, ತಾವು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದ್ದೀರಿ, ನಾವು ಕೂಡ ಅದರ ವಿಚಾರವನ್ನು ತಿಳಿದುಕೊಂಡಿದ್ದೇವೆ. ಮಣ್ಣು ಬರುವುದನ್ನು ನಿಲ್ಲಿಸಿ ಈ ಕೆಲಸವನ್ನು ಬೇಗ ಮಾಡಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಇಲ್ಲಿಗೆ ಒಂದು ಹಾರಿಜಾಂಟಲ್ ಷಾಫ್ಟ್ ಹಾಕಬೇಕು ಎನ್ನುವ ಸೂಚನೆ ಕೂಡ ಬಂದಿದೆಯೆಂದು ನಾನು ತಿಳಿದಿದ್ದೇನೆ. ಒಂದಲ್ಲ ಎರಡು ಷಾಫ್ಟ್ ಹಾಕಿ ಟನಲ್ ಕೆಲಸವನ್ನು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಮತ್ತೊಮ್ಮೆ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಗಂಗಣ್ಣ.—ಮಾನ್ಯ ಸದಸ್ಯರಾದ ಬೈರಪ್ಪಾಜಿಯವರು ಮತ್ತು ಹುಚ್ಚ ಮಾಸ್ತಿಗೌಡರು ಹೇಮವತಿ ಯೋಜನೆಯ ಅಂದಾಜು ಮತ್ತು ಅದರ ವಿಸ್ತೀರ್ಣದ ಬಗ್ಗೆ ಪ್ರಸ್ತಾಪ ಮಾಡಿದ್ದಾದೆ ಆದರೆ ನಾನು ಇದರ ಬಗ್ಗೆ ಹೇಳದೆ, ನಮ್ಮ ಕ್ಷೇತ್ರವಾದ ಶಿರಾ ತಾಲ್ಲೂಕಿಗೆ ಹೇಮಾವತಿ ನೀರನ್ನು ಬಳಸಿಕೊಳ್ಳುವ ಹಳಿದೆ ಮಾಡಬೇಕು ಎಂದು ಕೇಳಿಕೊಂಡು ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡ ಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರಪ್ಪ.—ಮಾನ್ಯ ಸಚಿವರು ಈ ಯೋಜನೆಯಿಂದ ಬರತಕ್ಕ ನೀರನ್ನು ಒದಗಿಸುವುದು ಅಲ್ಲದೆ ಅಂಡರ್ ಗ್ರೌಂಡ್ ನೀರಿನ ಬಗ್ಗೆಯು ಕ್ರಮ ತೆಗೆದುಕೊಳ್ಳಬೇಕು. ಬರಗಾಲ ಪೀಡಿತ ಪ್ರದೇಶಗಳಲ್ಲಿ ಇಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನರಿಗೆ ಸಹಾಯ ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಈಗಾಗಲೇ ನಾಲ್ಕು ಗಂಟೆಗಳ ಕಾಲ ನನ್ನ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರುಗಳು ಈಗ ಎತ್ತಿರುವ ಪ್ರಶ್ನೆಗಳಿಗೆ ನಾನು ನನ್ನ ಉತ್ತರವನ್ನು ಪುನರುಚ್ಚಾರ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ಬೈರಪ್ಪಾಜಿಯವರು, ಗಂಗಾಧರ್ ಅವರು ಮತ್ತು ಹುಚ್ಚ ಮಾಸ್ತಿಗೌಡ ಅವರು ಹೇಳಿದ ಹಾಗೆ ಅವರಿಗೆ ಹೇಮಾವತಿ ಯೋಜನೆಯ ಬಗ್ಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನನಗೂ ಇದೆ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಶ್ರೀ ಬಿ. ಬೈರಪ್ಪಾಜಿ.—ನಮಗೆ ಈ ವಿಷಯದಲ್ಲಿ ನಿಮ್ಮ ಮೇಲೆ ಅನುಮಾನ ಇಲ್ಲ. ಕೆಲಸ ಆಗುತ್ತಿಲ್ಲ. ನಮ್ಮ ನಿರೀಕ್ಷಣೆಗಿಂತ ನಿಮ್ಮ ನಿರೀಕ್ಷಣೆಯಂತೆ ಕೆಲಸ ಆಗದೆ ಇದ್ದು ಈ ದೃಷ್ಟಿಯಲ್ಲಿ ತಾವು ತ್ವರಿತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಚಾನಲ್ ಎಕ್ಸ್‌ಕವೇಷನ್ ಮಾಡುವುದಕ್ಕೆ ಇವತ್ತು ಸರ್ಕಾರಕ್ಕೆ ಹಣದ ಕೊರತೆ ಇದೆ. ನಮಗೆ ಇದರಲ್ಲಿ ಹಣವನ್ನು ತೊಡಗಿಸುವ ಶಕ್ತಿ ಇಲ್ಲ. ಈಗ ನಾವು ಹಣವನ್ನು ಇಮಿಡಿಯಟ್ ಆಗಿ ರಿಜಲ್ಟ್ ಬರತಕ್ಕ ಏರಿಯಾದಲ್ಲಿ ಮಾತ್ರ ಹಣವನ್ನು ಖರ್ಚು ಮಾಡಬೇಕಾಗಿದೆ. ಆಮೇಲೆ ಮಾನ್ಯ ಸದಸ್ಯರು ಅಲೈನ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಇದನ್ನು ನಾವು ಸಾಲ್ವ್ ಮಾಡುತ್ತೇವೆ ಇದರ ಬಗ್ಗೆ ತಾವು ಸಂಶಯವನ್ನು ಇಟ್ಟುಕೊಳ್ಳಬೇಕಾಗಿಲ್ಲ.

ಮಾನ್ಯ ಹುಚ್ಚ ಮಾಸ್ತಿಗೌಡ ಅವರು ಹೇಮಾವತಿಯಿಂದ 2 ಲಕ್ಷ ಎಕರೆ ನೀರು ಒದಗಿಸುವುದರಲ್ಲಿ ನಾನು ಸಂಶಯವನ್ನು ವ್ಯಕ್ತ ಪಡಿಸಿದ್ದೇನೆಂದು ಹೇಳಿದರು. ನಾನು ಈ ಮಾತನ್ನು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದೆ ಎನ್ನುವುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ಅಪ್ಪರ್ ಭದ್ರ ಮತ್ತು ಅಪ್ಪರ್ ತುಂಗ ಏರಿಯಾದಲ್ಲಿ ಕ್ರಾಪಿಂಗ್ ಪ್ಯಾಟರ್ನ್ ವಯಲೇಟ್ ಮಾಡಿ 20 ಟಿ. ಎಂ. ಸಿ. ನೀರನ್ನು ಹೆಚ್ಚು ಉಪಯೋಗ ಮಾಡಿದ್ದಾರೆ. ಆ ಏರಿಯಾದಲ್ಲಿ ನಾವು ಹೇಳಿದಂಥ ಬೆಳೆಗಳನ್ನು ಬೆಳೆಯದೆ ಬೇರೆ ಬೆಳೆಗಳನ್ನು ಬೆಳೆದಿದ್ದರಿಂದ ಹೆಚ್ಚಿನ ನೀರು ಉಪಯೋಗವಾಗಿ ಬೇರೆಯವರಿಗೆ ತೊಂದರೆಯಾಗುತ್ತಿದೆ. ಇವತ್ತು ಕ್ರಾಪಿಂಗ್ ಪ್ಯಾಟರ್ನ್‌ನ್ನು ಕಡ್ಡಾಯವಾಗಿ ಜಾರಿಗೆ ಕೊಡತಕ್ಕದ್ದಕ್ಕೆ ಮಾನ್ಯ ಸದಸ್ಯರು ಸಹಕಾರ ಮಾಡಿದರೆ ನಾವು ನಿರೀಕ್ಷಣ ಮಾಡದ ರೀತಿಯಲ್ಲಿ ನೀರು ಒದಗುತ್ತದೆ, ಇಲ್ಲದೇ ಹೋದರೆ ಅಲ್ಲಿ ಅನುಭವಿಸತಕ್ಕ ತೊಂದರೆಯನ್ನು ಇಲ್ಲಿಯೂ ಅನುಭವಿಸಬೇಕಾಗುತ್ತವೆ. ಇಲ್ಲಿ ಇರತಕ್ಕ ತೊಂದರೆ ಏನು ಇದೆ ಅದನ್ನು ನಾನು ಸಭೆಯಲ್ಲಿ ಹೇಳಿದ್ದೇನೆ. ಮತ್ತು ನಾವು ನಮ್ಮ ಸಂಪನ್ಮೂಲಗಳನ್ನು ಕೂಡಿಸಿಕೊಳ್ಳದೇ ಹೋದರೆ ರಾಜ್ಯಸರ್ಕಾರ ಇವತ್ತಿನ ಪರಿಸ್ಥಿತಿಯಲ್ಲಿರುವ ಸಂಪನ್ಮೂಲದ ವ್ಯವಸ್ಥೆಯಿಂದ ನೀರಾವರಿ ಯೋಜನೆಗಳನ್ನು ಮುಗಿಸಬೇಕಾದರೆ ನಮಗೆ ಇನ್ನೂ ಆರು ವರ್ಷಗಳು ಬೇಕಾಗುತ್ತದೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ನಾವು ಹೇಮಾವತಿ ಯೋಜನೆಯ ಕೆಲಸಕ್ಕೆ ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಿದ್ದೇವೆ, ಶಾಸಕರೂ ಇದಕ್ಕೆ ಒಪ್ಪಿಕೊಂಡಿದ್ದೇವೆ ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಈ ಯೋಜನೆಯನ್ನು ಬೇಗ ಮಾಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಜಿ. ನಾಯಕ್ .—ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಸಚಿವರು ಬಹಳ ನುರಿತ ರಾಜಕಾರಿಣಿಗಳು.

ಅಧ್ಯಕ್ಷರು.—ಈಗ ಪ್ರಶ್ನೆ ಇರುವುದು ಅದಲ್ಲ.

ಶ್ರೀ ಎನ್. ಜಿ. ನಾಯಕ್.—ನಾನು ಎರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ನುರಿತ ರಾಜಕಾರಣಿಗಳು, ಬಡವರಲ್ಲಿ ಚಿಂತನೆಯುಳ್ಳವರು. ಆದರೆ ನಮ್ಮ ಎರಡು ಕ್ಷೇತ್ರಗಳಲ್ಲಿ ಅಂದರೆ ಚಳ್ಳಕೆರೆ ಮತ್ತು ಮೊಳಕಾಲ್ಮೂರುಗಳಲ್ಲಿ ಯಾವಾಗಲೂ ಪ್ರತಿವರ್ಷವೂ ಕ್ಷಾಮದ ದವಡೆ

ಯಲ್ಲಿ ನರಳುತ್ತಾ ಇದ್ದೇವೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಹಿಂದೆ ಸರ್ವೆ ಮಾಡಿದ್ದಾರೆ. ಅಪ್ಪರ್‌ಭದ್ರ ಪ್ರಾಜೆಕ್ಟ್ ಅವರಿಗೆ ಚಿಂತನೆ ಇದೆಯೋ? ಈಗ ಅವರ ಸರ್ಕಾರ ಬಂದಿದೆ. ದಯವಿಟ್ಟು ಈ ವಿಷಯದಲ್ಲಿ ಹೆಚ್ಚು ಶ್ರದ್ಧೆ ವಹಿಸಿ ಅಪ್ಪರ್ ಭದ್ರ ಪ್ರಾಜೆಕ್ಟ್ ಮಾಡಿದರೆ ಒಳ್ಳೆಯ ಹೆಸರು ಪಡೆಯುತ್ತಾರೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದನ್ನು ಮಾಡಲೇಬೇಕು ಎಂದು ನಾನು ಸರ್ಕಾರದಲ್ಲಿ ಒತ್ತಾಯ ಪಡಿಸುತ್ತಾ ಇದ್ದೇನೆ. ನಮ್ಮ ಬಡ ಜನಗಳನ್ನು ಉದ್ಧಾರ ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಕೆ.ಪಿ. ಶಾಂತಮೂರ್ತಿ .—ಅಪ್ಪರ್ ಭದ್ರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೋ ಅದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ.— ಕೋಲಾರ ಜಿಲ್ಲೆಯಲ್ಲಿ ಹೇಮಾವತಿ, ಶರಾವತಿ, ಅಪ್ಪರ್ ಭದ್ರ ಇಲ್ಲ, ಕಾವೇರಿ ಹಾರಂಗಿ ಇಲ್ಲ, ಕಬನಿ ಇಲ್ಲವೇ ಇಲ್ಲ. ಆದರೆ ಅಲ್ಲಿ ಪ್ರಾಜೆಕ್ಟ್ ಕಟ್ಟಬೇಕಾದರೆ ನಮ್ಮ ಹಣ ಕೂಡ ಪ್ರಾಜೆಕ್ಟ್‌ನಲ್ಲಿ ಹಾಕುತ್ತಾರೆ ಒಂದು ಎಕರೆಗೆ ೨೦–೨೫ ಸಾವಿರ ಬೀಳುತ್ತದೆ. ನಮ್ಮ ಹಣ ಹಾಕಿ ಪ್ರಾಜೆಕ್ಟ್ ಕಟ್ಟುತ್ತಾರೆ. ನಮ್ಮಲ್ಲಿ ನೀರಾವರಿ ಮಾಡಬೇಕಾದರೆ ೪೦–೫೦ ಸಾವಿರ ನಮ್ಮ ಸ್ವಂತ ಹಣ ಖರ್ಚು ಮಾಡಿ ನೀರಾವರಿ ಮಾಡುತ್ತಾ ಇದ್ದೇವೆ. ಆದರೆ ನಮಗೆ ಒಂದಕ್ಕೆ ನಾಲ್ಕರಷ್ಟು ಬಡ್ಡಿ ಹಾಕುತ್ತಾರೆ ಹೀಗಾದರೆ ನಮ್ಮ ಪಾಡು ಏನಾಗುತ್ತದೆ. ನಾನು ಕೇಳಿಕೊಳ್ಳುವುದು ಏನೆಂದರೆ, ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹಣವನ್ನು ಖರ್ಚು ಮಾಡುತ್ತಿದ್ದೇವೆ, ೪೦ ವರ್ಷ ಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾ ಇದ್ದಾರೆ. ಆ ಕ್ಷೇತ್ರದಲ್ಲಿ ಮಿಕ್ಕ ಎಲ್ಲಾ ಕೆಲಸಗಳನ್ನು ನಿಲ್ಲಿಸಿ ಆ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡಿ. ನಮ್ಮಲ್ಲಿ ಕೆರೆ ಅಂಗಳದಲ್ಲಿ ಬೋರ್‌ವೆಲ್ ಹಾಕಿ ನೀರನ್ನು ಕೊಡತಕ್ಕ ವ್ಯವಸ್ಥೆ ಮಾಡಬಹುದು. ನಮ್ಮಲ್ಲಿ ೩೬೫ ದಿವಸವೂ ಕುಡಿಯುವ ನೀರಿನ ತಾಪತ್ರಯ ಇದೆ. ಆದುದರಿಂದ ಸರ್ಕಾರದವರು ನಮ್ಮನ್ನು ಇದೇ ಸ್ಥಿತಿಯಲ್ಲಿ ಇಡುತ್ತೀರಾ ಇಲ್ಲಾ ಏನ ಆಲೋಚನೆ ಮಾಡುತ್ತೀರಾ?

ಶ್ರೀ ಬಿ. ದೊಡ್ಡ ಬೋರೇಗೌಡ.—ಮಾನ್ಯ ಮಂತ್ರಿಗಳು ಕೆರೆಗಳ ಪುನರ್ನಿರ್ಮಾಣದ ಬಗ್ಗೆ ಹೇಳಿದರು. ಹೊಸ ನೀರಾವರಿ ಯೋಜನೆಯಲ್ಲಿ ಒಂದು ಎಕರೆಗೆ ೨೦ ಸಾವಿರ ರೂಪಾಯಿ ಖರ್ಚು ಮಾಡಬೇಕಾದಿದೆ ಎಂದು ಹೇಳಿದರು ಆದರೆ ಈ ಭಾಗದಲ್ಲಿ ಒಂದು ಸಾವಿರ ಖರ್ಚುಮಾಡರೆ ಮಾಡಿದರೆ ನೀರಾವರಿಯಾಗುತ್ತದೆ. ಬರ್ಘೋಳಿ ಯೋಜನೆಯನ್ನು ಕಾವೇರಿಗೆ ಸೇರ್ಪಡೆ ಕೊಡುವ ಬಗ್ಗೆ ಮತ್ತು ಹಳೇ ಕೆರೆಗಳ ಪುನರ್ನಿರ್ಮಾಣದ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್.—ಈಗಾಗಲೇ ನಾನು ಮತ್ತು ಬಾಪೂಗೌಡರು ಕೃಷ್ಣ ಮೇಲ್ದಂಡೆ ವಿಚಾರ ವಾಗಿ ಹೇಳಿದ್ದೇವೆ. ಕೃಷ್ಣ ಮೇಲ್ದಂಡೆ ಯೋಜನೆ ಕೆಲಸ ಏನೂ ನಡೆಯುತ್ತಾ ಇಲ್ಲ ಎಂದು ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ಪ್ರತ್ಯೇಕವಾಗಿ ಎರಡು ಗಂಟೆ ಚರ್ಚೆಯಾಗಬೇಕು ಎಂದು ಅವರು ಹೇಳಿದ್ದಾರೆ. ಅದರ ಬಗ್ಗೆ ೩ ಗಂಟೆ ಚರ್ಚೆಯಾಗಬೇಕು, ಅದರ ಕೆಲಸ ಏಕೆ ಆಗುತ್ತಾ ಇಲ್ಲ, ಹೀಗೇ ಮುಂದುವರಿಸಿ ಕೊಂಡು ಹೋದರೆ ಆ ಭಾಗದ ಜನಕ್ಕೆ ಏನು ತೊಂದರೆಯಾಗುತ್ತದೆ, ಇವನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಮೂರು ಗಂಟೆಗಳ ಅವಕಾಶವಾಗಬೇಕು. ಈ ಯೋಜನೆ ಆಗುತ್ತದೋ ಇಲ್ಲವೋ ಎನ್ನುವ ಶಂಕೆ ಯುಂಟಾಗಿದೆ. ಅದರ ಸಲುವಾಗಿ ಹೇಳಲು ಮಾನ್ಯ ಮಂತ್ರಿಗಳೂ ತಯಾರಾಗಿದ್ದಾರೆ. ಆದುದರಿಂದ ಅದಕ್ಕೆ ಮಾನ್ಯ ಅಧ್ಯಕ್ಷರು ಅನುವು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ ಮತ್ತೆ ಇಂಟರ್ ಸ್ಟೇಟ್ ರೋಡ್ಸ್, ಬಾರ್ಡರ್ ರೋಡ್ಸ್ ಕೆಟ್ಟು ಹೋಗಿವೆ. ಇದರ ಬಗ್ಗೆ ತಮಿಳುನಾಡು ಮತ್ತು ಮಹಾರಾಷ್ಟ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿದ್ದಾರೆಯೇ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳ ಬೇಕಾಗಿದೆ. ತಾವು ಏನು ಮಾಡುತ್ತೀರಿ ?

ಶ್ರೀ ಹನುಮಂತರಾವ್ ದೇಸಾಯಿ.—ಮಾನ್ಯ ಸಚಿವರು ವಿನಂತಿ ಮಾಡಿಕೊಳ್ಳುತ್ತೇನೆ. ಅಪ್ಜಲ ಪುರ ತಾಲ್ಲೂಕಿನಲ್ಲಿ ಭೀಮಾನದಿ ಹರಿಯುತ್ತಾ ಇದೆ. ಈಗಾಗಲೇ ಸರ್ವೆ ಮಾಡಿಕೊಂಡು ಹೋಗಿದ್ದಾರೆ. ಅಪ್ಪರ್ ಭೀಮಾ ಪ್ರಾಜೆಕ್ಟ್ ಇದೆ ಈ ಒಂದು ನೀರಾವರಿ ಯೋಜನೆ ಆಗಿದ್ದಾರೆ ೪೦ ಸಾವಿರದಿಂದ ೫೦ ಎಕರೆಗೆ ನೀರಾವರಿ ಆಗುತ್ತದೆ ಅಪ್ಜಲ್ಪುರ ತಾಲ್ಲೂಕು ಅಷ್ಟೇ ಅಲ್ಲ ಬಿಜಾಪುರದ ಇಂಡಿ, ಸಿಂಧಗಿಗೆ ಆಗಿ, ಮಹಾರಾಷ್ಟ್ರಕ್ಕೂ ಕೊಡತಕ್ಕ ಸಂದರ್ಭ ಕೂಡ ಬರುತ್ತಾ ಇದೆ ಇದು ಒಂದು ದೊಡ್ಡ ಯೋಜನೆ. ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು.

ಶ್ರೀ ಹೆಚ್. ಗಂಗಾಧರನ್.—ಹಿಂದೆ ನನ್ನ ಭಾಷಣದಲ್ಲಿ ಹೇಳಿದ್ದೇನೆ. ವರ್ಲ್ಡ್ ಬ್ಯಾಂಕ್ ಲೋನ್ ತೆಗೆದುಕೊಂಡರೆ ೩೦ ರಿಂದ ೭೦ ಪರ್ಸೆಂಟ್, ೫೦ ರಿಂದ ೭೦ ಪರ್ಸೆಂಟ್ ಏಕೆ ಕೊಡುತ್ತಾ ಇಲ್ಲ. ನಮ್ಮ ಮೈಸೂರಿನಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ಮತ್ತು ಕೋರ್ಟ್ ಕಾಂಪ್ಲೆಕ್ಸ್ ಬಗ್ಗೆ ಟೆಂಡರ್ ಅಕ್ಸೆಪ್ಟ್ ಆದರೂ ಕೂಡ ಕಂಟ್ರಾಕ್ಟರಿಗೆ ಕೊಡದೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಟ್ಟಿದ್ದಾರೆ. ಅನೇಕ ಕಾರಣಗಳಿಂದ ಎಸ್ಕಲೇಷನ್ ಚಾರ್ಜ್ ಬಂದು ಸರ್ಕಾರಕ್ಕೆ ನಷ್ಟವಾಗುತ್ತಿದೆ ಇದರ ಬಗ್ಗೆ ಸದನದ ಮುಂದೆ ಫೈಲ್ ಇಡಬೇಕು ಎಂದು ನಾನು ಹೇಳಿದ್ದೆ. ಇದರ ಬಗ್ಗೆ ಮಾನ್ಯ ಸಚಿವರು ಏನೂ ಹೇಳಲಿಲ್ಲ. ಇದರಲ್ಲಿ ಯಾರಿಗಾದರೂ ಶೀಲ್ಡ್ ಮಾಡುತ್ತಿದ್ದಾರೆಯೋ ಎಂಬ ಸಂಶಯ ಬಂದಿದೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಈಗಾಗಲೇ ಬಯಲು ನಾಡಿನ ಪ್ರದೇಶದ ಬಗ್ಗೆ ಮಾತನಾಡಿದ್ದೇನೆ. ಶಿವಮೊಗ್ಗ ತಾಲ್ಲೂಕಿನ ಒಂದು ಭಾಗವಾದ ಕುಂಸಿ ಹಾರನಹಳ್ಳಿಗಳಲ್ಲಿ ೧೫ ವರ್ಷಗಳಿಂದ ಯಾವತ್ತೂ ಬರಗಾಲ ಬರುತ್ತಾ ಇದೆ. ಅದಕ್ಕೆ ಹಿಂದೆ ಸರ್ಕಾರದವರು ಎತ್ತು ನೀರಾವರಿ ಯೋಜನೆ ತಯಾರು ಮಾಡಿದ್ದರು, ಅದು ಈವರೆಗೂ ಕಾರ್ಯಗತಕ್ಕೆ ಬರಲಿಲ್ಲ, ಅದು ಏನಾಗಿದೆ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಒಳನಾಡು ಸಾರಿಗೆ ಸಂಸ್ಥೆಯಾಗಿರತಕ್ಕ ದೋಣಿಗಳ ಲಾಂಚ್ ಸಿಸ್ಟಂ ಬಗ್ಗೆ ಹಲವಾರು ಅರ್ಜಿಗಳನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕೊಟ್ಟಿದ್ದೇವೆ, ಅದರ ಬಗ್ಗೆ ಇದುವರೆಗೆ ಉತ್ತರ ಕೊಟ್ಟಿಲ್ಲ, ಲಾಂಚ್ ಮಾಡಲಿಲ್ಲ. ಅದರ ಪರಿಣಾಮವಾಗಿ ಮೊನ್ನೆ ಎರಡು ಜನ ದೋಣಿ ದುರಂತದಲ್ಲಿ ಸತ್ತುಹೋದರು, ಅವರ ವಂಶ ನಿರ್ವಂಶವಾಯಿತು. ಅವರಿಗೆ ಪರಿಹಾರ ಕೊಡಬೇಕು, ಮತ್ತು ಲಾಂಚ್ ಸಿಸ್ಟಂ ಆಗುತ್ತದೋ ಇಲ್ಲವೋ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್.—೨೧ ಸಾವಿರ ಎಕರೆ ನುಗು ಪ್ರದೇಶದಲ್ಲಿ ಮಳೆ ಆಶ್ರಯದಲ್ಲಿದೆ. ಇದು ನುಗು ಜಲಾಶಯ ಪ್ರದೇಶದ ಜನಕ್ಕೆ ಶಾಪವಾಗುತ್ತಿದೆ. ಕಬಿನಿ ಜಲಾಶಯದಿಂದ ಎತ್ತುನೀರಾವರಿ ಮಾಡಿ ಅಲ್ಲಿ ಏನಾದರೂ ವ್ಯವಸ್ಥೆಮಾಡಿದರೆ ಅಶ್ಯೂರೆನ್ಸ್ ವಾಟರ್ ಸಿಗಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಉಲ್ಲಳ್ಳಿ, ರಾಮಪುರದ ಟನಲ್‌ಗಳು, ೬೦–೭೦ ವರ್ಷಗಳ ಟನಲ್‌ಗಳು. ಈ ಛಾನಲ್ ಕೆಟ್ಟುಹೋಗಿ ನೀರು ದಿಕ್ಕಾಪಾಲಾಗಿ ಹೋಗುತ್ತಿದೆ, ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತದೆ. ಅದಕ್ಕೆ ೨೫ ಕೋಟಿತನಕ ಆಗಬಹುದು. ವರ್ಷೇವರ್ಷೇ ಐದಾರು ಕೋಟಿ ವ್ಯವಸ್ಥೆಮಾಡಿಕೊಡಿ ಎಂದು ಸರ್ಕಾರದ ಗಮನ ಸೆಳೆಯುತ್ತೇನೆ.

೩. ೩೦ ಪಿ. ಎಂ.

ನಮ್ಮ ಸ್ಥಳೀಯ ಕಂಟ್ರಾಕ್ಟರ್ಸ್‌ಗೆ ಲೋಕೋಪಯೋಗಿ ಇಲಾಖೆಯಲ್ಲಿ ಅವಕಾಶ ಸಿಗುತ್ತಿಲ್ಲ. ಹೊರಗಿನಿಂದ ಬಂದಿರತಕ್ಕ ಪ್ರಭಾವಶಾಲಿಗಳಿಗೇ ಸಿಗುತ್ತಿದೆ, ಇದರಿಂದ ನಮ್ಮವರಿಗೆ ಬಹಳ ಅನ್ಯಾಯವಾಗುತ್ತಿದೆ. ಆದುದರಿಂದ ನಮ್ಮಲ್ಲಿ ಆಧುನಿಕ ತಂತ್ರಜ್ಞಾನವನ್ನು ಪಡೆದಿರತಕ್ಕ ಕಂಟ್ರಾಕ್ಟರ್ಸ್‌ಗೆ ಹೆಚ್ಚಿನ ಅವಕಾಶ ಸಿಗುವ ರೀತಿಯಲ್ಲಿ ಮಾಡಿಕೊಡುತ್ತೀರಾ ಎಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ನುಗು ಜಲಾಶಯದ ಬಗ್ಗೆ ತಾಂತ್ರಿಕ ತಜ್ಞರಿಂದ ರಿಪೋರ್ಟನ್ನು ತರಿಸಿಕೊಂಡು ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— ಬಸವ ಕಲ್ಯಾಣದ ಅಪ್ಪರಮುಲ್ಲಾ ನೀರಾವರಿ ಯೋಜನೆಯಲ್ಲಿ ಈಗಾಗಲೇ ಸಾಕಷ್ಟು ಪ್ರಗತಿ ಹಂತದಲ್ಲಿದೆ. ಅಲ್ಲಿ ಇರತಕ್ಕ ಕಿಣಿಗ್ರಾಮ ಮುಳುಗಡೆಯಾಗಿದೆ, ಅದಕ್ಕಾಗಿ ಅವರಿಗೆ ಪಕ್ಕದಲ್ಲಿ ಒಂದು ಸಣ್ಣ ಕಾಲೋನಿಯನ್ನು ಸರ್ಕಾರದವರು ಕಟ್ಟಿಸಿಕೊಟ್ಟಿದ್ದಾರೆ ಆ ಕಾಲೋನಿಗೆ ಅವರೆಲ್ಲಾ ಹೋಗುವುದಕ್ಕೆ ಸಿದ್ಧರಾಗಿದ್ದರೂ ಸಹ ಅಲ್ಲಿ ನೀರಿನ ವ್ಯವಸ್ಥೆ ಇಲ್ಲ, ರಸ್ತೆಯ ವ್ಯವಸ್ಥೆ ಇಲ್ಲ ಆದುದರಿಂದ ಅವರಿಗೆ ಅಲ್ಲಿ ಎಲ್ಲಾ ಸೌಲಭ್ಯಗಳನ್ನೂ ಕೂಡಲೇ ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಬಸವ ಕಲ್ಯಾಣದ ಚುಳುಕಿ ನಾಲಾ ಯೋಜನೆ ಸಾಕಷ್ಟು ಮುಗಿಯುತ್ತಾ ಬಂದಿದೆ, ಆದರೆ ಇದರಿಂದ ಬೇಲೂರು, ಧನಸುಗ್ರಾಮಗಳು ಮುಳುಗಡೆ ಆಗುವ ಸಂಭವವಿರುವುದರಿಂದ ಆ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.— ಅಧ್ಯಕ್ಷರೇ ಇಲ್ಲಿಯವರೆಗೆ ಮೇಜರ್ ಇರಿಗೇಷನ್ ಬಗ್ಗೆ ಮಾತನಾಡಿದರು, ಆದರೆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಯಾವ ಪ್ರಾಜೆಕ್ಟ್‌ಗಳೂ ಇಲ್ಲದೇ ಇರತಕ್ಕಂಥ ಪ್ರದೇಶಗಳಲ್ಲಿ ಲಿಫ್ಟ್ ಇರಿಗೇಷನ್ ಮತ್ತು ಇನ್ನಿತರ ಸೌಲಭ್ಯಗಳನ್ನು ಮಾಡಿ ನೀರನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ಈ ದೇಶಕ್ಕೆ ಬೆಳಕನ್ನು ಕೊಡತಕ್ಕ ಶರಾವತಿ ಯೋಜನೆಯ ಪ್ರದೇಶದಲ್ಲಿ ಎರಡು ಹೋಬಳಿಯ ಜನ ಕತ್ತಲಿನಲ್ಲಿದ್ದಾರೆ. ಸುತ್ತಲೂ ನೀರು ಬಂದಿದೆ. ಎಲ್.ಸಿ.ಟಿ ಬೇರೆ ಕೆಲಸ ಮಾಡದೇ ಇದ್ದು ಇಬ್ಬರೂ ಮುಳುಗಿಹೋಗಿದ್ದಾರೆ. ಸೇತುವೆ ಬೇರೆ ಬಿದ್ದುಹೋಗಿದೆ, ಬಸ್ ಸೌಕರ್ಯ ಕೂಡ ಇಲ್ಲ, ಆ ಎರಡು ಹೋಬಳಿಗೆ ಯಾವ ಸಂಪರ್ಕ ಕೂಡ ಇಲ್ಲದ ಹಾಗಾಗಿದೆ. ಅಲ್ಲಿರತಕ್ಕ ೧೫ ಸಾವಿರ ಜನ ಬಹಳ ಸಂಕಷ್ಟದಲ್ಲಿದ್ದಾರೆ ಇದರ ಬಗ್ಗೆ ಮಾನ್ಯ ಸಚಿವರು ನಿರ್ಧಿಷ್ಟವಾದ ಸೂಚನೆ ಕೊಟ್ಟು ಆ ಪ್ರದೇಶದ ಜನರಿಗೆ ಆದಷ್ಟು ಜಾಗ್ರತೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಜಿ. ಸತ್ಯನಾರಾಯಣ.— ಮಾಗಡಿ ತಾಲ್ಲೂಕಿನಲ್ಲಿ ಮಂಚನಬೆಲೆ ಅಣೆಕಟ್ಟು ನಡೆಯುತ್ತಿದೆ. ಅವರಿಗೆಲ್ಲಾ ಪುನರ್ ವಸತಿ ವ್ಯವಸ್ಥೆಯನ್ನು ನೆಲಮಂಗಲದಲ್ಲಿ ಮಾಡುತ್ತಿದ್ದಾರೆ ಇದರ ಬದಲು ರಾಮನಗರದಲ್ಲಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಮರಸನ ಹಳ್ಳಿ ಅಣೆಕಟ್ಟು ನೆಲಮಂಗಲದಲ್ಲಿ ಆಗುವ ಬಗ್ಗೆ ಒಂದು ಯೋಜನೆ ಇದೆ. ಅದು ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿಯೇ ಯೋಜನೆ ಆಗಿತ್ತು. ಆದುದರಿಂದ ಈಗಿನ ಮಾನ್ಯ ಲೋಕೋಪಯೋಗಿ ಸಚಿವರ ಕಾಲದಲ್ಲಿಯಾದರೂ ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಈಗ ತಾವು ಸದನದ ಸಮಿತಿಯನ್ನು ಮಾಡುತ್ತೇವೆ ಎಂದು ಹೇಳಿದಿರಿ, ಅದರಲ್ಲಿ ಶಾಸ್ತ್ರೀಯ ಆಧಾರವಾಗಿಟ್ಟುಕೊಂಡು ಬೆಲೆಗಳಿಗೆ ಬೆಳೆಯನ್ನು ನಿಗದಿ ಪಡಿಸುವ ಬಗ್ಗೆ ಕೂಡ ರೆಫರ್ ಮಾಡುತ್ತೀರಾ ? ಎನ್ನುವ ಬಗ್ಗೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಎಂ. ಎಂ. ನಡಾಫ್.— ಅಪ್ಪರ್ ತುಂಗಾ ಪ್ರಾಜೆಕ್ಟ್‌ಗಳಿಂದ ನಮ್ಮ ಧಾರವಾಡ ಜಿಲ್ಲೆಯ ೮ ತಾಲ್ಲೂಕುಗಳಿಗೆ ನೀರಾವರಿಯಾಗುತ್ತದೆ, ಆದುದರಿಂದ ಇದನ್ನು ತ್ವರಿತವಾಗಿ ತೆಗೆದುಕೊಂಡು ಕೆಲಸ ಪ್ರಾರಂಭಿಸುತ್ತೀರಾ ?

ಒಬ್ಬ ಮಾನ್ಯ ಸದಸ್ಯರು.— ಏರೆಹಳ್ಳ ಪ್ರಾಜೆಕ್ಟ್ ಬಹಳ ಮುಖ್ಯವಾದ ಯೋಜನೆಯಾಗಿದೆ, ಇದು ೧೪ ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಇದಕ್ಕೆ ಕಳೆದ ವರ್ಷ ೧೦ ಲಕ್ಷ, ಈ ವರ್ಷ ೧೫ ಲಕ್ಷ ರೂ. ಗಳನ್ನು ಕೊಟ್ಟಿದ್ದೀರಿ. ಇದರಿಂದ ಏನೂ ಕೆಲಸವಾಗುವುದಿಲ್ಲ. ಆದುದರಿಂದ ವರ್ಲ್ಡ್ ಬ್ಯಾಂಕಿನವರಿಂದ ಸಹಾಯ ಪಡೆದು ಈ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.— ಅಪ್ಪರ್ ಕೃಷ್ಣಾ ಬಗ್ಗೆ ಪ್ರತ್ಯೇಕವಾಗಿ ಚರ್ಚೆಯಾಗಬೇಕೆಂದು ಸನ್ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ. ಈ ಸದನದಲ್ಲಿ ಪ್ರತ್ಯೇಕವಾಗಿ ಚರ್ಚೆಯಾಗುವ ಬದಲು ನಾನೇ ಆ ಭಾಗದ ಸದಸ್ಯರನ್ನು ಕರೆಸಿ ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಅವರೆಲ್ಲರೂ ಕೂಡ ಸಲಹೆಗಳನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ಬಹುಶಃ ಇದೇ ಸದನದಲ್ಲಿ ಚರ್ಚೆಯಾಗಬೇಕು ಎನ್ನುವುದಾದರೆ ಅದಕ್ಕೂ ನನ್ನದೇನೂ ಅಡ್ಡಿ ಇಲ್ಲ. ಈ ಸಭೆಯಲ್ಲಿ ೩ ಗಂಟೆಗಳ ಕಾಲ ಕೂತು ಚರ್ಚೆ ಮಾಡುವ ಅವಶ್ಯಕತೆ ಇಲ್ಲವೆಂದು ನಾನಾದರೂ ಭಾವಿಸಿದ್ದೇನೆ. ಪ್ರತ್ಯೇಕವಾಗಿ ಚರ್ಚೆ ಸಭೆಯಲ್ಲಿ ಆದರೆ ಎಲ್ಲಾ ಪ್ರಾಜೆಕ್ಟ್‌ಗಳ ಬಗ್ಗೆ ಸಹ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅಪ್ಪರ್ ಭದ್ರ ಪ್ರಾಜೆಕ್ಟನ್ನು ಮಾಡಿಕೊಡಬೇಕು. ಏಕೆಂದರೆ ಆ ಭಾಗದಲ್ಲಿ ಭೀಕರ ಬರಗಾಲ ಇದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಜನರು ಬಹಳ ಕಷ್ಟದಲ್ಲಿದ್ದಾರೆ. ಆ ಭಾಗದ ಜನತೆಯಲ್ಲಿ ಅಪ್ಪರ್ ಭದ್ರ ಪ್ರಾಜೆಕ್ಟ್ ಆಗಬೇಕೆಂಬ ಆಸೆ ಇದೆ. ಕ್ರಾಪಿಂಗ್ ಪ್ಯಾಟರ್ನ್‌ನಲ್ಲಿ ಕಠಿಣವಾದ ನಿರ್ಣಯ ತೆಗೆದುಕೊಳ್ಳದಿದ್ದರೆ ತೊಂದರೆ ಇದೆ ಎಂದು ಹೇಳಿದ್ದಾರೆ. ಅದು ಇನ್ನೂ ಸಂಪೂರ್ಣವಾಗಿ ಇನ್‌ವೆಸ್ಟಿಗೇಷನ್ ಆಗಿಲ್ಲ, ಅಪ್ಪರ್ ಭದ್ರ ಮತ್ತು ಅಪ್ಪರ್ ತುಂಗ ಈ ಎರಡನ್ನು ಯೋಗ್ಯ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡಿ ಅಂದಾಜು ತಯಾರಿಸುವುದಕ್ಕೆ

ಸೂಚನೆ ಕೊಟ್ಟಿದ್ದೇನೆ. ಅದರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ಅದರ ಸಲುವಾಗಿ ಈ ಸದನದ ಒಂದು ಸಮಿತಿಯನ್ನು ಮಾಡಬೇಕೆಂಬ ಉದ್ದೇಶ ಕೂಡ ಸರ್ಕಾರಕ್ಕೆ ಇದೆ. ಇದರ ಬಗ್ಗೆ ಸ್ಟ್ರಿಂಜೆಂಟ್ ಆಗಿ ಕ್ರಮ ಕೈಗೊಳ್ಳದಿದ್ದರೆ ಕಷ್ಟ ಇದೆ, ಅಲ್ಲಿ ನೀರು ಸಾಕಾಗುವುದಿಲ್ಲ. ಲಂಚ್ ಬ್ಯಾಕ್‌ವಾಟರ್ಸ್ ಅನ್ನು ಹಾಕತಕ್ಕ ವ್ಯವಸ್ಥೆಯನ್ನು ಸರ್ಕಾರ ಅತ್ಯಂತ ಶೀಘ್ರವಾಗಿ ಮಾಡುತ್ತದೆ. ಅದರ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ ಎಂದು ಹೇಳುತ್ತೇನೆ. ಅದನ್ನೇ ತಿಮ್ಮಪ್ಪ ಹೆಗಡೆಯವರು ಸಹ ಹೇಳಿದರು. ಅದರ ಬಗ್ಗೆ ಅತ್ಯಂತ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆಂದು ತಿಳಿಸಲುವುದಕ್ಕೆ ಇಷ್ಟಪಡುತ್ತೇನೆ. ಗಂಗಾಧರನ್‌ರವರು ಮಾತನಾಡುತ್ತಾ, ಇದಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ಸದನದ ಮುಂದೆ ಇಡಬೇಕೆಂದರು. ಅದರ ಬಗ್ಗೆ ಸರ್ಕಾರ ಇದುವರೆಗೆ ನಿರ್ಣಯ ಮಾಡಿಲ್ಲ. ಅದನ್ನು ಒಂದು ಹಂತದಲ್ಲಿ ಅದೇ ಕಂಟ್ರ್ಯಾಕ್ಟರಿಗೆ ಕೊಡಬೇಕೆಂದು ಇತ್ತು. ಅದರ ಬಗ್ಗೆ ಸ್ಪಷ್ಟ ಅಭಿಪ್ರಾಯ ಇದೆ. ಅದನ್ನೆಲ್ಲ ನಾನು ಮುಚ್ಚುಮರೆ ಇಲ್ಲದೆ ಹೇಳಬೇಕಾಗುತ್ತದೆ. ಅದನ್ನು ಬೇರೆಯವರಿಗೆ ಕೊಡಬೇಕೆಂದರೆ ೩೦–೩೨ ಪರ್ಸೆಂಟ್ ಹೆಚ್ಚು ಕೊಡಬೇಕಾಗುತ್ತದೆ. ಅದನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೇ ಕೊಡಬೇಕೆಂಬ ಅಭಿಪ್ರಾಯ ಅಧಿಕಾರಿಗಳಿಂದ ಬಂದದ್ದರಿಂದ ಅದರಲ್ಲಿ ದೋಷ ಬರಬಾರದೆಂದು ಅವರಿಗೇ ಕೊಟ್ಟಿದ್ದೇವೆ. ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಒಟ್ಟಿನಲ್ಲಿ ಈ ನಿರ್ಣಯ ನನ್ನ ಮನಸ್ಸಿಗೆ ಅಷ್ಟೊಂದು ಸಮಾಧಾನಕರವಾಗಿಲ್ಲವೆಂದು ಹೇಳುತ್ತೇನೆ. ಏಕೆಂದರೆ ಒಂದು ಸಾರಿ ಟೆಂಡರ್ ಕರೆದ ಮೇಲೆ ಅದರಲ್ಲಿ ಯಾರ್ಯಾರು ಭಾಗವಹಿಸಿರುತ್ತಾರೆ ಆ ಪೈಕಿ ಯಾರದ್ದು ಕಡಿಮೆ ಅಂದಾಜು ಇರುತ್ತದೆ ಅವರಿಗೆ ಕೊಡತಕ್ಕದ್ದು ಯೋಗ್ಯ. ಆದಾದಮೇಲೆ, ಕಡಿಮೆ ಅಂದಾಜು ಸೂಚಿಸಿದ್ದ ಕಂಟ್ರ್ಯಾಕ್ಟರ್ ಕೆಲಸ ಮಾಡುವುದಕ್ಕೆ ಅಸಮರ್ಪಕನಿದ್ದಾನೆಂದು ಹಿಂದಿನ ಪರ್‌ಫಾರ್ಮೆನ್ಸಿನಿಂದ ಗೊತ್ತಾದ ಮೇಲೆ ಮತ್ತೆ ಯಾರು ಕಡಿಮೆ ದರ ಸೂಚಿಸಿರುತ್ತಾರೆ ಎಂಬುದನ್ನೆಲ್ಲ ಬಿಟ್ಟು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಕೊಡಬೇಕೆಂಬ ನಿರ್ಣಯ ಇದೆ. ಅವರೂ ಕೂಡ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿತ್ತು. ಆದರೆ ಅವರು ಯಾವುದೋ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆಂದು ಹೇಳತಕ್ಕದ್ದು ಸರಿಯಾದುವಲ್ಲವೆಂದು ಹೇಳುತ್ತೇನೆ. ಆ ವಿಷಯ ಈಗ ಕೋರ್ಟಿನ ಮುಂದೆ ಇರುವುದರಿಂದ ಅದರ ಬಗ್ಗೆ ಮಾತನಾಡುವುದು ಕಷ್ಟವಾಗುತ್ತಿದೆ. ಒಟ್ಟಿನಲ್ಲಿ ನಿರ್ಣಯವಾಗಿರುವುದು ನಿಜವೆಂದು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಈ ಅನ್ಯಾಯವನ್ನು ಸರಿಪಡಿಸಿ ಲೋಕೋಪಯೋಗಿ ಇಲಾಖೆಯ ಮೇಲೆ ಜನತೆಗೆ ವಿಶ್ವಾಸ ಬರುವ ಹಾಗೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ವಿಷಯ ಕೋರ್ಟಿನಲ್ಲಿರುವುದರಿಂದ ಫೈಲನ್ನು ಅಧ್ಯಕ್ಷರಿಗೆ ಕಳುಹಿಸಿಕೊಡುತ್ತೇನೆ ಫೈಲ್ ಬಗ್ಗೆ ನನ್ನ ಇಲಾಖೆಗೆ ಸಂಬಂಧ ಪಟ್ಟಂತೆ ಷೆಲ್ಟರ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ನನಗೆ ಯಾವ ಸಂಕೋಚವಾಗಲಿ, ಮುಚ್ಚುಮರೆಯಾಗಲಿ ಇಲ್ಲವೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಎಲ್ಲ ಫೈಲುಗಳನ್ನು ಸಭೆಯ ಮುಂದಿಡುವುದಕ್ಕೆ ಸಾಧ್ಯವಿಲ್ಲವೆಂದು ದೇವೇಗೌಡರು ಹೇಳಿದರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ನನ್ನ ವಿಷಯಕ್ಕೆ ಬಂದಾಗ ಆ ರೀತಿ ಸಂಶಯಕ್ಕೆ ಅವಕಾಶವೇ ಇಲ್ಲ. ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಏನೇನು ಇಲ್ಲ.

ಡಾ. ವಿ. ಎಸ್. ಆಚಾರ್ಯ.—ಯಾವುದಾದರೂ ಸೇತುವೆ ಅಥವಾ ಕಟ್ಟಡವನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನವರಿಗೆ ವಹಿಸಿಕೊಟ್ಟ ಮೇಲೆ ಅವರು ಸಕಾಲದಲ್ಲಿ ಅದನ್ನು ಪೂರ್ಣಗೊಳಿಸಿದ ದಾಖಲೆ ಇದೆಯೇ ?

ಶ್ರೀ ಹೆಚ್, ಡಿ. ದೇವೇಗೌಡ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅನ್ನು ಸ್ಥಾಪನೆ ಮಾಡಿದ ಉದ್ದೇಶ ಬೇರೆ. ಆ ಉದ್ದೇಶ ಸಫಲವಾಗಿಲ್ಲ. ಅದನ್ನು ಸ್ಥಾಪಿಸಿದ ಉದ್ದೇಶವೇನೆಂದರೆ ಕಂಟ್ರ್ಯಾಕ್ಟರಲ್ಲಿ ಏನು ಒಂದು ಮನಾಪಲಿ ಇದೆ ಅದನ್ನು ಬ್ರೇಕ್ ಮಾಡಬೇಕೆಂದು ಆ ಸಂಸ್ಥೆಯನ್ನು ಸ್ಥಾಪಿಸಿದೆವು. ೧೯೬೨ರಲ್ಲಿ ನಾನು ಈ ಸದನಕ್ಕೆ ಸದಸ್ಯನಾಗಿ ಬಂದ ಕಾಲದಲ್ಲಿ ಬಹಳ ತ್ವರಿತವಾಗಿ ಅದನ್ನು ಮಾಡಲಾಯಿತು. ಆದರೆ ದುರಾದೃಷ್ಟವಶಾತ್ ಅದು ಆ ವೇಗದಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅದು ಇವತ್ತಿನ ದಿವಸ ಬಿಳಿ ಆನೆ ಇದ್ದ ಹಾಗೆ ಇದೆ ಅದರಿಂದ ಸರ್ಕಾರಕ್ಕೆ ಎರಡು ಕೋಟಿ ರೂಪಾಯಿ ಹಣ ನಷ್ಟವಾಗಿದೆ. ಅದನ್ನು ತೆಗೆದು ಹಾಕಬಹುದು. ಆದರೆ ಮೇಜರ್ ಕಂಟ್ರ್ಯಾಕ್ಟರುಗಳು ಮನಾಪಲಿ ಮಾಡಿಕೊಂಡು ಇಲಾಖೆಗೆ ತಲೆಭಾರವಾಗಿರತಕ್ಕ ನಿದರ್ಶನಗಳು ಇರುವುದರಿಂದ

ಅವನ್ನು ಸರಿಪಡಿಸಬೇಕಾದರೆ ಈ ಸಂಸ್ಥೆಯನ್ನು ಚನ್ನಾಗಿ ಬೆಳಸಬೇಕೆಂಬ ವಿಚಾರ ಸರ್ಕಾರದ ಗಮನ ದಲ್ಲಿದೆ. ಉತ್ತರ ಪ್ರದೇಶ ಮತ್ತು ಬೇರೆ ಬೇರೆ ಕಡೆ ಈ ಸಂಸ್ಥೆ ಉತ್ತಮವಾಗಿ ಕೆಲಸ ಮಾಡುತ್ತ ದೆಂದು ಕೇಳಿದ್ದೇನೆ. ಅದೇ ರೀತಿ, ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾದರಿಯಲ್ಲಿ ಇದನ್ನು ಮಾರ್ಪಾಡು ಮಾಡುವುದಕ್ಕೆ ಸಾಧ್ಯತೆ ಇದ್ದಾರೆ ಪ್ರಯತ್ನ ಮಾಡುತ್ತೇವೆ. ಒಟ್ಟಿನಲ್ಲಿ ಇಲ್ಲಿಯವರೆಗೆ ಅವರ ಕೆಲಸ ಸಮಾಧಾನಕರವಾಗಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಅದು ಇದುವರೆಗೆ ಒಂದು ಸೇತುವೆ ಕೆಲಸವನ್ನು ಕೂಡ ಮಾಡಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನವರು ರೈಲ್ವೆ ಸ್ಟೇಷನ್‌ನ ಫ್ಲೈ ಓವರ್ ಬ್ರಿಡ್ಜನ್ನು ಬಹಳ ಉತ್ತಮವಾಗಿ ಮಾಡಿದ್ದಾರೆಂಬುದನ್ನು ಒಪ್ಪಿಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಏನಿದೆ ಇದರ ಫರ್‌ಫಾರ್ಮೆನ್ಸ್ ಒಂದು ಕಡೆ ಇರಲಿ. ಅದರ ಹಣಕಾಸಿನ ಪರಿಸ್ಥಿತಿ ಚನ್ನಾಗಿಲ್ಲವೆಂಬ ದೃಷ್ಟಿಯಿಂದ ಅದನ್ನು ವೈಂಡ್ ಅಪ್ ಮಾಡಬೇಕೆಂದು ಸಲಹೆ ಬಂದಿದೆ. ನಾನು ಲೋಕೋಪಯೋಗಿ ಮಂತ್ರಿಯಾಗಿ ದ್ದಾಗ ಕೂಡ ಈ ವಿಚಾರ ಬಂದಿತ್ತು. ಆಗ ನಾನು ಇದನ್ನು ವೈಂಡ್ ಅಪ್ ಮಾಡಬಾರದೆಂದು ನಿಲುವು ತೆಗೆದುಕೊಂಡೆ, ಅನ್‌ಸ್ಕ್ರುಪಲಸ್ ಕಂಟ್ರಾಕ್ಟರ್ಸ್ ಏನಿರುತ್ತಾರೆ ಅವರ ಮನಾಪಲಿಯನ್ನು ತೆಗೆಯಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಆ ಸಂಸ್ಥೆಗೆ ಹಣಕಾಸಿನ ಶಕ್ತಿಯನ್ನು ತುಂಬಿ ಅದು ಶಕ್ತಿ ವಂತ ಸಂಸ್ಥೆಯಾಗುವಂತೆ ಮಾಡಬೇಕು. ಉತ್ತರ ಪ್ರದೇಶದವರು ಯಾವ ರೀತಿ ಇಂಥ ಸಂಸ್ಥೆಯನ್ನು ನಡೆಸುತ್ತಿದ್ದಾರೆ ಆ ರೀತಿ ನಡೆಸಬೇಕೆಂದು ತೀರ್ಮಾನ ತೆಗೆದುಕೊಂಡೆ. ಅನಂತರ ಅದಕ್ಕೆ ಸಾಕಷ್ಟು ಹಣಕಾಸಿನ ಶಕ್ತಿ ಕೊಡದೆ ಇದ್ದುದರಿಂದ ಅದು ಮತ್ತೂ ಕೂಡ ಶಕ್ತಿ ಕಳೆದುಕೊಂಡು ಹಾಳಾಗತಕ್ಕ ಮಟ್ಟಕ್ಕೆ ಹೋಗುತ್ತಿದೆ. ಅದಕ್ಕೆ ಹಣಕಾಸಿನ ಶಕ್ತಿ ಕೊಟ್ಟರೆ ಎದ್ದು ನಿಲ್ಲುತ್ತವೆ ಮತ್ತು ಕಂಟ್ರಾಕ್ಟರು ಗಳನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಆದ್ದರಿಂದ, ಇದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಡಾ. ವಿ ಎಸ್. ಆಚಾರ್ಯ —ದೇವೇಗೌಡರ ಕಾಲದಲ್ಲಿ ಕಾಯಕಲ್ಪ ಮಾಡಂತ್ತೀರಾ ? ಇಲ್ಲದಿದ್ದರೆ, ಒಬ್ಬ ಟೆಂಡರ್‌ದಾರ ಮಾಡತಕ್ಕ ಕೆಲಸವನ್ನು ತೆಗೆದು ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಕೊಟ್ಟರೆ ಆಗತಕ್ಕ ಕೆಲಸವು ನಿಂತು ಹೋಗುತ್ತದೆ.

ಅಧ್ಯಕ್ಷರು.—ಅವರ ಅಭಿಪ್ರಾಯ ಗೊತ್ತಾದ ಮೇಲೆ ಮತ್ತೆ ಏತಕ್ಕೆ ಕೇಳುತ್ತೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತು ಸಂಬಳಕ್ಕಾಗಿ ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಒಂದು ಸಂಸ್ಥೆಯನ್ನು ಶಕ್ತಿಯುತವಾಗಿ ಬೆಳಸಬೇಕೆಂಬುದು ನಿರ್ವಿವಾದ. ಅದಕ್ಕೆ ನನ್ನ ಸಮ್ಮತಿ ಇದೆ. ಅದಕ್ಕೆ ಬರೀ ದುಡ್ಡು ಕೊಡುವುದು ಅಷ್ಟೇ ಅಲ್ಲ, ಕೆಲವು ಕೆಲಸಗಳನ್ನು ಕೊಟ್ಟು ಆಗತಕ್ಕ ವೆಚ್ಚ ಏನಿದೆ ಅದನ್ನು ಸರಿದೂಗಿಸಬೇಕು. ಅಲ್ಲದೆ ಎಸ್ಟಾಬ್ಲಿಷ್ ಮೆಂಟ್ ಚಾರ್ಜಸ್ ಮೀಟ್ ಮಾಡುವುದಕ್ಕೆ ಕೆಲವು ಕೆಲಸಗಳನ್ನು ನಾವೇ ಕೊಡತಕ್ಕ ಸನ್ನಿವೇಶ ಬರು ತ್ತದೆ. ಆದರೆ ಮೂಲ ಉದ್ದೇಶ ಏನೆಂದರೆ ಕಂಟ್ರಾಕ್ಟರ ಜೊತೆ ಅವರು ಕಾಂಪೀಟ್ ಮಾಡಬೇಕು. ಯಾರೋ ಕಂಟ್ರಾಕ್ಟರ್ ತೆಗೆದುಕೊಂಡ ಕೆಲಸಗಳನ್ನು ಕೊನೇ ಹಂತದಲ್ಲಿ ತಪ್ಪಿಸಿಕೊಡತಕ್ಕ ವ್ಯವಸ್ಥೆ ಯಿಂದ ಕಂಟ್ರಾಕ್ಟರ ಸ್ಯಾಂಕ್ಟಿಟಿ ಹೊರಟು ಹೋಗುತ್ತದೆ. ಆದರೆ ಒಂದೊಂದು ಸಾರಿ ಏನಾಗು ತ್ತದೆಂದರೆ ವಿಧಾನಸೌಧದಿಂದ ಒಂದೊಂದು ರೂಪದಲ್ಲಿ ಸಲಹೆಗಳು ಬರುತ್ತವೆ, ಆಗ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತೇನೆಂದು ಅಷ್ಟು ಮಾತ್ರ ಹೇಳುತ್ತೇನೆ. ನಾವೇನಾದರೂ ತಪ್ಪು ಮಾಡಿದರೆ ದೇಶದ ಜನತೆಯ ಒಂದು ಟೀಕೆಗೆ ಗುರಿಯಾಗುತ್ತೇವೆ. ಒಬ್ಬ ಮಂತ್ರಿಯಾಗಿರುವವರು ಶಾಸನಸಭೆಗೆ ಜವಾಬ್ದಾರರಾಗುತ್ತಾರೆ ಅಧಿಕಾರಿಗಳು ತಪ್ಪು ಮಾಡಿದರೆ ಅವರು ಯಾರಿಗೆ ಜವಾಬ್ದಾರರಾಗುತ್ತಾರೆಂಬುದು ಇರದಂತಹ ಸನ್ನಿವೇಶಗಳು ಇವೆ. ಇದು ಈ ದೇಶದಲ್ಲಿ ನಡೆದುಕೊಂಡು ಬಂದಿದೆ. ಒಮ್ಮೆ ಒಂದು ಕೆಲಸಕ್ಕೆ ೭ ಸಾರಿ ಟೆಂಡರ್ ಕರೆದಿದ್ದಾರೆ. ಅದರಲ್ಲಿ ಒಂದನ್ನು ಅಂಗೀಕಾರ ಮಾಡುವುದಕ್ಕೆ ಬಹಳ ಹೆಣಗಬೇಕಾಗಿ ಬಂತು. ೩೨ ಅಥವಾ ೩೪ ಪರ್ಸೆಂಟ್ ಬಂದಾಗ ಅದನ್ನು ಒಪ್ಪಬೇಕಾದರೆ ದೊಡ್ಡ ಆತಂಕ ಬರುತ್ತದೆ. ಅರ್ಥ ಸಚಿವ ಖಾತೆ ಹೇಗೆ ಕೆಲಸ ಮಾಡುತ್ತದೆಂದು ನಿಮಗೆ ಗೊತ್ತಿದೆ. ಅಲ್ಲಿ ೩ನೇ ದರ್ಜೆ ಗುಮಾಸ್ತರ ಅನುಭವ ವನ್ನು ನೋಡಿ ಮಾಡುವ ಸನ್ನಿವೇಶ ಇದೆ. ೭ ಸಾರಿ ಟೆಂಡರ್ ಕರೆದುದರ ಪರಿಣಾಮವಾಗಿ ಅದರ ಬೆಲೆ

ಒಂದೂಕಾಲು ಪಟ್ಟು ಹೆಚ್ಚಾದರೆ ಅದನ್ನು ಯಾರು ಕೊಡಬೇಕು ? ಇದೆಲ್ಲಾ ವಿಷಯಗಳಿವೆ. ಈ ವಿಷಯದಲ್ಲಿ ಇಷ್ಟೇ ಅತೃಪ್ತಿಯನ್ನು ನಾನೂ ಕೂಡ ವ್ಯಕ್ತಪಡಿಸಿದ್ದೇನೆ.

ಶ್ರೀ ಪಿ. ರಾಮದೇವ್. —ಬೆಂಗಳೂರು ನಗರದಲ್ಲಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಮಾನ್ಯ ಧರ್ಮಸಿಂಗ್ ಅವರು ಮಂತ್ರಿಗಳಾಗಿದ್ದಾಗ ಬೆಂಗಳೂರು ನಗರದ ೧೫–೨೦ ಕೆಲಸಗಳನ್ನು ವಹಿಸಿ ಕೊಟ್ಟರು. ಆದರೆ ಯಾವುದೂ ಪೂರ್ತಿಯಾಗಿಲ್ಲ. ಎಲ್ಲಾ ಕೆಲಸಗಳು ಅರ್ಧಂಬರ್ಧ ಆಗಿವೆ. ಈಗೇನೋ ಈ ವಿಷಯಗಳು ವಿಜಿಲೆನ್ಸ್‌ಗೆ ಹೋಗಿದೆ ಎಂದು ಹೇಳುತ್ತಾರೆ. ಅಲ್ಲಿ ಅರ್ಧಂಬರ್ಧ ಆಗಿರುವ ಕೆಲಸಗಳನ್ನಾದರೂ ಮಾಡಿ ಮುಗಿಸಿ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಗೆಳೆಯರಾದ ಬಸವರಾಜ್ ಅವರು ಕಿಣಿ ವಿಲೇಜ್ ಬಗ್ಗೆ ಏನು ಹೇಳಿದ್ದಾರೆ ಅದನ್ನು ನಾವು ನೋಡಿಕೊಂಡುಬಂದಿದ್ದೇವೆ ಅಲ್ಲಿ ಸ್ಥಳ ಆಯ್ಕೆ ಮಾಡಿರುವುದು ಯೋಗ್ಯವಾಗಿಲ್ಲ. ಜಮೀನು ಒಂದುಕಡೆ ಇದ್ದರೆ ಊರು ಒಂದುಕಡೆ ಇದೆ , ಸೇತುವೆ ಅಲ್ಲಿ ಕಟ್ಟಬೇಕು. ಅದಕ್ಕೆ ನಾನು ಆದೇಶ ಕೊಟ್ಟಿದ್ದೇನೆ. ಕೆಲಸ ತೆಗೆದುಕೊಂಡು ಮುಗಿಸಿಕೊಡುತ್ತೇವೆ. ಮಾನ್ಯ ಹುಚ್ಚಮಾಸ್ತಿಗೌಡರು ಶೇಕಡ ೫೦ ಭಾಗ ಡಿಸ್ಟ್ರಿಕ್ಟ್ ಬೋರ್ಡ್ ರೋಡ್‌ಗಳು ಹಾಗೇ ಇವೆ ಎಂದು ಹೇಳಿದರು. ಹಣ ಇದ್ದರೆ ಖರ್ಚು ಮಾಡುತ್ತಾರೆ. ಇಲ್ಲದೇಹೋದರೆ ಅದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ, ಸಂಪನ್ಮೂಲಗಳನ್ನು ಕೊಡಿಸುವುದಕ್ಕೆ ಪಕ್ಷಾತೀತವಾಗಿ ನಿರ್ಣಯ ಮಾಡದೇಹೋದರೆ ಬಹಳ ಕಷ್ಟವಾಗುತ್ತದೆ. ಸುಮ್ಮನೆ ಭಾಷಣ ಮಾಡುವುದು, ಉತ್ತರ ಕೊಡುವುದು ಮಾಡಿದರೆ ಪರಿಸ್ಥಿತಿ ಬದಲಾವಣೆಯಾಗುವುದಿಲ್ಲ, ಈ ಸದನದ ಎಲ್ಲರೂ ಕುಳಿತು ಚಿಂತನೆ ಮಾಡತಕ್ಕ ಕಾಲ ಸನ್ನಿಹಿತವಾಗಿದೆ ಎಂದು ಹೇಳುತ್ತೇನೆ.

ಶ್ರೀ ಮಹದೇವ್.—ಕಟನಿ ಬಗ್ಗೆ ಏತಕ್ಕೆ ಹೇಳಲಿಲ್ಲ ?

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ.—

ಅಭಿಯಾಚನೆ ಕ್ರಮಾಂಕ. ೩೩.—೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೩೬,೦೦,೦೦೦ ರೂ.ಗಳಿಗಿಂತ ಮೀರದ ಮೊತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೮೯,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೪.—೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೦,೨೬,೨೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೯೩,೨೪,೦೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೩ ೩೧–೩–೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗಳಿಗೆ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ೫೯,೬೪,೯೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೪೪ ೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೧೪,೫೩,೦೦೦ ರೂ. ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೪,೩೫,೭೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೫ ೦೧-೩-೧೯೭೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೭.೩೪,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೧,೯೧,೮೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೪೬ ೩೧-೩-೧೯೭೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜನ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೩,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೫೫,೪೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು

ಪ್ರಸ್ತಾವನೆ ಅಂಗೀಕೃತವಾಗಿ ಅಭಿಯಾಚನೆ ಕ್ರಮಾಂಕದಲ್ಲಿ ಕೇಳಿದ ಮೊತ್ತ ಹಣವನ್ನು ಮಂಜೂರು ಮಾಡಲಾಯಿತು

ಶ್ರೀ ಗೋವಿಂದ ಪಿ. ಒಡೆಯರಾಜ್.—ಮೊನ್ನೆ ಈ ವಿಷಯದಲ್ಲಿ ಚರ್ಚೆಯಾಗುವಾಗ ಮಾನ್ಯ ಸದಸ್ಯರಾದ ಬೈರೇಗೌಡರು ವ್ಯಕ್ತಿಶಃ ಒಂದು ಮಾತನ್ನು ಹೇಳಿದರು. ಅದು ನನ್ನ ಕಿವಿಗೆ ಆವತ್ತು ಬೀಳಲಿಲ್ಲ. ಆದರೆ ಅವರು ಆಡಿರತಕ್ಕ ಮಾತು ಸತ್ಯಕ್ಕೆ ದೂರವಾದುದು. ಅದನ್ನು ಸಂಪೂರ್ಣವಾಗಿ ನಾನು ಅಲ್ಲಗಳೆಯುತ್ತೇನೆ. ಯಾರೇ ಆಗಲಿ ಈ ರೀತಿ ವ್ಯಕ್ತಿತಃ ಮಾತುಗಳನ್ನು ಆಡಬಾರದು ಎಂದು ಹೇಳುತ್ತಾ ಮಾನ್ಯ ಬೈರೇಗೌಡರು ದುರುದ್ದೇಶಪೂರ್ವಕವಾಗಿ ಮಾತನಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಅವರು ಯಾವ ಅರ್ಥದಲ್ಲಿ ಈ ಕಡೆಯ ಸದಸ್ಯರನ್ನು ಕುರಿತು ಮಾತನಾಡಿದರೋ ಅದೇ ಅರ್ಥದಲ್ಲಿ ಅವರನ್ನು ಕುರಿತು ನಾನು ಮಾತನಾಡಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಮಾತನಾಡುವಾಗ ಬೈರೇಗೌಡರು ಎಂದು ಹೇಳಲಿಲ್ಲ. ಇದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು,

ANNOUNCEMENT

Re. Demonstrator in the Visitors' Galleries

MR. SPEAKER.—Now I would like to make an announcement.

Any misconduct or infringement or gallery regulating laws has to be treated as a grave offence and contempt of the House punishable with imprisonment

As members are responsible for any untoward or undesirable thing in the Visitor's Gallery at the hands of a holder of a pass given at their request, the members should fully satisfy themselves about the person for whom such a card is required by them.

The demonstrators in today's incident at the Gallery have expressed their apology. The House may take a lenient view and accept their regret and let them off with strict warning.

Sri S. S. Kamble, Sri G. M. Kanade, Sri Shivamurthy and Sri R. C. Balekundargi have recommended for issue of passes to the persons who have shouted slogans in the Gallery today